ಹುಬ್ಬಳ್ಳಿ
ಮಂಗಳವಾರ, 26 ಮೇ 2026
ಸಂಪುಟ 16, ಸಂಚಿಕೆ 62, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಹಸ್ತ

ದಿನದ ಮಾತು

ಪ್ರತಿಯೊಬ್ಬರಿಗೂ ಅವರ ಯೋಗ್ಯತೆ, ನಿಷ್ಠೆ, ಶ್ರದ್ಧೆಗಳ ಪ್ರಕಾರ ಅವಕಾಶ ಕೊಡಬೇಕು.
▲ಕೌಟಿಲ್ಯ

ಮೋದಿಯ ಪತ್ರಿಕಾಗೋಷ್ಠಿ ಎಂಬ ಚಿನ್ನದ ಜಿಂಕೆ
ರಾಘವಾಂಕಣ
•ರಾಘವೇಂದ್ರ ಸುಬ್ರಹ್ಮಣ್ಯ
•ಪುಟ ೬

ಕಿರುಸುದ್ದಿ

15 ದಿನಗಳಲ್ಲಿ ಇಂಧನ ದರ 4ನೇ ಬಾರಿ ಹೆಚ್ಚಳ

•**ಹೊಸದಿಲ್ಲಿ:** ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಏರಿಕೆಯಾದ ಹಿನ್ನೆಲೆಯಲ್ಲಿ ದೇಶಾದ್ಯಂತ ಸೋಮವಾರ ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಮತ್ತೊಮ್ಮೆ ಹೆಚ್ಚಿಸಲಾಗಿದೆ. ಕಳೆದ ಎರಡು ವಾರಗಳಿಗಿಂತ ಕಡಿಮೆ ಅವಧಿಯಲ್ಲಿ ನಡೆದಿರುವ ನಾಲ್ಕನೇ ಇಂಧನ ದರ ಏರಿಕೆ ಇದಾಗಿದೆ. ಸೋಮವಾರ ಪೆಟ್ರೋಲ್ ದರದಲ್ಲಿ ಪ್ರತಿ ಲೀಟರ್‌ಗೆ 2.61 ರೂ. ಹಾಗೂ ಡೀಸೆಲ್ ದರದಲ್ಲಿ 2.71 ರೂ. ಹೆಚ್ಚಳ ಮಾಡಲಾಗಿದೆ. ಈ ಮೂಲಕ ದೆಹಲಿಯಲ್ಲಿ ಪೆಟ್ರೋಲ್ ಬೆಲೆ 102.12 ರೂ. ಹಾಗೂ ಡೀಸೆಲ್ ಬೆಲೆ 95.20 ರೂ.ಗೆ ತಲುಪಿದೆ. ಮುಂಬೈನಲ್ಲಿ ಪೆಟ್ರೋಲ್ ಲೀಟರ್‌ಗೆ 111.21 ರೂ., ಡೀಸೆಲ್ 97.83 ರೂ. ಆಗಿದೆ. ಮೇ 15ರಿಂದ ಇಂದಿನವರೆಗೆ ಒಟ್ಟಾರೆಯಾಗಿ ಇಂಧನ ದರದಲ್ಲಿ ಸುಮಾರು 7.5 ರೂ. ಏರಿಕೆಯಾಗಿದೆ. ➡ಪುಟ ೪

ತಾಜ್‌ಮಹಲ್, ಆಮೇರ್ ಕೋಟೆ ವೀಕ್ಷಿಸಿದ ರೂಬಿಯೊ
•ಪುಟ ೭

ರಾಜಸ್ಥಾನದಲ್ಲಿ ದಾಳಿಗೆ ಉಗ್ರರ ಸಂಚು: ಎನ್‌ಐಎ
•ಪುಟ ೭

ಭಯೋತ್ಪಾದನೆಗೆ ನಿಧಿ ಸಂಗ್ರಹ: ಎನ್‌ಐಎ ದಾಳಿ
•ಪುಟ ೭

ಭಟ್ಕಳ ದುರಂತ: ಮೃತರ ಸಂಖ್ಯೆ 11ಕ್ಕೆ ಏರಿಕೆ
•ಪುಟ ೫

ಸಾರ್ವಜನಿಕ ಸ್ಥಳದಲ್ಲಿ ಪ್ರಾಣಿ ವಧೆಗೆ ಅನುಮತಿಯಿಲ್ಲ: ಸಿಎಂ ಯೋಗಿ ಆದಿತ್ಯನಾಥ್
•ಪುಟ ೭



ಭಾರತಕ್ಕೆ ಮರಳಿದ ಅನ್ನೈಮಂಗಲಂ ತಾಮ್ರಶಾಸನ
•ಪುಟ ೭
ಸುದ್ದಿ ಸಮಗ್ರ

ಆಂತರಿಕ ಆರ್ಥಿಕ ಪರಿಸ್ಥಿತಿ ಸ್ಥಿರ | ಎಫ್‌3ಗೆ ಆದ್ಯತೆ: ನಿರ್ಮಲಾ

ಪಿತೂರಿಗೆ ಭಾರತ ಜಗ್ಗಲ್ಲ



"ಕೆಲವು ಜೊಳ್ಳು ಟೀಕಾಕಾರರು ಎಲ್ಲವೂ ಕುಸಿಯ ತೊಡಗಿದೆ ಎಂದು ಸುಳ್ಳು ಪ್ರಚಾರದಲ್ಲಿ ನಿರತರಾಗಿರುವುದು ಸರಿಯಲ್ಲ.
■ನಿರ್ಮಲಾ ಸೀತಾರಾಮನ್ ಕೇಂದ್ರ ಹಣಕಾಸು ಸಚಿವೆ

•**ಮುಂಬೈ:** ಪಶ್ಚಿಮ ಏಷ್ಯಾ ಸಂಘರ್ಷ ಮಧ್ಯೆ ಇಂಧನ, ರಸಗೊಬ್ಬರ ಮತ್ತು ವಿದೇಶಿ ವಿನಿಮಯಗಳಿಗೆ (3ಎಫ್) ಹೆಚ್ಚಿನ ಒತ್ತು ನೀಡುವಂತೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಕರೆ ನೀಡಿದ್ದಾರೆ. ದೇಶೀಯ ಆರ್ಥಿಕತೆ ಕ್ರಿಯಾತ್ಮಕವಾಗಿ ಮುಂದುವರಿದಿರುವುದಾಗಿ ಅವರು ಹೇಳಿದ್ದಾರೆ.

ಸಂಯಮ ಕಾಯ್ದುಕೊಳ್ಳುವಂತೆ ಪ್ರಧಾನಿ ನರೇಂದ್ರ ಮೋದಿ ದೇಶ ವಾಸಿಗಳಲ್ಲಿ ವಿನಂತಿಸಿದ ನಂತರ, ಎಲ್ಲವನ್ನೂ ಸದಾ ವಿರೋಧಿಸುವ ಪ್ರವೃತ್ತಿಯ ಟೀಕಾಕಾರರು ಸಿನಿಕತನ ಮತ್ತು ನಿರಾಶಾವಾದ ಹುಟ್ಟು ಹಾಕುತ್ತಿರುವುದು ಖಂಡನಾರ್ಹವೆಂದು ಖಂಡಿಸಿದ ಸಚಿವರು, ಇಂತಹ ಭಯ ಹುಟ್ಟಿಸುವಿಕೆಗಳಿಗೆ ಭಾರತ ಜಗ್ಗುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳಿದರು. ಜನರಲ್ಲಿ ಆತ್ಮವಿಶ್ವಾಸ ಮೂಡಿಸುವುದು ಅತ್ಯಗತ್ಯ ಎಂದವರು ಎಸ್‌ಬಿಐಬಿಐನ 37ನೇ ವಾರ್ಷಿಕೋತ್ಸವದಲ್ಲಿ ಪ್ರತಿಪಾದಿಸಿದರು.

ಸುಳ್ಳು ಪ್ರಚಾರ ಸರಿಯಲ್ಲ: ಆರ್ಥಿಕ ಬೆಳವಣಿಗೆಯನ್ನು ಸಂರಕ್ಷಿಸುವುದು ಭಾರತದ ನೀತಿ ನಿಯಮಗಳ ಆಶಯವಾಗಿದೆ. ಡೀಸೆಲ್, ಪೆಟ್ರೋಲ್ ಮೇಲಿನ ಅಬ್ಕಾರಿ ಸುಂಕ ಕಡಿತದಿಂದ ಬೊಕ್ಕಸಕ್ಕೆ ಒಂದು ಲಕ್ಷ ಕೋಟಿ ರೂ. ನಷ್ಟವಾಗುತ್ತಿದೆ. ಕಚ್ಚಾ ತೈಲಗಳ ದರದಲ್ಲಿ ಏರಿಕೆಯಾಗಿದ್ದು, ರಸಗೊಬ್ಬರಗಳ ದರದಲ್ಲಿ ಕಲ್ಪನಾತೀತ ಹೆಚ್ಚಳವಾಗಿದೆ. ಗಗನಕ್ಕೇರಿರುವ ಚಿನ್ನದ ದರ ವಿದೇಶದಲ್ಲಿ ಕೆಲವು ಸವಾಲುಗಳನ್ನು ಸೃಷ್ಟಿಸುತ್ತಿದೆ. ➡ಪುಟ ೪

ಪ್ರಾದೇಶಿಕ ಸಂಘರ್ಷದ ಪ್ರಭಾವ


ಅಮೆರಿಕ ಮತ್ತು ಇಸ್ರೇಲ್ ಜತೆ ಇರಾನ್ ನಡೆಸುತ್ತಿರುವ ಸಂಘರ್ಷದ ಸಂದರ್ಭದಲ್ಲಿ ಹಾರ್ಮುಜ್ ಜಲಸಂಧಿ ಮುಚ್ಚಲ್ಪಟ್ಟಿರುವುದು ಜಾಗತಿಕ ಪೂರೈಕೆ ಜಾಲದ ಮೇಲೆ ಪರಿಣಾಮ ಬೀರಿದೆ. ಈ ಪ್ರಾದೇಶಿಕ ಬಿಕ್ಕಟ್ಟಿನಿಂದಾಗಿ ಇಂಧನ ವೆಚ್ಚ ಹೆಚ್ಚಳ, ಸರಕು ಸಾಗಣೆ ವಿಳಂಬ, ದುಬಾರಿ ಹಡಗು ಯಾನ, ಕಚ್ಚಾ ಪದಾರ್ಥಗಳ ಕೊರತೆ ಮತ್ತು ರಫ್ತು ಆರ್ಡರ್‌ಗಳಲ್ಲಿ ಅನಿಶ್ಚಿತತೆ ಎದುರಾಗಿದೆ ಎಂದು ಅವರು ವಿವರಿಸಿದರು.

ಸರ್ಕಾರದ ಆದ್ಯತೆಗಳು

ಪ್ರಸ್ತುತ ಸಂದರ್ಭದಲ್ಲಿ ನಾಗರಿಕರ ರಕ್ಷಣೆ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ (ಎಂಎಸ್‌ಎಂಇ) ಬೆಂಬಲ, ರಫ್ತುದಾರರ ಹಿತರಕ್ಷಣೆ ಮತ್ತು ಪೂರೈಕೆ ಸರಪಳಿಯನ್ನು ಸುಗಮವಾಗಿಡುವುದು ಸರ್ಕಾರದ ಆದ್ಯತೆ. ಬಾಹ್ಯ ಒತ್ತಡಗಳ ನಡುವೆಯೂ ಭಾರತದ ಆಂತರಿಕ ಆರ್ಥಿಕ ಪರಿಸ್ಥಿತಿ ಸ್ಥಿರವಾಗಿದೆ ಮತ್ತು ಸದೃಢವಾಗಿದೆ ಎಂದು ಸೀತಾರಾಮನ್ ಸ್ಪಷ್ಟಪಡಿಸಿದರು.

ದೇಶೀಯ ಆರ್ಥಿಕ ಸನ್ನಿವೇಶ ಧನಾತ್ಮಕ


ಸರಕಾರವು ಜನಸಾಮಾನ್ಯರೊಂದಿಗೆ ಕೈ ಜೋಡಿಸಿಕೊಂಡು ಮಾಡಿದ ಉತ್ತಮ ಸಾಧನೆ ಗಳೆಲ್ಲವೂ ಮರೆತುಹೋದಂತೆ ಹಾಗೂ ಸರಕಾರದ ವಿರೋಧಿಗಳು ಇದೀಗ ತೀರಾ ನಿರಾಶಾವಾದದ ಮತ್ತು ಸಿನಿಕತನದ ವ್ಯಾಖ್ಯಾನ ಮಾಡುತ್ತಿರುವುದು ತೀರಾ ಅಸಂಬದ್ಧ ಮತ್ತು ಸರಿಯಲ್ಲ. ಸವಾಲುಗಳ



ಮೂಲ ವಿದೇಶ ಅಥವಾ ವಿದೇಶಗಳಲ್ಲಿನ ಸಂಘರ್ಷದಿಂದಾಗಿ ಸವಾಲುಗಳು ಸೃಷ್ಟಿಯಾಗಿವೆ ಎಂಬ ವಾಸ್ತವದ ಬಗ್ಗೆ ನಾವು ಮೆಚ್ಚುಗೆ ವ್ಯಕ್ತಪಡಿಸಬೇಕು. ಇಂದಿಗೂ ದೇಶದ ದೇಶೀಯ ಆರ್ಥಿಕ ಸನ್ನಿವೇಶ ಧನಾತ್ಮಕ ಮತ್ತು ಕ್ರಿಯಾಶೀಲವಾಗಿದೆ ಎಂಬುದನ್ನು ಗುರುತಿಸಬೇಕೆಂದು ಸಚಿವೆ ನಿರ್ಮಲಾ ಸೀತಾರಾಮನ್ ಕರೆ ನೀಡಿದರು.

108 ಆರೋಗ್ಯ ಕವಚ ಕೇಂದ್ರೀಕೃತ ಕಂಟ್ರೋಲ್ ಕೇಂದ್ರಕ್ಕೆ ಸಿಎಂ ಚಾಲನೆ

ತುರ್ತು ಆರೋಗ್ಯ ಸೇವೆ ಇನ್ನಷ್ಟು ಕ್ಷಿಪ್ರ



•**ಬೆಂಗಳೂರು:** ರಾಜ್ಯದಲ್ಲಿ ತುರ್ತು ವೈದ್ಯಕೀಯ ಸೇವೆಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಒದಗಿಸುವ ಉದ್ದೇಶದಿಂದ ದೇಶದ ಮೊದಲ ಸರ್ಕಾರಿ ಸ್ವಾಮ್ಯದ 108 ಆರೋಗ್ಯ ಕವಚ ಕೇಂದ್ರೀಕೃತ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್ (ಸಿಸಿಸಿ) ಕಾರ್ಯಾರಂಭವಾಗಿದೆ. 2008ರಿಂದ ಖಾಸಗಿ ಸಹಭಾಗಿತ್ವದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ 108 ಆರೋಗ್ಯ ಕವಚ ಸೇವೆ ಕಾರ್ಯನಿರ್ವಹಿಸಲಿದೆ.

ಒಂದು ಕರೆ ನಮಗೆ, ಎಲ್ಲಾ ತುರ್ತು ಸೇವೆ ನಿಮಗೆ

ತುರ್ತು ಆರೋಗ್ಯ ಸೇವೆಗಳನ್ನು ಇನ್ನಷ್ಟು ಚುರುಕುಗೊಳಿಸುವ ಮತ್ತು ಜನಸಾಮಾನ್ಯರಿಗೆ ಸಕಾಲದಲ್ಲಿ ಚಿಕಿತ್ಸೆ ಒದಗಿಸುವ ಮಹತ್ತರ ಉದ್ದೇಶದಿಂದ, ಸಿಎಂ ಸಿದ್ದರಾಮಯ್ಯ ಅವರು ಸೋಮವಾರ ಬಸವೇಶ್ವರ ನಗರದಲ್ಲಿ ಆರೋಗ್ಯ, ಕುಟುಂಬ ಕಲ್ಯಾಣ ಇಲಾಖೆಯ 108 ಆರೋಗ್ಯ ಕವಚ ಕೇಂದ್ರೀಕೃತ ಕಮಾಂಡ್, ಕಂಟ್ರೋಲ್ ಕೇಂದ್ರವನ್ನು ಉದ್ಘಾಟಿಸಿದರು. ➡ಪುಟ ೪

ಗೋಲ್ಡನ್ ಅವರ್‌ನಲ್ಲಿ ಚಿಕಿತ್ಸೆಯಿಂದ ಬದುಕುವ ಸಾಧ್ಯತೆ ಹೆಚ್ಚು

ರಸ್ತೆ ಅಪಘಾತ, ಹೆರಿಗೆ, ಹೃದಯ ಸಂಬಂಧಿ ತುರ್ತು ಪರಿಸ್ಥಿತಿಗಳಲ್ಲಿ ಗೋಲ್ಡನ್ ಅವರ್‌ನಲ್ಲಿ ಚಿಕಿತ್ಸೆ ದೊರೆತರೆ ರೋಗಿಗಳ ಬದುಕುಳಿಯುವ ಸಾಧ್ಯತೆ ಹೆಚ್ಚಿರುತ್ತದೆ. ಘಟನೆಯ 1 ಗಂಟೆಯೊಳಗಾಗಿ ನೀಡಿದ ಚಿಕಿತ್ಸೆಯಿಂದ ಶೇ.80ರಷ್ಟು ಜನರು ಬದುಕುಳಿದಿದ್ದಾರೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಅತ್ಯಾಧುನಿಕ ತಂತ್ರಜ್ಞಾನ ಹೊಂದಿದ ಆಂಬುಲೆನ್ಸ್ ಸೇವೆ ಲಭ್ಯವಾಗಿದ್ದು, ಬೆಂಗಳೂರು ನಗರದಲ್ಲಿ 65 ರಿಂದ 70 ಆಂಬುಲೆನ್ಸ್‌ಗಳು ಕಾರ್ಯನಿರ್ವಹಿಸುತ್ತಿವೆ. ➡ಪುಟ ೪



ಪದ್ಮಭೂಷಣ ಶತಾವಧಾನಿ ಆರ್.ಗಣೇಶ್

ಕಲಾ ಕ್ಷೇತ್ರಕ್ಕೆ ಸಲ್ಲಿಸಿದ ಶ್ರೇಷ್ಠ ಕೊಡುಗೆಗಳಿಗಾಗಿ ರಾಷ್ಟ್ರಪತಿ ಮುರ್ಮು ಸೋಮವಾರ ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಕರ್ನಾಟಕದ ಶತಾವಧಾನಿ ಆರ್. ಗಣೇಶ್ ಅವರಿಗೆ ಪದ್ಮಭೂಷಣ ಪ್ರಶಸ್ತಿ ಪ್ರದಾನ ಮಾಡಿದರು.

ಹಿಂದು ಶ್ರದ್ಧಾಕೇಂದ್ರ ಮೂರಿನಕಟ್ಟೆ ಧ್ವಂಸ | 6 ಜನರ ಬಂಧನ

ಭಟ್ಕಳದಲ್ಲಿ ನಾಳೆವರೆಗೂ ನಿಷೇಧಾಜ್ಞೆ

•**ಭಟ್ಕಳ:** ಹಿಂದು ಧರ್ಮದವರ ಧಾರ್ಮಿಕ ಆರಾಧನಾ ಸ್ಥಳವಾಗಿರುವ ಭಟ್ಕಳ ತಾಲೂಕಿನ ಜಾಲಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ 66 ಪಕ್ಕದಲ್ಲಿರುವ ಮೂರಿನಕಟ್ಟೆಯನ್ನು ಮುಸ್ಲಿಂ ಸಮುದಾಯದ ಗುಂಪೊಂದು ಧ್ವಂಸ ಮಾಡಿರುವ ಘಟನೆ ನಗರದಲ್ಲಿ ಉದ್ವಿಗ್ನ ಸ್ಥಿತಿ ಸೃಷ್ಟಿಸಿದೆ. ಘಟನೆ ಸಂಬಂಧ ಆರು ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಈ ಕೃತ್ಯ ತಡೆಯಲು ಬಂದ ಪೊಲೀಸರ ಮೇಲೂ ಹಲ್ಲೆ ನಡೆದಿದೆ. ಭಟ್ಕಳದ ಶಾಂತಿ ಕದಡಲು ಯತ್ನಿಸಿದ ಈ ಕೃತ್ಯಕ್ಕೆ ಸಂಬಂಧಿಸಿದಂತೆ ಎಲ್ಲೆಡೆಯಿಂದ ವ್ಯಾಪಕ ಖಂಡನೆ ವ್ಯಕ್ತವಾಗುತ್ತಿದ್ದು, ಭಟ್ಕಳ ಪುರಸಭೆ ಮತ್ತು ಜಾಲಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಮೇ 25 ಬೆಳಗ್ಗೆ 6 ಗಂಟೆಯಿಂದ ಮೇ 27ರ ಬೆಳಗ್ಗೆ 6 ಗಂಟೆಯವರೆಗೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ ಎಂದು ಉತ್ತರ ಕನ್ನಡ ಜಿಲ್ಲಾ ಪೊಲೀಸ್ ಪ್ರಕಟಣೆ ತಿಳಿಸಿದೆ. ➡ಪುಟ ೪

ಮೂಲ ಕಟ್ಟೆಗೆ ಹಾನಿಯಾಗಿಲ್ಲ

ಸಾಂಪ್ರದಾಯಿಕ ಹೊರೆ ಇಡುವ ಮೂಲ ಕಟ್ಟೆಗೆ ಯಾವುದೇ ಹಾನಿ ಆಗಿಲ್ಲ. ಹೆದ್ದಾರಿ ಕಾಮಗಾರಿ ಹಿನ್ನೆಲೆಯಲ್ಲಿ ಸ್ಥಳಾಂತರಿಸುವ



ಉದ್ದೇಶದಿಂದ ನಿರ್ಮಿಸಲಾಗಿದ್ದ ಹೊಸ ಕಟ್ಟೆಯನ್ನು ಮಾತ್ರ ಕಿಡಿಗೇಡಿಗಳು ನಾಶಪಡಿಸಿದ್ದಾರೆ. ಸಾರ್ವಜನಿಕರು ಯಾವುದೇ ತಪ್ಪು ಮಾಹಿತಿ, ವದಂತಿಗಳಿಗೆ ಕಿವಿಗೊಡದೆ ಶಾಂತಿ ಕಾಪಾಡಲು ಸಹಕರಿಸಬೇಕು ಎಂದು ಉತ್ತರಕನ್ನಡ ಜಿಲ್ಲಾಡಳಿತ ವತಿಯಿಂದ ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯಾ ತಿಳಿಸಿದ್ದಾರೆ. ➡ಪುಟ ೪

ದಿಲ್ಲಿಗೆ ತೆರಳಿದ ಸಿಎಂ, ಡಿಸಿಎಂ

•**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ದಿಲ್ಲಿಗೆ ಪ್ರಯಾಣ ಬೆಳೆಸಿದ್ದಾರೆ. ಕಾಂಗ್ರೆಸ್ ಹೈಕಮಾಂಡ್ ಕರೆಯ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ತೆರಳಿದ್ದು, ಕೇಂದ್ರ ಸಚಿವರ ಭೇಟಿಗಾಗಿ ಉಪಮುಖ್ಯಮಂತ್ರಿ ದಿಲ್ಲಿಗೆ ತೆರಳಿದ್ದಾರೆ. ವಿಶೇಷ ವಿಮಾನದಲ್ಲಿ ಸೋಮವಾರ ರಾತ್ರಿ ಸಿದ್ದರಾಮಯ್ಯ ಅವರು ದಿಲ್ಲಿಗೆ ತೆರಳಿದ್ದು, ಮಂಗಳವಾರ ಪಕ್ಷದ ವರಿಷ್ಠರನ್ನು ಭೇಟಿ ಮಾಡಿ ಚರ್ಚಿಸಲಿದ್ದಾರೆ. ರಾಜ್ಯ ರಾಜಕೀಯ ವಿದ್ಯಮಾನಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಲಿದ್ದಾರೆ.

ಸಿದ್ದರಾಮಯ್ಯಗೆ ಕಾಂಗ್ರೆಸ್ ಹೈಕಮಾಂಡ್ ಕರೆ

ಮೊದಲು ಸಿದ್ದರಾಮಯ್ಯ ಅವರು ಮಾತ್ರ ದಿಲ್ಲಿಗೆ ತೆರಳುವುದು ನಿಗದಿಯಾಗಿತ್ತು. ನಮ್ಮನ್ನು ಕರೆದರೆ ಹೋಗುತ್ತೇವೆ ಇಲ್ಲವಾದರೆ ಇಲ್ಲೇ ಉಳಿಯುತ್ತೇನೆ. ಪಕ್ಷ ಕರೆದಾಗ ನಾವು ಹೋಗಲೇ ಬೇಕಾಗುತ್ತದೆ ಎಂದಿದ್ದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೊನೆ ಘಳಿಗೆಯಲ್ಲಿ ಸೋಮವಾರ ರಾತ್ರಿ ದಿಲ್ಲಿಗೆ ತೆರಳಿರುವುದು ಕುತೂಹಲ ಮೂಡಿಸಿದೆ. ➡ಪುಟ ೪

ತ.ನಾಡು ಮರುಪರಿಶೀಲನಾ ಅರ್ಜಿ ತಿರಸ್ಕಾರ

ಮೇಕೆದಾಟುಗೆ ಸುಪ್ರೀಂ ಬಲ


•**ಹೊಸದಿಲ್ಲಿ:** ಕರ್ನಾಟಕದ ಮಹತ್ವಾಕಾಂಕ್ಷಿ ಮೇಕೆದಾಟು ಸಮತೋಲನ ಜಲಾಶಯ ಹಾಗೂ ಕುಡಿಯುವ ನೀರಿನ ಯೋಜನೆಗೆ ಸಂಬಂಧಿಸಿದಂತೆ ತಮಿಳುನಾಡು



ಸರ್ಕಾರ ಸಲ್ಲಿಸಿದ್ದ ಮರುಪರಿಶೀಲನಾ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ. ಈ ಮೂಲಕ ಯೋಜನೆಗೆ ಮತ್ತೊಂದು ಕಾನೂನುಬದ್ಧ ಬಲ ದೊರೆತಂತಾಗಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿಗಳಾದ ಜಾಯ್ಮಲ್ಯ ಬಗ್ಚಿ ಹಾಗೂ ವಿಪುಲ್ ಎಂ. ಪಂಚೋಲಿ ಅವರಿದ್ದ ಪೀಠವು 'ಪುನರ್ ಪರಿಶೀಲನೆಗೆ ಯಾವುದೇ ಆಧಾರ ಕಾಣುತ್ತಿಲ್ಲ' ಎಂದು ಸ್ಪಷ್ಟಪಡಿಸಿದೆ. ಇದೇ ವೇಳೆ, ಮುಕ್ತ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಬೇಕೆಂಬ ತಮಿಳುನಾಡಿನ ಮನವಿಯನ್ನೂ ನ್ಯಾಯಪೀಠ ತಿರಸ್ಕರಿಸಿದೆ.

ಈ ಹಿಂದೆ 2025ರ ನವೆಂಬರ್‌ನಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪಿನಲ್ಲಿ, ಕೇಂದ್ರ ಜಲ ಆಯೋಗ ಡಿಪಿಆರ್ ಸಿದ್ಧಪಡಿಸಲು ಅನುಮತಿ ನೀಡಿರುವ ಹಂತದಲ್ಲೇ ತಮಿಳುನಾಡು ಸಲ್ಲಿಸಿದ್ದ ಅರ್ಜಿಯನ್ನು ಮುಂಗಡ ಆಕ್ಷೇಪ ಎಂದು ಹೇಳಿ ಪರಿಗಣಿಸಲು ನಿರಾಕರಿಸಿತ್ತು. ಇದೀಗ ಆ ತೀರ್ಪಿನ ವಿರುದ್ಧದ ಮರುಪರಿಶೀಲನಾ ಅರ್ಜಿಯೂ ತಿರಸ್ಕೃತವಾಗಿದೆ. ➡ಪುಟ ೪



- ಮುಕ್ತ ನ್ಯಾಯಾಲಯದಲ್ಲಿ ವಿಚಾರಣೆ ನಡೆಸುವ ಮನವಿಗೂ ನಿರಾಕರಣೆ
- ಬೆಂಗಳೂರು ಕುಡಿಯುವ ನೀರಿನ ಅವಶ್ಯಕತೆಗೆ ಯೋಜನೆ ಮಹತ್ವದ್ದು ಎಂದ ಕರ್ನಾಟಕ

ಈಗ ವಿಜಯ್ ಸರ್ಕಾರದಿಂದಲೂ ಕ್ಯಾತೆ

ಮೇಕೆದಾಟು ಯೋಜನೆ ಸ್ಥಗಿತಗೊಳಿಸಲು ಸಾಧ್ಯವಿರುವ ಎಲ್ಲ ಕಾನೂನಾತ್ಮಕ ದಾರಿಗಳನ್ನು ಕಂಡುಕೊಳ್ಳುವಂತೆ ಅಧಿಕಾರಿಗಳಿಗೆ ತಮಿಳುನಾಡು ಸಿಎಂ ವಿಜಯ್ ಸೂಚಿಸಿದ್ದಾರೆ. ➡ಪುಟ ೪

ಅಸ್ಸಾಂನಲ್ಲಿ ಏನಾಸಂ ಮಸೂದೆ ಮಂಡನೆ

- ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಸರ್ಕಾರದ ಕ್ರಮ
- ಬಹುಪತ್ನಿತ್ವ ನಿಷೇಧ, ಲಿವ್-ಇನ್ ಸಂಬಂಧಗಳ ಕಡ್ಡಾಯ ನೋಂದಣಿ ಪ್ರಸ್ತಾಪ

•**ದಿಸ್ಪುರ್:** ಅಸ್ಸಾಂ ಸರ್ಕಾರ ರಾಜ್ಯ ವಿಧಾನಸಭೆಯಲ್ಲಿ ಏಕರೂಪ ನಾಗರಿಕ ಸಂಹಿತೆ (ಏನಾಸಂ) ಮಸೂದೆ ಮಂಡಿಸಿದ್ದು, ಇದರಲ್ಲಿ ಬಹುಪತ್ನಿತ್ವ ನಿಷೇಧ ಹಾಗೂ



ಲಿವ್-ಇನ್ ಸಂಬಂಧಗಳ ಕಡ್ಡಾಯ ನೋಂದಣಿಗೆ ಪ್ರಸ್ತಾಪಿಸಲಾಗಿದೆ.

ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರ ಪರವಾಗಿ ಸಂಸದೀಯ ವ್ಯವಹಾರಗಳ ಸಚಿವ ಅತುಲ್ ಬೋರಾ, 'ದಿ ಯುನಿಫಾರ್ಮ್ ಸಿವಿಲ್ ಕೋಡ್, ಅಸ್ಸಾಂ, 2026' ಮಸೂದೆ ಮಂಡಿಸಿದರು. ಈ ಕಾನೂನು ಪ್ರಮುಖವಾಗಿ ನಾಲ್ಕು ವಿಷಯಗಳನ್ನು ಒಳಗೊಂಡಿದೆ. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,85,000** (2,85,000) ಅಪರಂಜಿ ಚಿನ್ನ: **1,59,380** (1,59,060) ಆಭರಣ ಚಿನ್ನ: **1,46,100** (1,45,800) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ.ಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ **76,488** (1,073↑) ಎನ್‌ಎಸ್‌ಇ **24,031** (312↑)

$1 = ₹95.70

ಕಿರುಸುದ್ದಿ

ಶಸ್ತ್ರಚಿಕಿತ್ಸೆ ಹೊಲಿಗೆ ಕಾರ್ಯಾಗಾರ ಯಶಸ್ವಿ



ಧಾರವಾಡ: ಧರ್ಮಸ್ಥಳ ಮಂಜುನಾಥೇಶ್ವರ ವೈದ್ಯಕೀಯ ಕಾಲೇಜಿನ ಶಸ್ತ್ರಚಿಕಿತ್ಸಾ ವಿಭಾಗದಿಂದ 'ಪ್ರಾಯೋಗಿಕ ಶಸ್ತ್ರಚಿಕಿತ್ಸೆ ಹೊಲಿಗೆ' ಕಾರ್ಯಾಗಾರವು ಸ್ಥಳೀಯ ಸತ್ತೂರಿನ ಎಸ್‌ಡಿಎಂ ಆಸ್ಪತ್ರೆಯಲ್ಲಿ ಜರುಗಿತು. ಜಾನ್ಸನ್-ಜಾನ್ಸನ್ ಇನ್ಸ್ಟಿಟ್ಯೂಟ್ ಸಂಚಾರಿ ಆಸ್ಪತ್ರೆ ಹಾಗೂ ಕೆಎಸ್‌ಸಿಎಎಸ್‌ಐನ ಹುಬ್ಬಳ್ಳಿ-ಧಾರವಾಡ ನಗರಘಟಕ ಸಹಯೋಗದ ಕಾರ್ಯಾಗಾರಕ್ಕೆ ವೈದ್ಯಕೀಯ ನಿರ್ದೇಶಕ ಸಾಕೇತ ಶೆಟ್ಟಿ ಉದ್ಘಾಟಿಸಿ ಮಾತನಾಡಿ, ಸಾಕೇತ್ ಶೆಟ್ಟಿ, ಸೈದ್ಧಾಂತಿಕ ಜ್ಞಾನ ಮತ್ತು ಶಸ್ತ್ರಚಿಕಿತ್ಸಾ ಕೊಠಡಿಗಳ ಸೇತುವೆಯಾಗಿ ಇಂತಹ ಕಾರ್ಯಾಗಾರಗಳು ಕಾರ್ಯನಿರ್ವಹಿಸಲಿವೆ. ವೈದ್ಯಕೀಯ ವಿದ್ಯಾರ್ಥಿಗಳು ಇಂತಹ ಕಾರ್ಯಾಗಾರಗಳ ಸದ್ಬಳಕೆಯಿಂದ ತಮ್ಮ ಜ್ಞಾನ ವೃದ್ಧಿ ಜೊತೆ ಪರಿಷ್ಕರಣೆ ಮತ್ತು ಕೌಶಲ್ಯಗಳು ಬೆಳೆಸಿಕೊಂಡು, ಅತ್ಯಂತ ಜಾಗೂರಕವಾಗಿ ಕರ್ತವ್ಯ ನಿರ್ವಹಿಸಲು ಹೇಳಿದರು.

ಕಾರ್ಯಾಗಾರದಲ್ಲಿ ಶಸ್ತ್ರಚಿಕಿತ್ಸೆ ಹೊಲಿಗೆ ಹಾಕುವ ಪ್ರಾಮುಖ್ಯತೆ, ಲ್ಯಾಪರಸ್ಕೋಪ್ ಹೊಲಿಗೆ, ಸಾಮಾನ್ಯ ಶಸ್ತ್ರಚಿಕಿತ್ಸೆಗೆ ಕ್ಯಾಡವೇರಿಕ್, ಕರುಳಿನ ಅನಾಸ್ಟೊಮೊಸಿಸ್ ಕುರಿತು ಸಂಪೂರ್ಣ ವಿವರಣೆ ನೀಡಿದರು. ಶಿಬಿರದಲ್ಲಿ ಪಾಲ್ಗೊಂಡು ಸುಮಾರು 85ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಶಸ್ತ್ರಚಿಕಿತ್ಸೆಗೆ ಮತ್ತು ಸ್ವರೂಪ ಶಸ್ತ್ರಚಿಕಿತ್ಸೆ, ಎಲುಬು-ಕೀಲು, ಪ್ರಸೂತಿ ಮತ್ತು ಸ್ತ್ರೀರೋಗ ಶಾಸ್ತ್ರ ಕುರಿತು ಮಾಹಿತಿ ನೀಡಲಾಯಿತು. ಕುಲಪತಿ ಡಾ.ನಿರಂಜನಕುಮಾರ, ಪ್ರಾಚಾರ್ಯ ಡಾ.ವಿಜಯ ಕುಲಕರ್ಣಿ, ಡಾ.ಕಿರಣ ಹೆಗ್ಡೆ, ಡಾ.ಮಖ್ದೂಮ್ ಕಿಲ್ಲೇದಾರ್, ಡಾ.ಮಲ್ಲಿಕಾರ್ಜುನ ದೇಸಾಯಿ, ಡಾ. ಪ್ರಕಾಶ ಮಹಾಲಿಂಗಶೆಟ್ಟಿ ಇದ್ದರು. ಡಾ.ಸುರೇಶ ಬಡಿಗೇರ ಸ್ವಾಗತಿಸಿದರು. ಡಾ.ಪ್ರಶಾಂತ ತುಬಸಿ ನಿರೂಪಿಸಿದರು. ಡಾ.ಹರ್ಷಾ. ಕೊಡ್ಲಿವಾಡಮಠ ವಂದಿಸಿದರು.

ಗ್ಯಾರಂಟಿ ಯೋಜನೆ ಸಮಿತಿ ಸಭೆ



ಅಳ್ನಾವರ: ಪಡಿತರ ವ್ಯವಸ್ಥೆಯಡಿ ವಿತರಿಸಲಾಗುವ ಅಕ್ಕಿಯನ್ನು ಸಂತೆಯಲ್ಲಿ ಮಾರಾಟ ಮಾಡುತ್ತಿರುವುದು ಕಂಡು ಬಂದಲ್ಲಿ ಅಂತಹವರ ಕಾರ್ಡ್‌ಗಳನ್ನು ರದ್ದು ಪಡಿಸುವದರ ಜೊತೆಗೆ ಪ್ರಕರಣ ದಾಖಲಿಸುವದಾಗಿ ಆಹಾರ ನಿರೀಕ್ಷಕ ವಿನಾಯಕ ದೀಕ್ಷಿತ ಹೇಳಿದರು. ಸಮೀಪದ ಕೋಗಿಲಗೇರಿ ಗ್ರಾಮದಲ್ಲಿ ಜರುಗಿದ ಗ್ಯಾರಂಟಿ ಯೋಜನೆ ತಾಲೂಕು ಮಟ್ಟದ ಸಭೆಯಲ್ಲಿ ಮಾತನಾಡಿ, ಅನೇಕರು ಅಕ್ಕಿಯನ್ನು ಸಂತೆಯಲ್ಲಿ ಮಾರಾಟ ಮಾಡುತ್ತಿರುವದಾಗಿ ದೂರುಗಳು ಬಂದಿದ್ದು, ಈ ಹಿನ್ನೆಲೆಯಲ್ಲಿ ಎಲ್ಲೆಡೆ ತಪಾಸಣೆ ಮಾಡಲಾಗುತ್ತಿದೆ. ಕೋಗಿಲಗೇರಿ ಗ್ರಾಮದ ಪಡಿತರ ವಿತರಣೆ ಅಂಗಡಿಕಾರರ ಮೇಲೆ ಸಾರ್ವಜನಿಕರು ದೂರು ಸಲ್ಲಿಸಿದ್ದು, ಗ್ರಾಮದಲ್ಲಿ ಮಂಗಳವಾರ ವಿಶೇಷ ಗ್ರಾಮ ಸಭೆ ಕರೆಯಲಾಗಿದ್ದು ತಮ್ಮ ಅಹವಾಲುಗಳನ್ನು ಸಾರ್ವಜನಿಕರು ಸಲ್ಲಿಸಬಹುದಾಗಿದೆ ಎಂದರು. ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ವಿನಾಯಕ ಕುರುಬರ ಮಾತನಾಡಿದರು. ಸಭೆಯಲ್ಲಿ ವಿದ್ಯುತ್, ಯುವನಿಧಿ ಮತ್ತು ಸಾರಿಗೆ ವ್ಯವಸ್ಥೆ ಕುರಿತು ಹಲವಾರು ದೂರುಗಳು ಕೇಳಿ ಬಂದವು. ತಾಪಂ ಕಾನಿ ಅಧಿಕಾರಿ ಪ್ರಶಾಂತ ತುರಕಾಣಿ, ಸಿಡಿಪಿಒ ಮಂಜುನಾಥ, ಪಿಡಿಒ ರೇಣುಕಾ ಕೊಪ್ಪದ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ನಾಟಕ ಮೇ 30ಕ್ಕೆ

ಧಾರವಾಡ: ಶ್ರೀ ಕೊಟ್ಟೂರೇಶ್ವರ ನಾಟಕ ಮಂಡಳಿ ಸಹಯೋಗದಲ್ಲಿ ಅಂತರಂಗ ಪ್ರಸ್ತುತಪಡಿಸುವ ಫೇಯಿಂಗ್ ಗೆಸ್ಟ್ ನಾಟಕ ಪ್ರದರ್ಶನವು ಮೇ 30ರಂದು ಸಂಜೆ 6.30ಕ್ಕೆ ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ಸಭಾಂಗಣದಲ್ಲಿ ನಡೆಯಲಿದೆ. ರಂಗ ನಿರ್ದೇಶಕಿ ವಿಶ್ವೇಶ್ವರಿ ಹಿರೇಮಠ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ಮುಖ್ಯ ಅತಿಥಿಯಾಗಿ ಬೆಳಗಾವಿ ನಾಟಕಕಾರ ಡಾ.ಡಿ.ಎಸ್.ಚೌಗಲೆ ಆಗಮಿಸಲಿದ್ದಾರೆ.ಕವಿಸಂ ಪ್ರ.ಕಾರ್ಯದರ್ಶಿ ಶಂಕರ ಹಲಗತ್ತಿ ಅಧ್ಯಕ್ಷತೆ ವಹಿಸುವರು.ಅಭಿರಾಮ ಭಡಕಮಕರ ರಚನೆ ಮರಾಠಿ ಮೂಲದ ಈ ನಾಟಕವನ್ನು ಡಿ.ಎಸ್. ಚೌಗಲೆ ಕನ್ನಡಕ್ಕೆ ಅನುವಾದಿಸಿದ್ದು, ಸನ್ಮತಿ ಅಂಗಡಿ ನಿರ್ದೇಶನದಲ್ಲಿ ಈ ನಾಟಕ ಪ್ರದರ್ಶನವಾಗುವುದು. ನಾಟಕ ಅಕಾಡೆಮಿ ಪ್ರಶಸ್ತಿ ಪಡೆದ ಹಿರಿಯ ನಟ ಗೋಪಾಲ ಉಣಕಲ್, ವೀರಣ್ಣ ಹೊಸಮನಿ, ವಿಷಯಾ ಜೇವೂರ, ಪೂರ್ಣಿಮಾ ಕೆ.ಎಸ್. ಪವನ್ ದೇಶಪಾಂಡೆ, ಮಾಂತೇಶ ಹವಲನ್ನವರ್ ಅಭಿನಯಿಸಿದ್ದು, ರಾಘವ ಕಮ್ಮಾರ ಸಂಗೀತ ನೀಡಿದ್ದಾರೆ ಎಂದು ನಾಟಕ ಮಂಡಳಿ ಕಾರ್ಯದರ್ಶಿ ಜಗದೀಶ್ ಅಂಗಡಿ ಪ್ರಕಟಣೆಯಲ್ಲಿ ತಿಳಿಸಿದೆ.



ಕಲಘಟಗಿ: ತಾಲೂಕಿನ ಗಳಗಿ ಹುಲಕೊಪ್ಪ ಗ್ರಾಮದ ಹಿರಿಯ ಪತ್ರಕರ್ತ ವಿಠ್ಠಲ ಕ್ಯಾರವಾಡ್ ಗೆ ಮಾಧ್ಯಮ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆ, ಇತ್ತೀಚೆಗೆ ಕಾರ್ಯ ನಿರತ ಪತ್ರಕರ್ತರ ಸಂಘದ ವಾರ್ಷಿಕೋತ್ಸವದಲ್ಲಿ ಅತ್ಯುತ್ತಮ ಮಾನವೀಯ ವರದಿ ಪ್ರಶಸ್ತಿ ನೀಡಿ ಗೌರವಿಸಲಾಗಿತು. ದಾವಣಗೆರೆ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿವಿ ದೇವನಗರಿ ಸಿರಿ ಪ್ರಶಸಿ ನೀಡಿ ಗೌರವಿಸಿದೆ. ಶಾಸಕ ಸಮರ್ಥ ಶಾಮನೂರು ಹಾಗೂ ರಾಜಯೋಗಿನಿ ಬ್ರಹ್ಮಕುಮಾರಿ ಲೀಲಾಜಿ ಪ್ರಶಸ್ತಿ ಪುರಸ್ಕಾರ ಮಾಡಿ ಗೌರವಿಸಿದರು.

ಪೊಲೀಸರ ನಡುವಳಿಕೆ ವಿರುದ್ಧ ರಜತ್ ಆಕ್ರೋಶ

ಹುಬ್ಬಳ್ಳಿ: ನಗರದ ಬಸ್ ನಿಲ್ದಾಣದಲ್ಲಿ ಪಶ್ಚಿಮ ಬಂಗಾಳ ಸೇರಿದಂತೆ ವಿವಿಧ ಭಾಗಗಳಿಂದ ಬಂದು ಬೇರೆ ನಗರಗಳಿಗೆ ತೆರಳುತ್ತಿದ್ದ ನೂರಾರು ಕಾರ್ಮಿಕರನ್ನು ಬಲವಂತವಾಗಿ ಅಸೂಚಿವಾದ ನೆಲದ ಮೇಲೆ ಕೂರಿಸಿ, ಶಾಸಕ ಮಹೇಶ ಟೆಂಗಿನಕಾಯಿ ಅವರು ನೈತಿಕ ಪೊಲೀಸರಂತೆ ಅಮಾನವೀಯವಾಗಿ ವಿಚಾರಣೆ ನಡೆಸಿರುವ ಘಟನೆ ಅತ್ಯಂತ ಖಂಡನೀಯ ಎಂದು ಕಾಂಗ್ರೆಸ್ ಮುಖಂಡ ರಜತ್ ಉಳ್ಳಾಗಡ್ಡಿಮಠ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ. ಈ ಕುರಿತು ಪ್ರಕಟಣೆಗೆ ತಿಳಿಸದ ಅವರು, ಒಬ್ಬ ಜನಪ್ರತಿನಿಧಿಯಾಗಿ ಬಡ ಕಾರ್ಮಿಕರೊಂದಿಗೆ ಈ ರೀತಿ ಅತ್ಯಂತ ಅಸಭ್ಯವಾಗಿ ನಡೆದುಕೊಂಡು, ಅವರ ಮಾನವ ಹಕ್ಕುಗಳನ್ನು ಬಹಿರಂಗವಾಗಿ ಉಲ್ಲಂಘಿಸಿರುವುದು ಇಡೀ ಸಮಾಜ ತಲೆತಗ್ಗಿಸುವಂತಹ ನಾಚಿಕೇಡಿನ ಸಂಗತಿಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ಇಡೀ ಘಟನೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಬೇಕಾದ ಪೊಲೀಸ್ ಅಧಿಕಾರಿಗಳು ವರ್ತಿಸಿದ ಜವಾಬ್ದಾರಿರಹಿತ ಶೈಲಿ ವಿರುದ್ಧವೂ ರಜತ್ ತೀವ್ರ ವಾಗ್ದಾಳಿ ನಡೆಸಿದರು. ಘಟನಾ ಸ್ಥಳದಲ್ಲಿದ್ದ ಪೊಲೀಸ್ ಅಧಿಕಾರಿಗಳು ಕಾನೂನಿನಂತೆ ಕ್ರಮ ಕೈಗೊಳ್ಳುವ ಬದಲು, ಶಾಸಕರ ಅಮಾನವೀಯ ಕೃತ್ಯಕ್ಕೆ ಸಂಪೂರ್ಣವಾಗಿ ಮಣಿದಿದ್ದಾರೆ. ಕೇವಲ ಒಬ್ಬ ಶಾಸಕರನ್ನು ಸಮಾಧಾನ ಪಡಿಸಲು ಮತ್ತು ಒಲೈಸಲು ಪೊಲೀಸರು ಹರಸಾಹಸ ಪಟ್ಟಿರುವುದು ಇಂದಿನ ಆಡಳಿತ ವ್ಯವಸ್ಥೆ ಸಂಪೂರ್ಣ ಅರ್ಧ ಪತನಕ್ಕೆ ಕೈಗನ್ನಡಿಯಾಗಿದೆ ಎಂದು ಪೊಲೀಸ್ ಇಲಾಖೆ ಬೆನ್ನುಮೂಳೆ ಇಲ್ಲದ ನಡವಳಿಕೆಯನ್ನು ಖಂಡಿಸಿದ್ದಾರೆ.



ಹುಬ್ಬಳ್ಳಿ: ಪ್ರಧಾನಿ ಮೋದಿ ಅವರ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಸುದ್ದಿ ಹರಡಿದ ವ್ಯಕ್ತಿಯನ್ನು ಬಂಧಿಸಿ ಕಠಿಣ ಕ್ರಮಕ್ಕೆ ಒಳಪಡಿಸಬೇಕು ಎಂದು ಆಗ್ರಹಿಸಿ ಬಿಜೆಪಿ ಸಾಮಾಜಿಕ ಜಾಲತಾಣ ಪ್ರಕೋಷ್ಠದ ಜಿಲ್ಲಾ ಘಟಕದ ವತಿಯಿಂದ ಪೊಲೀಸರಿಗೆ ಮನವಿ ಸಲ್ಲಿಸಲಾಯಿತು. ಪ್ರಕೋಷ್ಠದ ಜಿಲ್ಲಾ ಸಂಚಾಲಕ ಮಹೇಶ ತಪೇಲಾದವರ ನೇತೃತ್ವದಲ್ಲಿ ಮಂಡಲ ಅಧ್ಯಕ್ಷ ಮಂಜುನಾಥ ಕಾಟಕರ್, ಜಿಲ್ಲಾ ಸಹ-ಸಂಚಾಲಕ ಬಸವರಾಜ ಬಳಿಗಾರ, ಶ್ರೀನಿವಾಸ ರಾಯ್ಕರ್, ಮಂಡಲ ಪ್ರಧಾನ ಕಾರ್ಯದರ್ಶಿ ಅನುಪ ಬಿಜವಾಡ, ರಂಗಾ ಕಠಾರಿ, ಸದಸ್ಯ ವಿಶ್ವನಾಥ ಡೊಗಲಿಮಠ, ರಾಜು ಕೋರ್ಯಾಣಮಠ, ಬಸವರಾಜ ಇಚ್ಚಂಗಿ, ಮಂಜು ಬಿಜವಾಡ ಇದ್ದರು.

ಋಣ ಸಂದಾಯ ಕಾರ್ಯಕ್ರಮ | ಸಿದ್ಧರಾಮ ಶ್ರೀಗಳ ಅಭಿಮತ

ಸಮಾಜ ಸೇವೆ ಮಾಡುವ ಕೈಗಳು ಹೆಚ್ಚಲಿ

ಹುಬ್ಬಳ್ಳಿ: ಸಮಾಜದಲ್ಲಿನ ಅಶಕ್ತರು, ಅಸಹಾಯಕರು, ಅನಾಥರು, ಅಬಲೆಯರ ಕಣ್ಣೀರು ಒರೆಸಿ, ಆರೈಕೆ ಮತ್ತು ಆಸರೆ ನೀಡುವ ಮಾನವೀಯ ಸೇವೆ ಮಾಡುವ ಕೈಗಳು ಇನ್ನಷ್ಟು ಹೆಚ್ಚಬೇಕಿದೆ ಎಂದು ಶಿರಹಟ್ಟಿ ಸಂಸ್ಥಾನ ಮಠದ ಫಕೀರ ಸಿದ್ಧರಾಮ ಶ್ರೀಗಳು ಆಶಯ ವ್ಯಕ್ತಪಡಿಸಿದರು.



ಇಲ್ಲಿನ ಬೈರಿದೇವರಕೊಪ್ಪ ವ್ಯಾಪ್ತಿಯ ವೀರಸಂಗೊಳ್ಳಿ ರಾಯಣ್ಣ ನಗರದಲ್ಲಿ ಭಾನುವಾರ ಬೆಳಕು ವೇದಿಕೆ ಆಯೋಜಿಸಿದ್ದ ತುಲಾಭಾರ, ಸ್ಮರಣೋತ್ಸವ ಹಾಗೂ ವಿವಿಧ ಕ್ಷೇತ್ರದಲ್ಲಿ ಮಾನವೀಯ ಸೇವೆಗೈದ 10 ಜನ ಮಹನೀಯರಿಗೆ ಗೌರವ ಸಲ್ಲಿಸುವ ''ಋಣ ಸಂದಾಯ'' ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿ, ನಿರ್ಗತಿಕರ ಸೇವೆ ಮಾಡಿ ಅವರಿಗೆ ನಿಮ್ಮ ಜೊತೆ ನಾವಿದ್ದೇವೆ ಎನ್ನುವ ಧೈರ್ಯ ಹೇಳಿ ಅವರಲ್ಲಿ ಆತ್ಮಸ್ಥೈರ್ಯ ತುಂಬಬೇಕು. ಆಸರೆ ನೀಡಿ, ಪ್ರೀತಿಯಿಂದ ಅವರ ಸೇವೆ ಮಾಡಬೇಕು. ಅದುವೇ ನಿಜವಾದ ದೇವರ ಸೇವೆ ಎಂದರು.

ಮೈಸೂರಿನ ನಿವೃತ್ತ ಶಿಕ್ಷಕ ಚಕ್ರವರ್ತಿ ಶ್ರೀದರ ಉದ್ಘಾಟಿಸಿ ಮಾತನಾಡಿ, ನಾವು ಸಂಗ್ರಹಿಸುವ ಸಂಪತ್ತು ನಮ್ಮದಲ್ಲ. ಅದರ ಕಾವಲುಗಾರರು ಮಾತ್ರ ನಾವು, ಯಾರಿಗೆ ಅದು ಅಗತ್ಯವಿದೆಯೋ ಅವರನ್ನು ಗುರುತಿಸಿ, ಅವರಿಗೆ ಅರ್ಪಿಸಿ ಧನ್ಯತೆ ಪಡೆಯಬೇಕು. ಆ ದಿಸೆಯಲ್ಲಿ ಈ ಕಾರ್ಯಕ್ರಮ ಸಮಾಜಕ್ಕೆ ದೊಡ್ಡ ಸಂದೇಶ ರವಾನಿಸಿದೆ ಎಂದು ಶ್ಲಾಘಿಸಿದರು.

ಪತ್ರಕರ್ತ ಮಲ್ಲಿಕಾರ್ಜುನ ಸಿದ್ದಣ್ಣವರ ಮಾತನಾಡಿ, ಸಮಾಜಕ್ಕೆ ತಮ್ಮ ಬದುಕನ್ನೇ ಅರ್ಪಿಸಿರುವ ಸಾಧಕರನ್ನು ಗುರುತಿಸಿ, ಗೌರವಿಸುವ ಮೂಲಕ ತುಸುವಾದರೂ ಋಣ ಸಂದಾಯ ಮಾಡಬೇಕು. ಆ ದಿಸೆಯಲ್ಲಿ ಈ ಕಾರ್ಯಕ್ರಮ ಮಾದರಿ ಎಂದರು.

ಸನ್ಮಾನ ಸ್ವೀಕರಿಸಿದ ಅಥಣಿ ವಿಮೋಚನ ಸಂಸ್ಥೆ ಬಿ.ಎಲ್.ಪಾಟೀಲ ಮಾತನಾಡಿ, ಸಮಾಜ ಸೇವೆ ನಮ್ಮ ಕರ್ತವ್ಯ. ಎಲ್ಲ ಸೌಲಭ್ಯ, ಸಂಪತ್ತು ಇರುವವರು ಅದರಲ್ಲಿನ ಒಂದಷ್ಟು ಭಾಗ ಸಮಾಜಕ್ಕೆ ಅರ್ಪಿಸಲು ಇಂಥ ಸೇವೆಯಾವುದೇ ಫಲಾಪೇಕ್ಷೆ ಇಲ್ಲದೇ ಮಾಡಬೇಕು ಎಂದರು.

ಬಾಗಲಕೋಟೆ ಘನಶ್ಯಾಮ ಭಾಂಡಗೆ ಮಾತನಾಡಿ, ಸಕಲ ಜೀವಿಗಳಲ್ಲಿ ದೇವರಿದ್ದಾನೆ. ಬೀದಿ ನಾಯಿ, ಬಿಡಾಡಿ ದನಗಳಿಗೂ ಈ ಭೂಮಿ ಮೇಲೆ ಬದುಕುವ ಹಕ್ಕಿದೆ. ಮನುಷ್ಯರಂತೆ ಅವುಗಳನ್ನು ಕಾಣಿ. ತುಸು ಆಹಾರ- ನೀರು ಹಾಕಿ ಪ್ರೀತಿ ತೋರಿಸಿದರೆ, ಅವು ನಿಮ್ಮನ್ನು ಅಪಾರವಾಗಿ ಪ್ರೀತಿಸುತ್ತವೆ ಎಂದರು.

ಶ್ರೀಗಳ ತುಲಾಭಾರ ಮತ್ತು ಆದರ್ಶ ದಂಪತಿ ದಿವಂಗತ ಬಸವಣ್ಣೆವ್ವ ಕೋಂ ಬಸಪ್ಪ ರುದ್ರಪ್ಪ ವಿರಪಣ್ಣವರ ಅವರ ಸ್ಮರಣೋತ್ಸವ ಜರುಗಿತು.

ಕಾಲನಿಯ ಗಣ್ಯ ಆರ್.ಶಿವಣ್ಣ, ಶಿ.ಎಸ್.ಹವಾಲ್ದಾರ, ಕೃಷ್ಣಾ ಶೆಟ್ಟಿ, ವಿ.ಎಸ್.ಆಲೂರ, ಸೂಗೂರಪ್ಪ ಲಕ್ಷ್ಮೇಶ್ವರ, ವೆಂಕಟೇಶ ಪಾಟೀಲ, ವಿರಪಣ್ಣವರ ಮನೆತನದ ಶಿವಪ್ಪ, ಗಂಗಪ್ಪ, ಚೆನ್ನಪ್ಪ ಮತ್ತಿತರರು ಇದ್ದರು.

ಆರ್.ಬಿ.ವಿರಪಣ್ಣವರ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಶಾಂತ ಮೋಟಗಿ ಕಾರ್ಯಕ್ರಮ ನಿರೂಪಿಸಿದರು. ಜಗದೀಶ ಕುರಬೆಟ್ಟ ವಂದಿಸಿದರು.

ಮಹನೀಯರಿಗೆ ಸನ್ಮಾನ

ವಿವಿಧ ಕ್ಷೇತ್ರದಲ್ಲಿ ಮಾನವೀಯ ಸೇವಗೈದ ಅಥಣಿ ಬಿ.ಎಲ್.ಪಾಟೀಲ (ದೇವದಾಸಿ ಮಕ್ಕಳ ಪುನಃ ರ್ವಸತಿ), ಕೊಪ್ಪಳ ಜಿಲ್ಲೆ ಕುಣಕೇರಿ ಹುಚ್ಚಮ್ಮ ಚೌಧರಿ (ಸರ್ಕಾರಿ ಶಾಲೆಗೆ ಭೂದಾನ), ನವನಗರದ ಸಂಚೈ ವಾಸು ಕುನ್ನಾಥ (ಎಚ್ಐವಿ ಪೀಡಿತ ಮಕ್ಕಳ ಪೋಷಕ), ವಿಜಯನಗರ ಜಿಲ್ಲೆ ಕೂಡ್ಲಗಿಯ ಭಟ್ರಳ್ಳಿ ಗೂಳೆಪ್ಪ (ಅರಣ್ಯ ಸಂರಕ್ಷಣೆ), ಉಡುಪಿಯ ತನುಲಾ ತರುಣ (ಅನಾಥ ಮಕ್ಕಳ ಸಂರಕ್ಷಕಿ), ಬಾಗಲಕೋಟೆಯ ಘನಶಾಮ ಭಾಂಡಗೆ (ವಿಕಲಚೇತನರ ಹೋರಾಟಗಾರ), ಯಾದಗಿರಿ ಜಿಲ್ಲೆ ದೊಡ್ಡ ತಾಂಡಾದ ತುಳಜಿರಾಮ ಚವ್ಹಾಣ (ವಿದೇಶದಿಂದ ಮರಳಿ ಊರಿನ ಸೇವೆ ಮಾಡಿದ ಸಾಧಕ), ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿಯ ಮಾಳಮ್ಮ (ಮಹಿಳಾ ಸಬಲೀಕರಣ), ನುಗ್ಗಿಕೇರಿಯ ನಿಂಗಪ್ಪ ಕುಡವಕ್ಕಲಿಗರ (ಗಾಯಾಳು ಆಪದ್ಬಾಂಧವ), ಅಥಣಿಯ ಬಸವರಾಜ ಉಮರಾಣಿ, (ನಡೆದಾಡುವ ಕಂಪ್ಯೂಟರ್) ಅವರನ್ನು ಸನ್ಮಾನಿಸಲಾಯಿತು.

11ನೇ ದಿನಕ್ಕೆ ಪ್ರತ್ಯೇಕ ಪಾಲಿಕೆ ಪ್ರತಿಭಟನೆ

ಧಾರವಾಡ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಿಂದ ಧಾರವಾಡ ಬೇರೆ ಮಾಡಿ, ಪ್ರತ್ಯೇಕ ಪಾಲಿಕೆ ರಚನೆಗೆ ಒತ್ತಾಯಿಸಿ ಬಿ.ಡಿ.ಹಿರೇಮಠ ನೇತೃತ್ವದಲ್ಲಿ ಮನಡೆದ ಸತ್ಯಪ್ರತಿಪಾದನೆ ಸತ್ಯಾಗ್ರಹ ಸೋಮವಾರ ಯಶಸ್ವಿಯಾಗಿ 11ನೇ ದಿನಕ್ಕೆ ಕಾಲಿಟ್ಟಿದೆ.

ಸತ್ಯಾಗ್ರಹದ ಕಾವು ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಿದ್ದು, ಈ ಸತ್ಯಾಗ್ರಹಕ್ಕೆ ವಿವಿಧ ಸಂಘ-ಸಂಸ್ಥೆಗಳಿಂದ ಬೆಂಬಲಗಳ ಮಹಾಪೂರ ಹರಿದು ಬರುತ್ತಿದೆ. ಸೋಮವಾರ ಉತ್ತರ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ, ವಿಶ್ವಕರ್ಮ ಸಮಾಜ ಬೆಂಬಲ ಸೂಚಿಸಿವೆ.

ಸತ್ಯಾಗ್ರಹ ಸ್ಥಳಕ್ಕೆ ಭೇಟಿ ನೀಡಿದ ವಿಶ್ವಕರ್ಮಸಮಾಜ, ಉತ್ತರಕರ್ನಾಟಕದ ಚಲನಚಿತ್ರ ವಾಣಿಜ್ಯ ಮಂಡಳಿ ಪದಾಧಿಕಾರಿಗಳು, ಧಾರವಾಡದ ಸ್ವಾಯತ್ತತೆ ಹಾಗೂ ಅಭಿವೃದ್ಧಿ ದೃಷ್ಟಿಯಿಂದ ಪ್ರತ್ಯೇಕ ಪಾಲಿಕೆ ರಚನೆ ಅಗತ್ಯವಿದೆ ಎಂದು ಪ್ರತಿಪಾದನೆ ಮಾಡಿದರು.

ಸತ್ಯಾಗ್ರಹದ ಸ್ಥಳಕ್ಕೆ ಆಗಮಿಸಿ ಬೆಂಬಲ ಸೂಚಿಸಿದ ಹುಬ್ಬಳ್ಳಿ-ಧಾರವಾಡ ಪೂರ್ವ ವಿಧಾನಸಭೆ ಕ್ಷೇತ್ರದ ಶಾಸಕ ಪ್ರಸಾದ ಅಬ್ಬಯ್ಯ ಅವರು ಹೋರಾಟಗಾರರ ಮತ್ತು ಮುಖಂಡ ಬಿ.ಡಿ.ಹಿರೇಮಠ ಅವರೊಂದಿಗೆ ಸುದೀರ್ಘವಾದ ಚರ್ಚೆಯೂ ಕೂಡ ನಡೆಸಿದರು.

ನಂತರ ಮಾತನಾಡಿದ ಶಾಸಕ ಪ್ರಸಾದ ಅಬ್ಬಯ್ಯ, ಧಾರವಾಡದ ಜನತೆ ಬೇಡಿಕೆ ಪಾರದರ್ಶಕ ಮತ್ತು ನ್ಯಾಯವಿದೆ. ಅವಳಿನಗರಗಳಿಗೆ ಹೋಲಿಸಿದರೆ, ಧಾರವಾಡ ಜನತೆ ಎದುರಿಸುವ ಸಮಸ್ಯೆಗಳು ನಿಜಕ್ಕೂ ಚಿಂತಾಜನಕವಾಗಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಮುಖಂಡ ಗುರುರಾಜ ಹುಣಸಿಮರದ, ಪ್ರತ್ಯೇಕ ಪಾಲಿಕೆಯ ಈ ಪಕ್ಷಾತೀತ ಹೋರಾಟಕ್ಕೆ ಈವರೆಗೂ 180ಕ್ಕೂ ಅಧಿಕ ಸಂಘ-ಸಂಸ್ಥೆಗಳು, ವಿವಿಧ ಸಂಘಟನೆ, ವ್ಯಾಪಾರಸ್ಥರು ಬೆಂಬಲಿಸಿದ್ದು, ರಾಜ್ಯಪಾಲರು ಅನುಮೋದನೆ ಹಾಕಬೇಕಲು ಆಗ್ರಹಿಸಿದರು.

ಸತ್ಯಾಗ್ರಹದಲ್ಲಿ ಬಿ.ಡಿ.ಹಿರೇಮಠ, ಮಹಾದೇವ ಹೊರಟ್ಟಿ, ಮನೋಜ ಪಾಟೀಲ, ವಿಠ್ಠಲ ಕಮ್ಮಾರ, ವೆಂಕಟೇಶ ಮಾಚಕನೂರ, ಅರವಿಂದ ಏಗನಗೌಡರ, ಈಶ್ವರ ಶಿವಳ್ಳಿ, ಪ್ರಕಾಶ ಘಾಟಗೆ, ರಾಜಶೇಖರ ಕಮತಿ, ವಸಂತ ಅರ್ಕಾಚಾರ ಅನೇಕರು ಪಾಲ್ಗೊಂಡಿದ್ದರು.



ಬಿತ್ತನೆ ಬೀಜ ವಿತರಣೆ ಆರಂಭ; ರೈತರ ಪರದಾಟ

ಕುಂದಗೋಳ: ಮುಂಗಾರು ಹಂಗಾಮಿ ಬಿತ್ತನೆ ಬೀಜ ವಿತರಣೆ ಸೋಮವಾರ ಆರಂಭವಾಗುತ್ತಿದ್ದಂತೆಯೇ ಬೀಜ ಪಡೆಯಲು ರೈತರು ಮುಗಿಬಿದ್ದ ಪರಿಣಾಮ, ಪಟ್ಟಣದ ರೈತ ಸಂಪರ್ಕ ಕೇಂದ್ರದಲ್ಲಿ ಕೆಲಕಾಲ ಗೊಂದಲದ ವಾತಾವರಣ ನಿರ್ಮಾಣವಾಯಿತು. ಬೀಜ ವಿತರಣೆ ಕುರಿತು ಸಮರ್ಪಕ ಮಾಹಿತಿ ನೀಡದಿರುವುದು ಹಾಗೂ ಸರದಿ ಪಟ್ಟಿ ಸಿದ್ಧಪಡಿಸಿದ ಕ್ರಮಕ್ಕೆ ರೈತರು ಆಕ್ಷೇಪ ವ್ಯಕ್ತಪಡಿಸಿದರು.

ಕೃಷಿ ಇಲಾಖೆಯಿಂದ ಪಟ್ಟಣದ ರೈತ ಸಂಪರ್ಕ ಕೇಂದ್ರದಲ್ಲಿ ಬೆಳಗ್ಗೆ 11 ಗಂಟೆ ಸುಮಾರಿಗೆ ಬೀಜ ವಿತರಣಾ ಕೇಂದ್ರವನ್ನು ಉದ್ಘಾಟಿಸಲಾಯಿತು. ಈ ವೇಳೆ ಪಟ್ಟಣ ಹಾಗೂ ಗ್ರಾಮೀಣ ಭಾಗಗಳಿಂದ ಆಗಮಿಸಿದ್ದ ರೈತರು ಏಕಾಏಕಿ ಮುಗಿ ಬಿದ್ದ ಪರಿಣಾಮ ನೂಕುನುಗ್ಗಲು ಹಾಗೂ ವಾಗ್ವಾದಗಳು ನಡೆದವು.

ವಿಶೇಷವಾಗಿ ಕೆಡಿಎಸ್726 ತಳಿಯ ಸೋಯಾಬೀನ್ ಬೀಜದ ದಾಸ್ತಾನು ಕಡಿಮೆಯಿರುವುದರಿಂದ ರೈತರು ಅಸಮಾಧಾನ ವ್ಯಕ್ತಪಡಿಸಿದರು.

ಯುವ ರೈತ ಪ್ರವೀಣ ಕೀರೆಸೂರ ಮಾತನಾಡಿ, ಕಳೆದ ಎರಡು ದಿನಗಳಿಂದ ವಿಚಾರಿಸಿದಾಗ ಮಂಗಳವಾರ ಅಥವಾ ಬುಧವಾರದಿಂದ ಬೀಜ ವಿತರಣೆ ಪ್ರಾರಂಭವಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದರು. ಆದರೆ ಸೋಮವಾರವೇ ವಿತರಣೆ ಆರಂಭಿಸಿರುವ ಬಗ್ಗೆ ಸರಿಯಾದ ಮಾಹಿತಿ ನೀಡಿಲ್ಲ. ಸ್ಟಾಕ್ ಕೂಡ ಕಡಿಮೆಯಿದ್ದು, ಬೀಜ ದೊರೆಯದಿದ್ದರೆ



ರೈತರು ಸಂಕಷ್ಟಕ್ಕೆ ಸಿಲುಕುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೆಲಕಾಲ ರೈತರು ಹಾಗೂ ಅಧಿಕಾರಿಗಳ ನಡುವೆ ವಾಗ್ವಾದ ನಡೆದಿದ್ದು, ಪೊಲೀಸರು ಮಧ್ಯಪ್ರವೇಶಿಸಿ ಪರಿಸ್ಥಿತಿ ನಿಯಂತ್ರಿಸಿದರು. ಬಳಿಕ ಪಟ್ಟಿ ಪ್ರಕಾರ ಹೆಸರನ್ನು ಕರೆದು ಬೀಜ ವಿತರಣೆ ಪ್ರಾರಂಭಿಸಲಾಯಿತು.

ಈ ಕುರಿತು ಕೃಷಿ ಇಲಾಖೆ ಸಹಾಯಕ ನಿರ್ದೇಶಕಿ ರೇಖಾ ಗಡ್ಡದವರ ಮಾತನಾಡಿ, ತಾಲೂಕಿನಲ್ಲಿ ಐದು ಬೀಜ ವಿತರಣಾ ಕೇಂದ್ರಗಳಿದ್ದು, ಪ್ರಸ್ತುತ 500 ಕ್ವಿಂಟಲ್ ಸೋಯಾಬೀನ್, 69 ಕ್ವಿ ಉದ್ದು, 46 ಕ್ವಿ ಹೆಸರು, 230 ಕ್ವಿ ಶೇಂಗಾ ಹಾಗೂ 73 ಕ್ವಿಂ ಮೆಕ್ಕೆಜೋಳ ಬೀಜದ ದಾಸ್ತಾನು ಲಭ್ಯವಿದೆ ಎಂದರು.

ಇನ್ನೊಂದೆಡೆ, ಹೆಸರು ಬಹಿರಂಗಪಡಿಸಲು ಇಚ್ಛಿಸದ ರೈತರೊಬ್ಬರು, ''ನಮ್ಮ ಎಫ್ ಐಡಿಗೆ ಬೇಕಾದ ಕೆಡಿಎಸ್726 ತಳಿಯ 25 ಕೆಜಿ ತೂಕದ ಎರಡು ಚೀಲ ಮಾತ್ರ ನೀಡುತ್ತಿದ್ದಾರೆ. ಮೂರನೇ ಚೀಲ ನಂತರ ಕೊಡುತ್ತೇವೆ ಎನ್ನುತ್ತಿದ್ದಾರೆ. ಆದರೆ ಅದು ಸಿಗುವ ವಿಶ್ವಾಸ ಇಲ್ಲ. ಇದರಿಂದ ಬಿತ್ತನೆ ಕಾರ್ಯ ತಡವಾಗುವ ಆತಂಕ ಎದುರಾಗಿದೆ'' ಎಂದು ಅಳಲು ತೋಡಿಕೊಂಡರು.

ಶಂಕರ ಕಾಲೇಜಿನಲ್ಲಿ ಸಾಂಸ್ಕೃತಿಕ ಹಬ್ಬ

ನವಲಗುಂದ: ನ.ತಾ.ಶಿ.ಸಮಿತಿಯ ಶ್ರೀ ಶಂಕರ ಪದವಿ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ 2025-26 ನೇ ಸಾಲೀನ ಪಠ್ಯ - ಪಠ್ಯೇತರ ಚಟುವಟಿಕೆಗಳ ಮತ್ತು ಬಿ.ಎ.ಬಿಕಾಂ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೋಡುವ ನಿಮಿತ್ತ ಐದು ದಿನಗಳ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗಿದೆ.

ಸೋಮವಾರ ಮೊದಲನೇ ದಿನದಂದು ''ಪನ್ ಡೇ ಕಾರ್ಯಕ್ರಮದ ಅಂಗವಾಗಿ 'ನೀಲಿ ಡೇ' ಕಾರ್ಯಕ್ರಮ ನಿಮಿತ್ತವಾಗಿ ವಿದ್ಯಾರ್ಥಿಗಳೆಲ್ಲರೂ ನೀಲಿ ಬಣ್ಣದ ಉಡುಗೆ ಧರಿಸಿ, ಮ್ಯೂಸಿಕ್ ಚೇರ್, ಲೇಮನ್ ಸೂನ್,ಹಗ್ಗ ಜಗ್ಗಾಟ ಸ್ಕೋಡ ಗೇಮ್ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ವಿದ್ಯಾರ್ಥಿಗಳೆಲ್ಲರೂ ಸಕ್ರೀಯವಾಗಿ ಪಾಲ್ಗೊಂಡು ವಿವಿಧ ಸ್ಪರ್ಧೆಗಳಲ್ಲಿ ಬಹುಮಾನಗಳನ್ನು ತಮ್ಮದಾಗಿಸಿಕೊಂಡರು. ಬಹುಮಾನ ವಿತರಣಾ ಕಾರ್ಯಕ್ರಮವು ದಿನಾಂಕ 29-05-2026 ರಂದು ಶುಕ್ರವಾರ ಬೀಳ್ಕೊಡುವ ಸಮಾರಂಭದಲ್ಲಿ ನವಲಗುಂದ ತಾಲೂಕಿನ ಶಾಸಕರಾದ ಎನ್. ಎಚ್. ಕೋನರಡ್ಡಿ ಅವರು ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರಮಾಣ ಪತ್ರಗಳು ಹಾಗೂ ಸಾಧನೆಗೈದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಹಾಗೂ ಕ್ಯಾಶ್ ಪ್ರೈಜ್‌ಗಳನ್ನು ನೀಡಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಇಂದು ಆಯೋಜಿಸಿದ ವಿವಿಧ ಸ್ಪರ್ಧೆಗಳ ಮುಗಿದ ನಂತರ ಎಲ್ಲ ಪ್ರಾಧ್ಯಾಪಕರಗಳು ಮತ್ತು ಕಛೇರಿ ಸಿಬ್ಬಂದಿಗಳೊಂದಿಗೆ ವಿದ್ಯಾರ್ಥಿಗಳು ಸಾಮೂಹಿಕ ಪೋಟೋ ತೆಗೆಸಿಕೊಂಡು ಸಾಂಸ್ಕೃತಿಕ ಕಲರವಕ್ಕೆ ಸಂಭ್ರಮಕ್ಕೆ ಸಾಕ್ಷಿಯಾದರು.



ವಿಶೇಷ ಸಾಮಾನ್ಯ ಸಭೆ



ಹುಬ್ಬಳ್ಳಿ: ಶ್ರೀಸಾಯಿ ಮಂದಿರದ ಆಡಳಿತ ಮಂಡಳಿ ವಿರುದ್ಧ ಕೇಳಿಬರುತ್ತಿರುವ ಆರೋಪಗಳ ಕುರಿತಂತೆ ಭಾನುವಾರ ಸರ್ವ ಸದಸ್ಯರ ಒಪ್ಪಿಗೆಯಂತೆ ಸಭಾಧ್ಯಕ್ಷರ ನೇಮಿಸಿ ಅವರ ನೇತೃತ್ವದಲ್ಲಿ ವಿಶೇಷ ಸಾಮಾನ್ಯ ಸಭೆ ಜರುಗಿತು.

ಆಡಳಿತ ಮಂಡಳಿ ಅಧ್ಯಕ್ಷ ಮಹದೇವ ಮಾಶ್ಯಾಳ ಅವರ ವಿರುದ್ಧವೇ ಆಪಾದನೆಗಳು ಬಂದಿರುವ ಹಿನ್ನೆಲೆಯಲ್ಲಿ ಅವರ ಉತ್ತರಿಸಬೇಕಾದ ಪ್ರಶ್ನೆಗಳಿರುವುದರಿಂದಾಗಿ ಸಭಾಧ್ಯಕ್ಷರನ್ನಾಗಿ ಸತೀಶ ಪಾಟೀಲ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಸಭಾಧ್ಯಕ್ಷರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ, ಆಡಳಿತ ಮಂಡಳಿ ವಿರುದ್ಧ ನೀಡಲಾದ ದೂರಿನ ಬಗ್ಗೆ ಚರ್ಚಿಸಲಾಯಿತು. ಸಭೆಯಲ್ಲಿ ದಾಖಲೆಗಳನ್ನು ಸದಸ್ಯರು ಕೂಲಂಕಷವಾಗಿ ಪರಿಶೀಲಿಸಿದರು. ಆಡಳಿತ ಮಂಡಳಿ ಎಲ್ಲವನ್ನೂ ಅಚ್ಚುಕಟ್ಟಾಗಿ ನಿರ್ವಹಿಸುತ್ತಿದೆ. ಅಧ್ಯಕ್ಷರ ಆಯ್ಕೆ ಸರಿಯಾಗಿದ್ದು, ಅವರ ಮುಂದಾಳತ್ವದಲ್ಲಿ ಉತ್ತಮ ಕಾರ್ಯಗಳು ಜರುಗುತ್ತಿವೆ. ಈಗಾಗಲೇ ನಿವೃತ್ತ ನ್ಯಾಯಾಧೀಶರು ಈ ಕುರಿತು ತನಿಖೆ ನಡೆಸಿದ್ದು, ವರದಿ ಬರಲಿದೆ. ಮಹದೇವ ಮಾಶ್ಯಾಳ ಅವರ ನೇತೃತ್ವದಲ್ಲಿಯೇ ಕೆಲಸಗಳು ಮುಂದುವರಿಯಲಿ ಎಂದು ಎಲ್ಲ ಸದಸ್ಯರು ತಿಳಿಸಿದರು.

ಸಭೆಯಲ್ಲಿ ದೂರರ್ಜಿಗೆ ಸಂಬಂಧಿಸದಂತೆ ಮತ್ತು ಆಪಾದನೆಗಳ ಕುರಿತಂತೆ ಎಲ್ಲ ದಾಖಲೆಗಳು ಪರಿಶೀಲಿಸಿದ ಸದಸ್ಯರು ತಮ್ಮ ಎಲ್ಲ ಸಂದೇಹಗಳ ಬಗ್ಗೆ ಚರ್ಚಿಸಿದರು. ಆಡಳಿತ ಮಂಡಳಿ ಸತ್ಯದ ಮಾರ್ಗದಲ್ಲಿ ನ್ಯಾಯಯುತವಾಗಿ ಕಾರ್ಯನಿರ್ವಹಿಸುತ್ತಿದ್ದು, ಆಡಳಿತ ಮಂಡಳಿ ಪರವಾಗಿ ಫಲಿತಾಂಶ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಅಲ್ಲದೇ ಈಗಾಗಲೇ ಶ್ರೀಮಂದಿರದ ಬಗ್ಗೆ ಸುಳ್ಳು ಆರೋಪಗಳನ್ನು ದೊಡ್ಡದಾಗಿ ಬಿಂಬಿಸುತ್ತಿದ್ದು, ಇಂಥವುಗಳಿಗೆ ಅವಕಾಶ ಮಾಡಬೇಡಿ. ಇದಕ್ಕಾಗಿ ಕಾನೂನು ಸಲಹೆಗಾರರ ಸೂಚನೆಯಂತೆ ಮುಂದುವರಿಯಿರಿ ಎಂದು ಸರ್ವ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು.

ದೃಢ ಮನಸ್ಸಿನಿಂದ ಗುರಿಯತ್ತ ಸಾಗಿ: ಹಲಗತ್ತಿ

ಹುಬ್ಬಳ್ಳಿ: ಮನಸ್ಸು ನಿಯಂತ್ರಣದಲ್ಲಿ ಇದರೇ ಸಾಧನೆ ಎಲ್ಲ ಬಾಗಿಲುಗಳೂ ತೆರೆದುಕೊಳ್ಳುತ್ತವೆ. ದೃಢ ಮನಸ್ಸು ಗುರಿಯನ್ನು ಗೆಲ್ಲಿಸುತ್ತದೆ ಎಂದು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಹೇಳಿದರು.

ತಾಲೂಕಿನ ಅದರಗುಂಚಿ ಗ್ರಾಮದ ಸಿಐಸಿ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಿಂದ ಶ್ರೀ ಚನ್ನಬಸವ ಕಲ್ಯಾಣ ಮಂಟಪದಲ್ಲಿ ಭಾನುವಾರ ಆಯೋಜಿಸಿದ್ದ 'ಸಿಐಸಿ ಉತ್ಸವ-2026 ಹಾಗೂ ಸಿಆರ್‌ಸಿ ಸಾಧಕರ ಸನ್ಮಾನ ಸಮಾರಂಭದಲ್ಲಿ ಮಾತನಾಡಿ, ವಿದ್ಯಾರ್ಥಿ ಜೀವನವೆಂಬುದು ವ್ಯಕ್ತಿತ್ವ ರೂಪಿಸುವ ಅತ್ಯಂತ ಮಹತ್ವದ ಹಂತ. ಇದೇ ಹಂತದಲ್ಲಿ ಮನಸ್ಸನ್ನು ಸದೃಢವಾಗಿಟ್ಟುಕೊಂಡು ಗುರಿಯತ್ತ ಮುನ್ನಡೆಯುವವರು ಜೀವನದಲ್ಲಿ ಯಶಸ್ಸಿನ ಶಿಖರ ತಲುಪುತ್ತಾರೆ ಎಂದರು.

ಹಿರಿಯ ಪತ್ರಕರ್ತ ಗುರುರಾಜ ಹೂಗಾರ ದ್ಘಾಟಿಸಿ ಮಾತನಾಡಿ, ಗ್ರಾಮೀಣ ಭಾಗದಲ್ಲಿಯೇ ನಗರ ಮಟ್ಟದ ಗುಣಮಟ್ಟದ ಶಿಕ್ಷಣ ನೀಡುತ್ತಿರುವ ಸಿಐಸಿ ಸಂಸ್ಥೆ ಈ ಭಾಗದ ಹೆಮ್ಮೆಯ ಪ್ರತೀಕವಾಗಿದೆ. ಇಲ್ಲಿಂದ ಹೊರಹೊಮ್ಮಿದ ವಿದ್ಯಾರ್ಥಿಗಳು ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದು ಸಂಸ್ಥೆಯ ಕೀರ್ತಿ ರಾಜ್ಯಮಟ್ಟಕ್ಕೆ ಕೊಂಡೊಯ್ದಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನಷ್ಟು ವಿದ್ಯಾರ್ಥಿಗಳಿಗೆ ದಾರಿದೀಪವಾಗಲಿ ಎಂದರು.

ಸಂಸ್ಥೆ ಅಧ್ಯಕ್ಷ ಹಾಗೂ ಮಾಜಿ ಶಾಸಕ ಎಸ್.ಐ. ಚಿಕ್ಕನಗೌಡ್ರ ಮಾತನಾಡಿ, ಆಧುನಿಕ ಶಿಕ್ಷಣ ಪದ್ಧತಿ ಅಳವಡಿಸಿಕೊಂಡು ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ನೀಡುವ ಮೂಲಕ ಸಂಸ್ಥೆ ಸದೃಢ



ಸಮಾಜ ನಿರ್ಮಾಣದ ಕಾರ್ಯದಲ್ಲಿ ತೊಡಗಿದೆ. ನರ್ಸರಿಯಿಂದ ಸ್ನಾತಕೋತ್ತರ ಪದವಿವರೆಗೆ ಶಿಕ್ಷಣ ನೀಡುತ್ತಿದ್ದು, ಇಲ್ಲಿನ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸೈನಿಕರು, ವೈದ್ಯರು ಹಾಗೂ ಶಿಕ್ಷಕರಾಗಿ ಹೊರಹೊಮ್ಮಬೇಕು ಎಂಬುದು ನನ್ನ ಕನಸು ಎಂದರು.

ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಆರ್.ಎಫ್.ಭರಮಗೌಡ್ರ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ವೇಳೆ ಸಂಸ್ಥೆಯ ಅಧಿಕೃತ ಜಾಲತಾಣ ಅನಾವರಣ ಗೊಳಿಸಲಾಯಿತು. ಬಳಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ನೇರವೇರಿದವು. ಶೈಕ್ಷಣಿಕ ಮಾರ್ಗದರ್ಶಕ ಎಸ್.ಟಿ.ಬೈರಪ್ಪನವರ, ಸಿಬ್ಬಂದಿ ಕಾರ್ಯದರ್ಶಿ ಎಸ್.ಎಂ.ಕಳಸೂರ, ಕಾರ್ಯಾಧ್ಯಕ್ಷ ಆರ್. ಎಂ.ಪಾಟೀಲ, ಪ್ರಾಚಾರ್ಯ ಎಸ್.ಐ.ಉಣಕಲ್, ಹೆಚ್.ಯು. ಮಜೇತನಚರ, ಅಪ್ಪಣ್ಣ ಬಾರಕೇರ ಸೇರಿದಂತೆ ಆಡಳಿತ ಮಂಡಳಿ ಸದಸ್ಯರು, ಬೋಧಕ-ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಅಲ್ಟ್ರಾಸೌಂಡ್ ಆರೈಕೆ ಕಾರ್ಯಾಗಾರ



ಧಾರವಾಡ: ಎಸ್‌ಡಿಎಂ ವೈದ್ಯಕೀಯ ಕಾಲೇಜಿನ ತುರ್ತು ಚಿಕಿತ್ಸಾ ವಿಭಾಗ ಹಾಗೂ ಕ್ಷ-ಕಿರಣ ವಿಭಾಗದ ಸಹಯೋಗದಲ್ಲಿ 'ರೋಗ ನಿರ್ಣಯಕ್ಕೆ ತಪಾಸಣೆ' ಮತ್ತು 'ಆರೈಕೆಗೆ ಅಲ್ಟ್ರಾಸೌಂಡ್ ಪಾಯಿಂಟ್' ವಿಷಯದ ಕಾಯಾಗಾರ ಸೋಮವಾರ ಜರುಗಿತು.

ಉಪಕುಲಪತಿ ಡಾ.ನಿರಂಜನಕುಮಾರ್ ಕಾರ್ಯಾಗಾರಕ್ಕೆ ಚಾಲನೆ ನೀಡಿದರು. ಡಾ.ಪ್ರಭಾಕರಕೋರೆ, ಡಾ.ಜೋಯಿಸ್ ಉಪೇಂದ್ರ, ಡಾ.ವಿವೇಕಾನಂದಗಜಪತಿ, ಡಾ.ಗುರುಪ್ರಸಾದ ಆಂಟಿನ್, ಡಾ.ಕಾರ್ತಿಕ ರೆಡ್ಡಿ, ಡಾ.ಸೂರಜ್ ಹೊರಕೇರಿ ಉಪನ್ಯಾ ನಿಡಿದರು.

ಕಾರ್ಯನಿರ್ವಾಹಕ ನಿರ್ದೇಶಕಿ ಪದ್ಮಲತಾ ನಿರಂಜನ್, ಪ್ರಾಚಾರ್ಯ ಡಾ.ವಿಜಯ ಕುಲಕರ್ಣಿ, ಉಪಪ್ರಾಚಾರ್ಯ ಡಾ.ಕಿರಣ ಐತಾಳ ಮತ್ತು ಡಾ.ಭರತ ಕೆಂಪಣ್ಣವರ, ಡಾ.ವಿಜಯಲಕ್ಷ್ಮೀ ಪಿ.ಬಿ., ಡಾ.ಪ್ರೀತಮ್ ಪಾಟೀಲ ಸೇರಿದಂತೆ ಅನೇಕ ಗಣ್ಯರು ಇದ್ದರು. ಡಾ.ಶಹನವಾಜ ಸ್ವಾಗತಿಸಿದರು. ಡಾ.ಕೃಪಾ ನಿರೂಪಿಸಿದರು. ಡಾ.ರಜನಿಕಾಂತ ಮಾಳಾಪುರ ಪ್ರಾಸ್ತಾವಿಕ ಮಾತನಾಡಿದರು. ಡಾ.ನರೇಂದ್ರ ರೆಡ್ಡಿ ವಂದಿಸಿದರು.

ಚೆಸ್ ಕ್ರೀಡೆ; ಬೆಳಗಾವಿ ಶ್ರೀಕರ ದರ್ಬಾ ಪ್ರಥಮ

ಧಾರವಾಡ: ಕಾಸ್ಮೋಸ್ ಕ್ಲಬ್ ಮತ್ತು ಅಭಿಜಿತ್ ಬೆಂಗೇರಿ ಫೌಂಡೇಶನ್ ನಡೆಸಿದ ರಾಜ್ಯಮಟ್ಟದ ಮುಕ್ತ ರ‍್ಯಾಪಿಡ್ ಚೆಸ್ ಸ್ಪರ್ಧೆಯಲ್ಲಿ ಬೆಳಗಾವಿಯ ಶ್ರೀಕರ ದರ್ಬಾ ಪ್ರಥಮ ಚಾಂಪಿಯನ್ ಆಗಿದ್ದು, ಟೂರ್ನಿಯಲ್ಲಿ 7.5 ಅಂಕ ಗಳಿಸಿ ಈ ಸಾಧನೆ ಮಾಡಿದರು.

ಆತಿಥೇಯ ಧಾರವಾಡದ ಸಿದ್ಧಾರ್ಥ ಜೋಶಿ 7 ಅಂಕಗಳೊಂದಿಗೆ ದ್ವಿತೀಯ ಸ್ಥಾನ ಪಡೆದರು. ಶಿವಮೊಗ್ಗದ ವಿಲಾಸ್ ಅಂಡ್ರಾಡೆ ಅವರು 7 ಪಾಯಿಂಟ್‌ಗಳೊಂದಿಗೆ ತೃತೀಯ ಸ್ಥಾನ ಪಡೆದರು. ವಿಜೇತರಿಗೆ ಪ್ರಥಮ ರೂ.5 ಸಾವಿರ, ದ್ವಿತೀಯ ರೂ.4 ಸಾವಿರ, ತೃತೀಯ ರೂ.3 ಸಾವಿರ ನಗದು ಬಹುಮಾನದ ಜೊತಗೆ ಟ್ರೋಫಿ ನೀಡಿ ಗೌರವಿಸಲಾಯಿತು. ಹಿರಿಯ ವಿಭಾಗದಲ್ಲಿ ಧಾರವಾಡದ ಬಳಿಗಾರ ವಿಶ್ವನಾಥ (5.5 ಅಂಕ) ಮಹಿಳಾ ವಿಭಾಗದಲ್ಲಿ ಧಾರವಾಡ ರೂಪಾ ಎನ್.ಟಗರ್‌ಪುರ್ (4 ಅಂಕ) ಅತ್ಯುತ್ತಮ ಆಟಗಾರರಾಗಿ ಹೊರಹೊಮ್ಮಿದರು.

ವಿವಿಧ ವಿಭಾಗಗಳ ಫಲಿತಾಂಶ: 15 ವರ್ಷದ ಬಾಲಕರು: ಬೆಳಗಾವಿಯ ಗಗನ್ ಗಿರೀಶ್ ಕೊಪ್ಪಳ ಪ್ರಥಮ, ಶಿವಮೊಗ್ಗದ ಚಿರಂತ್ ಯಾದವ್ ದ್ವಿತೀಯ ಹಾಗೂ ಹುಬ್ಬಳ್ಳಿಯ ಚಂದನ್ ಮೃತ್ಯುಂಜಯ ದೊಡ್ಡಮನಿ ತೃತೀಯ.

ಬಾಲಕಿಯರು: ಧಾರವಾಡದ ಶ್ರೇಯಾ ಹೆಗಡೆ ಪ್ರಥಮ, ಗದಗಿನ ಸುಭಿಕ್ಷಾ ಜಂಗಲಿ ದ್ವಿತೀಯ ಹಾಗೂ ಬೆಳಗಾವಿಯ ಸ್ನೇಹಾ ಉಪ್ಪಿನಪಾಟೀಲ ತೃತೀಯ. 12 ವರ್ಷದ ಬಾಲಕರು: ಧಾರವಾಡದ ವಿರಾಜ್ ಕಟ್ಟಿಮನಿ ಪ್ರಥಮ,



ಚಂದನ್ ಮುಂದಿನಮನಿ ದ್ವಿತೀಯ, ಬೆಳಗಾವಿಯ ದಿವ್ಯಾಂಶ್ ಮನೋಹರ್ ತಳ್ಳಿಮನಿ ತೃತೀಯ.

ಬಾಲಕಿಯರು: ಬೆಂಗಳೂರಿನ ಹಿರಾಲಾ ಚೇತನ್ ಶಾ ಪ್ರಥಮ, ಬೆಳಗಾವಿಯ ಇರಾ ಪಿ.ರಾಂಪುರ ದ್ವಿತೀಯ ಹಾಗೂ ಧ್ರುವಿಕಾ ಬಿ. ತೃತೀಯ.

9 ವರ್ಷದ ಬಾಲಕರು: ಧಾರವಾಡದ ಆದಿತ್ಯ ಕಲ್ಲೊಳ್ಳಿ ಪ್ರಥಮ, ಗೋವಾದ ವೇಗಾಸ್ ಜಾಕೆ ದ್ವಿತೀಯ ಹಾಗೂ ಧಾರವಾಡದ ಕಬೀರ್ ಮೋಹನ್ ತೃತೀಯ.

ಬಾಲಕಿಯರು: ಧಾರವಾಡದ ಸಮೈರಾ ಎಸ್.ಕಟಗಿ ಪ್ರಥಮ, ಹುಬ್ಬಳ್ಳಿಯ ಪ್ರಣವಿ ಚಂದಾಲವರ್ ದ್ವಿತೀಯ ಹಾಗೂ ಬೆಳಗಾವಿಯ ಅದಿತಿ ಪಾಟೀಲ ತೃತೀಯ ಸ್ಥಾನ ಪಡೆದರು.

ಇದೇ ಸಂದರ್ಭದಲ್ಲಿ ಕ್ಲಬ್‌ನ ಮಾಜಿ ಅಧ್ಯಕ್ಷ ಸಿ.ವಿ.ಮರದ ಅವರನ್ನು ಗೌರವಿಸಲಾಯಿತು. ನಿತಿನ್ ಟಗರಪುರ, ಎಚ್. ಎಫ್. ಹೆಬ್ಬಾಳ, ಅಶೋಕ ಹಿರೇಮಠ, ಅಭಿಜಿತ್ ಬೆಂಗೇರಿ, ಎಂ.ಎಸ್.ಹಾಲಭಾವಿ, ಅಜಯ ಗುಡ್ಡದಮಠ, ವಿಜಯ ಸುಣಗಾರ ಅನೇಕರು ಇದ್ದರು.

ಹಳೆ ವೀರಾಪುರ, ಹವೇಲಿ ರೈತರಲ್ಲಿ ಆತಂಕ | ತಿಂಗಳಲ್ಲಿ ಮೂರು ಬಾರಿ ಕನ್ನ

ರೈತರ ಜಮೀನಿನಲ್ಲಿ ಕೇಬಲ್ ಕಳ್ಳತನ

▸ ಜಗದೀಶ ಎಂ.ಗಾಣಿಗೇರ

• **ಬಾಗಲಕೋಟೆ:** ಜಮೀನಿನಲ್ಲಿ ಬೋರವೆಲ್ ಮೂಲಕ ಬೆಳೆಗಳಿಗೆ ನೀರು ಪೂರೈಕೆ ಮಾಡುವ ಯಂತ್ರಗಳಿಗೆ ಅಳವಡಿಸಿರುವ ಬೆಲೆ ಬಾಳುವ ಕೇಬಲ್‌ಗಳನ್ನು ನಿರಂತರವಾಗಿ ಕಳ್ಳತನ ಮಾಡುತ್ತಿರುವ ಪರಿಣಾಮ ತಾಲೂಕಿನ ಹಳೆ ವೀರಾಪುರ ಮತ್ತು ಹವೇಲಿ ರೈತರು ಸಂಕಷ್ಟ ಎದುರಿಸುತ್ತಿದ್ದಾರೆ.

ಹಳೆ ವೀರಾಪುರದಲ್ಲಿ ರೈತರು ಬೆಳೆದಂತಹ ಬೆಳೆಗಳಿಗೆ ನೀರುಣಿಸಲು ಬೋರವಲ್‌ದಿಂದ ವಿದ್ಯುತ್ ಪೂರೈಸುವ ಮೀಟರ್ ಬೋರ್ಡ್‌ವರೆಗೆ ಹಾಕಿರುವ ಬೆಲೆ ಬಾಳುವ ವಿದ್ಯುತ್ ಪೂರೈಸುವ ವಾಯರ್‌ಗಳನ್ನು ನಿರಂತರವಾಗಿ ತಿಂಗಳದಲ್ಲಿ ಕನಿಷ್ಠ ಮೂರು ಬಾರಿ ಕಳ್ಳತನ ಮಾಡುತ್ತಿರುವ ಪರಿಣಾಮ ರೈತರು ಸಂಕಷ್ಟ ಎದುರಿಸುವಂತಾಗಿದೆ.



ಹಳೆ ವೀರಾಪುರದಲ್ಲಿ ಹತ್ತರಿಂದ 12 ರೈತರ ಜಮೀನಿನಲ್ಲಿ ವಿದ್ಯುತ್ ಪೂರೈಸುವ ಕೇಬಲ್ ಕಳ್ಳತನ ಮಾಡಲಾಗಿದೆ. ಪಂಪ್‌ದಿಂದ ವಿದ್ಯುತ್ ಪೂರೈಸುವ ಮೀಟರ್ ಬೋರ್ಡ್‌ವರೆಗೆ ಸುಮಾರು 10 ಮೀಟರ್ ಕೇಬಲ್ ಹಾಕಿದರೆ ಒಮ್ಮೆ 3 ರಿಂದ ನಾಲ್ಕು ಸಾವಿರ ರೂ.ವರೆಗೆ ರೈತರು ಖರ್ಚು ಮಾಡುತ್ತಿದ್ದಾರೆ. ಇಂತಹ ಬೆಲೆ ಬಾಳುವ ಕೇಬಲ್‌ಗಳನ್ನು ಕಳ್ಳರು ತಮ್ಮ ಕರಾಮತ್ತು ತೋರಿಸುವ ಮೂಲಕ ತಿಂಗಳಲ್ಲಿ ಹೊತ್ತಿಲ್ಲದ ಹೊತ್ತಿನಲ್ಲಿ ಬಂದು ಕಳ್ಳತನ ಮಾಡಿಕೊಂಡು ಹೋಗುತ್ತಿದ್ದಾರೆ.

ಬೇಸತ್ತ ರೈತರು: ಕಳೆದ ಒಂದು ವರ್ಷದಿಂದ ಪ್ರತಿ ತಿಂಗಳನಲ್ಲಿ ಮೂರು ಬಾರಿ ಕೇಬಲ್ ಕಳ್ಳತನ ಆಗುತ್ತಿರುವುದರಿಂದ ನೀರಾವರಿ ಮಾಡುವ ರೈತರು ಕಳ್ಳರಿಂದ ಬೇಸತ್ತು ಹೋಗಿದ್ದಾರೆ. ಕಳ್ಳತನ ಆದ ಬಳಿಕ ರೈತರು ತಮ್ಮ ಹೊಲದಲ್ಲಿ ಕಾವಲು ಮಾಡಿದರೂ ಕಳ್ಳರು ಮಾತ್ರ ತಮ್ಮ ಕೈಚಳಕವನ್ನು ನಿರಂತರವಾಗಿ ತೋರಿಸುತ್ತಿದ್ದಾರೆ.

ನಮ್ಮ ಹೊಲದಾಗ ಪಂಪ್‌ಗಳಿಂದ ಮೀಟರ್ ಬೋರ್ಡ್‌ವರೆಗೆ ಸುಮಾರು 10 ಮೀ. ಬೆಲೆ ಬಾಳುವಂತಹ ಕೇಬಲ್ ಹಾಕಿದ್ದೇವೆ. ಇದೇ ತಿಂಗಳಲ್ಲಿ ಮೂರು ಬಾರಿ ಕೇಬಲ್ ಕಳ್ಳತನ ಮಾಡಿದ್ದಾರೆ. ಒಂದು ತಿಂಗಳಲ್ಲಿ ಕನಿಷ್ಠ 10 ಸಾವಿರೂ. ಬೆಲೆಯ ಕೇಬಲ್ ಕಳ್ಳರು ದೋಚಿದ್ದಾರೆ. ಕೇಬಲ್ ಕಳ್ಳತನ ಬಗ್ಗೆ ಪೊಲೀಸ್ ಠಾಣೆಗೆ ದೂರು ಕೊಟ್ಟರೂ ಏನೂ ಪ್ರಯೋಜನವಾಗುತ್ತಿಲ್ಲ.

■ **ಯಮನಪ್ಪ ಕದಾಂಪೂರ, ಹಳೆ ವೀರಾಪುರ ರೈತ**

ಅಲ್ಪ ಸ್ವಲ್ಪ ಜಮೀನಿನಲ್ಲಿಯೇ ತರಕಾರಿ, ಶೇಂಗಾ, ಗೋವಿನ ಜೋಳವನ್ನು ಹಾಕಿಕೊಂಡು ತಮ್ಮ ಜೀವನಕ್ಕೆ ದಾರಿ ಮಾಡಿಕೊಂಡಿರುವ ಉಳುಮೆಯಲ್ಲಿ ಲಾಭ ಪಡೆಯಬೇಕು ಎನ್ನುವಷ್ಟರಲ್ಲಿ ಜಮೀನಿನಲ್ಲಿ ಹಾಕಿರುವ ಕೇಬಲ್ ಕಳ್ಳತನ ಆದರೆ ನಮ್ಮ ಜೀವನ ನಡೆಸುವುದು ಹೇಗೆ ಎಂದು ರೈತರು ಕಣ್ಣೀರು ಹಾಕುತ್ತಿದ್ದಾರೆ. ರೈತರು ಒಮ್ಮೆ ಕಳ್ಳತನ ಮಾಡಿದ ಕೇಬಲ್ ಬೆಲೆ ಸುಮಾರು 30 ರಿಂದ 40 ಸಾವಿರ ರೂ.ವರೆಗೆ ಆಗಲಿದೆ. ಈ ಕೇಬಲ್ ಎಲ್ಲಿಗೆ ಹೋಗುತ್ತದೆ. ಯಾವುದಕ್ಕೆ ಮರಳಿ ಬಳಸುತ್ತಾರೆ. ಅಥವಾ ಇದನ್ನೇ ಕೇಬಲ್ ಪೂರೈಸುವ ಅಂಗಡಿಗಳಿಗೆ ಕಳ್ಳರು ಕಡಿಮೆ ಬೆಲೆಗೆ ಕೊಟ್ಟು ಮಾರಾಟ ಮಾಡುತ್ತಿದ್ದಾರೆಯೇ ಎಂಬುದರ ಬಗ್ಗೆ ಸಂಬಂಧಪಟ್ಟವರು ಗಮನಹರಿಸಬೇಕಾಗಿದೆ.

ಪೊಲೀಸ್ ಅಧಿಕಾರಿಗಳ ವಿರುದ್ಧ ಬೇಸರ

ನಿರಂತರವಾಗಿ ಎಗ್ಗಿಲ್ಲದೇ ಜಮೀನಿನಲ್ಲಿ ಕೇಬಲ್ ಕಳ್ಳತನ ಆಗುತ್ತಿರುವ ಕುರಿತು ಯಾರಿಗೆ ಹೇಳಬೇಕು ಎಂದು ದಿಕ್ಕು ತೋಚದೇ ಒಂದು ವರ್ಷದಲ್ಲಿ ರೈತರು ಕಷ್ಟವನ್ನು ಎದುರಿಸಿದ್ದಾರೆ. ಆದರೆ, ನಮ್ಮ ಸಮಸ್ಯೆಗೆ ಸ್ಪಂದಿಸುತ್ತಾರೆಂದು ಬಾಗಲಕೋಟೆ ಗ್ರಾಮೀಣ ಪೊಲೀಸ್ ಠಾಣೆಗೆ ಇತ್ತೀಚೆಗೆ ಹಳೆ ವೀರಾಪುರ ರೈತರು ದೂರು ನೀಡಿ ಬಂದಿದ್ದಾರೆ. ಆದರೆ, ಒಮ್ಮೆಯೂ ಪೊಲೀಸರು ರೈತರ ಜಮೀನಿಗೆ ಭೇಟಿ ಕೊಡದೇ ಇರುವುದು, ರೈತರ ಸಮಸ್ಯೆ ಆಲಿಸದೇ ಇರುವುದರಿಂದ ರೈತರು ಕೂಡ ಪೊಲೀಸ್ ಅಧಿಕಾರಿಗಳ ವಿರುದ್ಧ ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ಶಾಸಕರ ನಿಯೋಗದಿಂದ ಸಿಎಂ ಭೇಟಿ ಶೀಘ್ರ

• **ವಿಜಯನಗರ:** ತುಂಗಭದ್ರಾ ಜಲಾಶಯದಲ್ಲಿ ಸದ್ಯ 30 ಟಿಎಂಸಿಯಷ್ಟು ಹೂಳು ತುಂಬಿರುವುದರಿಂದ ನೀರಿನ ಸಂಗ್ರಹ ಸಾಮರ್ಥ್ಯ ಕುಸಿದಿದೆ. ಹೀಗಾಗಿ ಭವಿಷ್ಯದ ಹಿತದೃಷ್ಟಿಯಿಂದ 'ನವಲಿ' ಪರ್ಯಾಯ ಜಲಾಶಯದ ನಿರ್ಮಾಣ ಅತ್ಯಗತ್ಯವಾಗಿದೆ. ಈ ಕುರಿತಂತೆ ಈ ಭಾಗದ ಶಾಸಕರನ್ನು ಒಳಗೊಂಡ ನಿಯೋಗ ಶೀಘ್ರದಲ್ಲೇ ಮುಖ್ಯಮಂತ್ರಿಯನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗುವುದು ಎಂದು ಶಾಸಕ ಎಚ್.ಆರ್.ಗವಿಯಪ್ಪ ತಿಳಿಸಿದರು.



ತುಂಗಭದ್ರಾ ಜಲಾಶಯಕ್ಕೆ ಭೇಟಿ ನೀಡಿ ಕ್ರಸ್ಟ ಗೇಟ್‌ಗಳ ಚೈನ್ ಅಳವಡಿಕೆ ಕಾರ್ಯ ಪರಿಶೀಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ತುಂಗಭದ್ರಾ ಜಲಾಶಯ ಕರ್ನಾಟಕದ ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯನಗರ ಹಾಗೂ ಆಂಧ್ರಪ್ರದೇಶದ ಕರ್ನೂಲು, ಅನಂತಪುರ, ಕಡಪ ಸೇರಿದಂತೆ ಒಟ್ಟು 7–8 ಜಿಲ್ಲೆಗಳ ಜೀವನಾಡಿಯಾಗಿದೆ. ಅಣೆಕಟ್ಟೆಯ 9ನೇ ಕ್ರಸ್ಟ್ ಗೇಟ್ ಕೊಚ್ಚಿ ಹೋಗಿದ್ದರಿಂದ ಎಲ್ಲ ಗೇಟ್‌ಗಳನ್ನು ಬದಲಾಯಿಸಲಾಗಿದೆ. ಪರಿಣಾಮ 105 ಟಿಎಂಸಿ ಇದ್ದ ನೀರಿನ ಸಂಗ್ರಹ ಸಾಮರ್ಥ್ಯವನ್ನು 100 ಟಿಎಂಸಿಗೆ ಇಳಿಸಲಾಗಿದೆ. ಈಗಾಗಲೇ 30 ಟಿಎಂಸಿಯಷ್ಟು ಹೂಳು ತುಂಬಿದ್ದರಿಂದ ನೀರಿನ ಸಂಗ್ರಹ ಪ್ರಮಾಣ ಗಣನೀಯವಾಗಿ ಕುಸಿದಿದೆ. ಈ ಕಾರಣಕ್ಕೆ ಸಮಾನಾಂತರ ಜಲಾಶಯ ನಿರ್ಮಾಣ ಅಗತ್ಯ ಎಂದು ಅಭಿಪ್ರಾಯಪಟ್ಟರು.ಸೆಂಟ್ರಲ್ ವಾಟರ್ ಕಮಿಷನ್ ಕ್ಲಿಯರೆನ್ಸ್ ಹಾಗೂ ಇಂಜಿನಿಯರಿಂಗ್ ಪ್ರಕ್ರಿಯೆಗಳು ಮುಗಿದು ಹೊಸ ಡ್ಯಾಂ ನಿರ್ಮಾಣವಾಗಲು ಕನಿಷ್ಠ 10 ರಿಂದ 15 ವರ್ಷಗಳು ಬೇಕಾಗುವುದರಿಂದ, ಈಗಿನಿಂದಲೇ ಇದರ ಪ್ರಕ್ರಿಯೆ ಆರಂಭಿಸಬೇಕಿದೆ.

ಈ ಭಾಗದ ರೈತರ ಹಿತರಕ್ಷಣೆಗಾಗಿ ಯಾವುದೇ ಪಕ್ಷಭೇದವಿಲ್ಲದೆ ರಾಯಚೂರು ಮತ್ತು ಬಳ್ಳಾರಿ ಭಾಗದ ಎಲ್ಲಾ ಶಾಸಕರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರನ್ನು ಒಳಗೊಂಡ ಜಂಟಿ ನಿಯೋಗದೊಂದಿಗೆ ಶೀಘ್ರದಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ, ಪರ್ಯಾಯ ಜಲಾಶಯದ ಪ್ರಕ್ರಿಯೆಯನ್ನು ತಕ್ಷಣವೇ ಆರಂಭಿಸುತೆ ಒಕ್ಕೊರಲಿನ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು.

▸▸ 'ನವಲಿ' ಪರ್ಯಾಯ ಜಲಾಶಯ ಅನಿವಾರ್ಯ: ಗವಿಯಪ್ಪ

ಕೋಟ್ಯಂತರ ಗ್ರಾಹಕರ ಜೇಬಿನ ಹೊರೆ ಇಳಿಸಿದ ಗೃಹ ಜ್ಯೋತಿ

ಕರೆಂಟ್ ಬಿಲ್‌ನಿಂದ ಮುಕ್ತಿ, ಬದುಕಿಗೆ ಆರ್ಥಿಕ ಶಕ್ತಿ | ಕತ್ತಲ ಮನೆಗಳಿಗೆ ಬೆಳಕಿನ ಭಾಗ್ಯ

ಗ್ಯಾರಂಟಿ ವಾರ್ತೆ

ಬೆಂಗಳೂರು: ದಿನನಿತ್ಯದ ಬದುಕಿನ ವೆಚ್ಚಗಳು ಗಗನಕ್ಕೇರುತ್ತಿರುವ ಈ ಕಾಲದಲ್ಲಿ, ಸಾಮಾನ್ಯ ಕುಟುಂಬವೊಂದರ ಮಾಸಿಕ ಬಜೆಟ್ ಅನ್ನು ಅತಿ ಹೆಚ್ಚು ಕಾಡುವ ವಿಷಯವೆಂದರೆ ಅದು ಅಗತ್ಯ ಸೇವೆಗಳ ಬಿಲ್ ಪಾವತಿ. ಇಂತಹ ಸವಾಲಿನ ದಿನಗಳಲ್ಲಿ ರಾಜ್ಯದ ಬಡ ಹಾಗೂ ಕೆಳ–ಮಧ್ಯಮ ವರ್ಗದ ಕುಟುಂಬಗಳ ಮನೆ–ಮನಗಳನ್ನು ಬೆಳಗಿದ ಯೋಜನೆ 'ಗೃಹಜ್ಯೋತಿ'.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಜಾರಿಗೆ ತಂದ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಈ ಯೋಜನೆ, ಕಳೆದ ಮೂರು ವರ್ಷಗಳಲ್ಲಿ ಕೇವಲ ಉಚಿತ ವಿದ್ಯುತ್ ನೀಡುವ ಸೌಲಭ್ಯವಾಗಿ ಉಳಿಯದೆ, ರಾಜ್ಯದ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಯ ಶಕ್ತಿಯಾಗಿ ಹೊರಹೊಮ್ಮಿದೆ. ಸರ್ಕಾರದ ಇಂಧನ ಇಲಾಖೆಯ ಅಂಕಿ–ಅಂಶಗಳ ಪ್ರಕಾರ, ರಾಜ್ಯದ 1.64 ಕೋಟಿಗೂ ಅಧಿಕ ಗೃಹ ವಿದ್ಯುತ್ ಗ್ರಾಹಕರು ಈ ಯೋಜನೆಯಡಿ ನೋಂದಾಯಿಸಿಕೊಂಡು 'ಶೂನ್ಯ ಬಿಲ್' (Zero Bill) ಸೌಲಭ್ಯವನ್ನು ಪಡೆಯುತ್ತಿದ್ದಾರೆ. ಇದಕ್ಕಾಗಿ ಸರ್ಕಾರವು ಈವರೆಗೆ ₹26,115 ಕೋಟಿ ಅನುದಾನವನ್ನು ವೆಚ್ಚ ಮಾಡಿದ್ದು, ವಿದ್ಯುತ್ ಸರಬರಾಜು ಕಂಪನಿಗಳಿಗೆ (ESCOMs) ಸಬ್ಸಿಡಿ ರೂಪದಲ್ಲಿ ಪಾವತಿಸುತ್ತಿದೆ.

2023ರ ಆಗಸ್ಟ್ 5ರಂದು ಕಲಬುರಗಿಯಲ್ಲಿ ಅಧಿಕೃತವಾಗಿ ಚಾಲನೆ ಪಡೆದ ಈ ಯೋಜನೆ, ರಾಜ್ಯದ ಪ್ರತಿಯೊಂದು ಮನೆಗೂ ಗರಿಷ್ಠ 200 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ಒದಗಿಸುವ ಭರವಸೆಯನ್ನು ಯಶಸ್ವಿಯಾಗಿ ಈಡೇರಿಸಿದೆ. ಈ ಯೋಜನೆಯ ಅತ್ಯಂತ ಪ್ರಗತಿಪರ ನಿರ್ಧಾರವೆಂದರೆ, ಇದು ಕೇವಲ ಸ್ವಂತ ಮನೆ ಉಳ್ಳವರಿಗಷ್ಟೇ ಸೀಮಿತವಾಗದೆ, ಲಕ್ಷಾಂತರ ಬಾಡಿಗೆ ಮನೆಗಳ ನಿವಾಸಿಗಳಿಗೂ ವಿಸ್ತರಣೆಯಾಯಿತು. ಇದರಿಂದಾಗಿ ನಗರ ಹಾಗೂ ಗ್ರಾಮೀಣ ಭಾಗದ ಶ್ರಮಿಕ ವರ್ಗಕ್ಕೆ ಅತಿ ದೊಡ್ಡ ಆರ್ಥಿಕ ನೆಮ್ಮದಿ ಸಿಕ್ಕಂತಾಗಿದೆ.



ದುಡಿದು ತಿನ್ನುವ ನಮ್ಮಂಥವರಿಗೆ ಕರೆಂಟ್ ಬಿಲ್ ಕಟ್ಟುವುದೇ ದೊಡ್ಡ ಕಗ್ಗಂಟಾಗಿತ್ತು. ಎರಡು ದಿನದ ಕಷ್ಟದ ದುಡಿಮೆಯನ್ನು ಅದಕ್ಕೇ ಮುಡಿಪಾಗಿಡಬೇಕಿತ್ತು. ಈಗ ಸಿದ್ದರಾಮಯ್ಯನವರ ಕಡೆಯಿಂದ ಕರೆಂಟ್ ಸಂಪೂರ್ಣ ಉಚಿತವಾಗಿದೆ. ಇದ–ರಿಂದ ಉಳಿಯುವ ಹಣ ನಮ್ಮ ಹೊಟ್ಟೆ ತುಂಬಿಸುತ್ತಿದೆ. ಅಷ್ಟೇ ಅಲ್ಲ, ನಮ್ಮ ಮಕ್ಕಳು ಯಾವುದೇ ಭಯವಿಲ್ಲದೆ ರಾತ್ರಿ ಹೊತ್ತು ನೆಮ್ಮದಿಯಿಂದ ಓದಿಕೊಳ್ಳಲು ಈ ಯೋಜನೆ ಬೆಳಕಾಗಿದೆ.

▸▸ ಮಹದೇವಪ್ಪ ವಾಲ್ಮೀಕಿ, ಹಾವೇರಿ



ಕೂಲಿ ಮಾಡಿ ದಿನದ ತುತ್ತು ಹುಡುಕುವ ಜನ ನಾವು. ತಿಂಗಳಿಗೆ ಸಾವಿರ ರೂಪಾಯಿ ಕರೆಂಟ್ ಬಿಲ್ ಬರುತ್ತಿತ್ತು. ಬಿಲ್ ಕಟ್ಟಲು ಎರಡು ದಿನದ ಇಡೀ ಕೂಲಿಯನ್ನು ಎತ್ತಿಡಬೇಕಿತ್ತು. ಆದರೆ ಗೃಹಜ್ಯೋತಿಯಿಂದಾಗಿ 'ಜೀರೋ ಬಿಲ್' ಬರುತ್ತಿದೆ. ಕರೆಂಟ್ ಫ್ರೀ ಆಗಿದ್ದರಿಂದ ಬಡವರ ಬದುಕಿಗೆ ಬಹಳ ಅನುಕೂಲವಾಗಿದೆ.

▸▸ ಲಕ್ಷ್ಮಣಕುಮಾರ್, ರಾಯಚೂರು



ಬಂಡವಾಳದ ಕೊರತೆಯಿಂದಾಗಿ ಹೆಣ್ಣುಮಕ್ಕಳಿಗೆ ಹೊಲಿಗೆ ತರಬೇತಿ ನೀಡಲು ಹೊಸ ಯಂತ್ರ ಖರೀದಿಸಲಾಗದೆ ಹಾಗೂ ವಿದ್ಯುತ್ ವೆಚ್ಚ ಭರಿಸಲು ಚಿಂತಿಸುತ್ತಿದ್ದೆ. ಇಂತಹ ಸಮಯದಲ್ಲಿ ಸರ್ಕಾರದ 'ಗೃಹಜ್ಯೋತಿ' ಯೋಜನೆಯ ಉಚಿತ ಕರೆಂಟ್ ನನಗೆ ದೊಡ್ಡ ಬಲ ತುಂಬಿತು. ವಿದ್ಯುತ್ ಬಿಲ್‌ನ ಚಿಂತೆ ಇಲ್ಲದಾದಾಗ, ಪ್ರತಿ ತಿಂಗಳು ಬರುತ್ತಿದ್ದ 'ಗೃಹಲಕ್ಷ್ಮಿ' ಹಣವನ್ನು ಅತ್ಯಂತ ಜೋಪಾನವಾಗಿ ಕೂಡಿಟ್ಟು ಹೊಸ ಹೊಲಿಗೆ ಯಂತ್ರಗಳನ್ನು ಖರೀದಿಸಿ ಸ್ವಂತ 'ಟೈಲರಿಂಗ್ ಕ್ಲಾಸ್' ಆರಂಭಿಸಿದೆ!

▸▸ ಅಮೀನಾ ಬೇಗಂ, ಶಹಾಪುರ

ದೇಶಕ್ಕೇ ಮಾದರಿಯಾದ ಇಂಧನ ಕ್ರಾಂತಿ

ಕರ್ನಾಟಕದ ಈ 'ಗೃಹಜ್ಯೋತಿ' ಮಾದರಿಯು ದೇಶದ ಇಂಧನ ವಲಯದಲ್ಲೇ ಒಂದು ಕ್ರಾಂತಿ–ಕಾರಿ ಹೆಜ್ಜೆಯಾಗಿದೆ. ಕೇವಲ ಉಚಿತ ಸೌಲಭ್ಯ ನೀಡುವುದಷ್ಟೇ ಅಲ್ಲದೆ, ಗ್ರಾಹಕರು ತಮ್ಮ ಸರಾಸರಿ ಬಳಕೆಯ ಮಿತಿಯೊಳಗೆ ವಿದ್ಯುತ್ ಬಳಸುವಂತೆ ಪ್ರೇರೇಪಿಸುವ ಮೂಲಕ ವಿದ್ಯುತ್ ಉಳಿತಾಯದ (Power Conservation) ಪ್ರಜ್ಞೆಯನ್ನು ಜನರಲ್ಲಿ ಮೂಡಿಸಿದೆ. ಕರ್ನಾಟಕದ ಈ ಯಶಸ್ವೀ ಮಾದರಿಯನ್ನು ದೇಶದ ಹಲವು ರಾಜ್ಯಗಳು ಇಂದು ಸೂಕ್ಷ್ಮವಾಗಿ ಗಮನಿಸುತ್ತಿದ್ದು, ತಮ್ಮಲ್ಲೂ ಜಾರಿಗೆ ತರಲು ಆಸಕ್ತಿ ತೋರುತ್ತಿರುವುದು ಇದರ ಸಾಧನೆಯಾಗಿದೆ.

ಶೂನ್ಯ ಬಿಲ್‌ನಿಂದ ಗ್ರಾಮೀಣ ಆರ್ಥಿಕತೆ ಚೇತರಿಕೆ

ಪ್ರತಿ ತಿಂಗಳು ವಿದ್ಯುತ್ ಬಿಲ್ ರೂಪದಲ್ಲಿ ಉಳಿತಾಯವಾಗುತ್ತಿರುವ ₹800 ರಿಂದ ₹1,500 ವರೆಗಿನ ಹಣವು ಬಡ ಮತ್ತು ಮಧ್ಯಮ ವರ್ಗದವರ ಜೇಬಿನಲ್ಲೇ ಉಳಿಯುತ್ತಿದೆ. ಈ ಹಣವನ್ನು ಪೋಷಕರು ತಮ್ಮ ಮಕ್ಕಳ ಶಾಲಾ ಸೌಲಭ್ಯಗಳಿಗೆ, ಉತ್ತಮ ಪೌಷ್ಟಿಕ ಆಹಾರ ಧಾನ್ಯಗಳ ಖರೀದಿಗೆ ಮತ್ತು ಮನೆಯ ಹಿರಿಯರ ಔಷಧಿ ವೆಚ್ಚಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಸಣ್ಣಪುಟ್ಟ ಉದ್ದಿಮೆಗಳನ್ನು ಕೂಡ ಮನೆಯಿಂದಲೇ ಆರಂಭಿಸಿದ್ದಾರೆ. ಆ ಮೂಲಕ ಜನರ ಕೊಳ್ಳುವ ಶಕ್ತಿ ಹೆಚ್ಚಾಗಿದ್ದು, ಗ್ರಾಮೀಣ ಆರ್ಥಿಕತೆಯೂ ಚೇತರಿಸಿಕೊಳ್ಳುತ್ತಿದೆ.



ಕಂಪನಿ	ಫಲಾನುಭವಿಗಳು	ಅನುದಾನ
BESCOM (ಬೆವಿಕಂ)	68,27,630	₹12,168 ಕೋಟಿ
HESCOM (ಹು ವಿ ಕಂ)	34,50,833	₹4,523 ಕೋಟಿ
GESCOM (ಗು ವಿ ಕಂ)	23,96,139	₹3,367 ಕೋಟಿ
C.E.S.C, MYSORE	23,50,753	₹3,032 ಕೋಟಿ
MESCOM (ಮೆಸ್ಕಾಂ)	16,37,123	₹2,889 ಕೋಟಿ






ಬಡವರ ಮನೆ ಬೆಳಗುವುದೇ ನಿಜವಾದ ಸುಶಾಸನ

ಪ್ರತಿ ತಿಂಗಳು ಕೋಟ್ಯಂತರ ಮನೆಗಳಿಗೆ ಗೃಹಜ್ಯೋತಿಯಡಿ ಶೂನ್ಯ ಬಿಲ್ ತಲುಪುತ್ತಿರುವುದನ್ನು ನೋಡಿದಾಗ ಆಗುವ ತೃಪ್ತಿ ಅಪಾರ. ಜನರ ಮೇಲಿನ ಆರ್ಥಿಕ ಹೊರೆಯನ್ನು ಕಡಿಮೆ ಮಾಡಿ, ಅವರ ಬದುಕಿನ ಗುಣಮಟ್ಟವನ್ನು ಹೆಚ್ಚಿಸುವುದೇ ನಮ್ಮ ಪ್ರಗತಿಪರ ಕರ್ನಾಟಕದ ಮೂಲ ಆಶಯ.

▸▸ ಸಿದ್ದರಾಮಯ್ಯ, ಮುಖ್ಯಮಂತ್ರಿಗಳು



ಇಂಧನ ವಲಯದಲ್ಲಿ ಕರ್ನಾಟಕದ ಹೊಸ ಇತಿಹಾಸ

ಗೃಹಜ್ಯೋತಿ ಯೋಜನೆಯು ಜನಸಾಮಾನ್ಯರ ಆರ್ಥಿಕ ಸಬಲೀಕರಣಕ್ಕೆ ಹೊಸ ಶಕ್ತಿ ತುಂಬಿದೆ. ಗೃಹಬಳಕೆಯ ವಿದ್ಯುತ್ ಬಿಲ್‌ನಿಂದ ಮುಕ್ತಿ ನೀಡುವುದರ ಜೊತೆಗೆ, ಜನರಲ್ಲಿ ಜವಾಬ್ದಾರಿಯುತ ವಿದ್ಯುತ್ ಬಳಕೆಯ ಶಿಸ್ತನ್ನು ತಂದಿರುವುದು ಈ ಯೋಜನೆಯ ದೊಡ್ಡ ಯಶಸ್ಸು.

▸▸ ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿಗಳು



ಪಾರದರ್ಶಕ ಮತ್ತು ನಿರಂತರ ಇಂಧನ ಸೇವೆ

ಅತ್ಯಂತ ಸಂಕೀರ್ಣವಾದ ವಿದ್ಯುತ್ ವಿತರಣಾ ವ್ಯವಸ್ಥೆಯ ನಡುವೆಯೂ, ನಮ್ಮ ಇಲಾಖೆಯು 1.64 ಕೋಟಿಗೂ ಅಧಿಕ ಗ್ರಾಹಕರಿಗೆ ಯಾವುದೇ ಗೊಂದಲವಿಲ್ಲದೆ ಗೃಹಜ್ಯೋತಿಯ ಸೌಲಭ್ಯವನ್ನು ಯಶಸ್ವಿಯಾಗಿ ತಲುಪಿಸಿದೆ.

▸▸ ಕೆ.ಜೆ. ಜಾರ್ಜ್, ಇಂಧನ ಸಚಿವರು

ಕಲಬುರಗಿ ಜವಳಿ ಪಾರ್ಕ್ ಯೋಜನೆ

1,700 ಕೋಟಿ ರೂ.ಹೂಡಿಕೆಗೆ ಹೂಡಿಕೆದಾರರಿಂದ ಪ್ರಸ್ತಾಪ: ಸಚಿವ ಖರ್ಗೆ

• **ಬೆಂಗಳೂರು/ಕಲಬುರಗಿ:** ಜಿಲ್ಲೆಯಲ್ಲಿ ಉದ್ದೇಶಿತ ಮೆಗಾ ಜವಳಿ ಪಾರ್ಕ್ ಯೋಜನೆಯು ಅತ್ಯಂತ ವೇಗವಾಗಿ ಪ್ರಗತಿ ಕಾಣುತ್ತಿದ್ದು,ಈಗಾಗಲೇ ಪ್ರಮುಖ ಹಂತದ ಪ್ರಕ್ರಿಯೆಗಳು ಯಶಸ್ವಿಯಾಗಿ ಪೂರ್ಣಗೊಂಡಿದ್ದು, ಜಿಲ್ಲೆಯ ನದಿಸಿನ್ನೂರು ಮತ್ತು ಕಿರಣಗಿ ಗ್ರಾಮಗಳ ವ್ಯಾಪ್ತಿಯಲ್ಲಿ ಒಟ್ಟು 1,000 ಎಕರೆ ಜಮೀನನ್ನು ಈ ಮಹತ್ವಾಕಾಂಕ್ಷಿ ಯೋಜನೆಗಾಗಿ ಗುರುತಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಪಾರ್ಕ್‌ನ ಉದ್ಘಾಟನೆಗೂ ಮುನ್ನವೇ ಹೂಡಿಕೆದಾರರಿಂದ ಅಭೂತಪೂರ್ವ ಸ್ಪಂದನೆ ವ್ಯಕ್ತವಾಗಿದ್ದು, 8 ಪ್ರಮುಖ ಹೂಡಿಕೆದಾರರಿಂದ ಸುಮಾರು 1,700 ಕೋಟಿ ರೂಪಾಯಿಗಳ ಹೂಡಿಕೆಯ ಪ್ರಸ್ತಾಪಗಳು ಹರಿದುಬಂದಿವೆ ಎಂದರು.

ಬೆಂಗಳೂರಿನಲ್ಲಿ ಸಚಿವ ಪ್ರಿಯಾಂಕ್ ಖರ್ಗೆ, ಜವಳಿ ಇಲಾಖೆ ಹಾಗೂ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ಅಧಿಕಾರಿಗಳು, ಹೂಡಿಕೆದಾರರು ಮತ್ತು ವಿಡಿಯೊ ಸಂವಾದದ ಮೂಲಕ ಕಲಬುರಗಿ ಜಿಲ್ಲಾಧಿಕಾರಿಗಳೊಂದಿಗೆ ಸಭೆ ನಡೆಸಿ ಜವಳಿ ಪಾರ್ಕ್ ಪ್ರಗತಿ ಪರಿಶೀಲಿಸಿದರು.

ಜವಳಿ ಪಾರ್ಕಿನಲ್ಲಿ ಆರಂಭಗೊಳ್ಳಲಿರುವ ಘಟಕಗಳಿಗೆ ಅನುಕೂಲವಾಗುವಂತೆ 25 ಎಕರೆಯಲ್ಲಿ ಸೌರವಿದ್ಯುತ್ ಘಟಕವನ್ನು ಆರಂಭಿಸಲಾಗುತ್ತಿದ್ದು, ಮಾಲಿನ್ಯರಹಿತ ಹಸಿರುಶಕ್ತಿಯನ್ನು ಬಳಸಿದಂತಾಗುವುದಲ್ಲದೆ ಜಗತ್ತಿನ ತಾಪಮಾನ ಏರಿಕೆ ಹಾಗೂ ಹವಾಮಾನ ವೈಪರೀತ್ಯ ತಡೆಯಲು ಕೊಡುಗೆ ನೀಡಿದಂತಾಗುವುದು.

ಜವಳಿ ಪಾರ್ಕ್‌ಗೆ ಗುರುತಿಸಲಾಗಿರುವ ಭೂಮಿಯನ್ನು ಈಗಾಗಲೇ ಕೈಗಾರಿಕಾ ಬಳಕೆಗೆ ಪರಿವರ್ತಿಸಲಾಗಿದ್ದು, ಅರಣ್ಯ ಇಲಾಖೆಯಿಂದಲೂ ಅಗತ್ಯ ಅನುಮತಿಗಳನ್ನು ಪಡೆಯಲಾಗಿದೆ. ಇದಲ್ಲದೆ, ಬಹುಮುಖ್ಯವಾಗಿದ್ದ ಪರಿಸರ ಅನುಮತಿಯು ಅ, 27, 2025 ರಂದು ಲಭ್ಯವಾಗಿದೆ ಎಂಬ ಮಾಹಿತಿ ಸಚಿವರು ನೀಡಿದ್ದಾರೆ.



ಪಾರ್ಕ್‌ನ ಸಮಗ್ರ ಮಾಸ್ಟರ್ ಪ್ಲಾನ್, ಆರ್ಥಿಕ ಯೋಜನೆ ಹಾಗೂ ವಿವರವಾದ ಯೋಜನಾ ವರದಿ (ಆಕಖ) ಸಿದ್ಧಪಡಿಸುವ ಕಾರ್ಯ ಪೂರ್ಣಗೊಂಡಿದೆ. ಯೋಜನೆಯ ಸುಗಮ ನಿರ್ವಹಣೆಗಾಗಿ ಈಗಾಗಲೇ ಮೂರು ಪ್ರಮುಖ ಮಂಡಳಿ ಸಭೆಗಳನ್ನು (14 ಜೂನ್ 2024, 12 ನವೆಂಬರ್ 2024 ಮತ್ತು 4 ನವೆಂಬರ್ 2025) ನಡೆಸಲಾಗಿದೆ ಎಂದು ಹೇಳಿರುವ ಸಚಿವ ಪ್ರಿಯಾಂಕ್ ಖರ್ಗೆ ಈ ಜವಳಿ ಪಾರ್ಕ್ ಸ್ಥಾಪನೆಯಿಂದಾಗಿ

ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಾವಿರಾರು ಉದ್ಯೋಗಾವಕಾಶಗಳು ಸೃಷ್ಟಿಯಾಗಲಿದ್ದು, ಪ್ರಾದೇಶಿಕ ಆರ್ಥಿಕ ಅಭಿವೃದ್ಧಿಗೆ ಹೊಸ ದಿಕ್ಸೂಚಿ ಸಿಗಲಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಇಂದಿನ ಸಭೆಯಲ್ಲಿ ಹೇಳಿದರು.

ಜವಳಿ ಇಲಾಖೆಯ ಸರ್ಕಾರದ ಕಾರ್ಯದರ್ಶಿ ರೋಹಿಣಿ ಸಿಂಧೂರಿ, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗೋವಿಂದರೆಡ್ಡಿ, ಕಲಬುರಗಿ ಜಿಲ್ಲಾಧಿಕಾರಿ ಮೊಹಮ್ಮದ್ ಇಕ್ರಮುಲ್ಲಾ ಷರೀಫ್ ಹಾಗೂ ಇನ್ನಿತರ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಅಯೋಧ್ಯೆ ಶ್ರೀರಾಮ ಮಂದಿರದಲ್ಲಿ ಕನ್ನಡ ನಾಡಿನ ಸಾಂಸ್ಕೃತಿಕ ವೈಭವ

• **ಕುರುಗೋಡು:** ಅಯೋಧ್ಯೆಯ ಉತ್ತರ ಪ್ರದೇಶದ ಅಯೋಧ್ಯೆಯ ಶ್ರೀ ರಾಮಜನ್ಮಭೂಮಿ ತೀರ್ಥಕ್ಷೇತ್ರದ ಶ್ರೀ ರಾಮ ಮಂದಿರ ಆವರಣದಲ್ಲಿ ಭಾನುವಾರ ಕರ್ನಾಟಕ ಸ್ಟೇಟ್ ಬಯಲಾಟ ಆರ್ಟಿಸ್ಟ್ಸ್ ಅಸೋಸಿಯೇಷನ್ ಸಹಯೋಗದೊಂದಿಗೆ, ಕರ್ನಾಟಕದ ಬಳ್ಳಾರಿ ಜಿಲ್ಲೆಯ ಶಿರುಗುಪ್ಪ ತಾಲೂಕಿನ ಬೂದುಗುಪ್ಪ ಗ್ರಾಮದ ಬಸವೇಶ್ವರ ಸಾಮಾಜಿಕ ಸಾಂಸ್ಕೃತಿಕ ಕಲಾ ಟ್ರಸ್ಟ್ ಆಯೋಜಿಸಿದ್ದ ಎರಡನೇ ವರ್ಷದ ಭರತನಾಟ್ಯ, ಬಯಲಾಟ, ದೊಡ್ಡಾಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಗೋಪಾಲ ಜೀ ಅವರು ಕಲಾವಿದರನ್ನು ಸನ್ಮಾನಿಸಿ, ಕನ್ನಡ ನಾಡಿನ ಕಲೆಯನ್ನು ಶ್ರೀರಾಮನ ಸನ್ನಿಧಿಯಲ್ಲಿ ಪ್ರದರ್ಶಿಸಿದ್ದು ಶ್ಲಾಘನೀಯ ಎಂದು ಶುಭ ಹಾರೈಸಿದರು.

ಕರ್ನಾಟಕ ಸ್ಟೇಟ್ ಬಯಲಾಟ ಆರ್ಟಿಸ್ಟ್ಸ್ ಅಸೋಸಿಯೇಷನ್ ರಾಜ್ಯಾಧ್ಯಕ್ಷ ವಿಶ್ವನಾಥ ಸಾಹುಕಾರ ಮಾತನಾಡಿದರು. ಹುಬ್ಬಳ್ಳಿಯ ಸುರಭಿ ತಂಡದವರಿಂದ ನೃತ್ಯ ಪ್ರದರ್ಶನ, ಬೆಂಗಳೂರಿನ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕಿ ಲಲಿತಾ ಮತ್ತು ತಂಡದಿಂದ ಭಕ್ತಿಗೀತೆಗಳ ಗಾಯನ, ಬೆಂಗಳೂರಿನ ಆರ್. ಅಮೃತವಾಣಿ ಅವರಿಂದ ಭರತನಾಟ್ಯ ಪ್ರದರ್ಶನ ನಡೆಯಿತು.ಬಯಲಾಟಕ್ಕೆ ರಾಯದುರ್ಗ ತಾಲೂಕಿನ ಚದ್ದಂ ಗೊಲ್ಲರಹಟ್ಟಿ ವೆಂಕಟೇಶ ಮೇಷ್ಟ್ರು ಸಂಗೀತ ನಿರ್ದೇಶನ ನೀಡಿದರು. ತಬಲಾದಲ್ಲಿ ಗಾದಿಲಿಂಗ ಗೋಟೂರು ಹಾಗೂ ರಿದಂ ಪ್ಯಾಡ್‌ನಲ್ಲಿ ವಿಜಯಕುಮಾರ ರೆಡ್ಡಿ ಸಹಕರಿಸಿದರು.



ಬಳ್ಳಾರಿ ಜಿಲ್ಲೆಯ ಕಲಾವಿದರು ಪ್ರಸ್ತುತಪಡಿಸಿದ 'ಶ್ರೀ ರೇಣುಕಾ ಮಹಾತ್ಮೆ' ಬಯಲಾಟ ವಿಶೇಷ ಆಕರ್ಷಣೆಯಾಗಿತ್ತು. ಪರುಶುರಾಮನಾಗಿ ಕರಿಬಸವಯ್ಯ ಸ್ವಾಮಿ ರಾಮಸಾಗರ, ರೇಣುಕೆಯಾಗಿ ಅನಿತಾ, ಮೇನಕೆಯಾಗಿ ವೇದಾವತಿ, ರಾಮ ಮತ್ತು ರಾಜನ ಪಾತ್ರದಲ್ಲಿ ಶರಣಪ್ಪ ಅಭಿನಯಿಸಿದರು. ಮೇಕಪ್ ಕಲಾವಿದರಾಗಿ ಗಂಗಾಧರ ಸಾಹುಕಾರ ಕಾರ್ಯನಿರ್ವಹಿಸಿದರು.

ಕಾರ್ಯಕ್ರಮ ವೀಕ್ಷಿಸಿದ ಹಿರಿಯ ಮುಖಂಡರಾದ ರುದ್ರಗೌಡ, ಗೋಪಾಲರೆಡ್ಡಿ, ತಿಮ್ಮನಗೌಡ ಅವರು ಬಳ್ಳಾರಿ ಜಿಲ್ಲೆಯ ಬಯಲಾಟ ತಂಡದ ಪ್ರದರ್ಶನವನ್ನು ಮುಕ್ತಕಂಠದಿಂದ ಶ್ಲಾಘಿಸಿ ಸಂತಸ ವ್ಯಕ್ತಪಡಿಸಿದರು.

ಜೂನ್ 1ರಂದು ಶಾಲಾ ಆರಂಭದ ಹಬ್ಬ

ಬೆಂಗಳೂರು: 2026-27ನೇ ಶೈಕ್ಷಣಿಕ ಸಾಲಿನ ಆರಂಭಕ್ಕೆ ರಾಜ್ಯ ಶಾಲಾ ಶಿಕ್ಷಣ ಇಲಾಖೆ ಸಮಗ್ರ ಸಿದ್ಧತೆಯನ್ನು ಆರಂಭಿಸಿದ್ದು, ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಜೂ.1ರಂದು ಶಾಲಾ ಪ್ರಾರಂಭೋತ್ಸವ ಹಾಗೂ ದಾಖಲಾತಿ ಆಂದೋಲನವನ್ನು ಹಬ್ಬದ ವಾತಾವರಣದಲ್ಲಿ ನಡೆಸಲು ಸೂಚಿಸಿದೆ.

ಶಾಲೆ ಆರಂಭವನ್ನು ಕೇವಲ ಔಪಚಾರಿಕ ಕಾರ್ಯಕ್ರಮವನ್ನಾಗಿ ಪರಿಗಣಿಸದೆ, ಮಕ್ಕಳಲ್ಲಿ ಶಾಲೆಯತ್ತ ಆಕರ್ಷಣೆ ಮತ್ತು ಉತ್ಸಾಹ ಮೂಡಿಸುವ ರೀತಿಯಲ್ಲಿ ಆಚರಿಸಬೇಕು ಎಂದು ಇಲಾಖೆ ಆಯುಕ್ತರು ಹೊರಡಿಸಿರುವ ಮಾರ್ಗಸೂಚಿಯಲ್ಲಿ ಸ್ಪಷ್ಟಪಡಿಸಲಾಗಿದೆ. ಮೊದಲ ದಿನವೇ ಮಕ್ಕಳಿಗೆ ಅಕ್ಷರ ದಾಸೋಹ ಯೋಜನೆಯ ಅಡಿಯಲ್ಲಿ ಸಿಹಿಯೂಟ ನೀಡುವುದು, ಉಚಿತ ಪಠ್ಯಪುಸ್ತಕ, ಸಮವಸ್ತ್ರ ಮತ್ತು ಬಿಸಿಯೂಟ ವಿತರಣೆ ಮಾಡುವಂತೆ ಸೂಚಿಸಲಾಗಿದೆ.

ಮಳೆಯ ಹಿನ್ನೆಲೆ ಸುರಕ್ಷತೆ ವಿಚಾರಕ್ಕೆ ವಿಶೇಷ ಆದ್ಯತೆ ನೀಡಿರುವ ಇಲಾಖೆ, ಮೇ 28ರ ಒಳಗೆ ಶಾಲೆಗಳ ಸಂಪೂರ್ಣ ಆವರಣವನ್ನು ಸ್ವಚ್ಛಗೊಳಿಸಿ ಕುಡಿಯುವ ನೀರು ಸೇರಿದಂತೆ ಎಲ್ಲಾ ಮೂಲಸೌಕರ್ಯಗಳು ಸುಸ್ಥಿತಿಯಲ್ಲಿರುವುದನ್ನು ಖಚಿತಪಡಿಸಿಕೊಳ್ಳುವಂತೆ ಸೂಚಿಸಿದೆ. ರಾಜ್ಯದ ಅನೇಕ ಭಾಗಗಳಲ್ಲಿ ಭಾರೀ ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ ಶಾಲಾ ಕಟ್ಟಡಗಳು, ಶೌಚಾಲಯಗಳು ಅಥವಾ ಅಡುಗೆಕೋಣೆಗಳು ಶಿಥಿಲಗೊಂಡಿದ್ದರೆ ತಕ್ಷಣವೇ ಸ್ಥಳೀಯ ಸಂಸ್ಥೆಗಳ ಸಹಕಾರದೊಂದಿಗೆ ದುರಸ್ತಿ ಮಾಡಬೇಕು ಅಥವಾ ಅಗತ್ಯವಿದ್ದರೆ ತೆರವುಗೊಳಿಸಬೇಕು ಎಂದು ಎಚ್ಚರಿಕೆ ನೀಡಲಾಗಿದೆ. ಅಪಾಯಕಾರಿ ಮರಗಳು, ಸಡಿಲಗೊಂಡ ವಿದ್ಯುತ್ ತಂತಿಗಳು ಅಥವಾ ಇತರೆ ಅಪಾಯಕಾರಕ ಪರಿಸ್ಥಿತಿಗಳ ಕುರಿತು ಮುನ್ನೆಚ್ಚರಿಕೆ ವಹಿಸಲು ಸೂಚಿಸಲಾಗಿದ್ದು, ಮಕ್ಕಳ ಸುರಕ್ಷತೆಗೆ ಯಾವುದೇ ರೀತಿಯ ನಿರ್ಲಕ್ಷ್ಯ ತೋರಬಾರದು ಎಂದು ಇಲಾಖೆ ಕಟ್ಟುನಿಟ್ಟಾಗಿ ಸೂಚಿಸಿದೆ.

ವಿದ್ಯಾರ್ಥಿ-ಶಿಕ್ಷಕರಿಗೆ ಡಿಜಿಟಲ್ ಹಾಜರಿ ಕಡ್ಡಾಯ: ಈ ಸಾಲಿನಿಂದ ಡಿಜಿಟಲ್ ಹಾಜರಾತಿ ವ್ಯವಸ್ಥೆಯನ್ನು ಮತ್ತಷ್ಟು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುತ್ತಿದೆ. ಸರ್ಕಾರಿ ಮತ್ತು ಅನುದಾನಿತ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳ ಹಾಜರಾತಿಯನ್ನು ನಿರಂತರ ಯೋಜನೆ ಅಡಿ ಮುಖ ಗುರುತಿಸುವ ತಂತ್ರಜ್ಞಾನದ ಮೊಬೈಲ್ ಅಪ್ಲಿಕೇಶನ್ ಮೂಲಕ ದಾಖಲಿಸಬೇಕಾಗುತ್ತದೆ. ಇದೇ ವೇಳೆ ಕಾಯಂ ಶಿಕ್ಷಕರು ಹಾಗೂ ಅಧಿಕಾರಿಗಳು ಕಾಮ್ಸ್ ಆ್ಯಪ್ ಮೂಲಕ ಕಡ್ಡಾಯವಾಗಿ ಹಾಜರಾತಿ ನಿರ್ವಹಿಸಬೇಕು ಎಂದು ಇಲಾಖೆ ತಿಳಿಸಿದೆ.

ಮನೆ-ಮನೆಗೆ ಭೇಟಿ ನೀಡಿ ದಾಖಲಾತಿ ಅಭಿಯಾನ: 6 ರಿಂದ 14 ವರ್ಷದ ಯಾವುದೇ ಮಗು ಶಾಲೆಯಿಂದ ಹೊರಗುಳಿಯದಂತೆ ನೋಡಿಕೊಳ್ಳಲು ಶಿಕ್ಷಕರು ಮನೆ-ಮನೆಗೆ ಭೇಟಿ ನೀಡಿ ಪೋಷಕರಲ್ಲಿ ಅರಿವು ಮೂಡಿಸಬೇಕು ಎಂದು ಇಲಾಖೆ ಸೂಚಿಸಿದೆ. ಜೊತೆಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರ ನೇತೃತ್ವದಲ್ಲಿ ಮಿಂಚಿನ ಸಂಚಾರ ಹಾಗೂ ಶಾಲಾ ಸಂದರ್ಶನ ಸಪ್ತಾಹ ಕಾರ್ಯಕ್ರಮಗಳನ್ನು ನಡೆಸಲು ಇಲಾಖೆ ನಿರ್ದೇಶಿಸಿದೆ. ಶಾಲಾ ಪ್ರಾರಂಭದ ಮೊದಲ ದಿನದಿಂದಲೇ ಇಲಾಖೆಯ ಮಾರ್ಗಸೂಚಿಯಂತೆ 1ರಿಂದ 3ನೇ ತರಗತಿಗಳಿಗೆ 30 ದಿನಗಳು ಹಾಗೂ 4 ರಿಂದ 10ನೇ ತರಗತಿಗಳಿಗೆ ಕೇವಲ 15 ದಿನಗಳ ಕಾಲ ಮಾತ್ರ ಸೇತುಬಂಧ ಶಿಕ್ಷಣ ಇರಲಿದೆ. ಮಕ್ಕಳ ಕಲಿಕಾ ಹಿನ್ನಡೆಯನ್ನು ವ್ಯವಸ್ಥಿತವಾಗಿ ಗುರುತಿಸಲು ಪೂರ್ವ ಪರೀಕ್ಷೆ ಹಾಗೂ ಸಾಫಲ್ಯ ಪರೀಕ್ಷೆಗಳನ್ನು ನಡೆಸಿ, ಅವುಗಳ ಫಲಿತಾಂಶವನ್ನು ಸ್ಯಾಟ್ಸ್ ತಂತ್ರಾಂಶದಲ್ಲಿ ಕಡ್ಡಾಯವಾಗಿ ದಾಖಲಿಸಬೇಕು ಎಂದು ಸೂಚಿಸಲಾಗಿದೆ.

ಮುಖ್ಯ ದಿನಾಂಕಗಳು

- ಮೇ 28-ಶಾಲೆಗಳ ಸಂಪೂರ್ಣ ಸ್ವಚ್ಛತೆ, ಕುಡಿಯುವ ನೀರು ಮತ್ತು ಸುರಕ್ಷತಾ ತಪಾಸಣೆಗಳನ್ನು ಪೂರ್ಣಗೊಳಿಸಲು ಕೊನೆಯ ದಿನಾಂಕ.
- ಮೇ 29-ಮುಖ್ಯ ಶಿಕ್ಷಕರು ಮತ್ತು ಸಹ ಶಿಕ್ಷಕರು ಕಡ್ಡಾಯವಾಗಿ ಶಾಲೆಗೆ ಹಾಜರಾಗಿ ಪೂರ್ವ ಸಿದ್ಧತೆ ಮಾಡಿಕೊಳ್ಳಬೇಕು.
- ಜೂನ್ 1-ಶಾಲಾ ಪ್ರಾರಂಭೋತ್ಸವ ಹಾಗೂ ಮಕ್ಕಳ ದಾಖಲಾತಿ ಪ್ರಕ್ರಿಯೆ ಅಧಿಕೃತವಾಗಿ ಆರಂಭ.
- ಜೂನ್ 30 - ದಾಖಲಾತಿ ಆಂದೋಲನ ಮುಕ್ತಾಯಗೊಳ್ಳುವ ದಿನಾಂಕ.

ಡಿಜಿಟಲ್ ಅರೆಸ್ಟ್: ತನಿಖೆ ಚುರುಕು

ಬೆಂಗಳೂರು: ದೇಶಾದ್ಯಂತ ಸಂಚಲನ ಮೂಡಿಸಿದ್ದ ಬೆಂಗಳೂರಿನ ಹಿರಿಯ ನಾಗರಿಕ ಮಹಿಳೆಯೊಬ್ಬರ 24 ಕೋಟಿ ರೂ. ಡಿಜಿಟಲ್ ಅರೆಸ್ಟ್ ವಂಚನೆ ಪ್ರಕರಣದ ತನಿಖೆ ಚುರುಕುಗೊಂಡಿದ್ದು, ಬಂಧಿತ ಆರೋಪಿಗಳು ಬೆಳಗಾವಿಯ ಮತ್ತೊಂದು ಬೃಹತ್ ವಂಚನೆ ಪ್ರಕರಣದಲ್ಲೂ ಭಾಗಿಯಾಗಿರುವುದು ಬೆಳಕಿಗೆ ಬಂದಿದೆ.

ಬೆಂಗಳೂರು ನಿವಾಸಿ ಲಕ್ಷ್ಮೀ ರಾಮಮೂರ್ತಿ (74) ಎಂಬವರನ್ನು ಸಿಬಿಐ ಮತ್ತು ಇ.ಡಿ. ಅಧಿಕಾರಿಗಳ ಸೋಗಿನಲ್ಲಿ ಹೆದರಿಸಿ, ಡಿಜಿಟಲ್ ಅರೆಸ್ಟ್ ಮಾಡುವ ಮೂಲಕ ಬರೋಬ್ಬರಿ 24 ಕೋಟಿ ರೂ. ವಂಚಿಸಲಾಗಿತ್ತು. ಫೆ.10ರಿಂದ ಏ.24ರ ಅವಧಿಯಲ್ಲಿ ಒಟ್ಟು 26 ವಹಿವಾಟುಗಳ ಮೂಲಕ ದೇಶದ್ಯಾಂತ ಇರುವ 23 ಮ್ಯೂಲ್ ಬ್ಯಾಂಕ್ ಖಾತೆಗಳಿಗೆ ಈ ಹಣವನ್ನು ವರ್ಗಾಯಿಸಿಕೊಳ್ಳಲಾಗಿತ್ತು. ಈ ಸಂಬಂಧ ರಾಜ್ಯ ಸೈಬರ್ ಕಮಾಂಡ್ ಪೊಲೀಸರು ಈಗಾಗಲೇ ಆರು ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ.

ಬೆಳಗಾವಿ ಪ್ರಕರಣದಲ್ಲೂ ಭಾಗಿ -ಬಾಡಿ ವಾರಂಟ್ ಮೇಲೆ ವಶಕ್ಕೆ: ಬಂಧಿತ ಆರೋಪಿಗಳ ಪೈಕಿ ಗುಜರಾತ್‌ನ ಅಹಮದಾಬಾದ್ ಮೂಲದ ಪಾಲಕ್ ಭಾಯಿ ಪಟೇಲ್ ಮತ್ತು ಅಮಿತ್ ನರೇಂದ್ರ ಪಟೇಲ್ ಎಂಬವರು ಬೆಳಗಾವಿ ನಗರದ ಸೈಬರ್ ಕ್ರೈಮ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಮತ್ತೊಂದು 15 ಕೋಟಿ ರೂ. ಡಿಜಿಟಲ್ ಅರೆಸ್ಟ್ ವಂಚನೆ ಪ್ರಕರಣದಲ್ಲೂ ಭಾಗಿಯಾಗಿರುವುದು ತನಿಖೆಯಲ್ಲಿ ದೃಢಪಟ್ಟಿದೆ. ಈ ಹಿನ್ನೆಲೆಯಲ್ಲಿ ಬೆಳಗಾವಿ ಪೊಲೀಸರಿಗೆ ಮಾಹಿತಿ ನೀಡಲಾಗಿದ್ದು, ಅವರು ನ್ಯಾಯಾಲಯದಿಂದ ಬಾಡಿ ವಾರಂಟ್ ಪಡೆದು ಈ ಇಬ್ಬರು ಆರೋಪಿಗಳನ್ನು ಸದ್ಯ ತಮ್ಮ ವಶಕ್ಕೆ ಪಡೆದುಕೊಂಡಿದ್ದಾರೆ.

1.40 ಕೋಟಿ ರೂ. ವಶಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿ: ಈ ವಂಚನೆ ಜಾಲದಿಂದ ಪೊಲೀಸರು ಈಗಾಗಲೇ 1.46 ಕೋಟಿ ರೂ. ನಗದನ್ನು ಜಪ್ತಿ ಮಾಡಿದ್ದಾರೆ. ಇದರ ಜೊತೆಗೆ ಮತ್ತೊಂದು ಹಂತದಲ್ಲಿ 1.40 ಕೋಟಿ ರೂ. ಹಣವನ್ನು ವಶಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಸೈಬರ್ ಕಮಾಂಡ್ ಪೊಲೀಸ್ ಮಹಾನಿರ್ದೇಶಕ ಡಾ.ಪ್ರಣಬ್ ಮೊಹಂತಿ ತಿಳಿಸಿದ್ದಾರೆ.

ಸಚಿವ ವೆಂಕಟೇಶ್‌ಗೆ ಹೆಚ್ಚುವರಿ ಯೋಜನೆ, ಸಾಂಖ್ಯಿಕ ಖಾತೆ

ಬೆಂಗಳೂರು: ಇತ್ತೀಚೆಗೆ ನಿಧನರಾದ ಸಚಿವ ಡಿ. ಸುಧಾಕರ್ ಅವರು ನಿರ್ವಹಿಸುತ್ತಿದ್ದ ಯೋಜನೆ ಮತ್ತು ಸಾಂಖ್ಯಿಕ ಖಾತೆಯನ್ನು ಸಚಿವ ಕೆ. ವೆಂಕಟೇಶ್ ಅವರಿಗೆ ವಹಿಸಲಾಗಿದ್ದು, ಲೋಕಭವನದಿಂದ ಅಧಿಕೃತ ಅಧಿಸೂಚನೆ ಹೊರಡಿಸಲಾಗಿದೆ. ಪಶು ಸಂಗೋಪನೆ ಸಚಿವರಾಗಿ ಕಾರ್ಯ ನಿರ್ವಹಿಸುತ್ತಿರುವ ಸಚಿವ ಕೆ. ವೆಂಕಟೇಶ್ ಅವರಿಗೆ ಯೋಜನೆ ಮತ್ತು ಸಾಂಖ್ಯಿಕ ಖಾತೆ ಹೆಚ್ಚುವರಿಯಾಗಿ ಸಿಕ್ಕಿದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ವ್ಯಕ್ತಿಗಿಂತ ಪಕ್ಷ ಮುಖ್ಯ, ಪಕ್ಷಕ್ಕಿಂತ ದೇಶ ಮುಖ್ಯ ಎಂಬುದು ಬಿಜೆಪಿಯ ಸಿದ್ಧಾಂತವಾಗಿದೆ
- ನಳಿನ್ ಕುಮಾರ್ ಕಟೀಲ್

-ದೇಶಕ್ಕಿಂತ ವಿದೇಶ ಮುಖ್ಯ ಎಂಬ ಸಿದ್ಧಾಂತವನ್ನು ಕೆಲವು ಪಕ್ಷಗಳು ಹೊಂದಿರುವಂತೆ ತೋರುತ್ತಿದೆ!

ದಿನ ಭವಿಷ್ಯ

ಮೇಷ ನಿಮ್ಮನ್ನು ಅರ್ಥ ಮಾಡಿಕೊಳ್ಳಲು ಕೆಲವರು ವಿಫಲರಾಗುವರು. ಅವರಿಗೆ ಮನದಟ್ಟು ಮಾಡುವ ಪ್ರಯತ್ನ ಬಿಡಿ. ತಾಳ್ಮೆಯೇ ನಿಮ್ಮ ನೆರವಿಗೆ ಬರಲಿದೆ.

ವೃಷಭ ನಿಮ್ಮ ಕೆಲಸದ ಪರಾಮರ್ಶೆ ನಡೆಸಿ. ಇನ್ನೂ ಉತ್ತಮ ಕಾರ್ಯ ನಡೆಸಲು ನಿಮಗೆ ಸಾಧ್ಯ. ಅಲ್ಪತೃಪ್ತಿ ಬಿಡಿ. ದೊಡ್ಡ ಗುರಿ ಇರಿಸಿಕೊಳ್ಳಿ.

ಮಿಥುನ ನಿಮ್ಮ ಶ್ರೇಷ್ಠ ನಿರ್ವಹಣೆ ಇತರರ ಗಮನಕ್ಕೆ ಬಾರದೆ ಹೋಗಬಹುದು. ನಿರಾಶೆ ಬೇಡ. ನಿಮ್ಮ ಕಾರ್ಯ ಮುಂದುವರಿಸಿರಿ.

ಕಟಕ ಪಾಸಿಟಿವ್ ಚಿಂತನೆ ಇರಿಸಿಕೊಳ್ಳಿ. ಸಾಧಿಸುವಿರಿ. ಇಲ್ಲವಾದರೆ ವಿಫಲತೆ ಕಾಣುವಿರಿ. ಬಂಧುಗಳ ಆಕ್ರೋಶ ಎದುರಿಸುವಿರಿ. ಆರ್ಥಿಕ ಒತ್ತಡ.

ಸಿಂಹ ಅದೃಷ್ಟದ ದಿನ. ಕಾರ್ಯದಲ್ಲಿ ಸಫಲತೆ. ನಿಮ್ಮ ಹೃದಯಕ್ಕೆ ಆಪ್ತರಾದವರು ನಿಮ್ಮೆಡೆಗೆ ಒಲವು ತೋರುವರು. ಆರ್ಥಿಕ ಉನ್ನತಿ.

ಕನ್ಯಾ ಸಂತೋಷ, ತೃಪ್ತಿ, ಸಾಧನೆ ಇವು ನಿಮ್ಮ ಪಾಲಿಗೆ ಇಂದು ಒದಗಲಿವೆ. ನಿರ್ಧಾರ ಉತ್ತಮ ಫಲ ನೀಡಲಿದೆ. ಬಂಧುಗಳ ಆತಿಥ್ಯ ಸಿಗಲಿದೆ.

ತುಲಾ ಹಳೆ ಹೂಡಿಕೆಯ ಲಾಭ ಇಂದು ಸಿಗಲಿದೆ. ಪ್ರಯಾಣದಲ್ಲಿ ಸಮಸ್ಯೆ. ಕೆಲವರಿಗೆ ಅಜೀರ್ಣ, ಗ್ಯಾಸ್ಟ್ರಿಕ್ ಸಮಸ್ಯೆ ಕಾಡಬಹುದು.

ವೃಶ್ಚಿಕ ಬಿಡುವಿರದ ದಿನ. ಇದರಿಂದಾಗಿ ವೈಯಕ್ತಿಕ ವಿಷಯ ಕೂಡ ಗೌಣ ಆಗಲಿದೆ. ಆರೋಗ್ಯದ ಕುರಿತಂತೆ ನಿರ್ಲಕ್ಷ್ಯ ತಾಳಬೇಡಿ.

ಧನು ವೃತ್ತಿಕ್ಷೇತ್ರದಲ್ಲಿ ನಿಗೂಢ ಶತ್ರುಗಳು ಕಾಟ ಕೊಡುವರು. ಎಚ್ಚರದಿಂದ ನಡಕೊಳ್ಳಿ. ಹಿರಿಯರಿಗೆ ಸಂಧಿನೋವು ಸಂಭವ. ಆರ್ಥಿಕ ಹಿನ್ನಡೆ.

ಮಕರ ಅಂತರಾತ್ಮದ ಮಾತು ಕೇಳಿ. ವಿರೋಧಿಗಳ ಬಗ್ಗೆ ಎಚ್ಚರದಿಂದಿರಿ. ಕೋಪಕ್ಕೆ ವಿವೇಕ ಬಲಿ ಕೊಡಬೇಡಿ. ಕೌಟುಂಬಿಕ ಸಹಕಾರ ಪಡೆದುಕೊಳ್ಳಿ.

ಕುಂಭ ಪೂರ್ವನಿಗದಿತ ಕೆಲಸ ಸಾಧ್ಯವಾಗದು. ಯೋಜನೆ ಬದಲಿಸುವ ಅಗತ್ಯ ಬೀಳಲಿದೆ. ತಾಳ್ಮೆಯಿಂದ ವ್ಯವಹರಿಸಿ. ಕೌಟುಂಬಿಕ ಅಸಹಕಾರ.

ಮೀನ ಯೋಜಿತ ಕೆಲಸಕ್ಕೆ ಹಿಂಜರಿಕೆ ಬಿಡಿ. ದಿಟ್ಟವಾಗಿ ಮುಂದೆ ಹೆಜ್ಜೆ ಇಡಿ. ನಿಮಗೆ ಪೂರಕ ವಾತಾವರಣ ಸೃಷ್ಟಿಯಾಗಲಿದೆ. ಸೂಕ್ತ ನೆರವೂ ಸಿಗಲಿದೆ.

ರಾಹುಕಾಲ: 3.00- 4.30
ಗುಳಿಕಕಾಲ: 12.00-1.30

ಅದೃಷ್ಟ ಸಂಖ್ಯೆ: 4,7,3,1

ಮುಖ್ಯಮಂತ್ರಿ ಜತೆಗೆ ಸಭಾಪತಿಗಳ ವಿಸ್ತೃತ ಸಮಾಲೋಚನೆ

ಮಳೆಗಾಲ ಅಧಿವೇಶನಕ್ಕೆ ಸಜ್ಜು



ಬೆಳಗಾವಿ: ಇದೇ ಮೊದಲ ಬಾರಿಗೆ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಈ ಬಾರಿಯ ಮಳೆಗಾಲದ ಅಧಿವೇಶನ ನಡೆಸುವ ಕುರಿತು ರಾಜ್ಯ ಸರ್ಕಾರ ಗಂಭೀರ ಚಿಂತನೆ ನಡೆಸುತ್ತಿರುವುದು ಉತ್ತರ ಕರ್ನಾಟಕ ಭಾಗದ ದೃಷ್ಟಿಯಿಂದ ಅತ್ಯಂತ ಮಹತ್ವದ ನಿರ್ಧಾರವಾಗಿದೆ.

ಸಾಮಾನ್ಯ ವಾಗಿ ಬೆಳಗಾವಿಯ ಸುವರ್ಣ ಸೌಧದಲ್ಲಿ ಪ್ರತಿ ವರ್ಷ ಚಳಿಗಾಲದ ಅಧಿವೇಶನವನ್ನು (ನವೆಂಬರ್ / ಡಿಸೆಂಬರ್) ಮಾತ್ರ ನಡೆಸಲಾಗುತ್ತಿತ್ತು. ಆದರೆ, ಇತಿಹಾಸದಲ್ಲೇ ಮೊದಲ ಬಾರಿಗೆ ಇಲ್ಲಿ ಮಳೆಗಾಲದ ಅಧಿವೇಶನ ನಡೆಸಲು ಸರ್ಕಾರ ಸಜ್ಜಾಗುತ್ತಿದೆ. ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಹಾಗೂ ವಿಧಾನಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ ಅವರು ಜಂಟಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆಗೆ ಈ ಕುರಿತು ವಿಸ್ತೃತ ಸಮಾಲೋಚನೆ ನಡೆಸಿದ್ದಾರೆ.

ಸಾಧಕ-ಬಾಧಕಗಳ ಬಗ್ಗೆ ಚರ್ಚಿಸಲು ಅಧಿವೇಶನ: ಅಧಿವೇಶನವನ್ನು ಬೆಂಗಳೂರಿನ ಬದಲು ಬೆಳಗಾವಿಗೆ ಸ್ಥಳಾಂತರಿಸುವುದರಿಂದ ಆಗುವ ಸಾಧಕ-ಬಾಧಕಗಳ ಬಗ್ಗೆ ಚರ್ಚಿಸಲಾಗಿದೆ. ಮಳೆಗಾಲದ ಸದನವನ್ನು ಯಾವಾಗ ಆರಂಭಿಸಬೇಕು ಮತ್ತು ಎಷ್ಟು ದಿನಗಳ ಕಾಲ ನಡೆಸಬೇಕು ಎಂಬ ನಿಖರವಾದ ದಿನಾಂಕಗಳನ್ನು ಮುಂಬರುವ ಮುಂದಿನ ಸಚಿವ ಸಪುಟ ಸಭೆಯಲ್ಲಿ ಚರ್ಚಿಸಿ ಅಂತಿಮಗೊಳಿಸುವ ಸಾಧ್ಯತೆಯಿದೆ. ಸಾಮಾನ್ಯವಾಗಿ ಕರ್ನಾಟಕದ ಮಳೆಗಾಲದ ಅಧಿವೇಶನವು ಜುಲೈ ತಿಂಗಳ ಅವಧಿಯಲ್ಲಿ ನಡೆಯಲಿದ್ದು, ಈ ಬಾರಿಯೂ ಜುಲೈ ಮಧ್ಯಭಾಗದಲ್ಲಿ ಕಲಾಪ ಆರಂಭವಾಗುವ ನಿರೀಕ್ಷೆಯಿದೆ.

ಬೆಳಗಾವಿಯಲ್ಲಿ ಅಧಿವೇಶನ ನಡೆಸುವುದರಿಂದ ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳು, ನೀರಾವರಿ ಯೋಜನೆಗಳು ಹಾಗೂ ಪ್ರಾದೇಶಿಕ ಅಸಮತೋಲನ ನಿವಾರಣೆಯ ಕುರಿತು ಹೆಚ್ಚು ಸಮಯ ವಿನಿಯೋಗಿಸಿ ಚರ್ಚಿಸಲು ಅನುಕೂಲವಾಗುತ್ತದೆ ಎಂಬುದು ಸರ್ಕಾರದ ಆಶಯ.

ಪ್ರತಿಭಟನೆಗಳ ಆತಂಕ ಇರುವುದಿಲ್ಲ: ಜುಲೈ ತಿಂಗಳು ತೀವ್ರ ಮಳೆಯ ಅವಧಿಯಾಗಿರುವುದರಿಂದ ಮತ್ತು ರೈತರು ಸೇರಿದಂತೆ ವಿವಿಧ ಸಂಘಟನೆಗಳು ಕೃಷಿ ಚಟುವಟಿಕೆಗಳಲ್ಲಿ ನಿರತರಾಗಿರುವುದರಿಂದ, ಸುವರ್ಣಸೌಧದ ಸುತ್ತಮುತ್ತ ಎಂದಿನಂತೆ ದೊಡ್ಡ ಮಟ್ಟದ ಪ್ರತಿಭಟನೆಗಳು ಅಥವಾ ಧರಣಿಗಳು ನಡೆಯುವ ಸಾಧ್ಯತೆ ಕಡಿಮೆ ಇರುತ್ತದೆ. ಇದು ಕಲಾಪ ಸುಗಮವಾಗಿ ನಡೆಯಲು ಸಹಕಾರಿ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ಬೆಳಗಾವಿಯ ಸುವರ್ಣ ವಿಧಾನಸೌಧವು ವರ್ಷದಲ್ಲಿ ಕೇವಲ 10-15 ದಿನಗಳ ಚಳಿಗಾಲದ ಅಧಿವೇಶನಕ್ಕೆ ಮಾತ್ರ ಸೀಮಿತವಾಗುತ್ತಿದೆ ಎಂಬ ಟೀಕೆಗಳಿದ್ದವು. ಮಳೆಗಾಲದ ಅಧಿವೇಶನವನ್ನೂ ಇಲ್ಲಿ ನಡೆಸುವ ಮೂಲಕ ಈ ಬೃಹತ್ ಕಟ್ಟಡವನ್ನು ಮತ್ತಷ್ಟು ಸದ್ಬಳಕೆ ಮಾಡಿಕೊಳ್ಳಲಾಗುತ್ತಿದೆ.

ಆಡಳಿತ ವ್ಯವಸ್ಥೆ ಸ್ಥಳಾಂತರ: ಅಧಿವೇಶನದ ಹಿನ್ನೆಲೆಯಲ್ಲಿ ಇಡೀ ರಾಜ್ಯ ಸರ್ಕಾರದ ಆಡಳಿತ ಯಂತ್ರ, ಸಚಿವರು, ಮುಖ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಅಧಿಕಾರಿಗಳ ದಂಡು ಕೆಲವು ವಾರಗಳ ಕಾಲ ಬೆಳಗಾವಿಯಲ್ಲೇ ಬೀಡುಬಿಡಬೇಕಾಗುತ್ತದೆ.

ಮಳೆಯ ಸವಾಲು ಹಾಗೂ ಸಿದ್ಧತೆ: ಬೆಳಗಾವಿ ಭಾಗದಲ್ಲಿ ಜುಲೈನಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇರುವುದರಿಂದ, ಅಧಿವೇಶನಕ್ಕೆ ಬರುವ ಜನಪ್ರತಿನಿಧಿಗಳು, ಅಧಿಕಾರಿಗಳು ಮತ್ತು ಮಾಧ್ಯಮದವರಿಗೆ ಯಾವುದೇ ತೊಂದರೆಯಾಗದಂತೆ ಸುವರ್ಣಸೌಧದ ಆವರಣ ಹಾಗೂ ನಗರದಲ್ಲಿ ವಿಶೇಷ ಮೂಲಸೌಕರ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ.

ವಿರೋಧ ಪಕ್ಷದ ನಿಲುವು

ಸರ್ಕಾರದ ಈ ದಿಢೀರ್ ಚಿಂತನೆಗೆ ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಹೇಗೆ ಪ್ರತಿಕ್ರಿಯಿಸುತ್ತವೆ ಎಂಬುದು ಕುತೂಹಲ ಮೂಡಿಸಿದೆ. ಉತ್ತರ ಕರ್ನಾಟಕದ ವಿಷಯಗಳ ಬಗ್ಗೆ ಚರ್ಚಿಸಲು ಅವರೂ ಕೂಡ ಇದಕ್ಕೆ ಸಮ್ಮತಿ ನೀಡುವ ಸಾಧ್ಯತೆ ಹೆಚ್ಚಿದೆ.

ಶಾಸಕರು, ಅಧಿಕಾರಿಗಳಿಗೆ ವಸತಿ ವ್ಯವಸ್ಥೆ

ಮಳೆಗಾಲದಲ್ಲಿ ಶಾಸಕರು ಮತ್ತು ಅಧಿಕಾರಿಗಳಿಗೆ ಸೂಕ್ತ ವಸತಿ ಹಾಗೂ ಸಾರಿಗೆ ವ್ಯವಸ್ಥೆ ಕಲ್ಪಿಸುವುದು ಜಿಲ್ಲಾಡಳಿತಕ್ಕೆ ದೊಡ್ಡ ಜವಾಬ್ದಾರಿಯಾಗಲಿದ್ದು, ಸ್ಪೀಕರ್ ಯು.ಟಿ.ಖಾದರ್ ಈಗಾಗಲೇ ಪ್ರಾಥಮಿಕ ಪರಿಶೀಲನೆಗೆ ಸೂಚನೆ ನೀಡಿದ್ದಾರೆ ಎನ್ನಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೊದಲ ಬಾರಿಗೆ ಬೆಳಗಾವಿ ಸುವರ್ಣ ಸೌಧದಲ್ಲಿ ಮಳೆಗಾಲದ ಅಧಿವೇಶನ ನಡೆಸುವ ನಿರ್ಧಾರದ ಮೂಲಕ ಉತ್ತರ ಕರ್ನಾಟಕ ಭಾಗದ ಜನರ ಮನ ಗೆಲ್ಲಲು ಮತ್ತು ಪ್ರಾದೇಶಿಕ ಆಡಳಿತ ವಿಕೇಂದ್ರೀಕರಣಕ್ಕೆ ಒತ್ತು ನೀಡಲು ಮುಂದಡಿಯಿಟ್ಟಿದ್ದಾರೆ. ಮುಂದಿನ ಕ್ಯಾಬಿನೆಟ್ ಸಭೆಯ ಬಳಿಕ ಈ ಕುರಿತ ಅಧಿಕೃತ ಪ್ರಕಟಣೆ ಹೊರ ಬೀಳಲಿದ್ದು, ಇಡೀ ರಾಜ್ಯದ ಗಮನ ಈಗ ಬೆಳಗಾವಿಯತ್ತ ನೆಟ್ಟಿದೆ.

ಶಿಕ್ಷಣ ಸಚಿವ ಮಧು ಬಂಗಾರಪ್ಪ ಘೋಷಣೆ

ಜೂ.1ರಂದು ಕೆಪಿಎಸ್ ಕಟ್ಟಡಗಳಿಗೆ ಶಂಕು

ಬೆಂಗಳೂರು: ರಾಜ್ಯದ ಸರ್ಕಾರಿ ಶಾಲೆಗಳ ಸಬಲೀಕರಣ ಮತ್ತು ಗುಣಮಟ್ಟದ ಶಿಕ್ಷಣದ ಗುರಿಯೊಂದಿಗೆ ಜೂ. 1ರಂದು ಶಿವಮೊಗ್ಗದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನೂತನ ಕರ್ನಾಟಕ ಪಬ್ಲಿಕ್ ಶಾಲೆಗಳ ಕಟ್ಟಡಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಘೋಷಿಸಿದ್ದಾರೆ.



ಸಮಗ್ರ ಶಿಕ್ಷಣ ಕರ್ನಾಟಕದ ಕಚೇರಿಯಿಂದ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಶಿಕ್ಷಕರು, ಪ್ರಾಂಶುಪಾಲರು, ಬಿಇಒ ಹಾಗೂ ಎಸ್.ಡಿ.ಎಂ.ಸಿ ಸದಸ್ಯರೊಂದಿಗೆ ಸೋಮವಾರ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಮಾತನಾಡಿದ ಅವರು, ಇಲಾಖೆಯ ಸಾಧನೆಗಳು ಮತ್ತು ಮುಂಬರುವ ಯೋಜನೆಗಳ ಕುರಿತು ಮಾಹಿತಿ ಹಂಚಿಕೊಂಡರು. ಮೇ 29, 30 ಮತ್ತು 31 ರಂದು ಶಾಲಾ ಆವರಣವನ್ನು ಸ್ವಚ್ಛಗೊಳಿಸಿ, ಜೂ.1ರಂದು ಶಾಲೆಗೆ ಬರುವ ಮಕ್ಕಳನ್ನು ತಳಿರು ತೋರಣ ಕಟ್ಟಿ, ಹಬ್ಬದ ವಾತಾವರಣದಲ್ಲಿ (ಮಕ್ಕಳ ಹಬ್ಬ) ಸ್ವಾಗತಿಸಬೇಕು. ಸಮುದಾಯದವರು, ಎಸ್.ಡಿ.ಎಂ.ಸಿ ಹಾಗೂ ಹಳೆಯ ವಿದ್ಯಾರ್ಥಿಗಳು ಕೈಜೋಡಿಸಿ ಮಕ್ಕಳಿಗಾಗಿ ವಿಶೇಷ ಊಟದ ವ್ಯವಸ್ಥೆ ಮಾಡುವ ಮೂಲಕ ಅವರಲ್ಲಿ ಶಾಲೆಗೆ ಬರುವ ಉತ್ಸಾಹವನ್ನು ಹೆಚ್ಚಿಸಬೇಕು ಎಂದು ಹೇಳಿದರು. ಖಾಸಗಿ ಶಾಲೆಗಳಿಗಿಂತ ಅತ್ಯುತ್ತಮ ಹಾಗೂ ನುರಿತ ಶಿಕ್ಷಕರು ಸರ್ಕಾರಿ ಶಾಲೆಗಳಲ್ಲಿದ್ದಾರೆ ಎಂಬುದನ್ನು ಪೋಷಕರಿಗೆ ಮನವರಿಕೆ ಮಾಡಿ, ದಾಖಲಾತಿ ಹೆಚ್ಚಿಸಬೇಕು. ಅಜೀಂ ಪ್ರೇಮ್‌ಜೀ ಫೌಂಡೇಶನ್ ನೆರವಿನೊಂದಿಗೆ ಪ್ರತಿದಿನ ಮೊಟ್ಟೆ ಅಥವಾ ಬಾಳೆಹಣ್ಣು ವಿತರಿಸಲಾಗುತ್ತಿದೆ ಎಂಬ ಮಾಹಿತಿಯನ್ನು ನೀಡಬೇಕು. ಶಾಲೆಗಳಲ್ಲಿ ವಿಶೇಷ ತರಗತಿಗಳನ್ನು ನಡೆಸಲು ಅನುಕೂಲವಾಗುವಂತೆ ಸರ್ಕಾರಿ ಶಾಲೆಗಳಿಗೆ ಉಚಿತ ವಿದ್ಯುತ್ ಸೌಲಭ್ಯವನ್ನು ಒದಗಿಸಲಾಗಿದೆ ಎಂದು ತಿಳಿಸಿದರು.

ದಾನಿಗಳಿಗೆ ಮುಕ್ತ ಆಹ್ವಾನ

ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ ಕೇವಲ ಸರ್ಕಾರದ ಅನುದಾನವನ್ನೇ ಕಾಯದೇ ಸಾರ್ವಜನಿಕರು ಕೈಜೋಡಿಸಬೇಕೆಂದು ಸಚಿವರು ಮನವಿ ಮಾಡಿದರು. ರಾಜ್ಯದಲ್ಲಿ 46 ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳಿವೆ. ಹಳೆಯ ವಿದ್ಯಾರ್ಥಿಗಳು, ಉದ್ಯಮಿಗಳು ಹಾಗೂ ದಾನಿಗಳು ನಮ್ಮ ಶಾಲೆ ನಮ್ಮ ಜವಾಬ್ದಾರಿ ಯೋಜನೆಯ ಅಡಿ ಆರ್ಥಿಕ ನೆರವು ನೀಡಬಹುದು. ದಾನಿಗಳು 500 ರೂ.ನಿಂದ ಹಿಡಿದು ಕೋಟ್ಯಂತರ ರೂ. ವರೆಗೂ ದೇಣಿಗೆ ನೀಡುತ್ತಿದ್ದಾರೆ. ಈ ಅನುದಾನವನ್ನು ಶಾಲೆಗಳಿಗೆ ಸ್ಮಾರ್ಟ್ ಟಿವಿ, ಆರ್.ಒ. ಪ್ಲಾಂಟ್, ಶೌಚಾಲಯ ನಿರ್ಮಾಣ, ಫ್ಯಾನ್ ಮತ್ತು ಲ್ಯಾಬ್ ಉಪಕರಣಗಳನ್ನು ಒದಗಿಸಲು ಬಳಸಿಕೊಳ್ಳಲಾಗುತ್ತಿದೆ ಎಂದು ಸಚಿವ ಮಧು ಬಂಗಾರಪ್ಪ ಹೇಳಿದರು.

ಭಟ್ಕಳದಲ್ಲಿ ನಾಳೆವರೆಗೂ ನಿಷೇಧಾಜ್ಞೆ

ಪುಟ ೧➔ **ಘಟನೆ ವಿವರ:** ಭಟ್ಕಳ ತಾಲೂಕಿನ ಜಾಲಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ 66 ಪಕ್ಕದಲ್ಲಿರುವ ಮೂರಿನಕಟ್ಟೆ ಹಿಂದು ಧಾರ್ಮಿಕ ಶ್ರದ್ಧಾ ಕೇಂದ್ರವಾಗಿ ಗುರುತಿಸಿಕೊಂಡಿದ್ದು, ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಕಾಮಗಾರಿಯ ನಿಮಿತ್ತ ಕಟ್ಟೆಯನ್ನು ಸ್ಥಳಾಂತರಗೊಳಿಸಿ ಸಮೀಪದಲ್ಲಿ ರಾಷ್ಟ್ರೀಯ ಹೆದ್ದಾರಿ ಇಲಾಖೆಯ ಜಾಗದಲ್ಲಿ ಮರುನಿರ್ಮಾಣ ಮಾಡಲಾಗಿತ್ತು.

ಇದಕ್ಕೆ ಮುಸ್ಲಿಂ ಸಂಘಟನೆ ಭಾರೀ ವಿರೋಧ ವ್ಯಕ್ತಪಡಿಸಿ ಕಟ್ಟೆಯನ್ನು ತೆರವು ಮಾಡಲು ಆಗ್ರಹಿಸಿದ್ದರು. ಭಾನುವಾರ ಏಕಾಏಕಿ ಜಮಾಯಿಸಿದ ಮುಸ್ಲಿಂ ಮುಖಂಡರು, ಮೂರಿನಕಟ್ಟೆಯನ್ನು ಒಡೆಯಲು ಮುಂದಾಗಿದ್ದಾರೆ. ಅಷ್ಟೆ ಅಲ್ಲ, ಕರ್ತವ್ಯದಲ್ಲಿದ್ದ ಪೊಲೀಸರ ಮೇಲೂ ಹಲ್ಲೆ ನಡೆಸಿದ್ದಾರೆ. ಇನ್ನು, ಪೊಲೀಸರ ಮೇಲೆ ಹಲ್ಲೆ ಮಾಡಿದ ಮುಸ್ಲಿಂ ಸಂಘಟನೆಯ ಪ್ರಮುಖರ ಮೇಲೆ ಲಾಠಿ ಚಾರ್ಜ್ ಮಾಡಿದ್ದಾರೆ.

ಈ ಘಟನೆಯಿಂದ ಭಟ್ಕಳದಲ್ಲಿ ಬಿಗುವಿನ ವಾತಾವರಣ ಸೃಷ್ಟಿಯಾಗಿದ್ದು ಭಾನುವಾರ ರಾತ್ರಿಯೇ ಹಿಂದುಗಳು ಧರಣಿ ನಡೆಸಿ ತಪ್ಪಿತಸ್ಥರನ್ನು ಬಂಧಿಸುವಂತೆ ಒತ್ತಾಯಿಸಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ. ಸ್ಥಳಕ್ಕೆ ಭೇಟಿ ನೀಡಿ ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದಾರೆ.

ಮೂಲ ಕಟ್ಟೆಗೆ ಹಾನಿಯಾಗಿಲ್ಲ

ಪುಟ ೧➔ **ಮೂಲಕಟ್ಟೆ ಸಂಪೂರ್ಣ ಸುರಕ್ಷಿತ:** ಉತ್ತರ ಕನ್ನಡ ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ ಸಹ ಪ್ರಕಟಣೆ ಹೊರಡಿಸಿ ಮೂಲಕಟ್ಟೆ ಸಂಪೂರ್ಣ ಸುರಕ್ಷಿತವಾಗಿದೆ ಎಂದು ತಿಳಿಸಲಾಗಿದೆ. ಕೆಂಪು ಕಲ್ಲಿನಿಂದ ಕಟ್ಟಲಾಗಿರುವ ಹೊಸ ಕಟ್ಟೆಯನ್ನು ಕಿಡಿಗೇಡಿಗಳು ಏಪ್ರಿಲ್ 24ರ ರಾತ್ರಿ ನಾಶಪಡಿಸಿರುವುದು ಕಂಡುಬಂದಿದ್ದು, ಘಟನೆಗೆ ಸಂಬಂಧಿಸಿದಂತೆ 6 ಜನರನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠ ದೀಪನ್ ಎಂ.ಎನ್. ತಿಳಿಸಿದ್ದಾರೆ.

15 ದಿನಗಳಲ್ಲಿ ಇಂಧನ ದರ 4ನೇ ಬಾರಿ ಹೆಚ್ಚಳ

ಪುಟ ೧➔ ಐಒಸಿ, ಬಿಪಿಸಿಎಲ್ ಮತ್ತು ಎಚ್‌ಪಿಸಿಎಲ್ ಸೇರಿದಂತೆ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ಗ್ರಾಹಕರನ್ನು ಹಣದುಬ್ಬರದಿಂದ ರಕ್ಷಿಸಲು ಕಳೆದ ಎರಡು ವರ್ಷಗಳಿಂದ ಇಂಧನ ದರವನ್ನು ಸ್ಥಿರವಾಗಿಟ್ಟಿದ್ದವು. ಆದರೆ ಮಧ್ಯಪ್ರಾಚ್ಯದ ಬಿಕ್ಕಟ್ಟಿನಿಂದ ಬೆಲೆ ಏರಿಸಲೇಬೇಕಾದ ಅನಿವಾರ್ಯತೆ ಎದುರಾಗಿದೆ.

ಅರಣ್ಯ ಭೂಮಿ ಒತ್ತುವರಿ ತೆರವುಗೊಳಿಸಿ

ಉಡುಪಿ: ರಾಜ್ಯ ಸರ್ಕಾರ ಅರಣ್ಯ ಭೂಮಿ ಒತ್ತುವರಿಯ ವಿಚಾರದಲ್ಲಿ ಶೂನ್ಯ ಸಹಿಷ್ಣತೆ ತಳೆದಿದ್ದು, ಹೊಸ ಒತ್ತುವರಿಗೆ ಅವಕಾಶ ನೀಡಬಾರದು ಮತ್ತು 2015ರ ನಂತರದ ಎಲ್ಲ ಒತ್ತುವರಿ ತೆರವು ಮಾಡಬೇಕು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಸೂಚನೆ ನೀಡಿದ್ದಾರೆ.

ಉಡುಪಿಯಲ್ಲಿ ಅರಣ್ಯ ಮತ್ತು ಪರಿಸರ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಸೂಚನೆ ನೀಡಿದ ಸಚಿವರು, 2015ಕ್ಕೆ ಮೊದಲು ರಾಜ್ಯದಲ್ಲಿ ಒಟ್ಟು 2 ಲಕ್ಷ ಎಕರೆ ಅರಣ್ಯ ಭೂಮಿ ಒತ್ತುವರಿ ಆಗಿರುವುದಾಗಿ ಪ್ರಮಾಣ ಪತ್ರ ಸಲ್ಲಿಸಲಾಗಿದೆ. ಇದರಲ್ಲಿ ಜೀವನೋಪಾಯಕ್ಕಾಗಿ ಒತ್ತುವರಿ ಮಾಡಿರುವ ಅಂದರೆ ಪಟ್ಟಾ ಭೂಮಿ ಸೇರಿ 3 ಎಕರೆಗಿಂತ ಕಡಿಮೆ ಒತ್ತುವರಿ ಮಾಡಿರುವ ಕುಟುಂಬಗಳಿಗೆ ಸರ್ಕಾರ ಪರ್ಯಾಯ ವ್ಯವಸ್ಥೆ ಮಾಡುವ ತನಕ ತೆರವು ಮಾಡದಂತೆ ನಿರ್ಣಯಿಸಿದೆ. 3 ಎಕರೆಗಿಂತ ಹೆಚ್ಚಿನ ಒತ್ತುವರಿಯನ್ನು ತೆರವು ಮಾಡಲು ಕ್ರಮ ಕೈಗೊಳ್ಳಿ ಎಂದು ತಿಳಿಸಿದರು. ಪ್ರಕೃತಿ ಪರಿಸರ ಉಳಿದರೆ ಮಾತ್ರ ಜಗತ್ತು ಉಳಿಯಲು ಸಾಧ್ಯವಿದೆ. ಪಶ್ಚಿಮಘಟ್ಟಗಳು ಮಳೆಯ ಮಾರುತಗಳನ್ನು ತಡೆದು ವ್ಯಾಪಕ ಮಳೆ ಸುರಿಸುತ್ತವೆ. ಇದು ಜೀವವೈವಿಧ್ಯದ 8ನೇ ನೆಚ್ಚಿನ ತಾಣವಾಗಿದ್ದು, ಹಲವು ಪ್ರಭೇದದ ಸಸ್ಯಸಂಕುಲ, ಕೀಟಸಂಕುಲ, ಜೀವಸಂಕುಲದ ತವರಾಗಿದೆ. ಇದನ್ನು ಸರ್ಕಾರ, ಅರಣ್ಯ ಇಲಾಖೆ ಮಾತ್ರ ರಕ್ಷಿಸಲು ಸಾಧ್ಯವಿಲ್ಲ, ಹೀಗಾಗಿ ಪ್ರತಿಯೊಬ್ಬರೂ ಪಶ್ಚಿಮ ಘಟ್ಟದ ಸಂರಕ್ಷಣೆಗೆ ಮುಂದಾಗಬೇಕು ಎಂದು ಸಚಿವ ಈಶ್ವರ ಬಿ. ಖಂಡ್ರೆ ಹೇಳಿದ್ದಾರೆ.ತಾವು ಸಚಿವರಾದ ತರುವಾಯ ಬೆಂಗಳೂರಿನಲ್ಲಿ 10 ಸಾವಿರ ಕೋಟಿ ರೂ. ಬೆಲೆಬಾಳುವ 250 ಎಕರೆ ಸೇರಿದಂತೆ ಒಟ್ಟು 12500 ಎಕರೆ ಅರಣ್ಯ ಒತ್ತುವರಿ ತೆರವು ಮಾಡಿಸಿರುವುದಾಗಿ ಹೇಳಿದ ಅವರು, 50 ಸಾವಿರ ಕೋಟಿ ಬೆಲೆ ಬಾಳುವ ಅರಣ್ಯ ಭೂಮಿಯ ಮರು ವಶಕ್ಕೆ ಕಾನೂನು ಹೋರಾಟ ಮಾಡುತ್ತಿರುವುದಾಗಿ ಹೇಳಿದರು.

ದಿಲ್ಲಿಗೆ ತೆರಳಿದ ಸಿಎಂ, ಡಿಸಿಎಂ

ಪುಟ ೧➔ ವರಿಷ್ಠರು ಸಿದ್ದರಾಮಯ್ಯ ಅವರ ಜತೆ ಮಾತ್ರ ಮಾತುಕತೆ ನಡೆಸಲಿದ್ದು, ಡಿ.ಕೆ. ಶಿವಕುಮಾರ್ ಅವರೊಂದಿಗೆ ಪ್ರತ್ಯೇಕ ಮಾತುಕತೆ ನಡೆಸುವ ಸಾಧ್ಯತೆ ಇದೆ. ಇದೇ ಸಂದರ್ಭದಲ್ಲಿ ರಾಜ್ಯದಿಂದ ಖಾಲಿಯಾಗಲಿರುವ ರಾಜ್ಯಸಭೆ ಸ್ಥಾನಗಳ ಭರ್ತಿ ಮತ್ತು ವಿಧಾನ ಪರಿಷತ್ ಸ್ಥಾನಗಳಿಗೆ ನೇಮಕ ಮಾಡುವ ಬಗ್ಗೆ ಸಭೆಯಲ್ಲಿ ಚರ್ಚೆಯಾಗಲಿದೆ ಎಂದು ಹೇಳಲಾಗುತ್ತಿದೆ.

ಮಂಗಳವಾರ 11 ಗಂಟೆಗೆ ಹೈಕಮಾಂಡ್ ಪ್ರಶ್ನೆಪತ್ರಿಕೆ ಕೊಡುತ್ತದೆ. ಆ ಬಳಿಕ ಪ್ರಶ್ನೆಗೆ ಉತ್ತರ ಟಿಕ್ ಮಾಡುತ್ತಾರೆ. ಮೊದಲೇ ಪ್ರಶ್ನೆಪತ್ರಿಕೆ ಲೀಕ್ ಮಾಡಲ್ಲ.
■ **ಸತೀಶ್ ಜಾರಕಿಹೊಳಿ, ಸಚಿವ**

ತುರ್ತು ಆರೋಗ್ಯ ಸೇವೆ ಇನ್ನಷ್ಟು ಕ್ಷಿಪ್ರ

ಪುಟ ೧➔ ಒಂದು ಕರೆ ನಮಗೆ, ತುರ್ತು ಸೇವೆ ನಿಮಗೆ ಎಂಬ ಘೋಷವಾಕ್ಯದ ಅಡಿಯಲ್ಲಿ ದೇಶದಲ್ಲೇ ಪ್ರಥಮವಾಗಿ ಕರ್ನಾಟಕ ಸರ್ಕಾರದ ಆರೋಗ್ಯ ಇಲಾಖೆ ಈ ಕಾರ್ಯ ಕೈಗೊಂಡಿದ್ದು, 24 ಗಂಟೆಯೂ ಮೂರು ಪಾಳಿಗಳಲ್ಲಿ 50 ಸಿಬ್ಬಂದಿ ಕಾರ್ಯನಿರ್ವಹಿಸಲಿದ್ದಾರೆ. 108 ಆರೋಗ್ಯ ಕವಚ, 104 ಆರೋಗ್ಯ ಸಹಾಯವಾಣಿ, 112 ಸಹಾಯವಾಣಿ, ಟೆಲಿ ಮನಸ್, ಇ-ಸಂಜೀವಿನಿ, ಮಹಿಳಾ ಸಹಾಯವಾಣಿ 181 ಹಾಗೂ ಮಕ್ಕಳ ಸಹಾಯವಾಣಿ 1098 ಸೇವೆಗಳನ್ನು ಒಂದೇ ವೇದಿಕೆಯಲ್ಲಿ ಸಂಯೋಜಿಸಲಾಗಿದೆ.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ಸಿಸಿಸಿ ಕೇಂದ್ರಕ್ಕೆ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಲು ಸಿಂಗಪುರದ ಆಂಬುಲೆನ್ಸ್ ವ್ಯವಸ್ಥೆ ಸೇರಿದಂತೆ ಹಲವು ಮಾದರಿಗಳನ್ನು ಅಧ್ಯಯನ ಮಾಡಲಾಗಿದೆ. ಚಾಮರಾಜನಗರದಲ್ಲಿ ಪ್ರಾಯೋಗಿಕವಾಗಿ ಜಾರಿ ಮಾಡಿದ ಈ ವ್ಯವಸ್ಥೆ ಯಶಸ್ವಿಯಾದ್ದರಿಂದ ರಾಜ್ಯವ್ಯಾಪಿ ವಿಸ್ತರಣೆ ಮಾಡಲಾಗಿದೆ ಎಂದರು. ಈಗಿನ ಸುಧಾರಿತ ವ್ಯವಸ್ಥೆಯಲ್ಲಿ ಆಂಬುಲೆನ್ಸ್ ಟ್ರ್ಯಾಕಿಂಗ್ ವ್ಯವಸ್ಥೆ ಇದೆ. ಆಂಬುಲೆನ್ಸ್‌ನಿಂದಲೇ ಎಂಡಿಟಿ ಸಾಧನದ ಮೂಲಕ ತುರ್ತು ಸಂದರ್ಭದಲ್ಲಿ ವೈದ್ಯರನ್ನು ಸಂಪರ್ಕಿಸಬಹುದು. ಆಸ್ಪತ್ರೆಗೂ ಸಂದೇಶ ನೀಡಿ ಸಕಲ ಸಿದ್ಧತೆ ಮಾಡಲು ಸಾಧ್ಯ. ಅಲ್ಲದೆ, ರಾಜ್ಯದ 715 ಆಂಬುಲೆನ್ಸ್‌ಗಳಿಗೆ ಜಿಪಿಎಸ್ ಅಳವಡಿಸಿರುವುದರಿಂದ ಅವುಗಳ ಚಲನವಲನಗಳನ್ನು ನಿಗಾ ವಹಿಸಬಹುದಾಗಿದೆ. ಕರೆ ಮಾಡಿದ ವ್ಯಕ್ತಿಗೆ ಆಂಬುಲೆನ್ಸ್ ಮಾಹಿತಿ, ತಲುಪುವ ಸಮಯ ಹಾಗೂ ಆಸ್ಪತ್ರೆಗೆ ಸಂಬಂಧಿಸಿದ ವಿವರಗಳನ್ನು ಮೊಬೈಲ್ ಸಂದೇಶದ ಮೂಲಕ ರವಾನಿಸಲಾಗುತ್ತದೆ ಎಂದು ಸಚಿವರು ತಿಳಿಸಿದರು.

ಶಾಸಕ ಸುರೇಶ್ ಕುಮಾರ್ ಅವರು ಸಿಸಿಸಿ ಕಾರ್ಯವೈಖರಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್, ಶಾಸಕ ಪ್ರಿಯಾ ಕೃಷ್ಣ, ಆರೋಗ್ಯ ಇಲಾಖೆ ಕಾರ್ಯದರ್ಶಿ ರಿತ್ವಿಕ್ ರಂಜನಂ ಪಾಂಡೆ, ಡಿಜಿಟಲ್ ಹೆಲ್ತ್ ಸೊಸೈಟಿ ನಿರ್ದೇಶಕ ವಿಪಿನ್ ಸಿಂಗ್ ಇತರರಿದ್ದರು.

ಗೋಲ್ಡನ್ ಅವರ್‌ನಲ್ಲಿ ಚಿಕಿತ್ಸೆಯಿಂದ ಬದುಕುವ ಸಾಧ್ಯತೆ ಹೆಚ್ಚು

ಪುಟ ೧➔ ಆಂಬುಲೆನ್ಸ್ ವ್ಯವಸ್ಥೆ ಖಾಸಗಿಯವರ ಕೈಯಲ್ಲಿದ್ದಾಗ, ಅವರ ಹೊಣೆಗಾರಿಕೆಯನ್ನು ಪ್ರಶ್ನಿಸುವಂತಿರಲಿಲ್ಲ. ಆದರೆ, ಪ್ರಸ್ತುತ ಈ ವ್ಯವಸ್ಥೆ ಸರ್ಕಾರದ ಅಧೀನದಲ್ಲಿರುವುದರಿಂದ ಈ ಸೇವೆಯ ಹೊಣೆಗಾರಿಕೆ ಹೆಚ್ಚಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅಸ್ಸಾಂನಲ್ಲಿ ಏಸಾಸಂ ಮಸೂದೆ ಮಂಡನೆ

ಪುಟ ೧➔ ವಿವಾಹಕ್ಕೆ ಕನಿಷ್ಠ ವಯಸ್ಸು ನಿಗದಿಪಡಿಸುವುದು, ಬಹುಪತ್ನಿತ್ವ ನಿಷೇಧಿಸುವುದು, ಪೋಷಕರ ಆಸ್ತಿಯಲ್ಲಿ ಪುತ್ರಿಯರಿಗೆ ಸಮಾನ ಹಕ್ಕು ನೀಡುವುದು ಮತ್ತು ಲಿವ್-ಇನ್ ಸಂಬಂಧಗಳನ್ನು ನಿಯಂತ್ರಿಸುವುದು. ಮಸೂದೆ ಪುರುಷರಿಗೆ 21 ವರ್ಷ ಮತ್ತು ಮಹಿಳೆಯರಿಗೆ 18 ವರ್ಷಗಳನ್ನು ಕನಿಷ್ಠ ವಿವಾಹದ ವಯಸ್ಸೆಂದು ನಿಗದಿಪಡಿಸಿದೆ. ಇದು ವಿವಾಹ, ವಿಚ್ಛೇದನ ಮತ್ತು ಉತ್ತರಾಧಿಕಾರಕ್ಕೆ ಸಂಬಂಧಿಸಿದ ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಸರಳಗೊಳಿಸಲಿದೆ.

ರಾಜಕೀಯ ವಿರೋಧ: ಈ ಪ್ರಸ್ತಾವಿತ ಕಾನೂನಿನ ವ್ಯಾಪ್ತಿಯಿಂದ ಪರಿಶಿಷ್ಟ ಪಂಗಡಗಳನ್ನು ಸಂಪೂರ್ಣವಾಗಿ ಹೊರಗಿಡಲಾಗಿದೆ. ಸಾಂಪ್ರದಾಯಿಕ ಧಾರ್ಮಿಕ ಪದ್ಧತಿಗಳು, ಆಚರಣೆಗಳು ಮತ್ತು ವಿಧಿವಿಧಾನಗಳಿಗೂ ಈ ಕಾಯ್ದೆಯಿಂದ ವಿನಾಯಿತಿ ನೀಡಲಾಗಿದೆ. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್, ರೈಜರ್ ದಳ ಮತ್ತು ತೃಣಮೂಲ ಕಾಂಗ್ರೆಸ್ ಸೇರಿದಂತೆ ಪ್ರಮುಖ ವಿರೋಧ ಪಕ್ಷಗಳು ಈ ಮಸೂದೆ ಮಂಡನೆಯನ್ನು ವಿರೋಧಿಸಿದ್ದು, ಈ ಬಗ್ಗೆ ವ್ಯಾಪಕ ಚರ್ಚೆ ನಡೆಸಬೇಕೆಂದು ಒತ್ತಾಯಿಸಿವೆ. ಮಂಗಳವಾರ ಈ ಮಸೂದೆಯ ಮೇಲಿನ ಚರ್ಚೆ ಮತ್ತು ಮತದಾನ ನಡೆಯಲಿದೆ.

ರಾಷ್ಟ್ರೀಯ ಹಿನ್ನೆಲೆ: ಇಂತಹ ಶಾಸನವನ್ನು ತರುತ್ತಿರುವ ಬಿಜೆಪಿ ಆಡಳಿತದ ಮೂರನೇ ರಾಜ್ಯ ಅಸ್ಸಾಂ ಆಗಿದೆ. ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ನೇತೃತ್ವದಲ್ಲಿ ಉತ್ತರಾಖಂಡ ರಾಜ್ಯ, 2024ರಲ್ಲಿ ದೇಶದಲ್ಲೇ ಮೊದಲ ಬಾರಿಗೆ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತಂದಿತ್ತು. ಈ ಶಾಸನಾತ್ಮಕ ಕ್ರಮಗಳು ಭಾರತದ ಸಂವಿಧಾನದಲ್ಲಿನ ರಾಜ್ಯ ನಿರ್ದೇಶಕ ತತ್ವಗಳಿಗೆ ಅನುಗುಣವಾಗಿವೆ.

ಪಿತೂರಿಗೆ ಭಾರತ ಜಗ್ಗಲ್ಲ

ಪುಟ ೧➔ ಈ ಹಿನ್ನೆಲೆಯಲ್ಲೇ ತಾಳ್ಮೆ ವಹಿಸುವಂತೆ ಪ್ರಧಾನಿ ಮೋದಿ ಅವರು ದೇಶವಾಸಿಗಳನ್ನು ಕೋರಿದ್ದರು. ಆದರೆ ಕೆಲವು ಜೊಳ್ಳು ಟೀಕಾಕಾರರು ಎಲ್ಲವೂ ಕುಸಿಯತೊಡಗಿದೆ ಎಂದು ಸುಳ್ಳು ಪ್ರಚಾರದಲ್ಲಿ ನಿರತರಾಗಿರುವುದು ತೀರಾ ಸರಿಯಲ್ಲ ಎಂದು ಸಚಿವೆ ನಿರ್ಮಲಾ ಹೇಳಿದರು. ಭೀತಿ ಹುಟ್ಟಿಸುವುದು ಭಾರತದ ಜಾಯಮಾನವಲ್ಲ. ನಮ್ಮ ಮಾತು ಮತ್ತು ಕೃತಿ ಮುಖೇನ ಜನರಲ್ಲಿ ವಿಶ್ವಾಸ ಮೂಡಿಸಬೇಕು. ಎಂಎಸ್‌ಎಂಇಗಳಿಗೆ 8.1ಲಕ್ಷ ಕೋಟಿ ಪಾವತಿ ವಿಳಂಬದಿಂದಾಗಿ ಅವುಗಳ ದುಡಿಯುವ ಬಂಡವಾಳ ಮತ್ತು ಬೆಳವಣಿಗೆಗೆ ತೊಡಕಾಗಿದೆ. ಎಂಎಸ್‌ಎಂಇಗಳಿಗೆ 45ದಿನಗಳೊಳಗೆ ಪಾವತಿಗಳ ವಿಲೇವಾರಿ ಮಾಡುವಂತೆ ಸಾರ್ವಜನಿಕ ರಂಗದ ಸಂಸ್ಥೆಗಳನ್ನು ಸಚಿವರು ಒತ್ತಾಯಿಸಿದರು.

ಮೇಕೆದಾಟುಗೆ ಸುಪ್ರೀಂ ಬಲ

ಪುಟ ೧➔ **ಬೆಂಗಳೂರಿಗೆ ಜೀವನಾಡಿ:** ಮೇಕೆದಾಟು ಯೋಜನೆ ಬೆಂಗಳೂರು ಮಹಾನಗರ ಪ್ರದೇಶದ ಕುಡಿಯುವ ನೀರಿನ ಭವಿಷ್ಯದ ಅಗತ್ಯ ಪೂರೈಸುವ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ ಎಂದು ಕರ್ನಾಟಕ ಸರ್ಕಾರ ವಾದಿಸಿದೆ. ಜತೆಗೆ ಸಾಮಾನ್ಯ ವರ್ಷಗಳಲ್ಲಿ ಬಿಳಿಗುಂಡ್ಲುವಿನಲ್ಲಿ ತಮಿಳುನಾಡಿಗೆ ನಿಗದಿತ ಪ್ರಮಾಣದ ನೀರು ಬಿಡುಗಡೆ ನಿಯಂತ್ರಣಕ್ಕೂ ಇದು ಸಹಕಾರಿ ಎಂದು ತಿಳಿಸಿದೆ. ಬೆಂಗಳೂರು ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಕುಡಿಯುವ ನೀರಿನ ಅವಶ್ಯಕತೆಗೆ 4.75 ಟಿಎಂಸಿ ನೀರಿನ ಬಳಕೆಗೆ ಸುಪ್ರೀಂ ಕೋರ್ಟ್ ಈಗಾಗಲೇ ಅವಕಾಶ ನೀಡಿರುವುದನ್ನೂ ಕರ್ನಾಟಕ ಉಲ್ಲೇಖಿಸಿದೆ.

ಈಗ ವಿಜಯ್ ಸರ್ಕಾರದಿಂದಲೂ ಕ್ಯಾತೆ

ಪುಟ ೧➔ ಈ ಮೂಲಕ ಡಿಎಂಕೆ ಮತ್ತು ಎಐಎಡಿಎಂಕೆಯ ಕಾವೇರಿ ಕ್ಯಾತೆ ವಿಚಾರವನ್ನು ಇವರೂ ಮುಂದುವರಿಸಿದ್ದಾರೆ. ರಾಜ್ಯದಲ್ಲಿ ಮೇಕೆದಾಟು ಯೋಜನೆ ಆರಂಭಕ್ಕೆ ಭೂಮಿಪೂಜೆ ಮಾಡಲು ತಯಾರಿ ನಡೆಸಲಾಗುತ್ತಿದೆ ಎಂಬ ಸುದ್ದಿಗಳ ನಡುವೆ ವಿಜಯ್ ಈ ಸೂಚನೆ ನೀಡಿದ್ದಾರೆ. ತಮಿಳುನಾಡು ರೈತರ ಹಿತಕ್ಕಾಗಿ ನಾವು ಪರಿಶೀಲನಾ ಸಭೆ ನಡೆಸಿದ್ದೇವೆ ಎಂದು ತಮಿಳುನಾಡು ಸರ್ಕಾರವೂ ಹೇಳಿದೆ.

ಕನ್ನಡ ಶಾಲೆ ಮುಚ್ಚಬೇಡಿ: ಬಸವರಾಜ ಹೊರಟ್ಟಿ

ಹಾವೇರಿ: ಪ್ರತಿ ಹಳ್ಳಿಗಳಲ್ಲಿ ಕನಿಷ್ಠ 5ನೇ ತರಗತಿಯವರೆಗಾದರೂ ಸರ್ಕಾರಿ ಕನ್ನಡ ಶಾಲೆಗಳು ಇರುವಂತೆ ಸರ್ಕಾರ ನೋಡಿಕೊಳ್ಳಬೇಕು. ಸರ್ಕಾರಿ ಶಾಲೆ ಮುಚ್ಚಿದರೆ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವದಂತಹ ರಾಷ್ಟ್ರೀಯ ದಿನಾಚರಣೆಗಳನ್ನು ಮಾಡೋರ್‍ಯಾರು? ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಪ್ರಶ್ನಿಸಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಲ್ಲೆಡೆ ಈಗ ಕೆಪಿಎಸ್ ಶಾಲೆ ಮಾಡಲು ಸರ್ಕಾರ ಮುಂದಾಗಿದೆ. ಹೀಗಾದರೆ ಹಳ್ಳಿಗಳಲ್ಲಿರುವ ಸರ್ಕಾರಿ ಕನ್ನಡ ಶಾಲೆಗಳು ಮುಚ್ಚುವ ಸ್ಥಿತಿಗೆ ಬರುತ್ತೆ. ಹಿಂದೆ ಶಾಸಕರ ಮಾದರಿ ಶಾಲೆ ಮಾಡಿದ್ದರು ಈಗ ಅವುಗಳ ಪರಿಸ್ಥಿತಿ ಹೇಗಿದೆ ಎಂಬುದನ್ನು ಅವಲೋಕನ ಮಾಡಬೇಕು ಎಂದರು.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಸರಿಯಾಗಿ ಪರಿಶೀಲನೆ ಮಾಡಿದರೆ ಶೇ.55ರಷ್ಟೂ ಫಲಿತಾಂಶ ಬರೋದಿಲ್ಲ, ಶೇ.35ರಷ್ಟು ಅಂಕ ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳಿಂದ ಏನು ನಿರೀಕ್ಷೆ ಮಾಡಲು ಸಾಧ್ಯವಿದೆ ಅಸಮಾಧಾನ ವ್ಯಕ್ತಪಡಿಸಿದರು.

ತ್ರಿಭಾಷಾ ಸೂತ್ರ ಅನುಷ್ಠಾನವಾಗಲಿ: ಯಾವುದೇ ಕಾರಣಕ್ಕೂ ಕನ್ನಡ ಶಾಲೆಗಳನ್ನು ಮುಚ್ಚಬಾರದು. ಜೊತೆಗೆ ಮಕ್ಕಳು ಹೆಚ್ಚು ಭಾಷೆ ಕಲಿಯಬೇಕು. ತ್ರಿಭಾಷಾ ಸೂತ್ರವನ್ನೇ ಸರಿಯಾಗಿ ಅನುಷ್ಠಾನ ಮಾಡಬೇಕು.

ಹಿಂದಿ ಭಾಷೆ ಕಲಿಯದಿದ್ದರೆ ಬೇರೆ ರಾಜ್ಯಕ್ಕೆ ಹೋದಾಗ ಸಮಸ್ಯೆ ಆಗಲಿದೆ. ಪ್ರತಿ ತರಗತಿಗೆ ಒಬ್ಬರು ಶಿಕ್ಷಕರು ಇರುವಂತೆ ನೋಡಿಕೊಳ್ಳಬೇಕು ಎಂದು ಸರ್ಕಾರವನ್ನು ಬಸವರಾಜ ಹೊರಟ್ಟಿ ಒತ್ತಾಯಿಸಿದರು.

ಪದ್ಮಶ್ರೀ ಪ್ರಶಸ್ತಿ...



ಹೊಸದಿಲ್ಲಿಯ ರಾಷ್ಟ್ರಪತಿ ಭವನದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಡಾ.ಎಸ್.ಜಿ.ಸುಶೀಲಮ್ಮ ಮತ್ತು ಅಂಕೇಗೌಡ ಎಂ. ಅವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ಪ್ರದಾನ ಮಾಡಿದರು.

ನಾನು ಕೂಡ ರಾಜ್ಯಸಭೆ ಆಕಾಂಕ್ಷಿ: ಸದಾನಂದಗೌಡ

ಮೈಸೂರು: ರಾಜ್ಯಸಭೆಗೆ ಹೋಗಲು ನಾನು ಕೂಡ ಆಕಾಂಕ್ಷಿಯಾಗಿದ್ದೇನೆ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ ಹೇಳಿದರು.

ಸೋಮವಾರ ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ಮತ್ತು ಜೆಡಿಎಸ್ ಒಂದೇ ಮೈತ್ರಿಕೂಟದಲ್ಲಿ ಇದ್ದೇವೆ. ನಮಗೆ 63 ಮತ್ತು ಜೆಡಿಎಸ್‌ಗೆ 17 ಸ್ಥಾನವಿದ್ದರೂ, ನನ್ನನ್ನು ರಾಜ್ಯಸಭೆಗೆ ಕಳುಹಿಸುವ ವಿಚಾರವನ್ನು ರಾಷ್ಟ್ರೀಯ ನಾಯಕರು ನೋಡಿಕೊಳ್ಳುತ್ತಾರೆ. ನಾನು, ರಾಜ್ಯಸಭೆಗೆ ಆಯ್ಕೆಯಾಗಲು ಆಕಾಂಕ್ಷಿಯಾಗಿದ್ದೇನೆ. ಚುನಾವಣಾ ರಾಜಕಾರಣದಲ್ಲಿ ಇರುವುದಿಲ್ಲ ಎಂದು ಲೋಕಸಭಾ ಚುನಾವಣೆಯ ವೇಳೆಯೇ ಹೇಳಿದ್ದೇನೆ. ಪಕ್ಷ ಕೊಡುವ ಯಾವುದೇ ಜವಾಬ್ದಾರಿಯನ್ನು ನಿಭಾಯಿಸಲು ಸಿದ್ಧನಿದ್ದೇನೆ ಎಂದರು. ನಮ್ಮಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ಪ್ರಸ್ತಾಪ ಇಲ್ಲ. ಹಾಲಿ ಅಧ್ಯಕ್ಷರು ಎರಡು ವರ್ಷ ಅಧಿಕಾರ ಮುಗಿಸಿದ್ದು, ಇನ್ನೊಂದು ವರ್ಷದಲ್ಲಿ ಅವರ ಅವಧಿಯೇ ಮುಗಿಯುತ್ತದೆ ಎಂದರು.



ಎಲ್ಲಾ ಕಡೆ ಬಿಜೆಪಿ ಜಯಭೇರಿ ಭಾರಿಸುತ್ತಿದ್ದು, ರಾಜ್ಯದಲ್ಲಿ ಹಿಂದೆ ಜನಸೇವೆ ಮಾಡಿದ ಬಿಜೆಪಿಯನ್ನು ಹೇಗೆ ಮತ್ತೆ ಅಧಿಕಾರಕ್ಕೆ ತರಬೇಕು ಎನ್ನುವ ಮೂಲ ವಿಚಾರ ತಿಳಿಸುವ ಕೆಲಸವಾಗುತ್ತಿದೆ ಎಂದರು. ಕಾಂಗ್ರೆಸ್ ಎಸ್‌ಐಆರ್‌ಗೆ ವಿರೋಧ ವ್ಯಕ್ತಪಡಿಸುತ್ತಿರುವುದಕ್ಕೆ ಪ್ರತಿಕ್ರಿಯಿಸಿ, 'ಕಾಂಗ್ರೆಸ್ ರಾಜ್ಯದ ಜನ ತನಗೆ ಕೊಟ್ಟ ಜವಾಬ್ದಾರಿ ನಿರ್ವಹಿಸಲಾಗದ ಕಾರಣ ಜನ ಮುಗಿ ಬಿದ್ದಾಗ ಅವರ ದಿಕ್ಕು ತಪ್ಪಿಸಲು ಎಸ್‌ಐಆರ್ ಬಗ್ಗೆ ಸುಳ್ಳು ಹರಡುವ ಕೆಲಸ ಮಾಡುತ್ತಿದೆ. ಕಾಂಗ್ರೆಸ್ ಸರ್ಕಾರದ ಹಿಂದು ವಿರೋಧಿ ಧೋರಣೆಯಿಂದ ಜನ ರೋಸಿ ಹೋಗಿದ್ದಾರೆ ಎಂದರು.

ಕಿರುಸುದ್ದಿ

ನಾವೀನ್ಯತೆ, ಕೌಶಲಾಭಿವೃದ್ಧಿ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲು



ಬೆಂಗಳೂರು: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ನಾಯಕತ್ವದಲ್ಲಿ, ಭಾರತವು ಸೆಮಿಕಂಡಕ್ಟರ್ ಕ್ಷೇತ್ರ, ಸ್ಟಾರ್ಟ್‌ಅಪ್‌ಗಳು, ಡಿಜಿಟಲ್ ನಾವೀನ್ಯತೆ ಮತ್ತು ಕೌಶಲಾಭಿವೃದ್ಧಿ ಕ್ಷೇತ್ರಗಳಲ್ಲಿ ಹೊಸ ಮೈಲಿಗಲ್ಲುಗಳನ್ನು ತಲುಪುತ್ತಿದೆ. ಈ ಮೂಲಕ ನಮ್ಮ ಯುವಜನತೆಗೆ ಹಿಂದೆಂದೂ ಕಾಣದಂತಹ ಅವಕಾಶಗಳು ಸೃಷ್ಟಿಯಾಗಿವೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ತಿಳಿಸಿದ್ದಾರೆ. ಸೋಮವಾರ ಯೂತ್ ಫಾರ್ ನೇಷನ್ ಆಯೋಜಿಸಿದ್ದ ಯುವ ಮನಸ್ಸುಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿದ್ದರು. ವಿಕಸಿತ ಭಾರತದ ಸಂಕಲ್ಪವನ್ನು ಸಾಕಾರಗೊಳಿಸುವಲ್ಲಿ ಯುವಜನತೆಯ ಪಾತ್ರ ಮತ್ತು ಯುವ ನಾಯಕತ್ವದ ಪ್ರಾಮುಖ್ಯತೆಯ ಕುರಿತು ಅವರೊಂದಿಗೆ ಅರ್ಥಪೂರ್ಣ ಚರ್ಚೆಗಳನ್ನು ನಡೆಸಿದರು. ಕರ್ನಾಟಕದ ಕಾಂಗ್ರೆಸ್ ಸರ್ಕಾರವು ಯುವಜನರ ಆಕಾಂಕ್ಷೆಗಳಿಗೆ ದ್ರೋಹ ಬಗೆದಿದೆ. ಕಾಂಗ್ರೆಸ್ ಆಡಳಿತದಲ್ಲಿ ಮಿತಿಮೀರಿದ ಭ್ರಷ್ಟಾಚಾರ ಮತ್ತು ದುರಾಡಳಿತವು, ಭಾರತದ ಯುವಜನತೆಯ ಭವಿಷ್ಯ ಮತ್ತು ಸಾಮರ್ಥ್ಯದ ಬಗ್ಗೆ ಕಾಂಗ್ರೆಸ್ ಪಕ್ಷಕ್ಕಿರುವ ಸಂಪೂರ್ಣ ದೂರದೃಷ್ಟಿಯ ಕೊರತೆಯನ್ನು ಬಟಾಬಯಲು ಮಾಡಿದೆ ಎಂದು ಅವರು ಹೇಳಿದರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಯುವ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ತೇಜಸ್ವಿ ಸೂರ್ಯ ಪ್ರಮುಖರು ಭಾಗವಹಿಸಿದ್ದರು.

ಸಿಇಟಿ ಸೀಟು ಹಂಚಿಕೆ ಮಂಥನಗೆ ಉತ್ತಮ ಪ್ರತಿಕ್ರಿಯೆ

ಬೆಂಗಳೂರು: ಕೌನ್ಸೆಲಿಂಗ್ ಪ್ರಕ್ರಿಯೆ ಕುರಿತು ಮಾಹಿತಿ ನೀಡುವ ಸಲುವಾಗಿ ರಾಜ್ಯದ 64 ಕಾಲೇಜುಗಳಲ್ಲಿ ಸೋಮವಾರದಿಂದ ಆರಂಭವಾದ ಸಿಇಟಿ ಸೀಟು ಹಂಚಿಕೆ ಮಂಥನಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ. ಮೊದಲ ದಿನವೇ ಹತ್ತು ಸಾವಿರಕ್ಕೂ ಹೆಚ್ಚು ಮಂದಿ ತಮ್ಮ ಪೋಷಕರೊಂದಿಗೆ ಹೋಗಿ ಮಂಥನದಲ್ಲಿ ಭಾಗವಹಿಸಿ ತಮ್ಮ ಅನುಮಾನಗಳನ್ನು ದೂರ ಮಾಡಿಕೊಂಡರು ಎಂದು ವಿವರಿಸಿದ್ದಾರೆ. ಕೆಇಎ ವೆಬ್‌ಸೈಟ್‌ನಲ್ಲಿ ಸ್ಲಾಟ್ ಬುಕ್ ಮಾಡಿಕೊಂಡು, ನಂತರ ತಮಗೆ ಸನಿಹ ಇರುವ ಕಾಲೇಜುಗಳಿಗೆ ಹೋಗಲು ಸೂಚಿಸಲಾಗಿತ್ತು. ಸುಮಾರು 13 ಸಾವಿರ ಮಂದಿ ಮೊದಲ ದಿನದ ಮಂಥನದಲ್ಲಿ ಭಾಗವಹಿಸಲು ನೋಂದಣಿ ಮಾಡಿಕೊಂಡಿದ್ದರು ಎಂದು ಪ್ರಸನ್ನ ವಿವರಿಸಿದ್ದಾರೆ. ಮೇ 28ರಂದು ಹೊರತುಪಡಿಸಿ, ಮೇ 30ರವರೆಗೆ ಎಲ್ಲ ದಿನ ಎರಡು ಸೆಷನ್ ಮಂಥನ ಕಾರ್ಯಾಗಾರ ನಡೆಯಲಿದೆ. ಅಭ್ಯರ್ಥಿಗಳು ತಮ್ಮ ಪೋಷಕರ ಜೊತೆ ಹೋಗಿ ಕೌನ್ಸೆಲಿಂಗ್ ಪ್ರಕ್ರಿಯೆ ಕುರಿತು ಮಾಹಿತಿ ಪಡೆಯಬಹುದು ಎಂದು ತಿಳಿಸಿದ್ದಾರೆ. ರಾಜ್ಯದ ಸರ್ಕಾರಿ ಇಂಜಿನಿಯರಿಂಗ್, ಬಿಎಂಎಸ್ ಇಂಜಿನಿಯರಿಂಗ್ ಕಾಲೇಜು, ಶಿವಮೊಗ್ಗದ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜು ಸೇರಿದಂತೆ ಇತರೆ 64 ಕಾಲೇಜುಗಳಲ್ಲಿ ಮಂಥನ ಕಾರ್ಯಾಗಾರ ನಡೆಯಿತು. ಬೆಳಗ್ಗೆ 10 ರಿಂದ 12 ಗಂಟೆವರೆಗೆ ಒಂದು ಹಾಗೂ ಮಧ್ಯಾಹ್ನ 2 ರಿಂದ ಸಂಜೆ 4 ಗಂಟೆಯವರೆಗೆ ಮತ್ತೊಂದು ಸೆಷನ್ ನಡೆಯಿತು.

ಗ್ರಾಹಕರು, ರೈತರಿಗೆ ತೈಲ ದರ ಏರಿಕೆ ಬಿಸಿ: ಸಿಎಂ ವಾಗ್ದಾಳಿ

ಜನಸಾಮಾನ್ಯರ ಲೂಟಿ

ಬೆಂಗಳೂರು: ಪ್ರಸ್ತುತ ಕಚ್ಚಾ ತೈಲದ ಬೆಲೆ 100 ಡಾಲರ್ ಮಿತಿಯೊಳಗಿದ್ದರೂ ಕೇಂದ್ರ ಸರ್ಕಾರ ಪೆಟ್ರೋಲ್-ಡೀಸೆಲ್ ಬೆಲೆಯನ್ನು ಸತತ ನಾಲ್ಕು ಬಾರಿ ಏರಿಕೆ ಮಾಡಿದೆ. ಇದರಿಂದಾಗಿ ಗ್ರಾಹಕರಿಗೆ, ರೈತರಿಗೆ, ಜನಸಾಮಾನ್ಯರಿಗೆ ಈ ಬೆಲೆ ಏರಿಕೆಯ ಬಿಸಿ ತಟ್ಟಲಿದೆ. ಕೇಂದ್ರ ಸರ್ಕಾರ ದೇಶವನ್ನು ಹಾಗೂ ಜನಸಾಮಾನ್ಯರನ್ನು ಲೂಟಿ ಮಾಡುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಮತ್ತೆ ಪೆಟ್ರೋಲ್-ಡೀಸೆಲ್ ದರ ಏರಿಕೆಯಾಗಿರುವುದನ್ನು ಖಂಡಿಸಿ ಕೆಪಿಸಿಸಿ ಕಚೇರಿಯಲ್ಲಿ ನಡೆದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್ ಮತ್ತು ಗ್ಯಾಸ್ ದರ ಏರಿಸಿದ್ದು, ದೇಶದ ಇತಿಹಾಸದಲ್ಲಿ ಹೀಗೆ ಏರಿಕೆಯಾಗಿದ್ದಲ್ಲಿ ಜನಸಾಮಾನ್ಯರು, ಮಧ್ಯಮ ವರ್ಗದ ಜನರ ಜೀವನ ದುಸ್ತರವಾಗಲಿದೆ. ಬೆಲೆಯೇರಿಕೆಯಿಂದ ಜನ ತತ್ತರಿಸಿದ್ದಾರೆ ಎಂದರು.

ಬಿಜೆಪಿ ಅಧಿಕಾರಕ್ಕೆ ಬಂದರೆ ಗುಜರಾತ್ ಮಾದರಿ ಸರ್ಕಾರ ಬರುತ್ತದೆ, ಒಳ್ಳೆಯ ದಿನಗಳು ಬರುತ್ತವೆ ಎಂದು ಹೇಳಿ ಜನರಿಗೆ ಟೋಪಿ ಹಾಕಿದ್ದಾರೆ. ಕಳೆದ 11 ದಿನಗಳಿಂದ 4 ಬಾರಿ ಪೆಟ್ರೋಲ್, ಡೀಸೆಲ್ ಹಾಗೂ ಗ್ಯಾಸ್ ದರ ಏರಿಕೆಯಾಗಿದೆ. ಬೆಂಗಳೂರಿನಲ್ಲಿ ಪೆಟ್ರೋಲ್ ಬೆಲೆ 110.93 ರೂ. ಮತ್ತು ಡೀಸೆಲ್ ದರ 98.89 ರೂ.ಗಳಾಗಿವೆ. 7.52 ರೂ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯಾಗಿದೆ ಎಂದು ತಿಳಿಸಿದರು. ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ 2014ರ ಮೇ ತಿಂಗಳಲ್ಲಿ 71.41 ರೂ. ಪೆಟ್ರೋಲ್, ಡೀಸೆಲ್ 56.71 ರೂ. ಇತ್ತು. ಅಂದು 412 ರೂ. ಆಗಿದ್ದ ಗ್ಯಾಸ್ ಸಿಲಿಂಡರ್ ಬೆಲೆ ಇಂದು 915 ರೂ. ಆಗಿದೆ. ಇದು ದುಪ್ಪಟ್ಟಿಗಿಂತ ಹೆಚ್ಚಾಗಿದೆ. ಮನಮೋಹನ್ ಸಿಂಗ್ ಅವರ ಅವಧಿಯಲ್ಲಿ ಕಚ್ಚಾ ತೈಲದ ಬೆಲೆ ಹೋಲಿಸಿದರೆ ಪ್ರಸ್ತುತ ಬೆಲೆ ಇಳಿದಿದ್ದರೂ ಪೆಟ್ರೋಲ್-ಡೀಸೆಲ್ ಬೆಲೆ ಹೆಚ್ಚುತ್ತಿದೆ. 65 ರಿಂದ 75 ಡಾಲರ್ ಬೆಲೆ ಇದ್ದಾಗ, ಈ ಕಡಿಮೆ ಬೆಲೆಯ ಲಾಭ, ಗ್ರಾಹಕರಿಗೆ ದೊರೆಯಲಿಲ್ಲ ಎಂದರು.



ಏರಿಕೆ ಎಲ್ಲರ ಬದುಕಿಗೆ ಶಾಪ: ಡಿ.ಕೆ. ಶಿವಕುಮಾರ್

ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆ ಕಡಿಮೆ ಇದ್ದರೂ ಇಷ್ಟು ದೊಡ್ಡ ಪ್ರಮಾಣದಲ್ಲಿ ಬೆಲೆ ಏರಿಕೆ ಮಾಡಲಾಗಿದೆ. ಇಂಧನ ಮೇಲಿನ ತೆರಿಗೆ ಮೂಲಕ ಕೇಂದ್ರ ಸರ್ಕಾರ ನಿತ್ಯ 1 ಸಾವಿರ ಕೋಟಿ ಸಂಗ್ರಹಿಸುತ್ತಿದೆ. ಈ ತೆರಿಗೆ ಬಿಟ್ಟು ಜನಸಾಮಾನ್ಯರ ಮೇಲಿನ ಆರ್ಥಿಕ ಹೊರೆ ಕಡಿಮೆ ಮಾಡಬಹುದಾಗಿತ್ತು. ಬೇರೆ ಯಾವುದೇ ದೇಶದಲ್ಲಿ ಈ ರೀತಿ ಬೆಲೆ ಏರಿಕೆಯಾಗಿಲ್ಲ. ಈ ಬೆಲೆ ಏರಿಕೆ ಎಲ್ಲರ ಬದುಕಿಗೆ ಶಾಪವಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹೇಳಿದರು.

ಮೇ 30ಕ್ಕೆ ಪ್ರತಿಭಟನೆ

ಬೆಲೆ ಏರಿಕೆ ಖಂಡಿಸಿ ಇದೇ ತಿಂಗಳು 30 ರಂದು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ ನಡೆಸಲಾಗುವುದು. ಮುಂದಿನ ಹೋರಾಟದ ರೂಪುರೇಷೆ ಪ್ರಕಟಿಸುತ್ತೇವೆ. ನಂತರ ಪ್ರತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹೋರಾಟ ಮಾಡುವಂತೆ ಸೂಚಿಸಲಾಗುವುದು ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಅಗತ್ಯ ವಸ್ತುಗಳ ಬೆಲೆಗಳ ಮೇಲೆ ತೀವ್ರ ಪರಿಣಾಮ: ಸುರ್ಜೇವಾಲ

ಕಳೆದ 12 ವರ್ಷಗಳಲ್ಲಿ ಕೇಂದ್ರ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ತೆರಿಗೆ ವಿಧಿಸುವ ಮೂಲಕ 43 ಲಕ್ಷ ಕೋಟಿ ರೂ. ಸಂಗ್ರಹಿಸಿದೆ. ಈ ಜನರ ಲೂಟಿ ಕೇವಲ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳಿಗೆ ಮಾತ್ರ ಸೀಮಿತವಾಗಿಲ್ಲ. ಸಿಲಿಂಡರ್ ಮತ್ತು ಸಿಎನ್‌ಜಿ ಬೆಲೆಗಳ ಬಾರಿ ಏರಿಕೆಯಾಗಿವೆ. ಇದು ದೈನಂದಿನ ಬಳಕೆಯ ಅಗತ್ಯ ವಸ್ತುಗಳ ಬೆಲೆಗಳ ಮೇಲೂ ಪರಿಣಾಮ ಬೀರಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ತಿಳಿಸಿದ್ದಾರೆ.

ದರ ಏರಿಕೆಯಿಂದ ಸರ್ಕಾರಕ್ಕೆ ಆದಾಯ: ಅಶೋಕ

ವ್ಯಾಟ್ ಕಡಿಮೆ ಮಾಡಿ

ಬೆಂಗಳೂರು: ಪೆಟ್ರೋಲ್ ದರ ಏರಿಕೆಯಿಂದ ವಾರ್ಷಿಕ 6,000 ಕೋಟಿ ರೂ. ಹೆಚ್ಚುವರಿ ಆದಾಯ ಗಳಿಸುತ್ತಿರುವ ಕಾಂಗ್ರೆಸ್ ಸರ್ಕಾರವು ವ್ಯಾಟ್ ಕಡಿಮೆ ಮಾಡದೆ ಕೇಂದ್ರ ಸರ್ಕಾರದ ಮೇಲೆ ಆರೋಪ ಮಾಡುತ್ತಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.



ವಿಧಾನಸೌಧದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿದ ಅವರು, ಪೆಟ್ರೋಲ್ ದರ ಏರಿಕೆ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜಕಾರಣ ಮಾಡುತ್ತಿದ್ದಾರೆ. ಯುದ್ಧದಿಂದಾಗಿ ಪೆಟ್ರೋಲ್ ಬಳಕೆ ಕಡಿಮೆ ಮಾಡಲು ಬೇರೆ ದೇಶಗಳು ನಿರ್ಬಂಧ ಹಾಕಿದ್ದರೂ ಪ್ರಧಾನಿ ನರೇಂದ್ರ ಮೋದಿ ಅಂತಹ ನಿರ್ಬಂಧ ಹಾಕಿಲ್ಲ. ಕರ್ನಾಟಕದಲ್ಲಿ ಪೆಟ್ರೋಲ್ ದರ ಲೀಟರ್‌ಗೆ 107.70 ರೂ. ಇದ್ದರೆ, ದಿಲ್ಲಿಯಲ್ಲಿ 99.50 ರೂ., ಗುಜರಾತ್‌ನಲ್ಲಿ 99.10 ರೂ., ಉತ್ತರ ಪ್ರದೇಶದಲ್ಲಿ 99.50 ರೂ., ಹರ್ಯಾಣದಲ್ಲಿ 99.70 ರೂ. ದರವಿದೆ. ಅಂದರೆ ರಾಜ್ಯದಲ್ಲಿ ಮಾತ್ರ ದರ ಹೆಚ್ಚಿದೆ ಎಂದರು.

ಕಾಂಗ್ರೆಸ್ ಸರ್ಕಾರ ಪೆಟ್ರೋಲ್ ಮೇಲಿನ ವ್ಯಾಟ್ ಹೆಚ್ಚಳ ಮಾಡಿದ್ದು, ಅದನ್ನು ಕಡಿಮೆ ಮಾಡದೆ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿದೆ. ದರ ಏರಿಕೆಯಿಂದ ಕೇಂದ್ರ ಸರ್ಕಾರಕ್ಕೆ ಆದಾಯ ಬರುವುದಿಲ್ಲ, ರಾಜ್ಯ ಸರ್ಕಾರಕ್ಕೆ ಹೆಚ್ಚುವರಿಯಾಗಿ ವಾರ್ಷಿಕ 6,000 ಕೋಟಿ ರೂ. ಆದಾಯ ಬರಲಿದೆ. ಇದನ್ನು ಗ್ಯಾರಂಟಿಗೆ ಬಳಸುತ್ತಾರೆ ಎಂದು ದೂರಿದರು.

ಗೂಂಡಾ ಕಾಯ್ದೆಯಲ್ಲಿ ಮತಾಂಧರರ ಬಂಧಿಸಿ: ಆಳಂದದ ಕೋಮುಗಲಭೆ ಪ್ರಕರಣದಲ್ಲಿ ಮುಸ್ಲಿಮರ ವಿರುದ್ಧ ಕೇಸು ವಾಪಸ್ ಪಡೆಯಲಾಗಿದೆ. ನಂತರ ಭಟ್ಕಳದಲ್ಲಿ ಹಿಂದುಗಳು ಕಟ್ಟಿದ್ದ ಮೂರಿನ ಕಟ್ಟೆಯನ್ನು ಮುಸ್ಲಿಂ ಮತಾಂಧರು ಒಡೆದುಹಾಕಿದ್ದಾರೆ. ಆದರೂ ಪೊಲೀಸರು ಕ್ರಮ ವಹಿಸಿಲ್ಲ. ಸಿದ್ದರಾಮಯ್ಯ ಇರುವವರೆಗೂ ಕೇಸು ವಾಪಸ್ ಪಡೆಯುತ್ತಾರೆ ಎಂಬ ನಂಬಿಕೆ ಮುಸ್ಲಿಂ ಮತಾಂಧರಲ್ಲಿದೆ. ಪೊಲೀಸರ ಮೇಲೆ ಕೈ ಮಾಡಿದ ಮತಾಂಧರನ್ನು ಗೂಂಡಾ ಕಾಯ್ದೆಯಡಿ ಬಂಧಿಸಬೇಕು. ಇದರ ನೈತಿಕ ಹೊಣೆ ಹೊತ್ತು ಗೃಹ ಸಚಿವ ಡಾ.ಜಿ.ಪರಮೇಶ್ವರ್ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಅಭಿಯಾನ ಅಗತ್ಯವಿಲ್ಲ

ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯಿಂದ ಬಾಂಗ್ಲಾ ಅಕ್ರಮ ನಿವಾಸಿಗಳ ಪತ್ತೆಯಾಗಲಿದೆ. ನಿಜವಾದ ಮತದಾರರು ಮಾತ್ರ ಮತದಾರರ ಪಟ್ಟಿಯಲ್ಲಿ ಉಳಿದುಕೊಳ್ಳುತ್ತಾರೆ. ಪಡಿತರ ಚೀಟಿಯ ಪರಿಷ್ಕರಣೆಗೆ ಅಭಿಯಾನ ಮಾಡುವ ಅಗತ್ಯವಿಲ್ಲ. ಮರಣ ಪ್ರಮಾಣ ಪತ್ರ ಮಂಜೂರಾದ ಕೂಡಲೇ ಸ್ವಯಂಚಾಲಿತವಾಗಿ ಪಡಿತರ ಚೀಟಿ ರದ್ದಾಗಬೇಕು. ಆದರೆ, ಗ್ಯಾರಂಟಿಗಳಲ್ಲಿ ಹಣ ಉಳಿಸಲು ಪಡಿತರ ಚೀಟಿ ರದ್ದು ಮಾಡಲಾಗುತ್ತಿದೆ. ಕೇಂದ್ರದಿಂದ ಅಕ್ಕಿ ಸಿಗುತ್ತಿಲ್ಲ ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಆದರೆ, ಕೇಂದ್ರ ಸರ್ಕಾರದಿಂದ ಜೂನ್‌ವರೆಗೆ ಅಕ್ಕಿ ಲಭ್ಯವಿದೆ. 4 ಲಕ್ಷ ಟನ್ ಅಕ್ಕಿ ಸಿದ್ಧವಾಗಿದ್ದರೂ ಆರ್ಥಿಕ ಇಲಾಖೆಯಿಂದ ಕೆಜಿಗೆ 23 ರೂ.ನಂತೆ ಹಣ ಬಿಡುಗಡೆ ಮಾಡಿಲ್ಲ. ರಾಜ್ಯ ಸರ್ಕಾರ ಹಣ ನೀಡಿದ ಕೂಡಲೇ ಕೇಂದ್ರ ಅಕ್ಕಿ ನೀಡುತ್ತದೆ ಎಂದು ಆರ್.ಅಶೋಕ ತಿಳಿಸಿದರು.

ವಿತ್ತ ಸಚಿವೆಗೆ ಸಂತೋಷ್ ಲಾಡ್ ಪತ್ರ | ವಿಶಿಷ್ಟಚೇತನರಿಗೆ ನೆರವಾಗಿ

ಸಲಕರಣೆಗೆ ತೆರಿಗೆ ವಿನಾಯ್ತಿ ನೀಡಿ

ಬೆಂಗಳೂರು: ವಿಶಿಷ್ಟಚೇತನರು ಸ್ವತಂತ್ರ ಜೀವನ ನಡೆಸಲು ಸಹಾಯವಾಗುವ ಎಲ್ಲಾ ಸಾಧನ, ಸಲಕರಣೆಗಳ ಮೇಲಿನ ಜಿಎಸ್‌ಟಿಗೆ ವಿನಾಯಿತಿ ನೀಡುವಂತೆ ಇಲ್ಲವೇ ಜಿಎಸ್‌ಟಿಯನ್ನು ಸಂಪೂರ್ಣ ಮನ್ನಾ ಮಾಡುವಂತೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಪತ್ರ ಬರೆದಿದ್ದಾರೆ.



ವಿಶಿಷ್ಟಚೇತನರಿಗೆ ಅಗತ್ಯವಾದ ಸಹಾಯಕ ಸಾಧನಗಳು, ಪುನರ್ವಸತಿ ಸಾಧನಗಳು, ಸಲಕರಣೆಗಳ ಮೇಲೆ ಜಿಎಸ್‌ಟಿ ವಿಧಿಸಲಾಗುತ್ತದೆ. ಈ ಸಾಧನಗಳು ಐಷಾರಾಮಿ ವಸ್ತುಗಳಲ್ಲ, ಬದಲಾಗಿ ಅನಿವಾರ್ಯ ಅವಶ್ಯಕತೆಗಳಾಗಿವೆ. ಜಿಎಸ್‌ಟಿ ವಿನಾಯಿತಿ ಅಥವಾ ಸಂಪೂರ್ಣ ಜಿಎಸ್‌ಟಿ ತೆಗೆದುಹಾಕಿದರೆ ಅನುಕೂಲವಾಗುತ್ತದೆ.

ವಿಶಿಷ್ಟಚೇತನರಿಗೆ ಸರ್ಕಾರ ಈ ನಿಟ್ಟಿನಲ್ಲಿ ಸಹಾಯ ಮಾಡಿದರೆ ದೇಶದಾದ್ಯಂತ ಲಕ್ಷಾಂತರ ವಿಭಿನ್ನ ಸಾಮರ್ಥ್ಯ ಹೊಂದಿರುವ ನಾಗರಿಕರಿಗೆ ಹೆಚ್ಚಿನ ಪ್ರಯೋಜನವಾಗಲಿದೆ ಎಂದು ತಿಳಿಸಿದ್ದಾರೆ.

ವಿಶಿಷ್ಟಚೇತನರ ಬೆಂಬಲ ಸಾಧನಗಳನ್ನು ಶೂನ್ಯ ತೆರಿಗೆ ಅಥವಾ ವಿನಾಯಿತಿ ಪಡೆದ ವರ್ಗದ ಅಡಿಯಲ್ಲಿ ಸೇರಿಸಬೇಕು, ಈ ಪ್ರಯೋಜನಗಳನ್ನು ಪಡೆಯಲು ಪ್ರಮಾಣೀಕರಣ ಮತ್ತು ಖರೀದಿ ವಿಧಾನಗಳನ್ನು ಸರಳಗೊಳಿಸಬೇಕು, ಸಾಧನಗಳು ಕೈಗೆಟುಕುವ ರೀತಿ ತಯಾರಾಗಬೇಕು ಎಂದು ಪತ್ರದಲ್ಲಿ ಕೋರಿದ್ದಾರೆ.

ಜಿಎಸ್‌ಟಿಯಿಂದ ಆರ್ಥಿಕ ಹೊರೆ

ವಿಶಿಷ್ಟಚೇತನರು ಬಳಸುವ ಸಾಧನಗಳ ಮೇಲೆ ತೆರಿಗೆ ವಿನಾಯಿತಿ ನೀಡಿದರೆ ಅವರ ಶಿಕ್ಷಣ, ಉದ್ಯೋಗ, ಆರೋಗ್ಯ ರಕ್ಷಣೆ ಮತ್ತು ದೈನಂದಿನ ಸಾಮಾಜಿಕ ಜೀವನದಲ್ಲಿ ಭಾಗವಹಿಸಲು ಹೆಚ್ಚಿನ ಅನುವು ಮಾಡಿಕೊಡುತ್ತದೆ. ಅವರ ಸಲಕರಣೆಗಳ ಮೇಲೆ ಜಿಎಸ್‌ಟಿ ವಿಧಿಸಿದರೆ ವಿಶಿಷ್ಟಚೇತನರು ಮತ್ತು ಅವರ ಕುಟುಂಬಗಳ ಮೇಲೆ ಅಧಿಕ ಆರ್ಥಿಕ ಹೊರೆ ಬೀಳುತ್ತದೆ. ಅವರಲ್ಲಿ ಅನೇಕರು ಈಗಾಗಲೇ ಹೆಚ್ಚಿನ ಆರ್ಥಿಕ ಮತ್ತು ಸಾಮಾಜಿಕ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮನವಿಯನ್ನು ಪರಿಗಣಿಸಬೇಕು ಎಂದು ಸಚಿವ ಸಂತೋಷ್ ಲಾಡ್ ಹೇಳಿದ್ದಾರೆ.

ಟೊಯೋಟಾ ಹಬ್ ಒಪ್ಪಂದಕ್ಕೆ ಸಹಿ

ಬೆಂಗಳೂರು: ಡಾಬಸಪೇಟೆ-ದೊಡ್ಡಬಳ್ಳಾಪುರ ನಡುವೆ ರಾಜ್ಯ ಸರ್ಕಾರವು ಅಭಿವೃದ್ಧಿಪಡಿಸುತ್ತಿರುವ ಮಹತ್ವಾಕಾಂಕ್ಷಿ ಕ್ವಿನ್ ಸಿಟಿಯಲ್ಲಿ ಟೊಯೋಟಾ ಕಿರ್ಲೋಸ್ಕರ್ ಮೋಟಾರ್ಸ್ ಕಂಪನಿಯು 1,200 ಕೋಟಿ ರೂ. ಹೂಡಿಕೆಯೊಂದಿಗೆ ಜಾಗತಿಕ ಮಟ್ಟದ ತನ್ನ ಬಿಝ್‌ಇಂಟೆಲ್ ಹಬ್ ಸ್ಥಾಪಿಸಲಿದೆ.

ಮುಖ್ಯಮಂತ್ರಿಗಳ ಅಧಿಕೃತ ನಿವಾಸ ಕಾವೇರಿಯಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರ ಸಮ್ಮುಖದಲ್ಲಿ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್.ಸೆಲ್ವಕುಮಾರ್ ಮತ್ತು ಟೊಯೋಟಾ ಕಂಪನಿಯು ಪರವಾಗಿ ಅದರ ಸಿಒಒ ಮತ್ತು ವಿಶೇಷ ಯೋಜನೆಯ ನಿರ್ದೇಶಕ ಸುದೀಪ್ ದಳವಿ ಅವರು ಈ ಕುರಿತ ಒಪ್ಪಂದಕ್ಕೆ ಅಂಕಿತ ಹಾಕಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಹೂಡಿಕೆಗೆ ಪೂರ್ಣ ಸಹಕಾರ ನೀಡುವುದಾಗಿ ಹೇಳಿದರು. ಈ ರೀತಿಯ ಘಟಕ ಸ್ಥಾಪನೆ ಆಗುತ್ತಿರುವುದು ವಿಶ್ವದಲ್ಲೇ ಮೊದಲು ಎನ್ನುವ ವಿಷಯ ಕೇಳಿ ಸಂತಸವಾಯಿತು ಎಂದರು.

ಸಚಿವ ಪಾಟೀಲ ಮಾತನಾಡಿ, ಇದು ಕ್ವಿನ್ ಸಿಟಿಯಲ್ಲಿ ನಡೆಯುತ್ತಿರುವ ಪ್ರಪ್ರಥಮ ಹೂಡಿಕೆಯಾಗಿದೆ. ಕಂಪನಿಯು ಐದು ವರ್ಷಗಳಲ್ಲಿ 1,200 ಕೋಟಿ ರೂ.ಗಳನ್ನು ಆರಂಭಿಕ ಬಂಡವಾಳವಾಗಿ ಹೂಡಲಿದ್ದು, ಇದರಿಂದ 200 ಉದ್ಯೋಗ ಸೃಷ್ಟಿಯಾಗಲಿವೆ. ಇದಕ್ಕಾಗಿ ಅಲ್ಲಿ ಟೊಯೋಟಾ ಕಂಪನಿಗೆ 300 ಎಕರೆ ಭೂಮಿ ಒದಗಿಸಲಾಗುವುದು. ಇಲ್ಲಿ ವಾಹನಗಳ ತಯಾರಿಕೆ, ಪರೀಕ್ಷೆಗಳು, ಆಧುನಿಕ ವಾಹನ ತಯಾರಿಕಾ ಸ್ಥಾವರ ಆರಂಭ ಎಲ್ಲವೂ ನಡೆಯಲಿವೆ. ಇದು ರಾಜ್ಯದ ಯುವಜನರಿಗೆ ವರದಾನವಾಗಲಿದೆ ಎಂದು ತಿಳಿಸಿದರು. ಕ್ವಿನ್ ಸಿಟಿಯಲ್ಲಿ ನಾವೀನ್ಯತೆ, ಆರೋಗ್ಯ ಸೇವೆಗಳು ಮತ್ತು ಐಟಿ ತಂತ್ರಜ್ಞಾನಕ್ಕೆ ಅಗ್ರ ಆದ್ಯತೆ ಕೊಡಲಾಗುವುದು. ಇಲ್ಲಿ ಹೂಡಿಕೆ ಮಾಡಲು ಜಾಗತಿಕ ಮಟ್ಟದ ಎಂಟು ವಿಶ್ವವಿದ್ಯಾಲಯಗಳು, ಆರೋಗ್ಯ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಅವುಗಳೊಂದಿಗೂ ಆದಷ್ಟು ತ್ವರಿತವಾಗಿ ಒಡಂಬಡಿಕೆಗೆ ಅಂತಿಮರೂಪ ನೀಡಲಾಗುವುದು ಎಂದು ಅವರು ಮಾಹಿತಿ ನೀಡಿದರು. ಈ ಅತ್ಯಾಧುನಿಕ ನಗರವು ಒಟ್ಟು 5,800 ಎಕರೆಯಲ್ಲಿ ಹಂತಹಂತವಾಗಿ ಅಸ್ತಿತ್ವಕ್ಕೆ ಬರಲಿದೆ. ಈಗಾಗಲೇ ಮೊದಲ ಹಂತದ ಅಭಿವೃದ್ಧಿ ಪ್ರಗತಿಯಲ್ಲಿದೆ. ಈ ಯೋಜನೆಗೆ ಒಟ್ಟು 48 ಸಾವಿರ ಕೋಟಿ ರೂ. ಹೂಡಿಕೆ ಆಗಲಿದ್ದು, ಒಟ್ಟಾರೆಯಾಗಿ 1 ಲಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಪಾಟೀಲ ಹೇಳಿದರು.



ಸತತ ಹುಡುಕಾಟದ ಬಳಿಕ ಮಾದೇವ ಬೈರಪ್ಪ ನಾಯ್ಕ ಶವವೂ ಪತ್ತೆ

ಭಟ್ಕಳ ದುರಂತ: ಮೃತರ ಸಂಖ್ಯೆ 11ಕ್ಕೆ ಏರಿಕೆ

ಭಟ್ಕಳ: ತಾಲೂಕಿನ ಶಿರಾಲಿಯ ತಟ್ಟಿಹಕ್ಲು ಸಮೀಪದ ವೆಂಕಟಾಪುರ ಹೊಳೆಯಲ್ಲಿ ಮಳವಿ (ಕಪ್ಪೆಚಿಪ್ಪು) ಸಂಗ್ರಹಿಸಲು ಹೋಗಿದ್ದ 14 ಜನರಲ್ಲಿ 11 ಮಂದಿ ನೀರಿನಲ್ಲಿ ಕೊಚ್ಚಿಹೋಗಿ ಮೃತಪಟ್ಟಿರುವ ದುರಂತ ಜಿಲ್ಲೆಯಲ್ಲಿ ತೀವ್ರ ಆಘಾತ ಸೃಷ್ಟಿಸಿದ್ದು ಹೊಳೆಯಲ್ಲಿ ನಾಪತ್ತೆಯಾಗಿದ್ದ ಕೊನೆಯ ವ್ಯಕ್ತಿಯ ಶವ ಸೋಮವಾರ ಪತ್ತೆಯಾಗಿದೆ.

ಇದರಿಂದಾಗಿ ಮೃತಪಟ್ಟಿರುವ ಹನ್ನೊಂದೂ ಜನರ ಶವ ಸಿಕ್ಕಂತಾಗಿದೆ. ಸಮುದ್ರದ ಸೆಳೆತಕ್ಕೆ ಸಿಲುಕಿ ನೀರು ಪಾಲಾಗಿದ್ದ 11 ಮಂದಿಯ ಪೈಕಿ ಹತ್ತು ಜನರ ಶವಗಳು ಭಾನುವಾರವೇ ಸಿಕ್ಕಿದ್ದವು. ಆದರೆ, ಒಬ್ಬರ ಶವ ಪತ್ತೆಯಾಗಿರಲಿಲ್ಲ. ಸೋಮವಾರ ಬೆಳಗ್ಗೆ ಪಡುಶಿರಾಲಿಯ ಮಾದೇವ ಬೈರಪ್ಪ ನಾಯ್ಕ (52) ಅವರ ಶವ ಪತ್ತೆಯಾಗಿದೆ. ಮೃತಪಟ್ಟವರೆಲ್ಲರೂ ಭಟ್ಕಳ ತಾಲೂಕಿನ ಸಾರದಹೊಳೆಯ ಪಡುಶಿರಾಲಿ ಹಾಗೂ ಹಿರೆಹಿತ್ಲು ಗ್ರಾಮದವರಾಗಿದ್ದಾರೆ.

ಮೂವರು ಚೇತರಿಕೆ: ನೀರಿನಲ್ಲಿ ಮುಳುಗಿ ತೀವ್ರವಾಗಿ ಅಸ್ವಸ್ಥರಾಗಿದ್ದ ನಾಗರತ್ನ ಈಶ್ವರ ನಾಯ್ಕ, ಮಾದೇವಿ ನಾಯ್ಕ ಹಾಗೂ ಲಲಿತಾ ಜಗದೀಶ ನಾಯ್ಕರನ್ನು ರಕ್ಷಿಸಿ ಉಡುಪಿಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಸದ್ಯ ಈ ಮೂವರೂ ಚೇತರಿಸಿಕೊಳ್ಳುತ್ತಿದ್ದಾರೆ. ಭಾನುವಾರ ಘಟನೆ ನಡೆದ ತಕ್ಷಣವೇ ಪೊಲೀಸ್ ಇಲಾಖೆ, ಎನ್‌ಡಿಆರ್‌ಎಫ್, ಕರಾವಳಿ ಭದ್ರತಾ ಪಡೆ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ ನಿರಂತರ ಶೋಧ ಕಾರ್ಯ ಕೈಗೊಂಡಿದ್ದರು.



ಭಾನುವಾರ ರಾತ್ರಿಯೇ ಮುಳುಗು ತಜ್ಞ ಈಶ್ವರ ಮಲ್ಪೆ ಅವರ ತಂಡವೂ ಸಹ ತಮ್ಮ ಕಾರ್ಯಾಚರಣೆಯನ್ನು ಮುಂದುವರಿಸಿತ್ತು. ಸತತ ಹುಡುಕಾಟದ ಫಲವಾಗಿ ಸೋಮವಾರ ಬೆಳಗ್ಗೆ ಕೊನೆಯ ಶವವನ್ನು ಮೇಲಕ್ಕೆತ್ತುವಲ್ಲಿ ತಂಡ ಯಶಸ್ವಿಯಾಗಿದೆ.

ಸಾಮೂಹಿಕ ಅಂತ್ಯಸಂಸ್ಕಾರ

ಭಟ್ಕಳ ತಾಲೂಕಿನ ಅಳಿವೆಕೋಡಿ ಸಮುದ್ರ ತೀರದಲ್ಲಿ ಚಿಪ್ಪಿಕಲ್ಲು ತೆಗೆಯಲು ತೆರಳಿದ್ದ ವೇಳೆ ಸಂಭವಿಸಿದ ದುರಂತದಲ್ಲಿ ಮೃತಪಟ್ಟವರ ಶವಗಳ ಸಾಮೂಹಿಕ ಅಂತ್ಯಸಂಸ್ಕಾರ ಸೋಮವಾರ ಭಾವುಕ ವಾತಾವರಣದಲ್ಲಿ ನೆರವೇರಿತು. ಗ್ರಾಮದಲ್ಲಿ ಎಲ್ಲೆಡೆ ಶೋಕದ ಛಾಯೆ ಆವರಿಸಿತ್ತು. ನದಿಯ ನೀರಿನಲ್ಲಿ ಸಿಲುಕಿ ಮೃತಪಟ್ಟವರ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದ್ದು, ಅಂತ್ಯ ಸಂಸ್ಕಾರದ ವೇಳೆ ಮನಕಲಕುವ ದೃಶ್ಯಗಳು ಕಂಡು ಬಂದವು. ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಪೂರ್ಣಗೊಂಡ ಬಳಿಕ ಮೃತದೇಹಗಳನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು. ನಂತರ ಅಳಿವೆಕೋಡಿಯಲ್ಲಿ ಸಾಮೂಹಿಕ ಅಂತ್ಯಸಂಸ್ಕಾರ ನೆರವೇರಿಸಲಾಯಿತು. ಒಂದೇ ಕುಟುಂಬದ ಎಂಟು ಮಂದಿಯ ಅಂತ್ಯಸಂಸ್ಕಾರ ಒಂದೇ ಸ್ಥಳದಲ್ಲಿ ನಡೆದಿದ್ದು, ಅತ್ಯಂತ ಹೃದಯವಿದ್ರಾವಕ ದೃಶ್ಯಕ್ಕೆ ಸಾಕ್ಷಿಯಾಯಿತು.

ಕಾಂಗ್ರೆಸ್ಸಿಗರ ದಾರಿತಪ್ಪಿಸುವ ಆಣೆ, ಪ್ರಮಾಣ ಪ್ರಯೋಜನಕ್ಕೆ ಬಾರದು

ಆಶಾವಾದಿಯಾಗಿ ಹೋರಾಟ: ಜೀವರಾಜ್

ಚಿಕ್ಕಮಗಳೂರು: ಅಂಚೆ ಮತಗಳ ಮರು ಎಣಿಕೆ ವಿಚಾರದಲ್ಲಿ ಶಾಸಕ ಟಿ.ಡಿ.ರಾಜೇಗೌಡ ಮತ್ತು ಕಾಂಗ್ರೆಸಿಗರ ದಾರಿ ತಪ್ಪಿಸುವ ಆಣೆ, ಪ್ರಮಾಣ ಪ್ರಯೋಜನವಿಲ್ಲದ್ದು, ಈ ವಿಚಾರದಲ್ಲಿ ನಮ್ಮ ಕಾರ್ಯಕರ್ತರು ಗೊಂದಲಕ್ಕೆ ಬೀಳಬಾರದು. ನಾವು ಸುಪ್ರೀಂ ಕೋರ್ಟ್‌ನಲ್ಲಿ ಆಶಾವಾದಿಯಾಗಿ ಹೋರಾಡುತ್ತೇವೆ ಎಂದು ಮಾಜಿ ಸಚಿವ ಡಿ.ಎನ್.ಜೀವರಾಜ್ ಹೇಳಿದರು.



ಸೋಮವಾರ ಕೊಪ್ಪ ಪಟ್ಟಣದ ಟೌನ್ ಹಾಲ್ ಸಭಾಂಗಣದಲ್ಲಿ ನಡೆದ ಶೃಂಗೇರಿ ಕ್ಷೇತ್ರ ಮಟ್ಟದ ಬಿಜೆಪಿ ಕಾರ್ಯಕರ್ತರ ಸಮಾವೇಶದಲ್ಲಿ ಅವರು ಮಾತನಾಡಿದರು.

ಸುಪ್ರೀಂ ಕೋರ್ಟ್ ಈಗ ಮಧ್ಯಂತರ ತೀರ್ಪನ್ನಷ್ಟೇ ನೀಡಿದೆ. ಅದನ್ನು ನಾವು ಗೌರವಿಸುತ್ತೇವೆ. ಅದು ಅಂತಿಮವಲ್ಲ. ಇದೇ ವೇಳೆ ಯಾವುದೇ ಸಂದರ್ಭದಲ್ಲಿ ಕಾರ್ಯಕರ್ತರ ಬೆನ್ನಿಗೆ ನಿಲ್ಲುತ್ತೇವೆ ಎಂದರು.

ನಾನೊಬ್ಬ ಹೋರಾಟಗಾರ, ಸಮಸ್ಯೆಗೆ ಬೆನ್ನುಹಾಕಿ ಓಡಿಹೋಗುವವನಲ್ಲ. ಹೆದರಿಸಿದರೆ ಪಲಾಯನ ಮಾಡುವ ಜಾಯಮಾನ ನನ್ನದಲ್ಲ. ಹಣ ಇಲ್ಲದೆ ಇರಬಹುದು, ಹೋರಾಟದ ಛಲಕ್ಕೆ ಕೊರತೆ ಇಲ್ಲ. ಈತನಕ ಗೌರವದ ರಾಜಕಾರಣ ಮಾಡಿದ್ದೇನೆ. ಜೀವರಾಜ್ ಎಂದಿಗೂ ಅಳುವುದಿಲ್ಲ. ಆದರೆ ಬಾಳೆಹೊನ್ನೂರಿನಲ್ಲಿ ಶಾಸಕರು ಏಕೆ ಅತ್ತರು? ಎನ್ನುವುದಕ್ಕೆ ಉತ್ತರ ಈಗ ಸಿಕ್ಕಿದೆ ಎಂದು ಮಾರ್ಮಿಕವಾಗಿ ನುಡಿದರು. ಟಿ.ಡಿ.ರಾಜೇಗೌಡ ಅವರು ಬಂದ ನಂತರವೇ ಕ್ಷೇತ್ರದಲ್ಲಿ ದ್ವೇಷದ ರಾಜಕಾರಣ ಆರಂಭವಾಯಿತು. ಅವರು ಅಭಿವೃದ್ಧಿಯನ್ನು ತರಲಿಲ್ಲ, ದ್ವೇಷವನ್ನು ತಂದಿದ್ದಾರೆ. ಫಾರಂ 53, 57 ಮತ್ತು 97 ಸಿ ಅಡಿ ಸಾಗುವಳಿ ಚೀಟಿ ವಿತರಣೆ ವಿಚಾರದಲ್ಲಿ ನನ್ನ ವಿರುದ್ಧ ಲೋಕಾಯುಕ್ತದಲ್ಲಿ ವಜಾ ಆಗಿದ್ದ ಕೇಸಿಗೆ ಮತ್ತೆ ಚಾರ್ಜ್ ಶೀಟ್ ಹಾಕಿಸಿದರು, ಇಲ್ಲ ಎಂದು ಅವರು ಆಣೆ ಮಾಡಲಿ ಎಂದು ಸವಾಲು ಹಾಕಿದರು. ಇಷ್ಟಾದ ಮೇಲೂ 2700 ಮಂದಿಗೆ ಸಾಗುವಳಿ ಚೀಟಿ ಕೊಟ್ಟಿದ್ದು ನನ್ನ ತಾಕತ್ತು. ಹಣ ಹಾಕಿ ಹಣ ತೆಗೆಯುವ ಕಲೆ ಶಾಸಕರಿಗೆ ಇರಬಹುದು. ನಾನು ಕೆಲಸ ಮಾಡಿ ಮತ ಕೇಳಿದ್ದೇನೆ. ಅವರ ದುಡ್ಡಿನ ನಡುವೆ ನಾನು ಗೆದ್ದಿದ್ದೆ. ಆದರೆ ಸೋಲಿಸಿದ್ದು ಅವರ ಕುತಂತ್ರ ಎಂದರು. ಒಂದು ಕಡೆ ಅಧಿಕಾರಕ್ಕಾಗಿ ಸುಪ್ರಿಂ ಕೋರ್ಟ್‌ನಲ್ಲಿ ಕೇಸು ದಾಖಲಿಸಿ ಮತ್ತೊಂದೆಡೆ ಜನರ ದಾರಿತಪ್ಪಿಸಲು ಆಣೆ, ಪ್ರಮಾಣ ಮಾಡುತ್ತಿದ್ದಾರೆ. ಹಾಗಾದರೆ ಸ್ಟಾಂಪ್ ಪೇಪರ್ ತಿದ್ದುಪಡಿ ಹಗರಣ ಸುಳ್ಳು ಎಂದು ಪ್ರಮಾಣ ಮಾಡಲಿ, 124 ಕೋಟಿ ಮೌಲ್ಯದ ಆಸ್ತಿಯನ್ನು 6 ಕೋಟಿಗೆ ಖರೀದಿಸಿ ದಿವಂಗತ ಸಿದ್ಧಾರ್ಥ ಅವರಿಗೆ ಮೋಸ ಮಾಡಿದ್ದು ಸುಳ್ಳು ಎಂದು ಪ್ರಮಾಣ ಮಾಡಲಿ ಎಂದರು. ಶೃಂಗೇರಿ ಗಾಂಧಿ ಮೈದಾನದ ಅಂಗಡಿಗಳನ್ನು ಕೀಳಿಸಿದ್ದು, ದಿನೇಶ್ ಅವರಿಗೆ ಸೇರಿದ 15 ಎಕರೆ ತೋಟ ಕಿತ್ತು ಹಾಕಿಸಿದ್ದು ಸುಳ್ಳು ಎಂದು ಪ್ರಮಾಣ ಮಾಡಲಿ, ನಾನು ಕೂಡ ದೇವರನ್ನು ದಿನವೂ ಪೂಜೆ ಮಾಡುವವನೇ. ಕಾರ್ಯಕರ್ತರನ್ನೂ ದೇವರೆಂದೇ ನಂಬಿ ಮುಂದೆ ಬಂದು ನಿಂತಿದ್ದೇನೆ ಎಂದರು.

ಸಂಪಾದಕೀಯ

ಯುವಕರು ಎಚ್ಚರದ ನಡೆಯಿಡಲಿ

ಡಿಜಿಟಲ್ ವೇದಿಕೆಯಲ್ಲಿ ಹುಟ್ಟಿಕೊಂಡ ರಾಜಕೀಯ ಪಕ್ಷವೊಂದು ದೇಶದಲ್ಲಿ ದೊಡ್ಡ ಸುದ್ದಿ ಮಾಡುತ್ತಿರುವಂತೆಯೇ, ಅದು ಹುಟ್ಟಿಕೊಂಡ ಹಿನ್ನೆಲೆ, ಪಕ್ಷ ರಚನೆಯ ಹಿಂದಿನ ನಿಗೂಢತೆ, ಪಕ್ಷದ ಹಿನ್ನೆಲೆಯಲ್ಲಿರುವ ವ್ಯಕ್ತಿಗಳ ಕುರಿತಾದ ಸಂಶಯಗಳು, ಅದರ ಉದ್ದೇಶದ ಕುರಿತಂತೆ ಮೂಡಿರುವ ಅನುಮಾನ ಮೊದಲಾದವೆಲ್ಲ ವಿವಾದವನ್ನೂ ಸೃಷ್ಟಿಸಿದೆ. ನ್ಯಾಯಾಧೀಶರೊಬ್ಬರು ಮೊಕದ್ದಮೆಯೊಂದರ ವಿಚಾರಣೆಯ ವೇಳೆ ನಿರುದ್ಯೋಗಿ ಯುವಕರಲ್ಲಿ ಕೆಲವರು ಜಿರಳೆಗಳಂತೆ ವರ್ತಿಸುತ್ತಿದ್ದಾರೆ ಎಂದು ಹೇಳಿದ್ದನ್ನೆ ನೆಪವಾಗಿಟ್ಟುಕೊಂಡು 'ಕಾಕ್ರೋಚ್ ಜನತಾಪಾರ್ಟಿ' ಎಂಬ



ತಥಾಕಥಿತ ರಾಜಕೀಯ ವೇದಿಕೆಯನ್ನು ಸೃಷ್ಟಿಸಲಾಯಿತು. ಆದರ ಬಳಿಕ ಅದು ಡಿಜಿಟಲ್ ಪ್ರಚಾರಾಂದೋಲನವಾಗಿ ಮಾರ್ಪಟ್ಟುದುದನ್ನು ಗಮನಿಸುವಾಗ ಹಾಗೂ ದೇಶದ ನಿರುದ್ಯೋಗಿ ಯುವಕರನ್ನು ಪ್ರಭಾವಿಸಲು ನಡೆಸುತ್ತಿರುವ ಪ್ರಯತ್ನಗಳನ್ನು ನೋಡುತ್ತಿರುವಾಗ ಅದರ ಕುರಿತಂತೆ ಸಂಶಯಗಳು ಹುಟ್ಟುತ್ತಿರುವುದು ಸಹಜವೇ ಆಗಿದೆ. ಅತ್ಯಲ್ಪ ಸಮಯದಲ್ಲೇ ಈ ಜಿರಳೆ ಪಕ್ಷದ ಇನ್‌ಸ್ಟಾಗ್ರಾಂ ಖಾತೆಗೆ ಕೋಟ್ಯಂತರ ಬೆಂಬಲಿಗರು ಹುಟ್ಟಿಕೊಂಡುದು, ಕೆಲವು ಮಾಧ್ಯಮಗಳು ಅದಕ್ಕೆ ಭಾರೀ ಪ್ರಚಾರ ನೀಡತೊಡಗಿರುವುದು, ದೇಶದ ವಿರೋಧ ಪಕ್ಷಗಳು 'ಇದು ಭಾರತ ಸರಕಾರದ ವಿರುದ್ಧ ಯುವಕರ ಆಕ್ರೋಶದ ಪ್ರತಿಬಿಂಬ' ಎಂಬಂತಹ ನರೇಟಿವ್ ಬಿಂಬಿಸಲಾರಂಭಿಸಿದ್ದು ಮುಂತಾದವೆಲ್ಲವೂ ಈ ತಥಾಕಥಿತ ರಾಜಕೀಯ ಪಕ್ಷದ ರಚನೆಯ ಹಿಂದೆ 'ಹಿಡನ್ ಅಜೆಂಡಾ' ಇರಬಹುದೆ ಎಂಬ ಅನುಮಾನ ಹುಟ್ಟಿಸಿದೆ. ಇತ್ತೀಚಿನ ವರ್ಷಗಳಲ್ಲಿ ಕೆಲವಾರು ದೇಶಗಳಲ್ಲಿ ಝೆನ್-ಜಿ ಪ್ರತಿಭಟನೆಯ ಮೂಲಕ ಸರಕಾರ ಉರುಳಿರುವ ನಿದರ್ಶನಗಳಿರುವುದರಿಂದ ಭಾರತದಲ್ಲಿ ಕೂಡಾ ಯುವಕರನ್ನು ಪ್ರತಿಭಟನೆಗೆ ಪ್ರಚೋದಿಸುವ ವೇದಿಕೆಯಾಗಿ ಇದು ರೂಪುಗೊಂಡಿರಬಹುದೆ ಎಂಬ ಆತಂಕಗಳೂ ಮೂಡಿವೆ. ಈ ಹಿಂದೆ ಕೇಂದ್ರ ಸರಕಾರದ ವಿರುದ್ಧ ಯುವ ದಂಗೆಗೆ ಪ್ರೇರೇಪಿಸುವ ಪ್ರಯತ್ನಗಳು ನಡೆದಿದ್ದವಾದರೂ ಅದು ಫಲ ಕಂಡಿರಲಿಲ್ಲ. ಇದೀಗ ಅಂತಹುದೇ ಮತ್ತೊಂದು ಪ್ರಯತ್ನ ನಡೆಯುವ ಸಾಧ್ಯತೆಯನ್ನು ತಳ್ಳಿ ಹಾಕಲಾಗುವುದಿಲ್ಲ.

ಪ್ರಜಾತಾಂತ್ರಿಕ ಸುಧಾರಣೆಗೆ ಯಾವುದೇ ಪ್ರಾಮಾಣಿಕ ಆಂದೋಲನ ನಡೆಯುವುದಿದ್ದರೆ ಅದು ನೆಲಮಟ್ಟದಲ್ಲಿ ನಡೆಯಬೇಕೇ ಹೊರತು ಡಿಜಿಟಲ್ ರಂಗದಲ್ಲಲ್ಲ. ದೇಶದ ಯುವಕರು ಇಂತಹ ಆಂದೋಲನವನ್ನು ಕುರುಡಾಗಿ ಅನುಸರಿಸುವ ಮುನ್ನ ಅದರ ಹಿಂದಿನ ಹಕೀಕತ್ತೇನು, ಅದರಿಂದ ಲಾಭ ಪಡೆಯುವವರಾರು, ಅದರ ಹಿಂದಿರುವ ವ್ಯಕ್ತಿಗಳ ಹಿನ್ನೆಲೆಯೇನು ಎಂಬ ಕುರಿತಂತೆ ಕೂಲಂಕಷ ಅರಿವು ಹೊಂದಿರಬೇಕಾದುದು ಅಗತ್ಯ. ಭಾರತದ ವಿರುದ್ಧದ 'ಟೂಲ್‌ಕಿಟ್'ನ ಒಂದು ಭಾಗವಾಗಿ ತಾವೂ ಬಳಸಲ್ಪಡದಂತೆ ಎಚ್ಚರ ವಹಿಸಬೇಕು. ಒಟ್ಟಿನಲ್ಲಿ ಯುವಕರು ಎಚ್ಚರದ ನಡೆಯಿಡಬೇಕು.

ಮೋದಿಯ ಪತ್ರಿಕಾಗೋಷ್ಠಿ ಎಂಬ ಚಿನ್ನದ ಜಿಂಕೆ

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com



ಬಹುಶಃ ಜಗತ್ತಿನ ಅತ್ಯಂತ ಜನಸಂಖ್ಯಾಭರಿತ ದೇಶವಾದ ಭಾರತ, ಸದಾ ಒಂದಲ್ಲೊಂದು ಕಾರಣಗಳಿಗಾಗಿ ಗಿಜಿಗುಡುತ್ತಿರುತ್ತದೆ. ಇವುಗಳಲ್ಲಿ ರಾಜಕೀಯ ಕಾರಣವೇ ಹೆಚ್ಚಿನ ಬಾರಿ ಮುಂಚೂಣಿಯಲ್ಲಿರುವುದು ವರವೋ, ಶಾಪವೋ ಗೊತ್ತಿಲ್ಲ.

ಕಳೆದ ವಾರದ ಗಿಜಿಗುಡುವಿಕೆಗೆ ಎರಡು ಕಾರಣಗಳಿದ್ದವು. ಒಂದು, ಮೋದಿಯವರ ವಿದೇಶಿ ಪ್ರವಾಸ ಹಾಗೂ ಅದರಲ್ಲಿ ನಡೆದ ಎರಡು ಘಟನೆಗಳು. ಇನ್ನೊಂದು, ಕಾಕ್ರೋಚ್ ಜನತಾ ಪಾರ್ಟಿ ಎಂಬ ಒಂದು ಹೊಸಾ ಟ್ರೆಂಡ್. ಇವೆರಡನ್ನೂ ಪಕ್ಕಪಕ್ಕದಲ್ಲಿಟ್ಟು ನೋಡಿದಾಗ, ಇವೆರಡರ ಮೂಲಕಾರಣಗಳು ಸ್ಥೂಲವಾಗಿ ಒಂದೇ ಎಂಬುದು ಕೂಡ ಕಂಡುಬರುತ್ತದೆ. ನಾರ್ವೆಯ ಭೇಟಿಯಲ್ಲಿ, ಪ್ರಶ್ನೋತ್ತರಕ್ಕೆ ಅವಕಾಶವೇ ಇಲ್ಲದಿದ್ದರೂ, ಮೋದಿಯವರನ್ನು ವಿನಾಕಾರಣವಾಗಿ 'ನಮ್ಮ ಪ್ರಶ್ನೆಗಳಿಗೆ ಉತ್ತರಿಸಿ' ಎಂದು ಕೂಗಾಡಲಾಯ್ತು. ಅದನ್ನೇ ನೆಪವಾಗಿಟ್ಟುಕೊಂಡು ಭಾರತದಲ್ಲಿ ಯಥಾಪ್ರಕಾರ 'ಮೋದಿಯವರು ಪ್ರೆಸ್ ಕಾನ್ಫರೆನ್ಸ್ ಮಾಡಿಲ್ಲ'ಎಂಬ ರೋಧನೆಯನ್ನು ಮತ್ತೆ ಮುನ್ನೆಲೆಗೆ ತರಲಾಯ್ತು. ಇದಾದ ಎರಡೇ ದಿನಕ್ಕೆ ಮೋದಿಯವರು, ಇಟಲಿಯ ಪ್ರಧಾನಿಗೆ ಮೆಲೋಡಿ ಚಾಕಲೇಟ್ ಕೊಟ್ಟರು ಎಂಬ ಕಾರಣಕ್ಕಾಗಿ ಮತ್ತೊಮ್ಮೆ ಇಡೀ ಭಾರತ ಗಿಜಿಗುಟ್ಟಿತು. ಇಡೀ ಪ್ರವಾಸದಲ್ಲಿ ಮೋದಿಯವರು ಮಾಡಿಕೊಂಡುಬಂದ ಒಂದೇ ಒಂದು ಒಪ್ಪಂದವನ್ನು ಚರ್ಚಿಸದೆ, ಮೆಲೋಡಿ ಚಾಕಲೇಟ್ ವಿಚಾರವನ್ನು ಹಿಡಿದುಕೊಂಡು ಮೋದಿಯವರನ್ನು ಹಳಿಯಲಾಯ್ತು.

ಇಷ್ಟರ ನಡುವೆ, ಮಾಜಿ ಆಮ್ ಆದ್ಮಿ ಪಕ್ಷದ ಸಾಮಾಜಿಕ ತಾಣಗಳ ರೂವಾರಿ ಹಾಗೂ ಹಾಲಿ ನಿರುದ್ಯೋಗಿಯೊಬ್ಬ ಪ್ರಾರಂಭಿಸಿದ 'ಕಾಕ್ರೋಚ್ ಜನತಾ ಪಾರ್ಟಿ' ಎಂಬ ಆಪ್ ಹಾಗೂ ಕ್ಯಾಂಪೇನ್ ಒಂದು, ಭಾರತದ ಯುವಜನತೆ ಇಂದಿನ ಕೇಂದ್ರ ಸರ್ಕಾರದಿಂದ ಎಷ್ಟೆಲ್ಲಾ ಕಷ್ಟಗಳನ್ನು ಅನುಭವಿಸುತ್ತಿದೆ ಎಂದು ತೋರಿಸಿಕೊಡುತ್ತಾ ತನ್ನ ಜನಪ್ರಿಯತೆಯನ್ನು ಹೆಚ್ಚಿಸಿಕೊಂಡಿದೆ ಎನ್ನುವುದು ಬಹಳ ಚರ್ಚೆಯ ವಿಷಯವಾಯ್ತು. ಎಐ ಅನ್ನು ಸಮರ್ಥವಾಗಿ ಬಳಸಿಕೊಂಡು, ಇಂದಿನ ಸರ್ಕಾರ ಹೇಗೆ ಜನರ ಅಗತ್ಯಗಳನ್ನು ಕಡೆಗಣಿಸುತ್ತಿದೆ ಎಂಬುದನ್ನು ತೋರಿಸುವ ಪ್ರಯತ್ನವೊಂದು ನಡೆಯಿತು, ನಡೆಯುತ್ತಿದೆ ಕೂಡಾ. ದೇಶದ ಮುಖ್ಯ ನ್ಯಾಯಮೂರ್ತಿಗಳು ಯುವಕರನ್ನು ಜಿರಳೆಗಳು ಎಂದು ಕರೆದರು ಎಂಬ ವಿಷಯವನ್ನು ಹಿಡಿದುಕೊಂಡು, ಆ ಹೇಳಿಕೆಯ ಹಿಂದೆ ಮುಂದೆಯೆಲ್ಲವನ್ನೂ ಕಡೆಗಣಿಸಿ, ಅವರು ಹೇಳಿದ್ದೇ ಮಹಾಪರಾಧ ಎನ್ನುವಂತೆ ಜನರ ತಲೆತುಂಬುವ ಕೆಲಸ ಅವ್ಯಾಹತವಾಗಿ ಸಾಗಿದೆ. ಕಿಂದರಜೋಗಿಯ ಹಿಂದೆ ಸಾಗಿದ ಮಕ್ಕಳಂತೆ ಇದನ್ನು ಜನಪ್ರಿಯಗೊಳಿಸುತ್ತಿರುವಾಗ, ಇದನ್ನು ಪ್ರಾರಂಭಿಸಿದ ಸೂತ್ರದಾರ, ದೇಶದಿಂದ ಸಾವಿರಾರು ಕಿಲೋಮೀಟರ್ ದೂರ ಅಮೇರಿಕಾದಲ್ಲಿ ಕೂತು ನಗುತ್ತಿದ್ದಾನೆ.

ಹಾಗಾದರೆ, ಪ್ರಧಾನಿಯನ್ನು ಪ್ರಶ್ನಿಸಲೇಬಾರದಾ? ಪ್ರಧಾನಿಗಳು ಪ್ರೆಸ್ ಕಾನ್ಫರೆನ್ಸ್ ಮಾಡದೇ ಇರುವುದು ಸರಿಯಾದ ನಡೆಯೇ? ಸರ್ಕಾರದ ತಪ್ಪುಗಳನ್ನು ವ್ಯಂಗ್ಯವಾಗಿ ಹೀಗೆ ಎಐ ಕ್ಯಾಂಪೇನ್ ಮೂಲಕ ಬಯಲಿಗೆಳೆಯಬಾರದಾ? ಎಂಬ ಪ್ರಶ್ನೆಗಳು ಬಂದೇ ಬರುತ್ತವೆ. ಇದ್ಯಾವುದೂ ತಪ್ಪಲ್ಲ, ಆದರೆ, ಪ್ರಶ್ನೆಗಳ ಹಾಗೂ ಚಳುವಳಿಗಳ ಉದ್ದೇಶ ಮತ್ತು ಸ್ವರೂಪ, ಅವು ತೂರಿಬರುವ ಸಮಯ, ಹಾಗೂ ಅವುಗಳ ಹಿಂದಿರುವ ವ್ಯಕ್ತಿಗಳು ಮತ್ತವರ ಹಿನ್ನೆಲೆಗಳು ಮುಖ್ಯವಾಗುತ್ತವೆ. ಪ್ರಧಾನಿಗಳು ಮಾಧ್ಯಮಗಳನ್ನು ಕರೆದು ಪ್ರಶ್ನೋತ್ತರ ಮಾಡಬೇಕೆನ್ನುವ ಈ ನಮ್ಮ ಮಾಧ್ಯಮಗಳು ಮೋದಿಯವರು ಬೇರೆ ಬೇರೆ ಹುದ್ದೆಗಳಲ್ಲಿದ್ದಾಗ, ಬೇರೆ ಬೇರೆ ಸಮಯಗಳಲ್ಲಿ ಯಾವಾಗ ರಚನಾತ್ಮಕ ಪ್ರಶ್ನೆಗಳನ್ನು ಕೇಳಿವೆ? 2001-2014ರ ತನಕ ಮೋದಿ ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದರು. ಆತ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಕೆಲವೇ ತಿಂಗಳುಗಳಲ್ಲಿ ಭಾರತದ ಅತ್ಯಂತ ದುರಂತಮಯ ಭೂಕಂಪ ಸಂಭವಿಸಿತ್ತು. ಇಡೀ ಕಛ್ ಪ್ರದೇಶವನ್ನು ಮೋದಿ ಯಶಸ್ವಿಯಾಗಿ, ಯಾವುದೇ ಭ್ರಷ್ಟಾಚಾರ ನಡೆಯದಂತೆ ನೋಡಿಕೊಂಡು ಸುಭದ್ರವಾಗಿ ಮರುನಿರ್ಮಾಣ ಮಾಡಿದರು. ಯಾವ ಮಾಧ್ಯಮವೂ ಇದನ್ನೊಂದು ಸಾಕ್ಷ್ಯಚಿತ್ರವಾಗಿಸಲಿಲ್ಲ, ಒಂದೇ ಒಂದು ರಾಷ್ಟ್ರೀಯ ಮಾಧ್ಯಮಸಂಸ್ಥೆ ಇಂತಹುದೊಂದು ಸಾಧನೆ ಹೇಗೆ ಮಾಡಿದಿರಿ ಎಂಬ ಪ್ರಶ್ನೆ ಕೇಳಲಿಲ್ಲ. ಆ ವ್ಯಕ್ತಿ ಅಲ್ಲಿ ಮುಖ್ಯಮಂತ್ರಿಯಾಗಿದ್ದಷ್ಟೂ ವರ್ಷಗಳಲ್ಲಿ ಗುಜರಾತ್ ವಾರ್ಷಿಕವಾಗಿ ಸರಾಸರಿ 10% ಆರ್ಥಿಕ ಬೆಳವಣಿಗೆ ದಾಖಲಿಸಿತು. ಬಹುಶಃ ಹದಿನೈದು ವರ್ಷಗಳ ಕಾಲ ಸತತವಾಗಿ ಆ ಸರಾಸರಿಯಲ್ಲಿ ಬೆಳೆದ ಏಕೈಕ ರಾಜ್ಯ ಗುಜರಾತ್. ಒಬ್ಬನೇ ಒಬ್ಬ ಪತ್ರಕರ್ತ ಇಂತಹುದೊಂದು ಸಾಧನೆಯ ಹಿಂದಿನ ಆಲೋಚನೆಗಳನ್ನು ಪ್ರಶ್ನಿಸಲಿಲ್ಲ. ಹೊಗಳಿಕೆ ಯಾರಿಗೆ ಬೇಕಿತ್ತು ಬಿಡಿ, ಆದರೆ ಕಡೇಪಕ್ಷ ಪ್ರಶ್ನಿಸಬಹುದಿತ್ತಲ್ಲ?

ಆದರೆ ಇವರು ಪ್ರಶ್ನಿಸಿದ್ದು ಏನನ್ನ? ಈ ಹದಿನೈದು ವರ್ಷಗಳಲ್ಲಿ ಮೋದಿ ಕನಿಷ್ಟ ನೂರಕ್ಕೂ ಹೆಚ್ಚು ಪ್ರೆಸ್ ಕಾನ್ಫರೆನ್ಸುಗಳನ್ನು, ಸಂದರ್ಶನಗಳನ್ನೂ, ಸಭೆ ಸಮಾವೇಶಗಳಲ್ಲಿ ಭಾಗವಹಿಸಿದ್ದರು. ಪ್ರಶ್ನೆಗಳಿಗೆ ಉತ್ತರಿಸಿದ್ದರು. ಅಷ್ಟೂ ಬಾರಿ ಮೋದಿ ಮೈಕಿನ ಮುಂದಿದ್ದಾಗ ಈ ಮಾಧ್ಯಮಗಳು ಕೇಳಿದ್ದು ಅಥವಾ ವೈಭವೀಕರಿಸಿದ್ದು 2002ರ ಗಲಭೆ, ಇಶ್ರತ್ ಜಹಾನ್ ಎನ್ಕೌಂಟರ್, ಯುವತಿಯೊಬ್ಬಳನ್ನು ಗುಜರಾತ್ ಪೋಲೀಸರು ಹಿಂಬಾಲಿಸಿದ್ದು ಇವಿಷ್ಟು ವಿಚಾರಗಳ ಬಗ್ಗೆ ಮಾತ್ರ. ಮತ್ತಿದು ಕೇವಲ ರಾಷ್ಟ್ರೀಯ ಮಾಧ್ಯಮಗಳ 'ಸಾಧನೆ' ಮಾತ್ರವಲ್ಲ, ಸ್ಥಳೀಯ ಮಾಧ್ಯಮಗಳಿಂದ ಹಿಡಿದು ಅಂತರರಾಷ್ಟ್ರೀಯ ಮಾಧ್ಯಮಗಳ ಸಹಿತವಾಗಿ ಎಲ್ಲರೂ ಮಾಡಿದ್ದು ಇದನ್ನೇ. ಈ ಮಾಧ್ಯಮಗಳಿಗೆ ಬೇಕಿರುವುದು ಮೋದಿಯ ಪ್ರಶ್ನೋತ್ತರವಲ್ಲ, ಬದಲಿಗೆ ಆ ಪ್ರೆಸ್ ಕಾನ್ಫರೆನ್ಸಿನ ನೆಪದಲ್ಲಿ ಪ್ರಧಾನಿ ಕಛೇರಿಗೆ ಎಡತಾಕಲಿಕ್ಕೊಂದು ನೆಪವಷ್ಟೇ. ಎಡತಾಕಿದಷ್ಟೂ ಅಲ್ಲೊಂದು ಸಂಬಂಧ ಬೆಳೆಸಿಕೊಳ್ಳುವ, ಆದರ ಮೂಲಕ ತಮ್ಮ ಲಾಬಿಯ ಮೂಲಕ ಲಾಭಗಳಿಸಿಕೊಳ್ಳುವ ಉದ್ದೇಶವಷ್ಟೇ. ದೇಶದ ಮಾಧ್ಯಮ ಸ್ವಾತಂತ್ರ್ಯದ ಬಗ್ಗೆಯಾಗಲೀ, ಮೋದಿಗೆ ಪ್ರಶ್ನೆ ಕೇಳುವ ಬಗ್ಗೆಯಾಗಲೀ ಯಾರಿಗೂ ತಲೆಬಿಸಿಯಿಲ್ಲ. ಈ ಪ್ರಶ್ನೋತ್ತರಗಳಿಗಾಗಿ ಹಾತೊರೆಯುವವರು, ಬೇರೆಲ್ಲಾ ಮಂತ್ರಾಲಯಗಳು ನಡೆಸುವ ಎಷ್ಟು ಪ್ರೆಸ್ ಕಾನ್ಫರೆನ್ಸುಗಳಲ್ಲಿ ಸಮರ್ಥವಾಗಿ ಭಾಗವಹಿಸಿ, ಇಕ್ಕಟ್ಟಿನ ಪ್ರಶ್ನೆ ಕೇಳಿವೆ? ಭಾರತ ಕಳೆದ 4 ವರ್ಷದಲ್ಲಿ ರಾಜತಾಂತ್ರಿಕವಾಗಿ, ಆರ್ಥಿಕವಾಗಿ ಎಂತೆಂತಾ ಇಕ್ಕಟ್ಟಿನ ಪರಿಸ್ಥಿತಿಗಳನ್ನು ನಿಭಾಯಿಸಿತು. ಯಾವ ಮಾಧ್ಯಮ ನಮ್ಮ ಇಂಧನ ಸಚಿವರನ್ನ, ವಿದೇಶಾಂಗ ಖಾತೆಯ ಸಚಿವರನ್ನ ಕಷ್ಟದ ಪ್ರಶ್ನೆಗಳಿಗೆ ಈಡು ಮಾಡಿವೆ? ಎಷ್ಟು ಬಾರಿ ರಾಷ್ಟ್ರೀಯ ಭದ್ರತಾ ಸಲಹೆಗಾರರನ್ನು ಸಂದರ್ಶನಕ್ಕೆ ಆಹ್ವಾನಿಸಿವೆ? ಆದರೆ ಇಲ್ಲಿ ಮೋದಿಯ ಪತ್ರಿಕಾಗೋಷ್ಠಿಯ ಎಂಬ ಚಿನ್ನದ ಜಿಂಕೆಯನ್ನು ತೋರಿಸಿ, ಬೇರೇನೋ ಮಾಡಲು ಹೊರಟಿರುವುದು ಢಾಳಾಗಿ ಕಾಣಿಸುತ್ತಿದೆ.

ಇನ್ನು ಜಿರಳೆಗಳ ವಿಷಯಕ್ಕೆ ಬಂದರೆ, ನೀಟ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಾದದ್ದು ನಿಜಕ್ಕೂ ದೊಡ್ಡ ದುರಂತ ಹೌದು. ಅದನ್ನು ರಾಷ್ಟ್ರಮಟ್ಟದಲ್ಲಿ ಸುದ್ದಿ ಮಾಡಿ, ತಲೆದಂಡ ಪಡೆಯಬೇಕಾಗಿತ್ತು. ಆದರೆ ನಮ್ಮ ಮಾಧ್ಯಮಗಳಿಗೆ ದೇಶದ ಶಿಕ್ಷಣ ಮಂತ್ರಿ ಯಾರು, ಮಾನವ ಸಂಪನ್ಮೂಲ ಸಚಿವಾಲಯದ ಫೋನ್ ನಂಬರ್ ಏನು ಅಂತಲೂ ಗೊತ್ತಿದೆಯೋ ಇಲ್ಲವೋ. ಆದರೆ ಮೋದಿ ಪ್ರೆಸ್ ಕಾನ್ಫರೆನ್ಸ್ ಮಾಡಬೇಕು ಅಂತಾ ಕೂರುತ್ತಾರೆ. ಇದನ್ನೇ ಮುಖ್ಯ ವಿಷಯವನ್ನಾಗಿಸಿಕೊಂಡು ಅದನ್ನೂ ಮೋದಿಯ ತಲೆಗೆ ಕಟ್ಟಿ, ಜೆನ್-ಝಿಯ ಮನಸ್ಸಿನಲ್ಲಿ ಸರ್ಕಾರದ ಬಗ್ಗೆ ಸುಳ್ಳು ಹಾಗೂ ಅಸಂಬದ್ಧ ಮಾಹಿತಿಯ ಪೆಟ್ರೋಲ್ ಸುರಿದು, ಬೆಂಕಿ ಹಚ್ಚಿದ್ದಾರೆ. ನೆರೆಯ ದೇಶಗಳಲ್ಲಿ ನಡೆದಂತಾ ಜೆನ್-ಝಿ ದಂಗೆಯನ್ನು ಭಾರತಕ್ಕೂ ತರಲಿಕ್ಕಾಗಿ ಭಾರತವಿರೋಧಿ ಶಕ್ತಿಗಳು ಬಹಳ ಸಮಯದಿಂದ ಪ್ರಯತ್ನಿಸುತ್ತಿವೆ. ಮೋದಿ ದೇಶದಿಂದ ಹೊರಗಿರುವ ಸಮಯವನ್ನೇ ನೋಡಿಕೊಂಡು ದೇಶದ ಒಳಗೆ ಕಾಕ್ರೋಚ್ ಜನತಾ ಪಾರ್ಟಿ ಎಂಬ ನಾಟಕ ನಡೆಯುತ್ತದೆ. ಅದೇ ಸಮಯಕ್ಕೆ ನಾರ್ವೆಯಲ್ಲಿ ಪ್ರಶ್ನೋತ್ತರದ ನಾಟಕ ನಡೆಯುತ್ತದೆ. ಒಟ್ಟಿನಲ್ಲಿ ದೇಶದೊಳಗೂ ಗಲಭೆ, ದೇಶದ ಹೊರಗೂ ಮೋದಿಗೆ ಹಿನ್ನಡೆಯಾಗಬೇಕು ಎಂಬ ದೊಡ್ಡ ಸೂತ್ರದ ಅನ್ವಯ ಈ ಪ್ರಹಸನಗಳು ನಡೆಯುತ್ತಿವೆ. ಈ ಜಿರಳೆ ಪಾರ್ಟಿಗಳು ಯುವಜನರಿಗೆ ಕೆಲಸ ಸಿಗುತ್ತಿಲ್ಲ ಎಂಬ ಪ್ರಶ್ನೆ ಹಿಡಿದುಕೊಂಡು ಮೋದಿಯ ಹಿಂದೆ ಬಿದ್ದಿವೆ. ಕೆಲಸಗಳ ಸೃಷ್ಟಿ ಕೇವಲ ಕೇಂದ್ರ ಸರ್ಕಾರದ ಕೆಲಸವೇ? ಈ ಪ್ರಶ್ನೆಗಳನ್ನು ಎಷ್ಟು ಜನ ಯುವಕರು ಯಾವ್ಯಾವ ರಾಜ್ಯ ಸರ್ಕಾರಗಳನ್ನು ಯಾವತ್ತು ಕೇಳಿದ್ದಾರೆ? ಜಿಎಸ್ಟಿಯಲ್ಲಿ ರಾಜ್ಯ ಸರ್ಕಾರಗಳು ಸಮಪಾಲು ಪಡೆಯುತ್ತಿರುವಾಗ, ಲೀಟರಿಗೆ ನೂರು ರೂಪಾಯಿಯಾಗಿರುವ ಪೆಟ್ರೋಲ್ ತುಂಬಿಸುವಾಗ ಅದರ ತೆರಿಗೆಯಲ್ಲಿ ಕೇಂದ್ರದಷ್ಟೇ ತೆರಿಗೆ ಪಡೆಯುತ್ತಿರುವ ರಾಜ್ಯ ಸರ್ಕಾರಗಳನ್ನು ಯಾರು ಯಾಕೆ ಬೆಲೆಯ ಬಗ್ಗೆ ಪ್ರಶ್ನಿಸುತ್ತಿಲ್ಲ!?

ಪ್ರಧಾನಿಯನ್ನು ಮಾತ್ರವಲ್ಲ, ಸಚಿವರನ್ನೂ ಪ್ರಶ್ನಿಸಬೇಕು, ಅಧಿಕಾರಿಗಳನ್ನೂ ಪ್ರಶ್ನಿಸಬೇಕು, ಬೆನ್ನೆಲುಬಿಲ್ಲದೇ ನಿಂತಿರುವ ಪ್ರತಿಪಕ್ಷಗಳನ್ನೂ ಹಳಿಯಬೇಕು. ಉಚಿತ ಗ್ಯಾರಂಟಿಗಳನ್ನು ಕೊಡುತ್ತಿರುವ, ಯಾರದೋ ಹೆಸರಿನ ಕ್ಯಾಂಟೀನ್ ಶುರು ಮಾಡಿದ, ಜಾತ್ಯತೀತತೆಯ ಮಾತು ಆಡುತ್ತಲೇ ಒಂದು ಜನಾಂಗದ ದೇವರಿಗೆ ಮಾತ್ರ ತೆರಿಗೆ ಹಾಕುವ ಸ್ಥಳೀಯ ಸರ್ಕಾರಗಳನ್ನೂ ಪ್ರಶ್ನಿಸಬೇಕು. ವಿಐಪಿ ಟ್ರಾಫಿಕ್ ರೂಲ್ ನಿಮಗ್ಯಾಕೆ ಅಂತಲೂ ಕೇಳಬೇಕು. ಕಾಕ್ರೋಚ್ ಜನತಾ ಪಾರ್ಟಿ ಮಾತ್ರವಲ್ಲ, ಇಂಡಿಯನ್ ನ್ಯಾಷನಲ್ ಕಾಕ್ರೋಚ್ ಕಾಂಗ್ರೆಸ್ ಕೂಡ ಹುಟ್ಟಬೇಕು, ಆಮ್ ಕಾಕ್ರೋಚ್ ಪಾರ್ಟಿಯೂ ಹುಟ್ಟಬೇಕು. ಅದಿಲ್ಲದಿದ್ದರೆ, ನಿಮ್ಮ ಪ್ರಶ್ನಿಸುವಿಕೆಯನ್ನು ಸೆಲೆಕ್ಟಿವ್ ಆಕ್ಟಿವಿಸಂ ಎಂದು ಕರೆಯದೇ ದಾರಿಯಿಲ್ಲ.

ಐಶ್ವರ್ಯವು ಯಾರಿಗೆ ಸ್ಥಿರ?

ಅಚಲಾ ಕಮಲಾ ಕಸ್ಯ ಕಸ್ಯ ಮಿತ್ರಂ ಮಹಿಪತಿಃ।
ಶರೀರಂ ಚ ಸ್ಥಿರಂ ಕಸ್ಯ ಕಸ್ಯ ವಶ್ಯಾ ವರಾಂಗನಾ॥ – ಸುಭಾಷಿತ ರತ್ನ ಭಾಂಡಾಗಾರ

ಐಶ್ವರ್ಯವು ಯಾರಿಗೆ ತಾನೇ ಸ್ಥಿರ? ದೊರೆಯು ಯಾರಿಗೆ ಸ್ನೇಹಿತ? ಶರೀರವು ಯಾರಿಗೆ ಶಾಶ್ವತ? ವೇಶ್ಯೆಯು ಯಾರಿಗೆ ವಶಳು? – ಎಂಬುದು ಶ್ಲೋಕಾರ್ಥ.

ಸಂಪತ್ತೆಂದೂ ಸ್ಥಿರವಲ್ಲ, ಲಕ್ಷ್ಮಿ ಚಂಚಲೆ. ನಿಂತಲ್ಲಿ ನಿಲ್ಲುವುದಿಲ್ಲ, ಯಾರಲ್ಲಿಯೂ ಐಶ್ವರ್ಯ ಸ್ಥಿರವಾಗಿ ನೆಲೆಸಿಲ್ಲ. ಇಂದು ಶ್ರೀಮಂತನೆಂದು ಕರೆಸಿಕೊಳ್ಳುವವನು ನಾಳೆ ಭಿಕಾರಿಯಾಗಬಹುದು. ಭಿಕಾರಿ ಯೊಬ್ಬ ಅಪಾರ ಸಂಪತ್ತನ್ನು ಗಳಿಸಿ ಧನಿಕನಾಗಬಹುದು. ಇಂತಹ ಘಟನೆಗಳು ನಮ್ಮ ಗಮನಕ್ಕೂ ಬಂದಿರಬಹುದು. ಆದ್ದರಿಂದಲೇ 'ಅಚಲಾ ಕಮಲಾ ಕಸ್ಯ' ಎಂದು ಕವಿಯು ಪ್ರಶ್ನಿಸಿದ್ದಾನೆ.

ಅರಸನಾದವನು ಯಾರಿಗೂ ಸ್ನೇಹಿತನಾಗಲಾರ. ಏನಿದ್ದರೂ ಅವನ ಸ್ನೇಹ ಕ್ಷಣಿಕ. ಇದಕ್ಕಿಂತಲೂ ಹೆಚ್ಚಾಗಿ ಸ್ವಾರ್ಥಮಯ. ತನ್ನ ಲಾಭಕ್ಕಾಗಿ ಸ್ನೇಹವೇ ವಿನಾ ಅದೊಂದು ನಿಜವಾದ ಸ್ನೇಹವಲ್ಲ. ಸ್ನೇಹದಲ್ಲಿ ನಿಸ್ವಾರ್ಥವಿರಬೇಕು. ಪರಸ್ಪರ ಪೂರಕವಾಗಿರಬೇಕೇ ವಿನಾ ಸ್ನೇಹದಿಂದ ತನಗೆಷ್ಟು ಲಾಭ? ಎಂಬ ಯೋಚನೆ ಇರುವುದಿಲ್ಲ.



ಆದರೆ ರಾಜನು ಮೈತ್ರಿಯನ್ನಾಗಲಿ, ಸಂಬಂಧವನ್ನಾಗಲಿ ಬಯಸುವ ಹಿನ್ನೆಲೆಯಲ್ಲಿ ಸ್ವಾರ್ಥವೇ ಇರುತ್ತದೆ. ತನ್ನ ಶತ್ರುವಿನ ಶತ್ರುವಿನೊಂದಿಗೆ ಮಿತ್ರತ್ವ ಸಂಪಾದಿಸುತ್ತಾನೆ ಅಥವಾ ಸಂಬಂಧ ಬೆಳೆಸುತ್ತಾನೆ. ಇಲ್ಲಿ ಗುಣ, ಔದಾರ್ಯ, ಚಾರಿತ್ರ್ಯ ಇವು ಮುಖ್ಯವಲ್ಲ. ಶತ್ರುವು ತನ್ನ ಮೇಲೆ ಆಕ್ರಮಿಸಲು ಮುಂದಾದರೆ ಸಹಾಯ ದೊರೆಯುತ್ತದೆ ಎಂಬ ಪರಮ ಸ್ವಾರ್ಥ. ಪ್ರಯೋಜನ ದೊರೆತ ಮೇಲೆ ಅಥವಾ ಮೈತ್ರಿಯಿಂದ ಲಾಭವಿಲ್ಲ ಎಂದು ಗೊತ್ತಾದರೆ ಮೈತ್ರಿ ದೂರಾಗುತ್ತದೆ. ಆದ್ದರಿಂದ ರಾಜ ಯಾರಿಗೂ ನಿಜವಾದ ಸ್ನೇಹಿತನಾಗಲಾರ.

ನಾವೇನೋ ಶರೀರವನ್ನು ಪಡೆದು ಬಂದಿದ್ದೇವೆ. ಈ ಶರೀರ ಎಂದಿಗೂ ಶಾಶ್ವತವಲ್ಲ. ಒಳಗಿರುವ ಆತ್ಮ ಭದ್ರವಾಗಿ ಇರುವವರೆಗೆ ಶರೀರದ ಆಟ ನಡೆಯುತ್ತದೆ. ಆತ್ಮ ಹೊರಟು ಹೋದರೆ ಈ ಶರೀರ ಕೇವಲ ಹೆಣ. ಯಾರಿಗೂ ಬೇಡವಾಗುತ್ತದೆ. ಶರೀರವೆಂದೂ ಶಾಶ್ವತವಲ್ಲ. ದೀರ್ಘಕಾಲ ಶರೀರವನ್ನು ಹೊಂದಿದ್ದರೂ ಇದು ಬಾಲ್ಯ, ಯೌವನ, ವೃದ್ಧಾಪ್ಯವನ್ನು ಹೊಂದಿ ಒಂದು ದಿನ ಮಣ್ಣಿನಲ್ಲಿ ಮಣ್ಣಾಗಿ ಹೋಗುತ್ತದೆ. ಆದ್ದರಿಂದ ಶರೀರದ ಬಗ್ಗೆ ವಿಶೇಷ ವ್ಯಾಮೋಹ ಸಲ್ಲದು. ಇದೆಂದೂ ಸ್ಥಿರವೆಂದು ಭಾವಿಸಬಾರದು. ಆತ್ಮನ ಸಾಧನೆಗಾಗಿ ಇರುವ ಒಂದು ಮಾಧ್ಯಮ ಮಾತ್ರ.

ವರಾಂಗನೆ ಎಂದರೆ ವೇಶ್ಯೆ. ವೇಶ್ಯೆ ಯಾರ ಅಧೀನವೂ ಅಲ್ಲ, ವೇಶ್ಯಾವೃತ್ತಿ ಅವಳ ವ್ಯವಹಾರ. ಜನರನ್ನು ತನ್ನತ್ತ ಆಕರ್ಷಿಸುವುದು, ಅವರಿಂದ ಸಂಪತ್ತನ್ನು ದೋಚಿಕೊಳ್ಳುವುದು ಅವಳ ಕಸುಬು. ಅವಳು ಬಯಸಿದಷ್ಟು ಹಣ ಸಿಗುವವರೆಗೆ ಕೊಡುವವರೊತ್ತಕ್ಕೆ ಅನುಗುಣವಾದ ಪ್ರೀತಿ ತೋರಿಸುತ್ತಾಳೆ. ಪ್ರೀತಿಯೆಂಬುದು ವ್ಯಕ್ತಿಯ ಮೇಲಲ್ಲ, ಅವನಲ್ಲಿರುವ ಸಂಪತ್ತಿನ ಮೇಲೆ. ಆದ್ದರಿಂದ ಅವಳು ಯಾರ ವಶವರ್ತಿಯೂ ಅಲ್ಲ, ಸಂಪತ್ತನ್ನು ಕಿತ್ತುಕೊಳ್ಳುವ ಪ್ರವೃತ್ತಿ. ಅದಕ್ಕಾಗಿ ಪ್ರೀತಿಯ ನಾಟಕ.

ಆದ್ದರಿಂದ ಸ್ಥಿರವಲ್ಲದ ಸಂಪತ್ತಿನ ಹಿಂದೆ ಬಿದ್ದು ಕರ್ತವ್ಯವನ್ನು ಮರೆಯಬಾರದು. ದೊಡ್ಡವರ, ಅರಸರ ಸ್ನೇಹಕ್ಕೆ ಆಶಿಸಿ ಕೊನೆಗೆ ನಿರಾಶೆಗೆ ಒಳಗಾಗಬಾರದು. ಶಾಶ್ವತವಲ್ಲದ ಶರೀರದ ಮೇಲೆ ವ್ಯಾಮೋಹವನ್ನು ಹೊಂದಬಾರದು. ವೇಶ್ಯೆಯನ್ನು ವಶಪಡಿಸಿಕೊಳ್ಳುತ್ತೇನೆ ಎಂಬ ದುಸ್ಸಾಹಸಕ್ಕೆ ಮುಂದಾಗಬಾರದು. ಇವು ನಮಗೆಂದೂ ನೆಮ್ಮದಿಯನ್ನು ತಂದುಕೊಡಲಾರವು.

ಗೋಹತ್ಯೆ ಬಕ್ರೀದ್‌ನ ಭಾಗವಲ್ಲ: ಕೋಲ್ಕತ್ತಾ ಹೈಕೋರ್ಟ್

ಧರಣಿ ಮಂಡಲ
• ಕೆ.ಎಸ್. ಶೈಲೇಶ್ ಹೊಳ್ಳ
shyleshholla@gmail.com



ಇಡೀ ದೇಶದಲ್ಲೇ ಕೇರಳ, ಪಶ್ಚಿಮ ಬಂಗಾಳ ಹಾಗೂ ಕೆಲ ಈಶಾನ್ಯ ರಾಜ್ಯಗಳಲ್ಲಿ ಗೋವುಗಳ ಹತ್ಯೆಯನ್ನು ತಡೆಯುವ ಸಲುವಾಗಿ ಯಾವುದೇ ಪ್ರಾದೇಶಿಕ ಕಾನೂನು ಇಲ್ಲಿಯವರೆಗೂ ರೂಪಿತಗೊಂಡಿಲ್ಲ. ಅಷ್ಟೇ ಅಲ್ಲದೆ ಪ್ರಾಣಿ ಹಿಂಸೆಯನ್ನು ತಡೆಯುವ ನಿಟ್ಟಿನಲ್ಲಿ ಕೇಂದ್ರದ ಎಲ್ಲಾ ಕಾಯ್ದೆ ಕಾನೂನುಗಳನ್ನು ಇಲ್ಲಿ ಸಂಪೂರ್ಣವಾಗಿ ಉಲ್ಲಂಘಿಸಲಾಗುತ್ತಿದೆ. ವಿಶೇಷವಾಗಿ ಪಶ್ಚಿಮ ಬಂಗಾಳದಲ್ಲಿ ಗೋವುಗಳನ್ನು ಉಳಿಸುವ ಸಲುವಾಗಿ ಯಾವುದೇ ಸ್ಥಳೀಯ ಕಾನೂನನ್ನು ರಚಿಸಲಾಗಿರಲಿಲ್ಲ. ಇದರೊಂದಿಗೆ ಇಲ್ಲಿಯ ಪೊಲೀಸ್ ಸಹ ಈ ಕುರಿತಂತೆ ಇಲ್ಲಿಯವರೆಗೂ ಯಾವುದೇ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಂಡಿರಲಿಲ್ಲ. ಕೆಲವೊಮ್ಮೆ ಗೋರಕ್ಷಕರು ಅಕ್ರಮ ಸಾಗಾಟದ ಸಂದರ್ಭದಲ್ಲಿ ಪ್ರಕರಣ ದಾಖಲಿಸುವಂತೆ ಕೋರಿದಾಗ ಅವರೊಂದಿಗೆ ಕಟುವಾಗಿ ವರ್ತಿಸುವುದಷ್ಟೇ ಅಲ್ಲದೆ ಅವರ ವಿರುದ್ಧವೇ ಪೊಲೀಸರು ಪ್ರಕರಣ ದಾಖಲಿಸಿದ್ದು ಇದೆ. ಇನ್ನು ಕೆಲವೊಮ್ಮೆ ದನಗಳನ್ನು ಹಿಡಿದ ಗೋರಕ್ಷಕರನ್ನೇ ಥಳಿಸಿ ಅವರ ವಿರುದ್ಧವೇ ಗಂಭೀರ ರೀತಿಯ ಪ್ರಕರಣಗಳನ್ನು ದಾಖಲಿಸಿದ್ದು ಸಹ ಕಂಡುಬರುತ್ತದೆ. ಆದರೆ ಪಶ್ಚಿಮ ಬಂಗಾಳ ಇತ್ತೀಚೆಗೆ ಈ ಕಳಂಕದಿಂದ ಹೊರಬಂದಿದೆ. ಹೊಸದಾಗಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಇಲ್ಲಿ ಗೋಹತ್ಯೆಯನ್ನು ಬೇಷರತ್ತಾಗಿ ನಿಷೇಧಿಸುವ ಬದಲು ನಿರ್ಬಂಧಿಸಿದೆ. ಮೇ 9, 2026ರಿಂದ ಪಶ್ಚಿಮ ಬಂಗಾಳದ 9ನೇ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸುತ್ತಿರುವ ಮುಖ್ಯಮಂತ್ರಿ ಸುವೇಂದು ಅಧಿಕಾರಿ, ಮಮತಾ ಬ್ಯಾನರ್ಜಿ 15 ವರ್ಷಗಳ ಆಡಳಿತವನ್ನು ಕೊನೆಗೊಳಿಸಿದ ನಂತರ ಸರಣಿ ಕ್ರಮಗಳನ್ನು ಕೈಗೊಂಡಿದ್ದು, ಅದರಂತೆ ಪಶ್ಚಿಮ ಬಂಗಾಳ ಪ್ರಾಣಿವಧೆ ನಿಯಂತ್ರಣ ಕಾಯ್ದೆ 1950ರ ಅಡಿಯಲ್ಲಿ ಕಠಿಣ ನಿಯಮಗಳನ್ನು ಜಾರಿಗೊಳಿಸಿದ್ದಾರೆ.

ಇದಕ್ಕೆ ಸಂಬಂಧಿಸಿದಂತೆ ರಾಜ್ಯ ಗೃಹ ಇಲಾಖೆ, ಕಲ್ಕತ್ತಾ ಹೈಕೋರ್ಟ್‌ನ ಆಗಸ್ಟ್ 16, 2018ರ ಆದೇಶಕ್ಕೆ ಅನುಸಾರವಾಗಿ ಮತ್ತು ಪಶ್ಚಿಮ ಬಂಗಾಳ ಪ್ರಾಣಿ ವಧೆ ನಿಯಂತ್ರಣ ಕಾಯ್ದೆ 1950ರ ನಿಯಮಗಳನ್ನು ಉಲ್ಲೇಖಿಸುತ್ತಾ ಗೋವುಗಳ ಹತ್ಯೆಗೆ ಕಡ್ಡಾಯ ಫಿಟ್ನೆಸ್ ಪ್ರಮಾಣಪತ್ರವನ್ನು ಜಾರಿಗೊಳಿಸುವ ಅಧಿಸೂಚನೆಯನ್ನು ಹೊರಡಿಸಿದೆ. ಈ ಪ್ರಮಾಣಪತ್ರಗಳನ್ನು ನೀಡಲು ಯಾರು ಅಧಿಕಾರ ಹೊಂದಿದ್ದಾರೆ ಎಂಬುದನ್ನು ಸಹ ಸ್ಪಷ್ಟಪಡಿಸಿದೆ. ಈ ಕೆಳಗಿನ ನಿಬಂಧನೆಗಳು ಅಥವಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂಬುದಾಗಿ ಸಂಬಂಧಪಟ್ಟವರಿಗೆ ನೀಡಿದ ನೋಟಿಸ್‌ನಲ್ಲಿ ಸೂಚಿಸಿದ್ದು, ಯಾವುದೇ ಪ್ರಾಣಿಯನ್ನು ವಧೆಗೆ ಯೋಗ್ಯವೆಂದು ಪ್ರಮಾಣೀಕರಿಸದೆ ವಧಿಸುವಂತಿಲ್ಲ ಎಂಬುದಾಗಿ ಸೂಚಿಸಿದೆ.

- ಸ್ಥಳೀಯ ಪಂಚಾಯತ್ ಅಧಿಕಾರಿಗಳು ಮತ್ತು ಸರ್ಕಾರಿ ಪಶುವೈದ್ಯಾಧಿಕಾರಿಗಳು ಜಂಟಿಯಾಗಿ ನೀಡುವ ನಿರ್ದಿಷ್ಟ ಫಿಟ್ನೆಸ್ ಪ್ರಮಾಣಪತ್ರವಿಲ್ಲದೆ ಯಾವುದೇ ವ್ಯಕ್ತಿಯು ಎತ್ತುಗಳು, ಹಸುಗಳು, ಕರುಗಳು, ಗಂಡು ಮತ್ತು ಹೆಣ್ಣು ಎಮ್ಮೆಗಳು, ಎಮ್ಮೆ ಕರುಗಳು ಮತ್ತು ವೃಷಣ ನಾಶವಾದ ಎಮ್ಮೆಗಳು ಸೇರಿದಂತೆ ಯಾವುದೇ ಪ್ರಾಣಿಯನ್ನು ವಧಿಸುವಂತಿಲ್ಲ.
- ಯಾವುದೇ ಪುರಸಭೆಯ ಅಧ್ಯಕ್ಷರು ಅಥವಾ ಯಾವುದೇ ಪಂಚಾಯತ್ ಸಮಿತಿಯ ಅಧ್ಯಕ್ಷರು ಮತ್ತು ಸರ್ಕಾರಿ ಪಶುವೈದ್ಯಾಧಿಕಾರಿಗಳು, ಪ್ರಾಣಿ 14 ವರ್ಷಕ್ಕಿಂತ ಮೇಲ್ಪಟ್ಟಿದ್ದು ಮತ್ತು ಕೆಲಸ ಅಥವಾ ಸಂತಾನೋತ್ಪತ್ತಿ ಉದ್ದೇಶಗಳಿಗೆ ಅನರ್ಹವಾಗಿದೆ ಅಥವಾ ವಯಸ್ಸು, ಗಾಯ, ವಿರೂಪತೆ ಅಥವಾ ಯಾವುದೇ ಗುಣಪಡಿಸಲಾಗದ ಕಾಯಿಲೆಯಿಂದಾಗಿ ಶಾಶ್ವತವಾಗಿ ಅಂಗವಿಕಲವಾಗಿದೆ ಎಂದು ಇಬ್ಬರೂ ಲಿಖಿತವಾಗಿ ಒಪ್ಪಿಕೊಂಡ ನಂತರ ಮಾತ್ರ ಫಿಟ್ನೆಸ್ ಪ್ರಮಾಣಪತ್ರವನ್ನು ನೀಡಬೇಕಿದೆ. ಆನಂತರವಷ್ಟೇ ಜಾನುವಾರನ್ನು ಸೂಚಿಸಿದ ನಿರ್ದಿಷ್ಟ ಸ್ಥಳದಲ್ಲಿ ನಿಬಂಧನೆಗಳೊಂದಿಗೆ ಹತ್ಯೆ ಮಾಡಲು ಅವಕಾಶವನ್ನು ನೀಡಲಾಗಿದೆ.
- ತೆರೆದ ಸಾರ್ವಜನಿಕ ಸ್ಥಳಗಳಲ್ಲಿ ಗೋವಧೆಯನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದ್ದು, ಪುರಸಭೆಯ ಕಸಾಯಿಖಾನೆಗಳು ಅಥವಾ ಸ್ಥಳೀಯ ಆಡಳಿತವು ಗೊತ್ತು ಪಡಿಸಿದ ಜಾಗಗಳಲ್ಲಿ ಮಾತ್ರ ಪ್ರಾಣಿಗಳನ್ನು ಅನುಮತಿಯೊಂದಿಗೆ ವಧಿಸಬೇಕಿದೆ. ಪುರಸಭೆಯ ಅಧ್ಯಕ್ಷರು ಅಥವಾ ಪಂಚಾಯತ್ ಸಮಿತಿಯ ಸಭಾಪತಿ ಅಥವಾ ಕಾಯ್ದೆಯ ನಿಬಂಧನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರಿ ಪಶುವೈದ್ಯರು ಅಧಿಕಾರ ನೀಡುವ ಯಾವುದೇ ಆವರಣವನ್ನು ಪರಿಶೀಲಿಸುವುದನ್ನು ಯಾರೂ ವಿರೋಧಿಸಬಾರದು ಎಂಬುದಾಗಿಯೂ ಸೂಚನೆಯಲ್ಲಿ ನಿರ್ದಿಷ್ಟಪಡಿಸಲಾಗಿದೆ.
- ಈ ನಿಯಮಗಳನ್ನು ಉಲ್ಲಂಘಿಸುವುದು ಶಿಕ್ಷಾರ್ಹ ಅಪರಾಧವಾಗಿದ್ದು, ಆರು ತಿಂಗಳವರೆಗೆ ಜೈಲು ಶಿಕ್ಷೆ ಹಾಗೂ ಒಂದು ಸಾವಿರದವರೆಗೂ ದಂಡ ಅಥವಾ ಎರಡನ್ನೂ ವಿಧಿಸಬಹುದಾಗಿದೆ. ಕಾಯ್ದೆಯಡಿಯಲ್ಲಿರುವ ಎಲ್ಲಾ ಅಪರಾಧಗಳನ್ನು ಗುರುತಿಸಬಹುದಾದವು ಎಂದು ವರ್ಗೀಕರಿಸಲಾಗಿದೆ.

ಒಂದೊಮ್ಮೆ ಫಿಟ್ನೆಸ್ ಪ್ರಮಾಣಪತ್ರವನ್ನು ನೀಡಲು ನಿರಾಕರಿಸಿದ ಸಂದರ್ಭದಲ್ಲಿ, ಬಾಧಿತ ವ್ಯಕ್ತಿಯು ಅಂತಹ ನಿರಾಕರಣೆಯನ್ನು ತಿಳಿಸಿದ 15 ದಿನಗಳ ಒಳಗೆ ರಾಜ್ಯ ಸರ್ಕಾರಕ್ಕೆ ಮೇಲ್ಮನವಿಯನ್ನು ಸಲ್ಲಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಅಧಿಸೂಚನೆಯಲ್ಲಿ ಧಾರ್ಮಿಕ, ಔಷಧೀಯ ಅಥವಾ ಸಂಶೋಧನಾ ಉದ್ದೇಶಗಳಿಗಾಗಿ ಮಾತ್ರ ಹತ್ಯೆಗೆ ವಿನಾಯತಿಯನ್ನು ಉಲ್ಲೇಖಿಸಲಾಗಿಲ್ಲ ಎಂಬುದು ಗಮನಾರ್ಹ. ಗೋವುಗಳ ಅಕ್ರಮ ಹತ್ಯೆಯ ವಿರುದ್ಧ ಮತ್ತು ಜಾನುವಾರು ವ್ಯಾಪಾರ ಕಾರ್ಯಾಚರಣೆಗಳ ಮೇಲ್ವಿಚಾರಣೆಯನ್ನು ಬಿಗಿಗೊಳಿಸುವುದು ಈ ಕ್ರಮದ ಉದ್ದೇಶವಾಗಿದೆ ಎಂಬುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಹೀಗೆ ಪಶ್ಚಿಮ ಬಂಗಾಳ ಕಟ್ಟುನಿಟ್ಟಾಗಿ ಜಾರಿಗೊಳಿಸಿದ ಗೋಹತ್ಯಾ ನಿಷೇಧ ಕಾನೂನಿನಿಂದ ಯಾರಿಗೆ ತೊಂದರೆಯಾಗುತ್ತಿದೆಯೋ ಇಲ್ಲವೋ ತಿಳಿದಿಲ್ಲ. ಆದರೆ ಒಂದಷ್ಟು ಎಡಪಂಥಿಯರಿಗೆ, ತೃಣಮೂಲ ಕಾಂಗ್ರೆಸ್‌ನವರಿಗೆ ಹಾಗೂ ಕಾಂಗ್ರೆಸ್ ಸೇರಿದಂತೆ ಭಾಗಶಃ ಭಾಜಪೇತರ ಪಕ್ಷಗಳಿಗಂತೂ ಸಹಿಸಲು ಸಾಧ್ಯವಾಗುತ್ತಿಲ್ಲ. ಪ್ರಸ್ತುತ ಜಾರಿಗೆ ಬಂದಿರುವ ಈ ಕಾನೂನಿನಿಂದ ಹಾಲುತ್ಪಾದಕರಿಗೆ ಮತ್ತು ರೈತರಿಗೆ ಭಾರಿ ಹಿನ್ನಡೆಯಾಗುತ್ತಿದೆ, ರೈತರು ಭಾರಿ ನಷ್ಟವನ್ನು ಅನುಭವಿಸುತ್ತಿದ್ದಾರೆ, ಎಂದೆಲ್ಲಾ ಹೇಳುತ್ತಾ ದೇಶದ ಜನರನ್ನು ದಾರಿತಪ್ಪಿಸುವ ಕಾರ್ಯವನ್ನು ಇವರೆಲ್ಲರೂ ಮಾಡತೊಡಗಿದ್ದಾರೆ. "ಹೊಸ ಸರ್ಕಾರದ ಈ ನೀತಿ ದೊಡ್ಡ ಆರ್ಥಿಕ ಹೊಡೆತವನ್ನು ನೀಡಲಿದೆ. ಅಧಿಕಾರಕ್ಕೆ ಬಂದ ಸರ್ಕಾರವು ತಾನು ಇತರರಿಗಿಂತ ಹೆಚ್ಚು ಹಿಂದೂ ಪರ ಎಂದು ಸಾಬೀತುಪಡಿಸಲು ಕೆಲವು ಹೊಸ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತಂದಿದೆ. ಆದರೆ ಇವರಿಗೆ ತಿಳಿದಿರಲಿ, ಗೋವುಗಳನ್ನು ಸಾಕುವವರು ಮತ್ತು ಕಸಾಯಿಗಳಿಗೆ ಮಾರುವವರು ಸೇರಿದಂತೆ ಬಹುತೇಕ ದಲ್ಲಾಳಿಗಳು ಹಿಂದೂಗಳೇ ಆಗಿದ್ದಾರೆ. ಹೀಗಾಗಿ ಈ ಕಾನೂನಿನಿಂದ ಹಿಂದೂಗಳಿಗೆ ಹೆಚ್ಚು ನಷ್ಟವಾಗುತ್ತಿದೆ" ಎಂಬುದಾಗೆಲ್ಲ ಹೇಳುತ್ತಾ ಇತರೆ ಹಿಂದೂಗಳನ್ನು ದಾರಿ ತಪ್ಪಿಸುವ ಕಾರ್ಯವನ್ನು ಮಾಡುತ್ತಿದ್ದಾರೆ. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಕೆಲ ಹಿಂದೂಗಳನ್ನು ಮುಂದೆ ಬಿಟ್ಟು ಪೊಲೀಸ್ ಠಾಣೆಯ ಮುಂದೆ ಪ್ರತಿಭಟನೆಯನ್ನು ಸಹ ಮಾಡಿಸುತ್ತಿದ್ದಾರೆ.

ಈ ಹೊಸ ಕಾಯ್ದೆಗೆ ಪೂರಕವೆಂಬಂತೆ ಇತ್ತೀಚೆಗೆ ಕೋಲ್ಕತ್ತಾ ಹೈಕೋರ್ಟ್ ಸಹ ಗೋಹತ್ಯಾ ನಿಷೇಧದ ಪರವಾಗಿ ತೀರ್ಪನ್ನು ನೀಡಿದೆ. ಪಶ್ಚಿಮ ಬಂಗಾಳ ಪ್ರಾಣಿ ವಧೆ ನಿಯಂತ್ರಣ ಕಾಯ್ದೆ, 1950ರ ಅಡಿಯಲ್ಲಿ ಧಾರ್ಮಿಕ ಆಧಾರದ ಮೇಲೆ ಮೇ 27 ಅಥವಾ 28ರಂದು ಬಕ್ರೀದ್ ಹಬ್ಬಕ್ಕೆ ಮುನ್ನ ಎತ್ತುಗಳು, ಹೋರಿಗಳು, ಹಸುಗಳು, ಕರುಗಳು ಮತ್ತು ಎಮ್ಮೆಗಳ ಹತ್ಯೆಗೆ ವಿನಾಯಿತಿ ನೀಡುವಂತೆ ಕೋರಿ ಮೊಹ್ಮಾ ಮೊಹಿತ್ರಾರವರು ಕೋಲ್ಕತ್ತಾ ಹೈಕೋರ್ಟ್‌ನಲ್ಲಿ ಕೆಲ ದಿನಗಳ ಹಿಂದೆ ಮೊಕದ್ದಮೆಯನ್ನು ದಾಖಲಿಸಿದ್ದರು. ಮೊಕದ್ದಮೆಯನ್ನು ಆಲಿಸಿದ ಪೀಠ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಯಾವುದೇ ತಕ್ಷಣದ ಪರಿಹಾರ ಅಥವಾ ವಿಶೇಷ ವಿನಾಯಿತಿ ನೀಡಲು ಸಾಧ್ಯವಿಲ್ಲ ಎಂಬುದಾಗಿ ತಿಳಿಸಿ ಈ ಅರ್ಜಿಯೊಂದಿಗೆ ಸಲ್ಲಿಕೆಯಾಗಿದ್ದ ಎಲ್ಲಾ ಅರ್ಜಿಗಳನ್ನು ವಜಾಗೊಳಿಸಿದೆ. ನ್ಯಾಯಾಲಯವು ರಾಜ್ಯಕ್ಕೆ ಇನ್ನೆರಡು ಷರತ್ತುಗಳನ್ನು ಸೇರಿಸುವಂತೆಯೂ ನಿರ್ದೇಶನ ನೀಡಿದೆ. ತೆರೆದ ಸಾರ್ವಜನಿಕ ಸ್ಥಳಗಳಲ್ಲಿ ವಧೆ ಮಾಡಬಾರದು ಮತ್ತು ಸುಪ್ರೀಂ ಕೋರ್ಟ್ ಹೇಳಿದಂತೆ ಇಸ್ಲಾಂ ಅಡಿಯಲ್ಲಿ ಹಸುವನ್ನು ಬಲಿ ನೀಡುವುದು ಧಾರ್ಮಿಕ ಅವಶ್ಯಕತೆಯಲ್ಲ ಎಂಬುದಾಗಿ ಸ್ಪಷ್ಟಪಡಿಸಿದೆ. ಪಶ್ಚಿಮ ಬಂಗಾಳ ಪ್ರಾಣಿ ವಧೆ ನಿಯಂತ್ರಣ ಕಾಯ್ದೆಯ ಸೆಕ್ಷನ್ 12ರ ಅಡಿಯಲ್ಲಿ ಧಾರ್ಮಿಕ ವಧೆಗೆ ತಾತ್ಕಾಲಿಕ ವಿನಾಯಿತಿ ಅಗತ್ಯವಿದೆಯೇ ಎಂದು ಪರಿಶೀಲಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿ, 24 ಗಂಟೆಗಳ ಒಳಗೆ ಈ ವಿಷಯದ ಬಗ್ಗೆ ನಿರ್ಧಾರ ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದೆ.

ಹೊಸ ಕಾಯ್ದೆಯ ನಿಯಮಗಳ ಪ್ರಕಾರ ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಗೋವುಗಳ ಕುರ್ಬಾನಿ ಅಥವಾ ಬಲಿ ಕೊಡುವುದನ್ನು ಸಂಪೂರ್ಣವಾಗಿ ನಿಷೇಧಿಸುವುದರೊಂದಿಗೆ ಕುರ್ಬಾನಿಯ ಹೆಸರಲ್ಲಿ ಇತರೆ ಪ್ರಾಣಿಗಳನ್ನು ಸಾರ್ವಜನಿಕವಾಗಿ ಮತ್ತು ತೆರೆದ ಜಾಗದಲ್ಲಿ ಬಲಿ ಕೊಡುವುದನ್ನು ಕೂಡ ನಿಷೇಧಿಸಲಾಗಿದೆ. ಇದು ಹಿಂದುತ್ವವನ್ನು ಮತ್ತು ಬಿಜೆಪಿಯನ್ನು ವಿರೋಧಿಸುವವರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಸರ್ಕಾರ ಬಕ್ರೀದ್‌ಗಿಂತ ಮುಂಚೆ ಈ ಕಾನೂನನ್ನು ಜಾರಿಗೊಳಿಸಿದ್ದರಿಂದ ಈ ದಂಧೆಯಲ್ಲಿ ತೊಡಗಿಸಿಕೊಂಡ ಎಲ್ಲರಿಗೂ ಆರ್ಥಿಕ ನಷ್ಟವುಂಟಾಗುತ್ತಿರುವುದಂತೂ ಸತ್ಯ. ಇದಕ್ಕೆ ಪರ್ಯಾಯ ಮಾರ್ಗಗಳು ಸಾಕಷ್ಟಿರುವುದು ಗೋಚರಿಸಬೇಕಷ್ಟೇ.

ಮೋದಿಯನ್ನು ವಿರೋಧಿಸುವ ನೆವದಲ್ಲಿ ದೇಶಕ್ಕೆ ಅವಮಾನ ಸಲ್ಲದು

• ರಾಂ ಎಲ್ಲಂಗಳ

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಂತಾರಾಷ್ಟ್ರೀಯ ಪ್ರಶಸ್ತಿ ಸಿಗುವುದು ಹೊಸದೇನೂ ಅಲ್ಲ. ಮೊನ್ನೆ ಸ್ವೀಡನಿಗೆ ಹೋಗಿದ್ದಲ್ಲಿ ಸ್ವೀಡನ್ ಸರಕಾರದ ಪ್ರತಿಷ್ಠೆಯ ರಾಯಲ್ ಆರ್ಡರ್ ಆಫ್ ದಿ ಪೋಲಾರ್ ಸ್ಟಾರ್ ಪ್ರಶಸ್ತಿ ಲಭಿಸಿತು. ಬಳಿಕ ನಾರ್ವೆಗೆ ಹೋದಲ್ಲಿ ನಾರ್ವೆಯ ಪರಮೋಚ್ಚ ನಾಗರಿಕ ಪ್ರಶಸ್ತಿ ಗ್ರಾಂಡ್ ಕ್ರಾಸ್ ಆಫ್ ದಿ ರಾಯಲ್ ನೋರ್ವೇಜಿಯನ್ ಆರ್ಡರ್ ಆಫ್ ಮೆರಿಟ್ ಪ್ರಶಸ್ತಿ ಅವರ ಮುಡಿಗೇರಿತು. ಅದು ಅವರಿಗೊಲಿದು ಬಂದ 32ನೇ ಅಂತಾರಾಷ್ಟ್ರೀಯ ಪ್ರಶಸ್ತಿ. ಹೆಮ್ಮೆ ಪಡಬೇಕಾದ ಸಂಗತಿ. ಆದರೆ ಸುದ್ದಿ ಆದದ್ದು ಸದ್ದು ಮಾಡಿದ್ದು ಅದಲ್ಲ, ನಾರ್ವೆ ಪತ್ರಕರ್ತೆ ಒಬ್ಬಾಕೆಯ ಪ್ರಶ್ನೆಗೆ ಪ್ರಧಾನಿ ಮೋದಿ ಉತ್ತರಿಸದೆ ಇದ್ದದ್ದು!

ಪ್ರಧಾನಿ ಮೋದಿ ನಾರ್ವೆ ಪ್ರಧಾನಿ ಜಂಟಿ ಮಾಧ್ಯಮಗೋಷ್ಠಿಯಲ್ಲಿ ನಾರ್ವೆ ಪತ್ರಕರ್ತೆಯೊಬ್ಬಳು "ನೀವು ಮಾಧ್ಯಮಗಳ ಪ್ರಶ್ನೆಗಳಿಗೆ ಏಕೆ ಉತ್ತರಿಸುವುದಿಲ್ಲ" ಎಂದು ಕೇಳಿದಳಂತೆ, ಅದಕ್ಕೆ ಮೋದಿ ಉತ್ತರಿಸದೆ ಹೊರನಡೆದರಂತೆ. ಅದನ್ನ ಆಕೆ ಸಾಮಾಜಿಕ ಮಾಧ್ಯಮಗಳಲ್ಲಿ ಹಾಕಿಕೊಂಡಳಂತೆ. ನಮ್ಮ ಪ್ರತಿಪಕ್ಷದವರು ಆ ಬಗ್ಗೆನೇ ಹೇಳಿಕೆ ಕೊಡುವ ಮೂಲಕ ಸದ್ದು ಮಾಡಿದರು. ಮೋದಿ ವಿರುದ್ಧ ಹರಿಹಾಯ್ದರು. ಇಂತಹ ನಡವಳಿಕೆಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ದೇಶದ ಪ್ರತಿಷ್ಠೆಗೆ ಮಸಿ ಬಳಿಯುತ್ತವೆ ಎಂದರು. ನಾರ್ವೆಯಲ್ಲಿ ಇದ್ದುದು ಮಾಧ್ಯಮಗಳಿಗೆ ಮಾಹಿತಿ ನೀಡುವ ಗೋಷ್ಠಿಯೇ ಹೊರತು, ಮಾಧ್ಯಮದವರೊಂದಿಗೆ ಸಂವಾದವಲ್ಲ. ಅಲ್ಲಿ ಮಾಧ್ಯಮದವರಿಗೆ ಪ್ರಶ್ನೆ ಕೇಳುವ ಅವಕಾಶವೂ ಇರಲಿಲ್ಲ. ನಾರ್ವೆಯ ಪ್ರಧಾನಿಯೇ ಪತ್ರಕರ್ತೆಯ ನಡವಳಿಕೆ ಖಂಡಿಸಿದರು. ಆದರೆ ನಮ್ಮಲ್ಲಿನ ಪ್ರತಿಪಕ್ಷಗಳು ಮಾತ್ರ ವಿದೇಶಿ ಪತ್ರಕರ್ತೆಯ ಬೆಂಬಲಕ್ಕೆ ನಿಂತು ಪ್ರಧಾನಿ ಮೋದಿಯನ್ನೆ ಟೀಕಿಸಿದವು.

ಪ್ರತಿಪಕ್ಷಗಳು ಮೋದಿಯನ್ನು ಟಾರ್ಗೆಟ್ ಮಾಡುವುದು ಇದೇನೂ ಹೊಸದಲ್ಲ. ಮೋದಿ ಅಧಿಕಾರಕ್ಕೆ ಬಂದಂಧಿನಿಂದ ಕಾಂಗ್ರೆಸ್ ಅಂತೂ ಅದನ್ನೇ ಕಾಯಕವನ್ನಾಗಿಸಿಕೊಂಡಂತಿದೆ. ಸಣ್ಣ ಸಂಗತಿ ಆದರೂ ಸರಿ, ಅದನ್ನೇ ದೊಡ್ಡ ಅಸ್ತ್ರವನ್ನಾಗಿ ಕೈಗೆತ್ತಿಕೊಳ್ಳುವ ಪ್ರತಿಪಕ್ಷಕ್ಕೆ ಈ ಬಾರಿ ಕೆಲವಾರು ಸಂಗತಿಗಳು ಸಿಕ್ಕ ಖುಷಿ. ಕೊಲ್ಲಿಯುದ್ಧದಿಂದಾಗಿ ತಲೆದೋರಿರುವ ಜಾಗತಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿಯವರು ಇನ್ನೊಂದು ವರ್ಷ ಚಿನ್ನ ಖರೀದಿಸಬೇಡಿ, ಪೆಟ್ರೋಲ್ ಡೀಸೆಲ್ ಮಿತವಾಗಿ ಬಳಸಿ, ವಿದೇಶ ಪ್ರವಾಸ ಕಡಿಮೆ ಮಾಡಿ ಎಂದು ಜನರಿಗೆ ಕರೆ ನೀಡಿದರು. ವಿಪಕ್ಷಗಳಿಗೆ ಅಷ್ಟೇ ಸಾಕಾಯಿತು. ಇದು ಮೋದಿ ಸರ್ಕಾರದ ವೈಫಲ್ಯವೆಂದವು. ರಾಹುಲ್ ಗಾಂಧಿ ಮೋದಿ ದೇಶವನ್ನು ಮುನ್ನಡೆಸುವ ಸಾಮರ್ಥ್ಯ ಕಳೆದುಕೊಂಡಿದ್ದಾರೆ ಎಂದರು. ಇನ್ನಿತರ ರಾಜಕೀಯ ಮುಖಂಡರೂ ಅಂತಹುದೇ ಟೀಕೆ ಹರಿಬಿಟ್ಟರು. ಅವರ್ಯಾರೂ ಮೋದಿಯವರ ಹೇಳಿಕೆ ಹಿಂದಿನ ಕಾಳಜಿಯನ್ನು ಅರ್ಥ ಮಾಡಿಕೊಳ್ಳುವ ಗೊಡವೆಗೆ ಹೋದಂತಿಲ್ಲ. ಇಂಥದ್ದೇ ಕಠಿಣ ಸಂದರ್ಭದಲ್ಲಿ ಹಿಂದಿನ ಕಾಂಗ್ರೆಸ್ ಪ್ರಧಾನಿಗಳು ವಾರಕ್ಕೆ ಒಂದು ದಿನ ಊಟ ಬಿಡುವಂತೆ ಕರೆ ನೀಡಿದ್ದೂ ಇದೆ.



ಭಾರತ -ಇಟಲಿ ನಡುವಣ ವ್ಯಾಪಾರ ಒಪ್ಪಂದ ಸಲುವಾಗಿ ಇಟಲಿಗೆ ಭೇಟಿ ನೀಡಿದ ಮೋದಿಯವರು ಅಲ್ಲಿಯ ಪ್ರಧಾನಿ ಮೆಲೋನಿಯವರಿಗೆ ಮೆಲೋಡಿ ಚಾಕಲೇಟ್ ನೀಡಿದ್ದು ಕೂಡ ವಿಪಕ್ಷ ಮುಖಂಡರಿಗೆ ಟೀಕೆಗೆ ವಸ್ತುವಾಯಿತು. ಅದನ್ನೇ ಲೇವಡಿ ಮಾಡಿದರು. ಲೇವಡಿಯು ವೈಯಕ್ತಿಕ ನೆಲೆಯಲ್ಲಿ ಮೋದಿಯವರನ್ನು ಹೀಯಾಳಿಸುವುದರ ಮಟ್ಟಕ್ಕೂ ಇಳಿಯಿತು. ಮೋದಿ ಚಾಕ್ಲೆಟ್ ಕೊಟ್ಟದ್ದೇನೋ ನಿಜ. ಆದರೆ ಹಿಂದೆ ಪ್ರಧಾನಿಯಾಗಿದ್ದ ಜವಾಹರ್ ಲಾಲ್ ನೆಹರು ವಿದೇಶಿ ಮಹಿಳೆಯೊಬ್ಬರಿಗೆ ಸಿಗರೇಟು ಸೇದಿಸಿದ್ದರು. ಆ ಚಿತ್ರ ಈಗ ಮಾಧ್ಯಮಗಳಲ್ಲಿ ಹರಿದಾಡುವಂತಾಯಿತು. ವಾಸ್ತವದಲ್ಲಿ ಮೋದಿ ಅವರು ಪಾರ್ಲೆಯವರ ಚಾಕೊಲೇಟ್ ಕೊಟ್ಟದ್ದು ಮೇಕ್ ಇನ್ ಇಂಡಿಯಾದ ಪರೋಕ್ಷ ಪ್ರಚಾರ ತಂತ್ರವಾಗಿತ್ತು. ಜಾಲತಾಣಗಳಲ್ಲಿ ಪಡೆದ ಪ್ರಚಾರದ ಪರಿಣಾಮವಾಗಿ ಪಾರ್ಲೆ ಶೇರ್ 5% ಹೆಚ್ಚಳ ಕಾಣುವಂತಾಯಿತು.

ಈ ಬಾರಿ ನೀಟ್ ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿತ್ತಷ್ಟೇ. ಪ್ರತಿಪಕ್ಷ ಆ ಘಟನೆಯನ್ನೂ ಮೋದಿ ಸರ್ಕಾರ ವಿರುದ್ಧ ಅಸ್ತ್ರವನ್ನಾಗಿ ಬಳಸಲು ಮರೆಯಲಿಲ್ಲ. ನೊಂದ ವಿದ್ಯಾರ್ಥಿಗಳಿಗೆ ಬೆಂಬಲವಾಗಿ ನಿಲ್ಲುವ ನೆವದಲ್ಲಿ ಕೇಂದ್ರ ಸರ್ಕಾರ ಹಾಗೂ ಕೇಂದ್ರ ಶಿಕ್ಷಣ ಸಚಿವರ ವಿರುದ್ಧ ಹಿಗ್ಗಾಮುಗ್ಗ ಕೂಗಾಡಿತು. ಪ್ರತಿಪಕ್ಷಗಳಲ್ಲೊಂದಾದ ಆಮ್ ಆದ್ಮಿ ಪಾರ್ಟಿಯ ಅರವಿಂದ ಕೇಜ್ರಿವಾಲ್ ನೇಪಾಲ್ ಬಾಂಗ್ಲಾದೇಶದ ರೀತಿ ಜೆನ್-ಝೀ ವಿದ್ಯಾರ್ಥಿಗಳು ದೇಶದಲ್ಲಿ ದಂಗೆಯೇಳುವಂತೆ ಕರೆ ನೀಡಿದರು. ಅದಾದ ಕೆಲವೇ ದಿನಗಳಲ್ಲಿ ಕಾಕ್ರೋಚ್ ಜನತಾ ಪಾರ್ಟಿ ಎಂಬ ವಿಡಂಬನಾತ್ಮಕ ಆನ್ಲೈನ್ ಸಂಘಟನೆಯೊಂದು ಹುಟ್ಟಿಕೊಂಡಿತು. ಅಚ್ಚರಿ ಎಂದರೆ ಬಿಜೆಪಿಯನ್ನು ಹಿಂದಿಕ್ಕಿ ಅದು ಐದೇ ದಿನದಲ್ಲಿ 80 ಲಕ್ಷ ಫಾಲೋವರ್ಸ್ ಹೊಂದಿತು. ಮಾಧ್ಯಮಗಳು ಇದನ್ನೇ ಅದ್ಭುತ ಸಾಧನೆ ಎಂಬುದಾಗಿ ವೈಭವೀಕರಿಸಿದವು.

ಆದರೆ ಈ ಜಿರಳೆ ಪಕ್ಷದ ಉದಯದ ಹಿಂದಿನ ಉದ್ದೇಶವು ನಿಗೂಢವಾಗಿರುವುದೂ ಅಷ್ಟೇ ನಿಜ. ರಾತ್ರಿ ಬೆಳಗಾಗುವುದರೊಳಗಾಗಿ ಸಾಕಷ್ಟು ಪ್ರಚಾರ ಪಡೆದ ಕಾಕ್ರೋಚ್ ಜನತಾ ಪಕ್ಷವನ್ನು ಹುಟ್ಟುಹಾಕಿದ ಅಭಿಜಿತ್ ದೀಪ್ಕೆ ಅಮೆರಿಕದಲ್ಲಿ ನೆಲೆಸಿದ್ದಾನೆ. ಪಕ್ಷದ ಬಹುತೇಕ ಫಾಲೋವರ್ಸ್ ಪಾಕಿಸ್ತಾನದವರು. 2021ರಲ್ಲಿದ್ದ ಆಮ್ ಆದ್ಮಿ ಪಾರ್ಟಿ ಗುಜರಾತಿ ಈಗ ಜಿರಳೆ ಪಕ್ಷ ಅವತಾರದಲ್ಲಿ ಕಾಣಿಸಿಕೊಂಡಿದೆಯೆನ್ನುವ ಮಾತೂ ಇದೆ. ಯುವಜನರು ಬೀದಿಗಿಳಿಯುವಂತೆ ಮಾಡಿ ದೇಶದಲ್ಲಿ ಅಸ್ಥಿರತೆ ಹುಟ್ಟುಹಾಕುವುದು ಇದರ ಉದ್ದೇಶವಾಗಿರುವಂತೆ ಕಂಡುಬರುತ್ತಿದೆ. ಇದನ್ನು ಮನಗಂಡೇ ಕೇಂದ್ರ ಸರ್ಕಾರ 'ಜಿರಳೆ'ಯ ಎಕ್ಸ್ ಖಾತೆಯನ್ನು ಬ್ಯಾನ್ ಮಾಡಿದೆ.

ಚುನಾವಣೆಯಿಂದ ಚುನಾವಣೆಗೆ ರಾಜಕೀಯ ಸ್ಥಿತಿಗಳು ಬದಲಾಗುತ್ತಲೇ ಬಂದಿವೆ. ಎಲ್ಲೋ ಒಂದು ಕಡೆ ನಮ್ಮ ಪ್ರತಿಪಕ್ಷಗಳಿಗೆ ಅಭದ್ರತೆ ಕಾಡತೊಡಗಿದೆ ಅನಿಸುತ್ತಿದೆ. ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು 21 ರಾಜ್ಯಗಳಲ್ಲಿ ಸರಕಾರ ಹೊಂದಿದ್ದರೆ ಕಾಂಗ್ರೆಸ್ ಮತ್ತು ಮಿತ್ರಪಕ್ಷ ಕೇವಲ 5 ರಾಜ್ಯಗಳಲ್ಲಷ್ಟೇ ಅಧಿಕಾರದಲ್ಲಿವೆ. ಕೇರಳದಲ್ಲಿ ಅಧಿಕಾರ ವಹಿಸಿಕೊಂಡ ಯುಡಿಎಫ್‌ನ ವಿ. ಡಿ. ಸತೀಶನ್ ಕೋಮು ಶಕ್ತಿಗಳನ್ನು ಹತ್ತಿಕ್ಕುವುದಾಗಿ ಹೇಳಿದ್ದಾರೆ. ಅಧಿಕಾರದಿಂದ ನಿರ್ಗಮಿಸಿದ ಪಿಣರಾಯಿ ವಿಜಯನ್ ಕೇರಳದಲ್ಲಿ ಬಿಜೆಪಿ ಮೂರು ಸೀಟು ಗೆದ್ದಿದ್ದು ಆತಂಕಕಾರಿ ಎಂದಿದ್ದಾರೆ. ಇಬ್ಬರೂ ಟಾರ್ಗೆಟ್ ಮಾಡಿದ್ದು ಬಿಜೆಪಿಯನ್ನು! ಅಧಿಕಾರ ಕಳಕೊಂಡ ಎಲ್ಲ ಪಕ್ಷಗಳು ಬಿಜೆಪಿಯನ್ನು ಮತ್ತು ಮೋದಿಯವರನ್ನು ಟಾರ್ಗೆಟ್ ಮಾಡುತ್ತಿರುವುದೊಂದು ವಿಶೇಷ. ಪ್ರತಿಪಕ್ಷಗಳ ನಡೆ ನುಡಿಗಳಲ್ಲೆಲ್ಲ ಮೋದಿ ಬಗೆಗಿನ ಅಸಹನೆ ಎದ್ದುಕಾಣುತ್ತದೆ.

ಇದರನಡುವೆ, ಮೋದಿಯವರ ಟೀಕಾಕಾರರಾಗಿದ್ದ ಚಿತ್ರನಟಿ ಗುಲ್ ಪನಾಗ್, 'ಮೋದಿಯವರನ್ನು ವಿರೋಧಿಸುವ ನೆವದಲ್ಲಿ ದೇಶಕ್ಕೆ ಅವಮಾನ ಮಾಡಬೇಡಿ' ಎಂಬುದಾಗಿ ಎಚ್ಚರಿಸಿದ್ದಾಳೆ. ಈ ಎಚ್ಚರಿಕೆಯು ಮೋದಿ ಮಾಡಿದ್ದೆಲ್ಲವನ್ನು ವಿರೋಧಕ್ಕಾಗಿ ವಿರೋಧ ಎಂಬಂತೆ ವಿರೋಧಿಸುವ ಎಲ್ಲ ವಿರೋಧ ಪಕ್ಷಗಳಿಗೂ, ವಿರೋಧ ಶಕ್ತಿಗಳಿಗೂ ಅನ್ವಯ.



ಪುದುಚೇರಿ ಮಣ್ಣಿನ ಮಗ ಎಂದೇ ಖ್ಯಾತಿ ಪಡೆದಿರುವ ಸಿಲಂಬಮ್ ದಂತಕಥೆ ಕೆ. ಪಳನಿವೇಲ್ ಅವರು ಪದ್ಮಶ್ರೀ ಸ್ವೀಕರಿಸುವ ಮುನ್ನ ಪ್ರಧಾನಿ ಮೋದಿಯವರಿಗೆ ಶಿರಬಾಗಿ ನಮಸ್ಕರಿಸಿದ ಕ್ಷಣ.

ರಾಷ್ಟ್ರಪತಿಭವನದಲ್ಲಿ 66 ಗಣ್ಯರಿಗೆ ಸನ್ಮಾನ

ಸಾಧಕರಿಗೆ ಪದ್ಮ ಪ್ರಶಸ್ತಿ

ಹೊಸದಿಲ್ಲಿ: ಕರ್ನಾಟಕದ ಸಾಧಕರಿಗೆ ಸೇರಿ 66 ಮಂದಿಗೆ ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ 2026ನೇ ಸಾಲಿನ ಪದ್ಮ ಪ್ರಶಸ್ತಿಗಳನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಕರ್ನಾಟಕದ ಶತಾವಧಾನಿ ಆರ್. ಗಣೇಶ್ ಅವರಿಗೆ ಕಲಾ ಕ್ಷೇತ್ರಕ್ಕೆ ಸಲ್ಲಿಸಿದ ಶ್ರೇಷ್ಠ ಕೊಡುಗೆಗಳಿಗಾಗಿ ಪದ್ಮಭೂಷಣ ಪ್ರಶಸ್ತಿ ಮತ್ತು ಸಮಾಜ ಸೇವೆ ಕ್ಷೇತ್ರದಲ್ಲಿ ಅಂಕೇಗೌಡ ಎಂ. ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಡಾ. ಪ್ರಭಾಕರ ಬಸವಪ್ರಭು ಕೋರೆ, ಶಶಿ ಶೇಖರ್ ವೆಂಪತಿ, ಸಮಾಜ ಸೇವೆ ಕ್ಷೇತ್ರದಲ್ಲಿ ಎಸ್.ಜಿ ಸುಶೀಲಮ್ಮ, ವಿಜ್ಞಾನ ಮತ್ತು ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಶುಭಾ ವೆಂಕಟೇಶ್ ಅಯ್ಯಂಗಾರ್, ವೈದ್ಯಕೀಯ ಕ್ಷೇತ್ರದಲ್ಲಿ ಡಾ. ಸುರೇಶ ಹನಗವಾಡಿ, ವ್ಯಾಪಾರ ಮತ್ತು ಕೈಗಾರಿಕೆ ಕ್ಷೇತ್ರದಲ್ಲಿ ಟಿ.ಟಿ ಜಗನ್ನಾಥನ್ (ಮರಣೋತ್ತರ) ಪದ್ಮಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.



ಅಂತೆಯೇ ನಟ ಧರ್ಮೇಂದ್ರ ಅವರಿಗೆ ಮರಣೋತ್ತರವಾಗಿ ರಾಷ್ಟ್ರಪತಿ ಮುರ್ಮು ಅವರು ಪದ್ಮವಿಭೂಷಣ ಪ್ರದಾನ ಮಾಡಿದ್ದು, ನಟಿ ಹೇಮಾ ಮಾಲಿನಿ ಈ ಪ್ರಶಸ್ತಿ ಸ್ವೀಕರಿಸಿದ್ದಾರೆ.

ಉಪರಾಷ್ಟ್ರಪತಿ ಸಿ.ಪಿ ರಾಧಾಕೃಷ್ಣನ್, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಇತರ ಗಣ್ಯರು ಈ ವೇಳೆ ಉಪಸ್ಥಿತರಿದ್ದರು.

ತಾಜ್‌ಮಹಲ್, ಆಮೇರ್ ಕೋಟೆ ವೀಕ್ಷಿಸಿದ ರೂಬಿಯೊ

ಹೊಸದಿಲ್ಲಿ / ಆಗ್ರಾ / ಜೈಪುರ: ಕ್ವಾಡ್ ವಿದೇಶಾಂಗ ಸಚಿವರ ಮಹತ್ವದ ಸಭೆಗೆ ಮುನ್ನ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೋ ರೂಬಿಯೊ ಸೋಮವಾರ ಆಗ್ರಾದ ತಾಜ್ ಮಹಲ್ ಹಾಗೂ ಜೈಪುರದ ಆಮೇರ್ ಕೋಟೆಗೆ ಭೇಟಿ ನೀಡಿ ಭಾರತದ ಐತಿಹಾಸಿಕ ವೈಭವವನ್ನು ಕಣ್ತುಂಬಿಕೊಂಡರು. ಅವರೊಂದಿಗೆ ಪತ್ನಿ ಜೀನೆಟ್ ರೂಬಿಯೊ ಹಾಗೂ ಭಾರತದಲ್ಲಿನ ಅಮೆರಿಕ ರಾಯಭಾರಿ ಸರ್ಜಿಯೋ ಗೋರ್ ಕೂಡ ಇದ್ದರು.

» ಕ್ವಾಡ್ ಸಭೆಗೆ ಮುನ್ನ ದಿಲ್ಲಿ ಸುತ್ತ ಸುತ್ತಾಟ

ನಾಲ್ಕು ದಿನಗಳ ಭಾರತ ಪ್ರವಾಸದಲ್ಲಿರುವ ರೂಬಿಯೊ ವಿಶೇಷ ವಿಮಾನದ ಮೂಲಕ ಆಗ್ರಾದ ಖೇರಿಯಾ ವಿಮಾನ ನಿಲ್ದಾಣಕ್ಕೆ ಆಗಮಿಸಿದರು. ಅಲ್ಲಿಂದ ತಾಜ್ ಮಹಲ್ ಸಮೀಪದ ಹೋಟೆಲ್‌ಗೆ ತೆರಳಿ ಬಳಿಕ ಗಾಲ್ಫ್ ಕಾರ್ಟ್‌ನಲ್ಲಿ ಸ್ಮಾರಕ ವೀಕ್ಷಣೆಗೆ ತೆರಳಿದರು.

ಬಳಿಕ ಜೈಪುರದ ಅಮೆರ್ ಕೋಟ್‌ಗೆ ಭೇಟಿ ನೀಡಿದ ರೂಬಿಯೊ ದಂಪತಿಗೆ ಸಾಂಪ್ರದಾಯಿಕ ರಾಜಸ್ಥಾನಿ ಶೈಲಿಯಲ್ಲಿ ಸ್ವಾಗತ ಕೋರಲಾಯಿತು. 16ನೇ ಶತಮಾನದ ಕೋಟೆಯಲ್ಲಿ ಕಚ್ಚಿ ಘೋಡಿ ಹಾಗೂ ಘೂಮರ್ ಜನಪದ ನೃತ್ಯಗಳ ಪ್ರದರ್ಶನವೂ ಆಯೋಜಿಸಲಾಗಿತ್ತು.

ಇಂದು ಮಹತ್ವದ ಕ್ವಾಡ್ ಸಭೆ: ಮಂಗಳವಾರ ದಿಲ್ಲಿಯಲ್ಲಿ ನಡೆಯಲಿರುವ ಕ್ವಾಡ್ ವಿದೇಶಾಂಗ ಸಚಿವರ ಸಭೆಯಲ್ಲಿ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಭೆಯಲ್ಲಿ ಆಸ್ಟ್ರೇಲಿಯಾದ ವಿದೇಶಾಂಗ ಸಚಿವೆ ಪೆನ್ನಿ ವಾಂಗ್ ಹಾಗೂ ಜಪಾನ್ ವಿದೇಶಾಂಗ ಸಚಿವ ತುಷಿಮಿತ್ಸು ಮೊಟೇಗಿ ಭಾಗವಹಿಸಲಿದ್ದಾರೆ. ಭಾರತ, ಅಮೆರಿಕ, ಆಸ್ಟ್ರೇಲಿಯಾ ಹಾಗೂ ಜಪಾನ್ ಒಳಗೊಂಡಿರುವ ಕ್ವಾಡ್ ಮೈತ್ರಿಕೂಟ ಇಂಡೋ-ಪೆಸಿಫಿಕ್ ಪ್ರದೇಶದಲ್ಲಿ ಶಾಂತಿ, ಭದ್ರತೆ ಮತ್ತು ಸ್ಥಿರತೆ ಕಾಪಾಡುವ ಉದ್ದೇಶದಿಂದ ಮಹತ್ವ ಪಡೆದುಕೊಂಡಿದೆ.



ಭಾರತಕ್ಕೆ ಮರಳಿದ ಅನೈಮಂಗಲಂ ತಾಮ್ರ ಶಾಸನ

ಸುದ್ದಿ ಸಮಗ್ರ

ನೆದರ್‌ಲ್ಯಾಂಡ್ಸ್‌ನ ಲೈಡನ್ ವಿಶ್ವವಿದ್ಯಾಲಯದಲ್ಲಿದ್ದ 11ನೇ ಶತಮಾನದ ಚೋಳರ ಅನೈಮಂಗಲಂ ತಾಮ್ರಶಾಸನವನ್ನು ಭಾರತಕ್ಕೆ ಹಸ್ತಾಂತರಿಸಲಾಗಿದೆ. ಚೋಳರ ಆಡಳಿತ ವೈಭವ, ತೆರಿಗೆ ವ್ಯವಸ್ಥೆ, ಸಮುದ್ರಾಚೆಯ ರಾಜತಾಂತ್ರಿಕತೆ ಹಾಗೂ ತಮಿಳು ಭಾಷೆಯ ಆಡಳಿತ ಸಾಮರ್ಥ್ಯವನ್ನು ದಾಖಲಿಸಿರುವ ಈ ತಾಮ್ರಫಲಕಗಳು ಸಾವಿರ ವರ್ಷದ ಭಾರತದ ನಾಗರಿಕತೆಯ ಮಹತ್ವವನ್ನು ಮರುಸ್ಥಾಪಿಸಿವೆ.

ಸಾವಿರ ವರ್ಷಗಳ ಇತಿಹಾಸ

ಸುಮಾರು ಸಾವಿರ ವರ್ಷಗಳ ಹಿಂದಿನ ಚೋಳ ಸಾಮ್ರಾಜ್ಯದ ಆಡಳಿತ ಶಕ್ತಿ, ಸಮುದ್ರಾಚೆಯ ಸಂಪರ್ಕ ಹಾಗೂ ತಮಿಳು ನಾಗರಿಕತೆಯ ಜಾಗತಿಕ ಪ್ರಭಾವವನ್ನು ಸಾರುವ ಅನೈಮಂಗಲಂ ತಾಮ್ರಶಾಸನ ಭಾರತಕ್ಕೆ ಮರಳಿದೆ. ನೆದರ್‌ಲ್ಯಾಂಡ್ಸ್‌ನ ಲೈಡನ್ ವಿಶ್ವವಿದ್ಯಾಲಯದಲ್ಲಿದ್ದ ಈ ಅಮೂಲ್ಯ ಐತಿಹಾಸಿಕ ದಾಖಲೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರ 2026ರ ನೆದರ್‌ಲ್ಯಾಂಡ್ಸ್ ಭೇಟಿಯ ವೇಳೆ ಭಾರತ ಸರ್ಕಾರಕ್ಕೆ ಅಧಿಕೃತವಾಗಿ ಹಸ್ತಾಂತರಿಸಲಾಗಿದೆ.

11ನೇ ಶತಮಾನಕ್ಕೆ ಸೇರಿದ ಈ ತಾಮ್ರಫಲಕಗಳು ಚೋಳರ ಕಾಲದ ಅತ್ಯಂತ ಪ್ರಮುಖ ದಾಖಲೆಗಳೆಂದು ಪರಿಗಣಿಸಲಾಗಿದೆ. ಅನೈಮಂಗಲಂ ಗ್ರಾಮದ ಭೂಮಿಯ ಆದಾಯವನ್ನು ನಾಗಪಟ್ಟಣದಲ್ಲಿದ್ದ ಚೂಡಾಮಣಿ ವಿಹಾರಕ್ಕೆ ನೀಡಿರುವ ಬಗ್ಗೆ ಇದರಲ್ಲಿ ಉಲ್ಲೇಖವಿದೆ. ಶ್ರೀವಿಜಯ ರಾಜನು ನಿರ್ಮಿಸಿದ್ದ ಈ ಬೌದ್ಧ ವಿಹಾರಕ್ಕೆ ರಾಜರಾಜ ಚೋಳನು ಅನುಮತಿ ನೀಡಿದ್ದನು. ಬಳಿಕ ರಾಜೇಂದ್ರ ಚೋಳನ ಕಾಲದಲ್ಲಿ ಈ ಆದೇಶವನ್ನು ತಾಮ್ರಫಲಕಗಳಲ್ಲಿ ಕೆತ್ತಿಸಿ ಶಾಶ್ವತ ದಾಖಲೆ ಮಾಡಲಾಗಿತ್ತು.

ಅನೈಮಂಗಲಂ ತಾಮ್ರಶಾಸನ ಏಕೆ ವಿಶೇಷ?

ಚೋಳ ಸಾಮ್ರಾಜ್ಯದ ಆಡಳಿತ ವೈಭವವನ್ನು ನೇರವಾಗಿ ದಾಖಲಿಸಿರುವ ಅಪರೂಪದ ದಾಖಲೆಗಳಲ್ಲೊಂದು ಎಂಬ ಕಾರಣಕ್ಕೆ ಅನೈಮಂಗಲಂ ತಾಮ್ರಶಾಸನಕ್ಕೆ ವಿಶೇಷ ಮಹತ್ವ ಇದೆ. ಭೂದಾನ, ತೆರಿಗೆ ವಿನಾಯಿತಿ, ಗ್ರಾಮಾಡಳಿತ ಹಾಗೂ ಅಧಿಕೃತ ದಾಖಲೆ ನಿರ್ವಹಣೆಯ ವ್ಯವಸ್ಥೆ ಸಾವಿರ ವರ್ಷಗಳ ಹಿಂದೆಯೇ ಭಾರತದಲ್ಲಿ ಉನ್ನತ ಮಟ್ಟದಲ್ಲಿತ್ತೆಂಬುದನ್ನು ಇದು ಸಾಬೀತುಪಡಿಸುತ್ತದೆ. ಜೊತೆಗೆ ದಕ್ಷಿಣ ಏಷ್ಯಾ ರಾಷ್ಟ್ರಗಳೊಂದಿಗೆ ಚೋಳರ ರಾಜತಾಂತ್ರಿಕ ಸಂಪರ್ಕ ಮತ್ತು ಸಮುದ್ರಾಚೆಯ ಪ್ರಭಾವಕ್ಕೂ ಇದು ಐತಿಹಾಸಿಕ ಸಾಕ್ಷಿಯಾಗಿದೆ.

ಚೋಳರ ಆಡಳಿತ ವ್ಯವಸ್ಥೆಯ ದರ್ಶನ

ಈ ತಾಮ್ರಶಾಸನಗಳು ಕೇವಲ ಧಾರ್ಮಿಕ ದಾಖಲೆಗಳಲ್ಲ. ಭೂಮಿಯ ಹಕ್ಕು, ತೆರಿಗೆ ವಿನಾಯಿತಿ, ಆದಾಯ ಹಂಚಿಕೆ ಹಾಗೂ ಆಡಳಿತಾತ್ಮಕ ಮಾನ್ಯತೆ ಕುರಿತ ವಿವರಗಳನ್ನು ಒಳಗೊಂಡಿವೆ. ಚೋಳರ ಆಡಳಿತ ವ್ಯವಸ್ಥೆ ಎಷ್ಟು ಸಂಘಟಿತವಾಗಿತ್ತೆಂಬುದಕ್ಕೆ ಇದು ಮಹತ್ವದ ಸಾಕ್ಷಿಯಾಗಿದೆ. ರಾಜರಾಜ ಚೋಳ ಮತ್ತು ರಾಜೇಂದ್ರ ಚೋಳರ ವಂಶಾವಳಿ, ಸೇನಾ ವಿಜಯಗಳು ಹಾಗೂ ಅಧಿಕಾರಿಗಳ ಅಧಿಕೃತ ಮುದ್ರೆಗಳೂ ಇದರಲ್ಲಿ ದಾಖಲಾಗಿವೆ. ತಮಿಳು ಮತ್ತು ಸಂಸ್ಕೃತ ಎರಡೂ ಭಾಷೆಗಳ ಬಳಕೆ ಈ ತಾಮ್ರಫಲಕಗಳ ಮತ್ತೊಂದು ವೈಶಿಷ್ಟ್ಯ. ರಾಜವಂಶ ಮತ್ತು ಧಾರ್ಮಿಕ ಉಲ್ಲೇಖಗಳಿಗೆ ಸಂಸ್ಕೃತ ಬಳಸಲಾಗಿದ್ದರೆ, ಭೂಮಿ, ತೆರಿಗೆ ಹಾಗೂ ಆಡಳಿತದ ವಿಷಯಗಳಿಗೆ ತಮಿಳು ಬಳಸಲಾಗಿದೆ. ಇದರಿಂದ ಚೋಳರ ಕಾಲದಲ್ಲೇ ತಮಿಳು ಒಂದು ಪ್ರಬಲ ಆಡಳಿತ ಭಾಷೆಯಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ದಾಖಲೆಯಲ್ಲಿ ಚೋಳರ ಆಡಳಿತ ಕೇವಲ ಹಿಂದೂ ಧಾರ್ಮಿಕ ಕೇಂದ್ರಗಳಿಗೆ ಸೀಮಿತವಾಗಿರಲಿಲ್ಲ ಎಂಬುದೂ ಉಲ್ಲೇಖವಾಗಿದೆ. ಶೈವ ಪರಂಪರೆಯೊಂದಿಗೆ ಬೌದ್ಧ ಸಂಸ್ಥೆಗಳಿಗೆ ಸಹ ಆಶ್ರಯ ನೀಡಿದ ರಾಜತಾಂತ್ರಿಕ ಹಾಗೂ ಸಾಂಸ್ಕೃತಿಕ ಉದಾರತೆ ಚೋಳರ ಆಡಳಿತದಲ್ಲಿತ್ತು ಎಂದು ಇದರಿಂದ ತಿಳಿದುಬರುತ್ತದೆ.

ಚೋಳರ ವೈಭವಕ್ಕೆ ಮರಳಿದ ಸಾವಿರ ವರ್ಷದ ಸಾಕ್ಷಿ



2014ರ ಬಳಿಕ ಭಾರತಕ್ಕೆ ಮರಳಿದ ಪುರಾತನ ವಸ್ತುಗಳು

2014ರ ಬಳಿಕ ಭಾರತಕ್ಕೆ ವಿದೇಶಗಳಿಂದ ನೂರಾರು ಪುರಾತನ ವಸ್ತುಗಳು ಮರಳಿವೆ. ಸಂಸತ್ತಿನ ದಾಖಲೆಗಳ ಪ್ರಕಾರ 1976ರಿಂದ 2024ರವರೆಗೆ ಭಾರತಕ್ಕೆ ಮರಳಿದ 655 ಪುರಾತನ ವಸ್ತುಗಳಲ್ಲಿ 642 ವಸ್ತುಗಳು 2014ರ ನಂತರವೇ ವಾಪಸ್ಸಾಗಿವೆ. ಅಮೆರಿಕ, ಆಸ್ಟ್ರೇಲಿಯಾ, ಬ್ರಿಟನ್, ಸಿಂಗಾಪುರ ಮತ್ತು ನೆದರ್‌ಲ್ಯಾಂಡ್ಸ್ ಸೇರಿದಂತೆ ಹಲವು ದೇಶಗಳು ಭಾರತೀಯ ಮೂರ್ತಿಗಳು, ತಾಮ್ರಫಲಕಗಳು ಹಾಗೂ ದೇವಾಲಯಗಳ ಪುರಾವಸ್ತುಗಳನ್ನು ಹಿಂತಿರುಗಿಸಿವೆ. ಶ್ರೀಪುರಂತನ ನಟರಾಜ ಮೂರ್ತಿಯಿಂದ ಹಿಡಿದು ಈಗಿನ ಅನೈಮಂಗಲಂ ತಾಮ್ರಶಾಸನದವರೆಗೆ ಇದು ನಿರಂತರ ಸಾಂಸ್ಕೃತಿಕ ಮರುಸ್ವಾಧೀನ ಪ್ರಕ್ರಿಯೆಯಾಗಿದೆ.

ಚೋಳರ ಸಮುದ್ರದಾಚೆಯ ಪ್ರಭಾವಕ್ಕೆ ಸಾಕ್ಷಿ

ಅನೈಮಂಗಲಂ ತಾಮ್ರಶಾಸನವು ದಕ್ಷಿಣ ಏಷ್ಯಾದ ರಾಷ್ಟ್ರಗಳೊಂದಿಗೆ ಚೋಳರ ರಾಜತಾಂತ್ರಿಕ ಸಂಪರ್ಕವನ್ನೂ ಬೆಳಕಿಗೆ ತರುತ್ತದೆ. ಶ್ರೀವಿಜಯ ರಾಜನ ಮನವಿಗೆ ಸ್ಪಂದಿಸಿ ನಾಗಪಟ್ಟಣದ ಬೌದ್ಧ ವಿಹಾರಕ್ಕೆ ಭೂದಾನ ನೀಡಿರುವುದು, ಚೋಳರು ಸಮುದ್ರ ವ್ಯಾಪಾರ ಮತ್ತು ಸಾಂಸ್ಕೃತಿಕ ಸಂಪರ್ಕಗಳಲ್ಲಿ ಎಷ್ಟು ಪ್ರಭಾವಶಾಲಿಗಳಾಗಿದ್ದರು ಎಂಬುದನ್ನು ತೋರಿಸುತ್ತದೆ. ಚೋಳ ಸಾಮ್ರಾಜ್ಯವು ಕೇವಲ ದಕ್ಷಿಣ ಭಾರತದ ಶಕ್ತಿಯಲ್ಲ, ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡ ಸಮುದ್ರ ಸಾಮ್ರಾಜ್ಯವಾಗಿತ್ತೆಂಬುದಕ್ಕೂ ಇದು ಐತಿಹಾಸಿಕ ದಾಖಲೆ ಆಗಿದೆ.

ಚೋಳರ ಆಡಳಿತ ಎಷ್ಟು ಮುಂದುವರಿದಿತ್ತು?

ಅನೈಮಂಗಲಂ ತಾಮ್ರಶಾಸನವು ಚೋಳರ ಕಾಲದ ಆಡಳಿತ ವ್ಯವಸ್ಥೆ ಎಷ್ಟು ಶಿಸ್ತಿನದ್ದಾಗಿತ್ತೆಂಬುದನ್ನು ತೋರಿಸುತ್ತದೆ. ಭೂಮಿಯ ಹಕ್ಕು, ತೆರಿಗೆ ವಿನಾಯಿತಿ, ಆದಾಯ ಹಂಚಿಕೆ, ಗ್ರಾಮಾಡಳಿತ ಹಾಗೂ ಅಧಿಕಾರಿಗಳ ದೃಢೀಕರಣದ ವಿವರಗಳನ್ನು ತಾಮ್ರಫಲಕಗಳಲ್ಲಿ ಸ್ಪಷ್ಟವಾಗಿ ದಾಖಲಿಸಲಾಗಿದೆ. ರಾಜಾಜ್ಞೆಯನ್ನು ಕೇವಲ ಮಾತಿನಲ್ಲಿ ಬಿಡದೆ ಅಧಿಕೃತ ದಾಖಲೆಯಾಗಿ ಉಳಿಸುವ ಪದ್ಧತಿ ಚೋಳರಲ್ಲಿದ್ದುದನ್ನು ಇದು ಸಾಬೀತುಪಡಿಸುತ್ತದೆ.

ಚೋಳರ ಜಾಗತಿಕ ಪ್ರಭಾವದ ಪ್ರತೀಕ

ಅನೈಮಂಗಲಂ ತಾಮ್ರಶಾಸನದ ವಾಪಸ್ಸು ಕೇವಲ ಒಂದು ಪುರಾತನ ವಸ್ತುವಿನ ಮರುಪಡೆಯುವಿಕೆಯಾಗಿಲ್ಲ, ಅದು ಭಾರತದ ನಾಗರಿಕತೆಯ ಶಕ್ತಿ, ತಮಿಳು ವೈಭವ ಮತ್ತು ಚೋಳರ ಜಾಗತಿಕ ಪ್ರಭಾವಕ್ಕೆ ದೊರೆತ ಹೊಸ ಮಾನ್ಯತೆಯಾಗಿದೆ. ಸಾವಿರ ವರ್ಷಗಳ ಹಿಂದೆಯೇ ಆಡಳಿತ, ದಾಖಲೆ ನಿರ್ವಹಣೆ ಮತ್ತು ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ಭಾರತ ಎಷ್ಟು ಮುಂದುವರಿದಿತ್ತೆಂಬುದನ್ನು ಈ ತಾಮ್ರಫಲಕಗಳು ಮತ್ತೆ ಜಗತ್ತಿಗೆ ನೆನಪಿಸಿವೆ.



ಕಿರುಸುದ್ದಿ

ಆಪರೇಷನ್ ವಿಜಯ್: 3 ಶಾಸಕರು ಟಿವಿಕೆಗೆ

ಚೆನ್ನೈ: ತಮಿಳುನಾಡಿನಲ್ಲಿ ಆಪರೇಷನ್ ವಿಜಯ್ ಪರ್ವ ಆರಂಭವಾಗಿದ್ದು, ಆಂತರಿಕ ಬಿಕ್ಕಟ್ಟಿನಿಂದ ಅದರ ಮೂವರು ಶಾಸಕರು ಸೋಮವಾರ ರಾಜೀನಾಮೆ ನೀಡಿದ್ದಾರೆ. ಮುಖ್ಯಮಂತ್ರಿ ವಿಜಯ್ ನೇತೃತ್ವದ ಟಿವಿಕೆಗೆ ಸೇರ್ಪಡೆಯಾಗಿದ್ದಾರೆ. ಶಾಸಕರಾದ ಮರಗತಮ್ ಕುಮಾರವೇಲ್, ಜಯಕುಮಾರ್ ಮತ್ತು ಸತ್ಯಭಾಮ ಅವರು ಸಲ್ಲಿಸಿದ ರಾಜೀನಾಮೆ ಪತ್ರಗಳನ್ನು ತಮಿಳುನಾಡು ವಿಧಾನಸಭಾ ಸ್ಪೀಕರ್ ಜೆಸಿಡಿ ಪ್ರಭಾಕರ್ ಅಂಗೀಕರಿಸಿದ್ದಾರೆ.

ಗೋ-ಎಲ್‌ಎಕ್ಸ್ ಡಿಜಿಟಲ್ ವೇದಿಕೆ

ಹೊಸದಿಲ್ಲಿ: ಗೋವುಗಳ ರಕ್ಷಣೆಗಾಗಿ ಅವಿಮುಕ್ತೇಶ್ವರಾನಂದ ಸರಸ್ವತಿ ಅವರು ಗೋ-ಎಲ್‌ಎಕ್ಸ್ ಎಂಬ ಹೊಸ ಡಿಜಿಟಲ್ ವೇದಿಕೆಯನ್ನು ಘೋಷಿಸಿದ್ದಾರೆ. ದತ್ತು ಸ್ವೀಕಾರ ಮತ್ತು ಕ್ರೌಡ್‌ಫಂಡಿಂಗ್ ಮೂಲಕ ದೇಶೀಯ ತಳಿಯ ಹಸುಗಳನ್ನು ಕಸಾಯಿಖಾನೆಗೆ ಸೇರದಂತೆ ರಕ್ಷಿಸಲು ಈ ರಾಷ್ಟ್ರವ್ಯಾಪಿ ಜಾಲ ರೂಪಿಸಲಾಗಿದೆ. ಯುವ ಪೀಳಿಗೆಗೆ ಸುಲಭವಾಗಿ ಅರ್ಥವಾಗುವಂತೆ ಮಾಡಲು ಪ್ರಸಿದ್ಧ ಓಎಲ್‌ಎಕ್ಸ್ ಮಾದರಿಯಲ್ಲಿ ಈ ವೇದಿಕೆಯನ್ನು ಸಿದ್ಧಪಡಿಸಲಾಗಿದೆ. ಇಲ್ಲಿ ಹಸುಗಳನ್ನು ಕೇವಲ ರಕ್ಷಣೆಗಾಗಿ ಪಡೆದುಕೊಳ್ಳಬಹುದೇ ವಿನಃ ಮಾರಾಟ ಮಾಡಲು ಅವಕಾಶವಿಲ್ಲ.

ರಾಜಸ್ಥಾನದಲಿ ದಾಳಿಗೆ ಉಗ್ರರ ಸಂಚು: ಎನ್‌ಐಎ

ಹೊಸದಿಲ್ಲಿ: ದಿಲ್ಲಿ ಕೆಂಪುಕೋಟೆ ಬಳಿ ಕಾರು ಸ್ಫೋಟ ಪ್ರಕರಣದ ಆರೋಪಿ ಡಾ. ಮುಝುಮಿಲ್ ಉತ್ತರಪ್ರದೇಶದ ಲಖನೌಗೆ ಭೇಟಿ ನೀಡಿದ್ದ ಮತ್ತು ಅಲ್ಲಿನ ಸರಕಾರಿ ಸಂಕೀರ್ಣಗಳ ಸಹಿತ ಪ್ರಮುಖ ಕೇಂದ್ರಗಳಲ್ಲಿ, ಜನಸಂದಣಿ ಪ್ರದೇಶಗಳಲ್ಲಿ, ಸಖತ್ ಸಂಖ್ಯೆಯಲ್ಲಿ ಭಯೋತ್ಪಾದಕ ದಾಳಿ ನಡೆಸುವ ಸಂಚು ಹೊಂದಿದ್ದನೆಂಬ ಸ್ಫೋಟಕ ಸಂಗತಿಯನ್ನು ಎನ್‌ಐಎ ಅಧಿಕಾರಿಗಳು ಬಹಿರಂಗಪಡಿಸಿದ್ದಾರೆ. ಆರೋಪಿಗಳಾದ ಡಾ.ಮುಝುಮಿಲ್ ಶಕೀಲ್ ಮತ್ತು ಡಾ. ಶಹೀನ್ ಸಯೀದ್, ದಾಳಿ ಗುರಿಗಳನ್ನು ಗುರುತಿಸಲು 2025ರ ಆ.25ಮತ್ತು 30ರಂದು ಫರೀದಾಬಾದ್‌ನಿಂದ ಲಖನೌಗೆ ಪಯಣಿಸಿದ್ದರು.

ಲಖನೌದಲ್ಲಿ ಉತ್ತರಪ್ರದೇಶ ವಿಧಾನಸಭಾ, ಬಾಪು ಭವನ, ಇಮಾಂಬರ, ಲಾಲ್‌ಬಾಗ್ ಮತ್ತು ಅಮೀನಾಬಾದ್‌ನಂತಹ ಜನದಟ್ಟಣೆ ಸ್ಥಳಗಳ ಸಹಿತ ಪ್ರಮುಖ ಕೇಂದ್ರಗಳ ಸರ್ವೇಕ್ಷಣೆ ನಡೆಸಿದ್ದ ಆರೋಪಿ ಮುಝುಮಿಲ್ ಮತ್ತು ಡಾ.ಶಹೀನ್ ,ಇವೆಲ್ಲವು ಸ್ಫೋಟಕ್ಕೆ ಸುಗಮ ಟಾರ್ಗೆಟ್‌ಗಳು ಮತ್ತು ಇಲ್ಲೆಲ್ಲ ಸ್ಫೋಟಕ ತುಂಬಿದ ಕಾರು ಸ್ಫೋಟಿಸುವ ತಂತ್ರ ಬೆಸೆದಿದ್ದರೆಂದು ಮೂಲಗಳು ತಿಳಿಸಿವೆ. ಕಳೆದ ವರ್ಷ ನ.10ರಂದು ದಿಲ್ಲಿ ಕೆಂಪುಕೋಟೆ ಬಳಿ ಕಾರ್‌ಬಾಂಬ್ ಸ್ಫೋಟಕ್ಕೆ ಬಳಸಿದ್ದ ಮಾರಕ ಟ್ರೈ ಅಸಿಟೋನ್ ಟ್ರೈ ಪೆರಾಕ್ಸೈಡ್ ರಾಸಾಯನಿಕ ಲಭ್ಯವಿರುವ ಕೆಮಿಕಲ್ ಅಂಗಡಿ ಗುರುತಿಸಲು ಮುಝುಮಿಲ್ ಆನ್‌ಲೈನ್‌ನಲ್ಲಿ ಸರ್ಚ್ ಮಾಡಿದ್ದ. ಲಖನೌನ ಲಾಲ್‌ಬಾಗ್‌ನಲ್ಲಿ ಕೆಮಿಕಲ್‌ಗಳ ದಾಸ್ತಾನಿಗಾಗಿ ಸೂಕ್ತ ಜಾಗದ ಹುಡುಕಾಟದಲ್ಲಿದ್ದರು. ಅಪಾರ ಕೆಮಿಕಲ್ ಖರೀದಿ ಶಂಕೆಗೆ ದಾರಿಯಾಗದಿರಲು ,ಇವುಗಳ ಖರೀದಿಗೆ ಸ್ಥಳೀಯನೋರ್ವನನ್ನು ಕೆಮಿಕಲ್ ಅಂಗಡಿಗಳಿಗೆ ಕಳುಹಿಸಿದ್ದರು ಎಂದು ಎನ್‌ಐಎ ಅಧಿಕಾರಿಗಳು ತಿಳಿಸಿದ್ದಾರೆ.

ಭಯೋತ್ಪಾದನೆಗೆ ನಿಧಿ ಸಂಗ್ರಹ:ಎನ್‌ಐಎ ದಾಳಿ

ಶ್ರೀನಗರ: ನಿಷೇಧಿತ ಜಮಾತ್-ಎ-ಇಸ್ಲಾಮಿ ಸಂಘಟನೆಗೆ ಸಂಬಂಧಿಸಿದ ಟೆರರ್ ಫಂಡಿಂಗ್ ಪ್ರಕರಣದ ತನಿಖೆಯ ಭಾಗವಾಗಿ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಸೋಮವಾರ ಕಾಶ್ಮೀರ ಕಣಿವೆಯ ಹಲವೆಡೆ ದಾಳಿ ನಡೆಸಿ ಶೋಧ ಕಾರ್ಯ ಕೈಗೊಂಡಿದೆ. ಕೇಂದ್ರೀಯ ಭಯೋತ್ಪಾದನಾ ನಿರೋಧಕ ದಳ, ಶ್ರೀನಗರ ಮತ್ತು ಶೋಪಿಯಾನ್ ಜಿಲ್ಲೆಗಳ ಮೂರು ಪ್ರಮುಖ ಸ್ಥಳಗಳನ್ನು ಗುರಿಯಾಗಿಸಿಕೊಂಡು ಕಾರ್ಯಾಚರಣೆ ನಡೆಸಿದೆ. ಈ ವೇಳೆ ಜಮಾತ್-ಎ-ಇಸ್ಲಾಮಿಸಂಘಟನೆಹಾಗೂ ಅದರ ಅಂಗಸಂಸ್ಥೆಗಳಿಗೆ ಕಾನೂನುಬಾಹಿರ ಹಣಕಾಸು ನೆರವು ನೀಡಿರುವುದಕ್ಕೆ ಸಂಬಂಧಿಸಿದ ಪ್ರಮುಖ ದಾಖಲೆಗಳು ಮತ್ತು ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಕಳೆದ ತಿಂಗಳು ಕಾನೂನುಬಾಹಿರ ಸಂಸ್ಥೆ ಎಂದು ಘೋಷಿಸಲಾಗಿದ್ದ ಶೋಪಿಯಾನ್‌ನ ದಾರುಲ್ ಉಲೂಮ್ ಸಿರಾಜುಲ್ ಉಲೂಮ್ ಶಾಲೆ, ಸಂಘಟನೆಯ ಮಾಜಿ ಮುಖ್ಯಸ್ಥ ಶಾಹಜಾದಾ ಔರಂಗಜೇಬ್ ನಿವಾಸ ಹಾಗೂ ಶ್ರೀನಗರದ ಜಮಿಯತ್ ಉಲ್ ಬನಾತ್ ಬಾಲಕಿಯರ ಧಾರ್ಮಿಕ ಶಾಲೆಯ ಮೇಲೆ ಈ ದಾಳಿ ನಡೆದಿದೆ.

ಉಗ್ರರ ನೇಮಕಾತಿ ಹಿನ್ನೆಲೆ: ಆರೋಗ್ಯ ಮತ್ತು ಶಿಕ್ಷಣದಂತಹ ದತ್ತಿ ಹಾಗೂ ಕಲ್ಯಾಣ ಕಾರ್ಯಕ್ರಮಗಳ ಹೆಸರಿನಲ್ಲಿ ಈ ಸಂಘಟನೆ ದೇಶೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಣಿಗೆ ಸಂಗ್ರಹಿಸುತ್ತಿತ್ತು. ಈ ಹಣವನ್ನು ಹಿಜ್ಬುಲ್-ಮುಜಾಹಿದ್ದೀನ್ ಸೇರಿದಂತೆ ನಿಷೇಧಿತ ಭಯೋತ್ಪಾದಕ ಸಂಘಟನೆಗಳಿಗೆ ವರ್ಗಾಯಿಸಲಾಗುತ್ತಿತ್ತು ಎಂದು ತನಿಖೆಯಿಂದ ತಿಳಿದುಬಂದಿದೆ. ಸ್ಥಳೀಯ ಯುವಕರನ್ನು ತೀವ್ರಗಾಮಿಗಳನ್ನಾಗಿ ಪರಿವರ್ತಿಸಿ ನೇಮಿಸಿಕೊಳ್ಳಲಾಗುತ್ತಿತ್ತು, ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಬೋಲಾ ವಿರುದ್ಧ ಹೋರಾಡಲು ಸನ್ನದ್ಧತೆ

ಹೊಸದಿಲ್ಲಿ: ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾರ್ವಜನಿಕ ಆರೋಗ್ಯ ತುರ್ತುಸ್ಥಿತಿಯನ್ನು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯೂಎಚ್‌ಒ) ಘೋಷಿಸಿರುವ ಬೆನ್ನಲ್ಲೇ, ದೇಶಾದ್ಯಂತ ಇಬೋಲಾವನ್ನು ಎದುರಿಸಲು ಅಗತ್ಯ ಸನ್ನದ್ಧತೆಗಳಿಗೆ ಕೇಂದ್ರ ಸರಕಾರ ವೇಗ ನೀಡಿದೆ. ಇಬೋಲಾ ವೈರಸ್ ಪ್ರಸರಣ ಬಗ್ಗೆ ಜಾಗತಿಕವಾಗಿ ಕಳವಳ ವ್ಯಕ್ತವಾಗಿರುವಂತೆಯೇ, ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಅಗತ್ಯ ನಿಗಾ ಮತ್ತು ಚಿಕಿತ್ಸಾ ವ್ಯವಸ್ಥೆಗಳ ಸನ್ನದ್ಧತೆಯ ಪರಾಮರ್ಶೆ ನಡೆಸಿದ್ದಾರೆ. ದೇಶದಲ್ಲಿ ಇದುವರೆಗೆ ಇಬೋಲಾ ಪ್ರಕರಣ ವರದಿಯಾಗಿಲ್ಲ, ಆದರೂ ಮುಂಜಾಗ್ರತಾ ಕ್ರಮವಾಗಿ ಸರಕಾರ ನಿಗಾ ಮತ್ತು ಸನ್ನದ್ಧತೆ ಕ್ರಮಗಳನ್ನು ವ್ಯಾಪಕಗೊಳಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಒಂದು ವೇಳೆ ಇಬೋಲಾ ಬೆದರಿಕೆ ಎದುರಾದಲ್ಲಿ ದೇಶದ ಸನ್ನದ್ಧತೆ ಹೇಗಿದೆ ಎಂಬುದನ್ನು ಪರಾಮರ್ಶಿಸುವನ್ವಯ , ಸಚಿವ ನಡ್ಡಾ ಸೋಮವಾರ ಕೇಂದ್ರ ಆರೋಗ್ಯ ಖಾತೆಯ ಹಿರಿಯ ಅಧಿಕಾರಿಗಳನ್ನು ಒಳಗೊಂಡ ಉನ್ನತ ಮಟ್ಟದ ಸಭೆ ನಡೆಸಿದರು. ಸಚಿವರ ನಿರ್ದೇಶ ಮೇರೆಗೆ ,ಆರೋಗ್ಯ ಇಲಾಖೆ ಕಾರ್ಯದರ್ಶಿಗಳೂ ಇಬೋಲಾ ಸೋಂಕನ್ನು ಎದುರಿಸುವುದು ಮತ್ತು ಪ್ರತಿಚಿಕಿತ್ಸೆ ವಿಚಾರದಲ್ಲಿ ಪರಸ್ಪರ ಸಮನ್ವಯತೆ ನಿಟ್ಟಿನಲ್ಲಿ ವಿವಿಧ ಖಾತೆಗಳು , ಸಂಬಂಧಪಟ್ಟ ಸಂಸ್ಥೆಗಳ ಅಧಿಕಾರಿಗಳನ್ನು ಒಳಗೊಂಡ ಜಂಟಿ ಪರಾಮರ್ಶೆ ಸಭೆ ನಡೆಸಿದರು. ವಿಮಾನ ನಿಲ್ದಾಣ, ಬಂದರುಗಳು ಮತ್ತು ಭೂ ಗಡಿಗಳ ಕ್ರಾಸಿಂಗ್ ಸಹಿತ ಎಲ್ಲಾ ಪ್ರವೇಶ ಕೇಂದ್ರಗಳಲ್ಲಿ ಎಬೋಲಾ ಸ್ಕ್ರೀನ್ ವ್ಯವಸ್ಥೆಗಳು ಸಂಪೂರ್ಣ ಸನ್ನದ್ಧ.

ಬೆನ್ನಿಗೆ ಚೂರಿ ಹಾಕಿದ ಕಾಂಗ್ರೆಸನ್ನು ಎಂದಿಗೂ ನಂಬಬಾರದು

» ಕಾಂಗ್ರೆಸ್ ನಿಮ್ಮ ರಕ್ತ ಹೀರುವ ಜಿಗಣೆಯಂತೆ:ಡಿಎಂಕೆ

ಚೆನ್ನೈ: ಚುನಾವಣಾ ಲಾಭಗಳನ್ನು ಪಡೆದ ಬಳಿಕ ಡಿಎಂಕೆಯ ಬೆನ್ನಿಗಿರಿದ ಕಾಂಗ್ರೆಸನ್ನು ಇನ್ನೆಂದೂ ನಂಬಬೇಡಿ .ಕಾಂಗ್ರೆಸ್ ಎಂದರೆ ನಿಮ್ಮ ರಕ್ತ ಹೀರುವ ಜಿಗಣೆಯಂತೆ . ಅವರು ಮತ್ತೆ ನಿಮ್ಮ ಹತ್ತಿರಬರಲೂ ಬಿಡಬೇಡಿ ಎಂದು ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್ ಪಕ್ಷೀಯರಿಗೆ ಕರೆ ನೀಡಿದ್ದಾರೆ.ಸ್ಟಾಲಿನ್ ಹೇಳಿಕೆ ಈಗ ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ. ಕಾಂಗ್ರೆಸ್ 20 ವರ್ಷಗಳಿಗೂ ಹೆಚ್ಚು ಕಾಲ ನಮ್ಮ ಬೆನ್ನಿನ ಮೇಲೆ ಸವಾರಿ ಮಾಡಿತು. ಇಂದು ಅವರು ನಮ್ಮ ಬೆನ್ನಿಗೆ ಚೂರಿ ಇರಿದಿದ್ದಾರೆ. ಇದನ್ನು ನಾವ್ಯಾರೂ ಎಂದಿಗೂ ಮರೆಯಬಾರದು. ಭವಿಷ್ಯದಲ್ಲಿ ಯಾವುದೇ ಹಂತದಲ್ಲಿ ನಾವು ಕಾಂಗ್ರೆಸ್ ಅನ್ನು ನಂಬಬಾರದು ಅಥವಾ ಅವರು ಮತ್ತೆ ನಮ್ಮ ಹತ್ತಿರ ಬರಲೂ ಬಿಡಬಾರದು ಎಂದು, ಮಾಜಿ ಸಿಎಂ ಎಂ.ಕೆ.ಸ್ಟಾಲಿನ್ ಪುತ್ರನೂ ಆಗಿರುವ ಉದಯ ಸ್ಟಾಲಿನ್ ಪಕ್ಷೀಯರಿಗೆ ಸೂಚಿಸಿದ್ದಾರೆ.



ನಟಿ ಟ್ವಿಶಾ ಶರ್ಮಾ ಸಾವು | ಸುಪ್ರೀಂನಲ್ಲಿ ಮೆಹ್ತಾ ಅಭಿಪ್ರಾಯ

ಸತ್ತ ಮಗಳಿಗಿಂತ ವಿಚ್ಛೇದಿತ ಮಗಳು ಮೇಲು

ಹೊಸದಿಲ್ಲಿ: ಮಧ್ಯಪ್ರದೇಶದ ನಟಿ-ಮಾಡೆಲ್ ಟ್ವಿಶಾ ಶರ್ಮಾ ಸಾವಿನ ಪ್ರಕರಣದ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್‌ನಲ್ಲಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ನೀಡಿದ 'ಸತ್ತ ಮಗಳಿಗಿಂತ ವಿಚ್ಛೇದಿತ ಮಗಳು ಮೇಲು' ಎಂಬ ಹೇಳಿಕೆ ಎಲ್ಲರ ಗಮನ ಸೆಳೆದಿದೆ. ಪೋಷಕರು ಮಗಳ ದೂರುಗಳನ್ನು ಆರಂಭದಲ್ಲೇ ಗಂಭೀರವಾಗಿ ಪರಿಗಣಿಸಬೇಕೆಂಬ ಸಂದೇಶವನ್ನು ಅವರು ಈ ವೇಳೆ ನೀಡಿದ್ದಾರೆ. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠದ ಮುಂದೆ ವಿಚಾರಣೆ ನಡೆದಿದ್ದು, ಟ್ವಿಶಾ ಶರ್ಮಾ ಸಾವಿನ ತನಿಖೆಯನ್ನು ಸಿಬಿಐಗೆ ವರ್ಗಾಯಿಸುವ ಬಗ್ಗೆ ಕೇಂದ್ರ ಸರ್ಕಾರ ಶೀಘ್ರದಲ್ಲೇ ನಿರ್ಧಾರ ಕೈಗೊಳ್ಳುವುದಾಗಿ ಮೆಹ್ತಾ ಭರವಸೆ ನೀಡಿದರು. ತನಿಖೆ ನ್ಯಾಯಸಮ್ಮತ ಹಾಗೂ ಪಾರದರ್ಶಕವಾಗಿರಬೇಕು ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಧ್ಯಮಗಳಲ್ಲಿ ವಿವಿಧ ರೀತಿಯ ಕಥನಗಳು ಹರಿದಾಡುತ್ತಿರುವುದರ ಬಗ್ಗೆ ಕೋರ್ಟ್ ಆತಂಕ ವ್ಯಕ್ತಪಡಿಸಿತು. ಆರೋಪಿಗಳು, ಸಾಕ್ಷಿಗಳು ಹಾಗೂ ಕುಟುಂಬದವರು ಮಾಧ್ಯಮಗಳಿಗೆ ಹೇಳಿಕೆ ನೀಡುವುದನ್ನು ತಪ್ಪಿಸಿ, ತನಿಖಾ ಸಂಸ್ಥೆಗಳ ಮುಂದೆ ಮಾತ್ರ ತಮ್ಮ ಅಭಿಪ್ರಾಯ ಹೇಳಬೇಕು ಎಂದು ನ್ಯಾಯಪೀಠ ಸೂಚಿಸಿದೆ. ಹಾಗೆಯೇ, ಇಡೀ ಪ್ರಕರಣವನ್ನು ನಿಭಾಯಿಸಿದ ಕುರಿತೂ ಅದು ತೀವ್ರ ಬೇಸರ ವ್ಯಕ್ತಪಡಿಸಿದೆ. ವಿಚಾರಣೆ ವೇಳೆ ಟ್ವಿಶಾ ಅವರ ಅತ್ತೆ ಹಾಗೂ ಮಾಜಿ ಜಿಲ್ಲಾ ನ್ಯಾಯಾಧೀಶೆ ಗಿರಿಬಾಲಾ ಸಿಂಗ್ ಟಿವಿ ವಾಹಿನಿಗಳಿಗೆ ಸಂದರ್ಶನ ನೀಡುತ್ತಿದ್ದು, ಮೃತೆಯ ವಿರುದ್ಧ ಹೇಳಿಕೆಗಳನ್ನು ಮಾಡುತ್ತಿದ್ದಾರೆ ಎಂದು ತುಷಾರ್ ಮೆಹ್ತಾ ಆಕ್ಷೇಪಿಸಿದರು. ಇನ್ನೊಂದೆಡೆ, ಟ್ವಿಶಾ ಕುಟುಂಬ ಪರ ವಕೀಲರು ಎಫ್‌ಐಆರ್ ದಾಖಲಿಸಲು ವಿಳಂಬ, ಸಾಕ್ಷ್ಯ ಸಂರಕ್ಷಣೆಯಲ್ಲಿ ಲೋಪಗಳಾಗಿವೆ ಎಂದು ಕೋರ್ಟ್ ಗಮನಕ್ಕೆ ತಂದರು.

ಪ್ರಕರಣದ ಪ್ರಮುಖ ಅಂಶಗಳು

- ಟ್ವಿಶಾ ಶರ್ಮಾ ಸಾವಿನ ಪ್ರಕರಣದ ತನಿಖೆ ಸಿಬಿಐಗೆ ವರ್ಗಾವಣೆಯ ಸಾಧ್ಯತೆ
- ನ್ಯಾಯಸಮ್ಮತ ತನಿಖೆಗೆ ಸುಪ್ರೀಂ ಕೋರ್ಟ್ ಒತ್ತಾಯ
- 'ವಿಚ್ಛೇದಿತ ಮಗಳು ಮೇಲು' ಎಂದ ತುಷಾರ್ ಮೆಹ್ತಾ ಹೇಳಿಕೆ ಚರ್ಚೆಗೆ ಕಾರಣ
- ಮಾಧ್ಯಮಗಳಲ್ಲಿ ಹೇಳಿಕೆ ನೀಡದಂತೆ ಕುಟುಂಬಗಳಿಗೆ ಕೋರ್ಟ್ ಸೂಚನೆ
- ಸಾಕ್ಷ್ಯ ಸಂರಕ್ಷಣೆಯಲ್ಲಿ ಲೋಪ ಆರೋಪ

ಸಾಂಪ್ರದಾಯಿಕ ಕೇಂದ್ರಗಳಲ್ಲೇ ನಮಾಜ್ ಸಲ್ಲಿಸಬೇಕು: ಯೋಗಿ ಆದಿತ್ಯನಾಥ್

ಸಾರ್ವಜನಿಕ ಸ್ಥಳದಲ್ಲಿ ಪ್ರಾಣಿ ವಧೆಗೆ ಅವಕಾಶವಿಲ್ಲ

ಲಖನೌ: ಮುಂಬರುವ ಬಕ್ರೀದ್ ಹಿನ್ನೆಲೆಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಪ್ರಾಣಿವಧೆ ಮಾಡುವಂತಿಲ್ಲ, ಪ್ರಾಣಿಬಲಿಯನ್ನು ಪೂರ್ವ ನಿಯೋಜಿತ ಜಾಗಗಳಲ್ಲಿ ಮಾತ್ರ ಮಾಡಬಹುದು. ಯಾವುದೇ ಹೊಸ ಪದ್ಧತಿಗಳಿಗೆ ಉತ್ತೇಜನ ನೀಡಲ್ಲ ಮತ್ತು ನಿಷೇಧಿತ ಪ್ರಾಣಿಗಳ ಬಲಿದಾನವನ್ನು ನಿಷೇಧಿಸಲಾಗಿದೆ ಎಂದು ಉತ್ತರಪ್ರದೇಶ ಮುಖ್ಯ ಮಂತ್ರಿಯೋಗಿ ಆದಿತ್ಯನಾಥ್ ಆದೇಶ ಹೊರಡಿಸಿದ್ದಾರೆ. ಹಬ್ಬದ ಹಿನ್ನೆಲೆ ಬಿಗು ಭದ್ರತೆ ಆಯೋಜಿಸುವಂತೆ ಅಧಿಕಾರಿಗಳಿಗೆ ನಿರ್ದೇಶವಿತ್ತಿದ್ದಾರೆ.



ಸಾಂಪ್ರದಾಯಿಕ ಕೇಂದ್ರಗಳಲ್ಲೇ ನಮಾಜ್ ಸಲ್ಲಿಸಬೇಕು. ಯಾವ ಕಾರಣಕ್ಕೂ ರಸ್ತೆಗಳನ್ನು ಬ್ಲಾಕ್ ಮಾಡಿ ಪ್ರಾರ್ಥನೆ ಮಾಡಲು ಸಮ್ಮತಿ ನೀಡುವುದಿಲ್ಲ ಎಂದು ಸಿಎಂ ಯೋಗಿ ನಿರ್ದೇಶ ಹೊರಡಿಸಿದ್ದಾರೆ. ಭದ್ರತೆ ಹಾಗೂ ಆಡಳಿತಾತ್ಮಕ ವಿಚಾರಗಳ ಪರಾಮರ್ಶೆ ಸಭೆಯಲ್ಲಿ ಮುಖ್ಯಮಂತ್ರಿಗಳು ಪ್ರಸ್ತುತ ನಿರ್ದೇಶಗಳನ್ನು ಹೊರಡಿಸಿದರೆಂದು ಸರಕಾರದ ಹೇಳಿಕೆ ತಿಳಿಸಿದೆ.

ಪ್ರತೀ ಜಿಲ್ಲೆಯಲ್ಲೂ ಪ್ರಾಣಿ ಬಲಿ ಬಳಿಕ ತ್ಯಾಜ್ಯ ವಿಲೇವಾರಿಗೆ ಸೂಕ್ತ ವ್ಯವಸ್ಥೆ ಮಾಡಬೇಕು ಎಂದು ಆದೇಶಿಸಿರುವ ಸಿಎಂ ಯೋಗಿ, ಬಹಿರಂಗವಾಗಿ ಮಾಂಸ ಮಾರಾಟವನ್ನು ನಿಷೇಧಿಸಿದ್ದಾರೆ. ಅಕ್ರಮ ಕಸಾಯಿಖಾನೆಗಳು ಕಾರ್ಯಾಚರಿಸುವಂತಿಲ್ಲ, ಅಧಿಕೃತವಾಗಿ ಲೈಸೆನ್ಸ್ ಹೊಂದಿರುವ ಕಸಾಯಿಖಾನೆಗಳೂ ನಿಗದಿತ ಸಾಮರ್ಥ್ಯ ಮೀರಿ ಪ್ರಾಣಿಗಳನ್ನು ಮಾರಾಟ ಕ್ಕಿಡುವಂತಿಲ್ಲ ಎಂದು ಆದೇಶಿಸಿದ್ದಾರೆ.

ಹಬ್ಬದ ಸಂದರ್ಭ ವಿದ್ಯುತ್‌ಪೂರೈಕೆ, ನೈರ್ಮಲ್ಯ ಮತ್ತು ಭದ್ರತಾ ವ್ಯವಸ್ಥೆಗಳಿಗೆ ಸಂಬಂಧಿಸಿ ಉನ್ನತ ಸ್ತರದ ಸನ್ನದ್ಧತೆ ನಿರ್ವಹಿಸಲು ಅಧಿಕಾರಿಗಳಿಗೆ ಸಿಎಂ ಯೋಗಿ ಸೂಚನೆ ನೀಡಿದ್ದಾರೆ. ಹಬ್ಬಗಳಿಗೆ ಮುನ್ನ ಸೂಕ್ಷ್ಮ ಸಂವೇದಿ ಪ್ರದೇಶಗಳಲ್ಲಿ ಧ್ವಜ ಮೆರವಣಿಗೆ ಮತ್ತು ದೇವಾಲಯಗಳ ಸಹಿತ ಧಾರ್ಮಿಕ ಕೇಂದ್ರಗಳಿಗೆ ಸಮೀಪದಲ್ಲಿ ಪೊಲೀಸ್ ಪಡೆಗಳು ನಿರಂತರ ಪಥ ಸಂಚಲನ ನಡೆಸುವಂತೆ ನಿರ್ದೇಶಿಸಿದ್ದಾರೆ.

ವಿಚ್ಛಿದ್ರಕಾರಿ ಶಕ್ತಿಗಳ ಪತ್ತೆ, ಮುಂಜಾಗ್ರತಾ ಕ್ರಮ: ವಿಚ್ಛಿದ್ರಕಾರಿ ಶಕ್ತಿಗಳ ಪತ್ತೆಗೆ ಗತ ದುರ್ಘಟನೆಗಳನ್ನು ಪರಾಮರ್ಶಿಸುವಂತೆ ಮತ್ತು ಅಗತ್ಯ ಕಂಡಲ್ಲಿ ಅಂತವರ ವಿರುದ್ಧ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಅಲಿಗಢ, ಬಿಜ್ನೂರ್, ಸಹರಣ್‌ಪುರ, ರಾಂಪುರ, ಸಂಭಾಲ್ ಇತ್ಯಾದಿ ಸೂಕ್ಷ್ಮಸಂವೇದಿ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಪೊಲೀಸ್ ಅಧಿಕಾರಿಗಳೊಂದಿಗೆ ಸಂವಾದ ಸಂದರ್ಭ ಮುಖ್ಯಮಂತ್ರಿ ಯೋಗಿ ಸೂಚನೆ ನೀಡಿದ್ದಾರೆ. ಪೊಲೀಸ್ ಠಾಣೆ, ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಶಾಂತಿ ಸಮಿತಿಗಳ ಜತೆ ನಿಯತ ಮಾತುಕತೆ ನಡೆಸುವಂತೆಯೂ ಸಿಎಂ ಯೋಗಿ ನಿರ್ದೇಶ ಹೊರಡಿಸಿದ್ದಾರೆ.

ಗಂಗಾವತರಣ ಅಥವಾ ಗಂಗಾ ದಸರಾ ಉತ್ಸವ ನಿಟ್ಟಿನಲ್ಲಾಗಿರುವ ಸಿದ್ಧತೆಗಳ ಪರಾಮರ್ಶಿಸಿದ ಸಿಎಂ ಯೋಗಿ, ಘಾಟ್‌ಗಳನ್ನು ಶುಚಿಗೊಳಿಸುವಂತೆ ಮತ್ತು ಪ್ರಯಾಗ್‌ರಾಜ್, ವಾರಾಣಸಿ, ಅಯೋಧ್ಯೆ, ಚಿತ್ರಕೂಟ , ಹಾಪುರ, ಮುಝಫರ್‌ನಗರ ಮತ್ತು ಅಮ್ರೋಹಾ ಜಿಲ್ಲೆಗಳಲ್ಲಿ ಬ್ಯಾರಿಕೇಡ್, ಆ್ಯಂಬುಲೆನ್ಸ್ ನಿಯೋಜನೆ, ನೆರಳಿನ ವ್ಯವಸ್ಥೆ, ಪಾರ್ಕಿಂಗ್ ನಿರ್ವಹಣೆಗೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಸಂಸದ ಜಗದೀಶ ಶೆಟ್ಟರ ಕಚೇರಿ ಮುತ್ತಿಗೆಗೆ ಯತ್ನ
ಕಾಂಗ್ರೆಸ್ ಕಾರ್ಯಕರ್ತರು ಪೊಲೀಸರ ವಶ



ಬೆಳಗಾವಿ: ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಹಾಗೂ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಗೆ ಖಂಡಿಸಿ ಬೆಳಗಾವಿಯಲ್ಲಿ ಯುಥ್ ಕಾಂಗ್ರೆಸ್ ಕಾರ್ಯಕರ್ತರು ಸಂಸದ ಜಗದೀಶ ಶೆಟ್ಟರ ಕಚೇರಿ ಎದುರು ಪ್ರತಿಭಟನೆ ನಡೆಸಿ, ಕೇಂದ್ರ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಇದಕ್ಕೂ ಮೊದಲು ನಗರದ ಕನ್ನಡ ಸಾಹಿತ್ಯ ಭವನದಿಂದ ಯುಥ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಕಾರ್ತಿಕ ಪಾಟೀಲ್ ನೇತೃತ್ವದಲ್ಲಿ ಪ್ರತಿಭಟನೆ ಆರಂಭಿಸಲಾಯಿತು. ಚನ್ನಮ್ಮ ವೃತ್ತದಿಂದ ಡಿಸಿ ಕಚೇರಿವರೆಗೆ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು ಬಳಿಕ ಸಂಸದ ಜಗದೀಶ ಶೆಟ್ಟರ ಕಚೇರಿಗೆ ನುಗ್ಗಲು ಯತ್ನಿಸಿದರು.

ಪೊಲೀಸರು ಬ್ಯಾರಿಕೇಟ್ ಹಾಕಿ ಪ್ರತಿಭಟನಾಕಾರರನ್ನು ತಡೆದರು. ಈ ವೇಳೆ ಪೊಲೀಸರು ಮತ್ತು ಕಾಂಗ್ರೆಸ್ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆಯಿತು.

ಬಳಿಕ 20ಕ್ಕೂ ಅಧಿಕ ಯುಥ್ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು. ಈ ವೇಳೆ ಕಾಂಗ್ರೆಸ್ ಕಾರ್ಯಕರ್ತರು ವಿವಿಧ ಘೋಷಣೆಗಳಿರುವ ಪೋಸ್ಟರ್‌ಗಳನ್ನು ಹಿಡಿದು ಆಕ್ರೋಶ ವ್ಯಕ್ತಪಡಿಸಿದರು.

ಯುಥ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಕಾರ್ತಿಕಪಾಟೀಲ್,ಯುವಕಾಂಗ್ರೆಸ್ ಸಮಿತಿಯ ರಾಜ್ಯ ಉಪಾಧ್ಯಕ್ಷ ಅಬ್ದುಲ್ ದೇಸಾಯಿ, ಪವನ ನಾಯಕ, ಅನಿಕೇತ ಪಠಣ, ಸುನೀಲ ಹಲಗಿ, ಶಿವಕುಮಾರ್ ಹಂಪನವರ್, ಅಪ್ತಾಬ್ ಕಮತನೂರ, ವಿಷ್ಣು ಕಾರದಾರಿ, ಅನೀಶ ಕೌಜಲಗಿ, ಪ್ರಿತಮ್ ಬೆಳಗಾವಿ, ದಾದಾಪೀರ ಜಮಾದಾರ, ಮಂಜುನಾಥ ಪೋತನ್ನವರ, ಹರ್ತಕ ಅಲಿ, ಮಡಿವಾಳಪ್ಪ ಅಕ್ಕಿಸಾಗರ ಸೇರಿದಂತೆ ಹಲವು ಕಾಂಗ್ರೆಸ್ ಕಾರ್ಯಕರ್ತರು ಇದ್ದರು.

ಸಿದ್ಧಾರೂಢ ಮಠದ ವ್ಯವಸ್ಥಾಪಕ ಈರಣ್ಣ ತುಪ್ಪದ ಅಮಾನತು

ಹುಬ್ಬಳ್ಳಿ: ಇಲ್ಲಿನ ಸಿದ್ಧಾರೂಢ ಮಠದ ವ್ಯವಸ್ಥಾಪಕ ಈರಣ್ಣ ತುಪ್ಪದ ಅವರನ್ನು ಅಮಾನತು ಮಾಡಿ ಮಠದ ಟ್ರಸ್ಟ್ ಕಮಿಟಿಯ ಮುಖ್ಯ ಆಡಳಿತಾಧಿಕಾರಿಯೂ ಆಗಿರುವ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶೆ ಬಿ.ಎಸ್.ಭಾರತಿ ಅವರು ಆದೇಶಿಸಿದ್ದಾರೆ.

ಈರಣ್ಣ ವಿರುದ್ಧದ ಆಪಾದನೆಗಳ ಸತ್ಯಾಸತ್ಯತೆ ಬಗ್ಗೆ ಕೂಲಂಕಷ ತನಿಖೆಯ ಅಗತ್ಯತೆ ಕಾರಣ, ಮಠದ ಟ್ರಸ್ಟ್ ಕಮಿಟಿಯ ಏ.20ರ ಸಭೆಯ ಗೊತ್ತುವಳಿ ಅನ್ವಯ ವಿಚಾರಣೆಗೆ ಆದೇಶಿಸಲಾಗಿದೆ.ಈರಣ್ಣ ಅವರನ್ನು ಅಮಾನತಿನಲ್ಲಿಟ್ಟು ಅವರ ವಿರುದ್ಧದ ಆಪಾದನೆಗಳ ಬಗ್ಗೆ ವಿಚಾರಣೆ ನಡೆಸಿ ಒಂದು ತಿಂಗಳ ಒಳಗೆ ವರದಿ ಸಲ್ಲಿಸಬೇಕು. ಅಲ್ಲದೆ, ಅವರಿಗೆ ಮಠದ ವ್ಯವಸ್ಥಾಪಕ ಕಾರ್ಯದ ನಿರ್ವಹಣೆ ಹೊರತುಪಡಿಸಿ ಮಠದ ಬೇರೆ ಕಾರ್ಯಕ್ಕೆ ತಾತ್ಪೂರ್ತಿಯಾಗಿ ನಿಯೋಜಿಸಬೇಕು ಎಂದು ನಿರ್ದೇಶಿಸಿದ್ದಾರೆ. ಆರೋಪಕ್ಕೆ ಸಂಬಂಧಿಸಿದಂತೆ ತುಪ್ಪದ ಅವರು ಸಮಜಾಯಿಸಿ ನೀಡಿದ್ದರೂ, ಆರೋಪವು ಸಂಶಯಕ್ಕೆ ಕಾರಣವಾಗಿದೆ ಎಂದು ತನಿಖೆಗೆ ಆದೇಶಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಮಠದ ಸಿಬ್ಬಂದಿಗೆ ನಿಯಮಾವಳಿ ಮೀರಿ ಬಡ್ತಿ, ಮಠದ ಗೋಶಾಲೆಯ ಜಾನುವಾರುಗಳನ್ನು ಅನಧಿಕೃತವಾಗಿ ಮಾರಾಟ, ನಿಯಮ ಗಾಳಿಗೆ ತೂರಿ ಟೆಂಡರ್ ನಿರ್ವಹಣೆ, ತಮಗೆ ಬೆಂಬಲ ನೀಡದ ಟ್ರಸ್ಟಿಗಳಿಗೆ ಬ್ಲ್ಯಾಕ್‌ಮೇಲ್ ಮಾಡಿದ್ದಾರೆ ಎಂದು ಈರಣ್ಣ ವಿರುದ್ಧ ಭಕ್ತರು ಆರೋಪ ಮಾಡಿದ್ದರು.

ಅಮಾನತಿನ ವೇಳೆ ಅವರಿಗೆ ವ್ಯವಸ್ಥಾಪಕ ಹುದ್ದೆ ಹೊರತುಪಡಿಸಿ ಬೇರೆ ಕಾರ್ಯಕ್ಕೆ ನಿಯೋಜಿಸಬೇಕು ಎಂಬ ಆದೇಶವಿದ್ದರೂ ಬೇರೆ ಕಾರ್ಯಕ್ಕೆ ನಿಯೋಜಿಸಿಲ್ಲ, ಅಲ್ಲದೆ, ಅವರನ್ನು ಕಡ್ಡಾಯ ರಜೆಯ ಮೇಲೆ ಕಳಿಸಲಾಗಿದೆ. ಅಲ್ಲದೆ, ಈ ವೇಳೆ ಪೂರ್ಣ ವೇತನ ನೀಡಲಾಗುತ್ತಿದೆ ಎಂದು ಭಕ್ತರು ದೂರಿದ್ದಾರೆ. ಮಠದ ಹಿತರಕ್ಷಣಾ ಸಮಿತಿ ಅಧ್ಯಕ್ಷ ಗುರುನಾಥ ಉಳ್ಳಿಕಾಶಿ ಮಾತನಾಡಿ, ಈರಣ್ಣ ಅವರನ್ನು ಅಮಾನತು ಮಾಡಲಾಗಿದೆ. ಆದರೆ ಅವರನ್ನು ಕಡ್ಡಾಯ ರಜೆ ಮೇಲೆ ಕಳಿಸಿರುವುದು ಕಾನೂನು ಬಾಹಿರ. ಈ ವೇಳೆ ಅವರಿಗೆ ಯಾವುದೇ ವೇತನ ನೀಡಬಾರದು. ಆರೋಪಗಳ ಕುರಿತು ಪಾರದರ್ಶಕ ತನಿಖೆಯಾಗಬೇಕು. ಇದರಲ್ಲಿ ಶಾಮೀಲಾಗಿರುವವರ ವಿರುದ್ಧವೂ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸಹೋದರನಿಂದಲೇ ಅಕ್ಕನ ಬರ್ಬರ ಹತ್ಯೆ

ಶಿಗ್ಗಾವಿ: ಒಡಹುಟ್ಟಿದ ಸಹೋದರನಿಂದಲೇ ಅಕ್ಕನನ್ನ ಬರ್ಬರವಾಗಿ ಹತ್ಯೆ ಮಾಡಿದ ಘಟನೆ ಶಿಗ್ಗಾವಿ ಪಟ್ಟಣದ ಗುಡ್ಡದ ಓಣಿಯ ಅಂಗನವಾಡಿ ಕೇಂದ್ರ ನಂ-3ರಲ್ಲಿ ಸೋಮವಾರ ಬೆಳಗ್ಗೆ ಹಾಡುಹಗಲೇ ನಡೆದಿದ್ದು, ಶಿಗ್ಗಾವಿ ಜನತೆಯನ್ನು ಮತ್ತೆ ಬೆಚ್ಚಿಬೀಳುವಂತೆ ಮಾಡಿದೆ.



ಕೊಲೆಯಾದ ಮಹಿಳೆಯನ್ನ ಸುಮಾ ಶಿವಶಂಕರ ಸವಣೂರ(29) ಎಂದು ಗುರುತಿಸಲಾಗಿದೆ. ಅಂಗನವಾಡಿಯಲ್ಲಿ ಆಯಾ ಆಗಿ ಕೆಲಸ ಮಾಡುತ್ತಿದ್ದಳು. ಬೆಳಗ್ಗೆ ಅಂಗನವಾಡಿ ತೆರೆಯಲು ಬಂದಾಗ ಸಹೋದರ ಸಂಜು ರೇವಣೆಪ್ಪ ಅರಿವಾಳ(20) ಏಕಾಏಕಿ ಬೈಕ್‌ನಲ್ಲಿ ಬಂದು ಮನಬಂದಂತೆ ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿದ್ದಾನೆ ಎಂದು ಶಂಕಿಸಲಾಗಿದೆ.

ಈಗಾಗಲೇ ಪೊಲೀಸರು ಆರೋಪಿಯನ್ನ ವಶಕ್ಕೆ ಪಡೆದಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಹಾವೇರಿ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ ಸ್ಥಳೀಯ ಪೊಲೀಸರಿಂದ ಮಾಹಿತಿ ಪಡೆದರು.

ಡಿ.ಎಸ್.ಪಿ ಗುರುಶಾಂತಪ ಸೇರಿದಂತೆ ಪೊಲಿಸರು ಸ್ಥಳದಲ್ಲಿದ್ದು ತನಿಖೆ ಕೈಗೊಂಡಿದ್ದಾರೆ. ಶಿಶು ಅಭಿವೃದ್ಧಿ ಇಲಾಖೆಯ ಅಧಿಕಾರಿ ಗಣೇಶ ಲಿಂಗನಗೌಡ್ರ ಹಾಗೂ ಮೇಲ್ವಿಚಾರಕೀಯರು ಸ್ಥಳದಲ್ಲಿದ್ದು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

> **ಕೊಲೆಯಾದ ಮಹಿಳೆಯು ಹುಬ್ಬಳ್ಳಿಯ ತಾರಿಹಾಳದವಳಾಗಿದ್ದು ಅನೈತಿಕ ಸಂಬಂಧದ ಶಂಕೆ ವ್ಯಕ್ತವಾಗುತ್ತಿದೆ. ಘಟನೆಯ ಕುರಿತು ತನಿಖೆ ಮಾಡಲಾಗುತ್ತಿದೆ. ಈಗಾಗಲೇ ಆರೋಪಿಯನ್ನ ವಶಕ್ಕೆ ಪಡೆಯಲಾಗಿದ್ದು, ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗುತ್ತದೆ.**
> ■ **ಯಶೋಧಾ ವಂಟಗೋಡಿ, ಎಸ್‌ಪಿ ಹಾವೇರಿ**

ಅನೈತಿಕ ಸಂಬಂಧದ ಶಂಕೆ: ತಾರಿಹಾಳದಲ್ಲಿಯ ವ್ಯಕ್ತಿಯೋರ್ವನ ಜೊತೆಗೆ ಕೊಲೆಯಾದ ಮಹಿಳೆಯ ಅಕ್ರಮ ಸಂಬಂಧವಿತ್ತು ಎಂದು ತನಿಖೆಯಿಂದ ತಿಳಿದು ಬಂದಿದೆ. ಇದರಿಂದ ಆಕ್ರೋಶಗೊಂಡಿದ್ದ ಸಹೋದರ ಆರೋಪಿ ಸಂಜು ತಾರಿಹಾಳದಿಂದ ಅಕ್ಕನನ್ನ ಹಿಂಬಾಲಿಸಿಕೊಂಡು ಬಂದು ಶಿಗ್ಗಾವಿಯಲ್ಲಿ ಕೊಲೆ ಮಾಡಿದ್ದಾನೆ ಎನ್ನಲಾಗಿದೆ.

ಘಟನೆ ನಡೆದ ಸ್ಥಳದಲ್ಲಿ ಅಂಗನವಾಡಿ ಶಿಕ್ಷಕಿ ಕಮಲವ್ವ ಮಾವೂರ ಇದ್ದು ತೀವ್ರ ಆಘಾತಕ್ಕೆ ಒಳಗಾಗಿದ್ದಾರೆ. ಅವರನ್ನ ಶಿಗ್ಗಾವಿ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಶಿಗ್ಗಾವಿಯಲ್ಲಿ ಇತ್ತೀಚೆಗೆ ಗುತ್ತಿಗೆದಾರನೋರ್ವನ ಕೊಲೆಯು ಮಾಸುವ ಮುನ್ನವೇ ಮತ್ತೊಂದು ಕೊಲೆಯಾಗಿರುವುದು ತಾಲೂಕಿನಲ್ಲಿ ಕಾನೂನು ಸುವ್ಯವಸ್ಥೆಯನ್ನು ಪ್ರಶ್ನಿಸುವಂತಾಗಿ, ಶಿಗ್ಗಾವಿ ಜನತೆಯ ತೀವ್ರ ಆತಂಕಕ್ಕೆ ಕಾರಣವಾಗಿದೆ.

ಇಂದಿನ ಉತ್ಪನ್ನವಾರು ದರ
ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ(ಕ್ವಿಂ)	₹ಗರಿಷ್ಠ (ಕ್ವಿಂ)
ಅಲಸಂದೆ ಕಾಳು	6512	6512
ಕಡಲೆಕಾಳು	2110	6260
ಉದ್ದಿನಕಾಳು	1310	7211
ಧನಿಯಾ	10631	10871
ಒಣ ಮೆಣಸಿನಕಾಯಿ	5650	42778
ಹೆಸರುಕಾಳು	3410	7802
ನೆಲಗಡಲೆ (ಶೇಂಗಾ)	2010	8899
ಹುರುಳಿ ಕಾಳು	3389	4103
ಜೋಳ	989	4806
ಮೆಕ್ಕೆಜೋಳ	1969	1969
ಮಡಿಕೆ (ಮಟಕಿ)	7529	14900
ಈರುಳ್ಳಿ	500	1900
ಆಲೂಗಡ್ಡೆ	1200	1800
ಕುಸುಬೆ	5229	5429
ಸೋಯಾಬಿನ್	4555	7499
ತೊಗರಿ	4469	4469
ಗೋಧಿ	2352	5666

ಗೃಹಣಿ ಮೇಲೆ ಲೈಂಗಿಕ ಹಲ್ಲೆ

ಕುಂದಗೋಳ: ತಾಲೂಕಿನ ರಟಗೇರಿ ಗ್ರಾಮದ ಗೃಹಿಣಿ ಮೇಲೆ ಲೈಂಗಿಕ ಹಲ್ಲೆ ಮಾಡಿದ ಘಟನೆ ಮೇ 22ರಂದು ಜರುಗಿದೆ. ಗೃಹಿಣಿಯು ತಮ್ಮ ಕುರಿಗಳನ್ನು ಗುಡ್ಡದ ಕಡೆಗೆ ಮೇಯಿಸಲು ಹೋಗುವಾಗ ಮುದಕಪ್ಪ ನಿಂಗಪ್ಪ ಗೊರವಿಯವ ಹೊಲದ ಬಳಿ ಮಾದೇವಪ್ಪ ಗುಳ್ಳಪ್ಪ ವಡ್ಡರ ಎಂಬುವರು ಲೈಂಗಿಕ ಹಲ್ಲೆ ಮಾಡಿದ್ದಾರೆ ಎಂದು ಗುಡಗೇರಿ ಪೊಲೀಸ್ ಠಾಣೆಯಲ್ಲಿ ಮೇ 23ರಂದು ಪ್ರಕರಣ ದಾಖಲಾಗಿದೆ. ಆರೋಪಿಯನ್ನು ಬಂಧಿಸಿದ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ರಾಜ್ಯ ಮಟ್ಟದ ಕುಸ್ತಿಯಲ್ಲಿ ರವೀಂದ್ರ ಪ್ರಥಮ

ಕಲಘಟಗಿ: ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ರಾಜ್ಯ ಸರ್ಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆ ತಾಲೂಕು ಪಂಚಾಯತ್ ಸಿಬ್ಬಂದಿ ರವೀಂದ್ರ ಅಲ್ಲಾಪುರ ಕುಸ್ತಿ ಫ್ರೀ ಸ್ಟೈಲ್ 70 ಕೆ.ಜಿ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

ಕರ್ನಾಟಕ ಸರ್ಕಾರ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ನಡೆದ ಸ್ಪರ್ಧೆಗಳಲ್ಲಿ ರಾಜ್ಯಾಧ್ಯಕ್ಷ ಸಿ.ಎಸ್.ಷಡಕ್ಷರಿ ಪ್ರಮಾಣಪತ್ರ ನೀಡಿದರು.

ತಾಲೂಕಿನ ಪ್ರತಿಭೆ ಪ್ರಥಮ ಸ್ಥಾನ ಪಡೆದಿದ್ದು ಹೆಮ್ಮೆಯ ವಿಷಯ ಎಂದು ತಾಪಂ ಇಓ ಪರಶುರಾಮ ಸಾವಂತ ಹರ್ಷ ವ್ಯಕ್ತಪಡಿಸಿದ್ದಾರೆ. ಜಿಲ್ಲಾ ಹಾಗೂ ತಾಲೂಕಿನ ಸರ್ಕಾರಿ ನೌಕರರ ಸಂಘ ವಿಜೇತರನ್ನು ಅಭಿನಂದಿಸಿದ್ದಾರೆ.



ಭಾರತ ವಿಭೂಷಣ ಪ್ರಶಸ್ತಿಗೆ ಭಾಜನ

ಚಿಕ್ಕೋಡಿ: ಇಲ್ಲಿನ ಸಿಟಿಇ ಸಂಸ್ಥೆಯ ಎ.ಎ.ಪಾಟೀಲ ಮಹಿಳಾ ಪದವಿ ಮಹಾವಿದ್ಯಾಲಯದಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿರುವ ರವಿ ಮದ್ರಾಸಿ ಅವರ ಸಾಧನೆ ಗುರುತಿಸಿ 'ನ್ಯಾಷನಲ್ ಬುಕ್ ಆಫ್ ರೆಕಾರ್ಡ್ಸ್' ಸಂಸ್ಥೆ 'ಭಾರತ ವಿಭೂಷಣ ಪ್ರಶಸ್ತಿ 2026'ನ್ನು ನೀಡಿ ಗೌರವಿಸಿದೆ. ರವಿ ಮದ್ರಾಸಿ ಇದುವರೆಗೆ 760ಕ್ಕೂ ಹೆಚ್ಚು ಪ್ರಮಾಣಪತ್ರ ಹೊಂದಿ ದಾಖಲೆ ಮಾಡಿದ್ದು, ಇದು ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್ ಮತ್ತು ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ಸಂಸ್ಥೆಗಳಲ್ಲಿ ದಾಖಲಾಗಿತ್ತು. ಇದೀಗ 925ಕ್ಕೂ ಹೆಚ್ಚು ಡಿಜಿಟಲ್ ಪ್ರಮಾಣ ಪತ್ರ ಹಾಗೂ ರಾಷ್ಟ್ರೀಯ ಪ್ರತಿಜ್ಞೆಗಳ ದಾಖಲೆಗಳನ್ನು ಹೊಂದುವ ಮೂಲಕ ತಮ್ಮದೇ ಹಳೆಯ ದಾಖಲೆ ಮುರಿದಿದ್ದಾರೆ.



ಅಪಘಾತ: ಮೂವರು ಸಾವು

ರಾಯಬಾಗ: ಪಟ್ಟಣದ ಸಂತೆಗೆ ದ್ವಿಚಕ್ರ ವಾಹನದಲ್ಲಿ ಬರುತ್ತಿದಾಗ ರಾಯಬಾಗ ಪಟ್ಟಣದಿಂದ ಹಾರೂಗೇರಿಗೆ ಹೊರಟಿದ್ದ ಆಟೋ ಎದುರು ಬದರಾಗಿ ಪರಸ್ಪರ ಡಿಕ್ಕಿ ಹೊಡೆದ ಪರಿಣಾಮ ಮೂವರು ಸ್ಥಳದಲ್ಲಿಯೇ ಮೃತಪಟ್ಟ ಘಟನೆ ಸೋಮವಾರ ನಡೆದಿದೆ. ತಾಲೂಕಿನ ಬೊಮ್ಮನಾಳ ಗ್ರಾಮದ ಮಹಾಂತೇಶ ಅಶೋಕ ಮಾನೆ (32) ಪತ್ನಿ ಸಾಕ್ಷಿ (29) ಮಗ ಸಮರ್ಥ (9) ಮೃತಪಟ್ಟ ದುರ್ದೈವಿಗಳು. ಇನ್ನೋರ್ವ ಮಗ ಚೇತನ (5) ರಾಯಬಾಗ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾನೆ. ಆಟೋ ಚಾಲಕ ಪರಾರಿಯಾಗಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸಿದ್ದಾರೆ.

ಗಾಂಜಾ ಮಾರಾಟ: ಮೂವರ ಬಂಧನ

ಸಂಕೇಶ್ವರ: ಪಟ್ಟಣದ ಹೊರವಲಯದ ರಾಷ್ಟ್ರೀಯ ಹೆದ್ದಾರಿಯ ಡಿ-ಮಾರ್ಟ್ ಬಳಿಯ ಸೊಲ್ಲಾಪುರ ರಸ್ತೆಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಸಂಕೇಶ್ವರ ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳಾದ ಸಂಕೇಶ್ವರದ ಪರೀಟ ಗಲ್ಲಿಯ ಅವಧೂತ ಮಹಾದೇವ ಪರೀಟ, (25) ನದಿಗಲ್ಲಿಯ ಚಿನ್ಮಯ ಶಂಕರ ದೇಸಾಯಿ (21) ಮಹಾರಾಷ್ಟ್ರದ ಗಡಹಿಂಗ್ಲಜ್ ತಾಲೂಕಿನ ಹೆಬ್ಬಾಳ ಗ್ರಾಮದ ಸಚಿನ ವಿಜಯ ಮೊಳಗೆ (30) ಬಂಧಿಸಲಾಗಿದೆ.ಬಂಧಿತರಿಂದ ರೂ.15000ಮೌಲ್ಯದ 485 ಗ್ರಾಂ ಗಾಂಜಾ ಹಾಗೂ ಸುಜುಕಿ ಆಕ್ಸೆಸ್ ಬೈಕ್ ವಶಪಡಿಸಿಕೊಳ್ಳಲಾಗಿದ್ದು, ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಪಿ.ಐ.ಗಣಪತಿ ಕೊಗನೊಳಿ, ಪಿಎಸ್‌ಐ ವಿಠ್ಠಲ ನಾಯಿಕ, ಪಿಎಸ್‌ಐ ಯು.ಎಸ್.ಶೆಟ್ಟೆನ್ನವರ, ಎಎಸ್‌ಐ ಎಲ್.ಎಸ್. ಖೋತ ಹಾಗೂ ಸಿಬ್ಬಂದಿ ಕಾರ್ಯಕ್ಕೆ ಜಿಲ್ಲಾ ಎಸ್ಪಿ ಕೆ.ರಾಮರಾಜನ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಪುರಸಭೆ ಕಾರ್ಯಾಲಯ, ತೇರದಾಳ. ತಾ॥ ತೇರದಾಳ ಜಿ॥ ಬಾಗಲಕೋಟೆ

Website: www.terdaltown.gov.in. Phone No: 08353-256222 E-mail: itstaff_ulb_terdal@yahoo.com

ಕ್ರಸಂ: ಪುಸತೇ/ಆ.ವಿ/ಘ.ವಿ.ಅ–2026/ಅ.ಕು/ಸಾ.ಪ್ರ/2026–27 ದಿನಾಂಕ: 21–05–2026

ಸಾರ್ವಜನಿಕ ಪ್ರಕಟಣೆ

(ಘನತ್ಯಾಜ್ಯ ವಸ್ತುಗಳ (ವ್ಯವಸ್ಥಾಪನೆ ನಿರ್ವಹಣೆ) ನಿಯಮಗಳು–2026 ರನ್ವಯ)

ವಿಷಯ : ತೇರದಾಳ ಪುರಸಭೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಸ್ತುಗಳ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮಗಳು–2026 ನೇದ್ದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ : 1) ಕೇಂದ್ರ ಸರ್ಕಾರದ ಅಧಿಸೂಚನೆ ದಿನಾಂಕ 27/01/2026
2) ಮಾನ್ಯ ರಾಜ್ಯ ಅಭಿಯಾನ ನಿರ್ದೇಶಕರು, ಸ್ವಚ್ಛ ಭಾರತ್ ಮಿಷನ್ (ನಗರ) ನಗರಾಭಿವೃದ್ಧಿ ಇಲಾಖೆ ಬೆಂಗಳೂರು ರವರ ಸುತ್ತೋಲೆ ಪತ್ರ ದಿನಾಂಕ : 07-05-2026

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ತೇರದಾಳ ಪುರಸಭೆ ವ್ಯಾಪ್ತಿಯಲ್ಲಿನ ಸಾರ್ವಜನಿಕರಿಗೆ /ವ್ಯಾಪಾರಸ್ಥರಿಗೆ/ ಉದ್ದಿಮೆದಾರರಿಗೆ/ತ್ಯಾಜ್ಯ ಉತ್ಪಾದಕರಿಗೆ/ಸಂಘ ಸಂಸ್ಥೆಗಳ ಮುಖ್ಯಸ್ಥರುಗಳಿಗೆ/ಶಿಕ್ಷಣ ಸಂಸ್ಥೆಗಳಿಗೆ/ಸರ್ಕಾರಿ ಇಲಾಖೆಯ ಮುಖ್ಯಸ್ಥರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, 01–04–2026 (ಏಪ್ರೀಲ್ 01, 2026) ರಿಂದ ಮಾನ್ಯ ರಾಜ್ಯ ಅಭಿಯಾನ ನಿರ್ದೇಶಕರು, ಸ್ವಚ್ಛ ಭಾರತ್ ಮಿಷನ್ (ನಗರ) ನಗರಾಭಿವೃದ್ಧಿ ಇಲಾಖೆ ಬೆಂಗಳುರು ರವರ ಸುತ್ತೋಲೆ ಪತ್ರ ದಿನಾಂಕ : 07–05–2026 ರನ್ವಯ ಘನತ್ಯಾಜ್ಯ ವಸ್ತುಗಳ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮಗಳು–2026 ನೇದ್ದನ್ನು ಕೇಂದ್ರ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯಗಳು ಅನುಷ್ಠಾನಗೊಳಿಸಲು ಆದೇಶಿಸಿದ್ದು ಇರುತ್ತದೆ. ಸದರ ನಿಯಮದ ಪ್ರಕಾರ ಎಲ್ಲ ತ್ಯಾಜ್ಯ ಉತ್ಪಾದಕರುಗಳು ತಮ್ಮ ನಿವೇಶನ/ಕಟ್ಟಡ/ವಾಣಿಜ್ಯ ಮಳಿಗೆ/ಉದ್ದಿಮೆ ಪ್ರಾಂಗಣಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ವಸ್ತುಗಳನ್ನು ಈ ಕೆಳಕಂಡಂತೆ 04 (ನಾಲ್ಕು) ವಿಧಗಳಾಗಿ ಕಡ್ಡಾಯವಾಗಿ ವಿಂಗಡಿಸಿ ಈ ಕಾರ್ಯಾಲಯದ ತ್ಯಾಜ್ಯ ವಿಲೇವಾರಿ ವಾಹನಗಳಿಗೆ ಕಡ್ಡಾಯವಾಗಿ ನೀಡಬೇಕಾಗಿರುತ್ತದೆ.

ಕ್ರ. ಸಂ.	ತ್ಯಾಜ್ಯ ವಿಧ	ತ್ಯಾಜ್ಯಗಳ ವಿವರಣೆ	ತ್ಯಾಜ್ಯಗಳನ್ನು ವಾಹನಗಳಿಗೆ ನೀಡಬೇಕಾದ ದಿನಗಳು
01	ಹಸಿತ್ಯಾಜ್ಯ	ಅಡಿಗೆ ಮನೆಯ ತ್ಯಾಜ್ಯ, ಆಹಾರ ತ್ಯಾಜ್ಯ, ತರಕಾಗಿ ತ್ಯಾಜ್ಯ, ಮಾಂಸದ ತ್ಯಾಜ್ಯ, ಹಣ್ಣಿನ ತ್ಯಾಜ್ಯ, ಹೂವಿನ ತ್ಯಾಜ್ಯ, ಗಾರ್ಡನ್ ವೇಸ್ಟ್ ಮತ್ತು ಇತರೆ ಕರಗುವ (ಕೊಳೆಯುವ) ತ್ಯಾಜ್ಯ ವಸ್ತುಗಳು.	ಪ್ರತಿನಿತ್ಯ (ವಾರದ ಏಳು ದಿನಗಳು)
02	ಒಣತ್ಯಾಜ್ಯ	ಎಲ್ಲಾ ರೀತಿಯ ಪ್ಲಾಸ್ಟಿಕ್ ತ್ಯಾಜ್ಯ ವಸ್ತುಗಳು, ಬಟ್ಟೆಯ ತ್ಯಾಜ್ಯ ವಸ್ತುಗಳು, ಕಬ್ಬಿನ ತ್ಯಾಜ್ಯ, ಮರದ ತ್ಯಾಜ್ಯ ಇತ್ಯಾದಿ.	ಪ್ರತಿನಿತ್ಯ (ವಾರದ ಏಳು ದಿನಗಳು)
03	ಸ್ಯಾನಿಟರಿ ತ್ಯಾಜ್ಯ	ಡೈಪರ್ಸ್, ಸ್ಯಾನಿಟರಿ ನ್ಯಾಫ್‌ಕಿನ್ಸ್, ಕಾಂಡೋಮ್ಸ್ ಇತ್ಯಾದಿ.	ಪ್ರತಿ ಸೋಮುವಾರ, ಬುಧವಾರ, ಶುಕ್ರವಾರ.
04	ಸ್ಪೇಷಲ್ ಕೇರ್ ವೇಸ್ಟ್	ಪೇಂಟ್ ಡ್ರಮ್ಸ್/ಕಂಟೈನರ್ಸ್ ಔಷಧಿಗಳು/ಡ್ರಮ್‌ಗಳು/ಬಾಟಲ್ಸ್, ಬಲ್ಬ್ /ಟ್ಯೂಬ್‌ಲೈಟ್ಸ್, ಅವಧಿ ಮೀರಿದ ಔಷಧಿಗಳು, ಒಡೆದ ಥರ್ಮೋ ಮೀಟರ್ಸ್, ಹಳೆಯ ಬ್ಯಾಟರಿಗಳು, ಬಳಸಿದ ನೀಡಲ್/ ಸಿರೀಂಜ್‌ಗಳು, ಬ್ಯಾಂಡೇಜ್ ಇತ್ಯಾದಿ.	ಪ್ರತಿ ಮಂಗಳವಾರ, ಶನಿವಾರ.

ಈ ಮೇಲ್ಕಂಡಂತೆ ತೇರದಾಳ ಪುರಸಭೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ವಸ್ತುಗಳನ್ನು 04 ವಿಧಗಳಲ್ಲಿ ವಿಂಗಡಿಸಿ ಪುರಸಭೆಯ ಆರೋಗ್ಯ ವಿಭಾಗದ ಕಸ ಸಂಗ್ರಹಣೆ ಅಟೋಟಿಪ್ಪರ್‌ಗಳಿಗೆ ನೀಡುವುದು. ತಪ್ಪದ್ದಲ್ಲಿ ಘನತ್ಯಾಜ್ಯ ವಸ್ತುಗಳ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮಗಳು–2026 ರಂತೆ ಕಸ ವಿಂಗಡಣೆ ಮಾಡದೇ ಇರುವವರ ವಿರುದ್ಧ ದಂಡ ವಿಧಿಸುವುದಲ್ಲದೇ ಮೂಲಭೂತ ಸೌಕರ್ಯಗಳಾದ ನೀರಿನ ಸಂಪರ್ಕ ಮತ್ತು ವಿದ್ಯುತ್ ಸಂಪರ್ಕ ಕಡಿತಗೊಳಿಸಲು ನಿಯಮಾನುಸಾರ ಕ್ರಮ ವಹಿಸಲಾಗುವುದು.

ಕಾರಣ ತೇರದಾಳ ಪುರಸಭೆ ವ್ಯಾಪ್ತಿಯ ಸಾರ್ವಜನಿಕರು/ವ್ಯಾಪಾರಸ್ಥರು/ಉದ್ದಿಮೆದಾರರು/ತ್ಯಾಜ್ಯ ಉತ್ಪಾದಕರು/ಸಂಘ ಸಂಸ್ಥೆಗಳ ಮುಖ್ಯಸ್ಥರುಗಳು/ಶಿಕ್ಷಣ ಸಂಸ್ಥೆಗಳು/ಸರ್ಕಾರಿ ಇಲಾಖೆಯ ಮುಖ್ಯಸ್ಥರುಗಳು ಘನತ್ಯಾಜ್ಯ ವಸ್ತುಗಳ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮಗಳು–2026 ನೇದ್ದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಈ ಕಾರ್ಯಾಲಯಕ್ಕೆ ಸಹಕಾರ ನೀಡಲು ಕೋರಿದೆ.

ಸಹಿ/–
ಮುಖ್ಯಾಧಿಕಾರಿಗಳು,
ಪುರಸಭೆ ತೇರದಾಳ

ಸಹಿ/–
ಆಡಳಿತಾಧಿಕಾರಿಗಳು,
ಪುರಸಭೆ ತೇರದಾಳ

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು

Raichur Institute of Medical Sciences, Raichur
(ಸರ್ಕಾರದ ಸ್ವಾಯತ್ತ ಸಂಸ್ಥೆ) ಹೈದ್ರಾಬಾದ್ ರೋಡ್, ರಾಯಚೂರು –584102
Phone /Fax-08532-238488/89
www.rims-raichur.karnataka.gov.in info@rims-raichur.com

ಸಂ. ರಿಮ್ಸ್ /ಸರಬರಾಜು/ಟೆಂಡರ್/2026–27 ದಿನಾಂಕ:22.05.2026

ಇ–ಟೆಂಡರ್ ಪ್ರಕಟಣೆ

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಔಷಧಗಳು ಮತ್ತು ರಸಾಯನಿಕಗಳು, ರಿಏಜೆಂಟ್ಸ್‌ಗಳು ಮತ್ತು ಇತರೆ ಐಟಂಗಳು ಐಟಂಗಳನ್ನು ಪೂರೈಸಲು ಅರ್ಹ ಟೆಂಡರ್‌ದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ	ಟೆಂಡರ್‌ನ ವಿವರ	ಟೆಂಡರ್‌ನ ಸಂಖ್ಯೆ	ಅಂದಾಜು ವೆಚ್ಚ (ಲಕ್ಷಗಳಲ್ಲಿ)
1	ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ವಿವಿಧ ಔಷಧಗಳನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್/ಔಷಧ/ 162/2026–27 (DME/2026-27/IND2338)	96.12
2	ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ರಸಾಯನಿಕಗಳು, ರಿಏಜೆಂಟ್ಸ್‌ಗಳು ಮತ್ತು ಇತರೆ ಐಟಂಗಳನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್/ಕೆಮ್/ 163/2026–27 (DME/2026-27/IND2347)	90.39
3	ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ವಿವಿಧ ಇಂಜಕ್ಷನ್‌ಗಳನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್/ ಇಂಜಕ್ಷನ್/164/2026–27 (DME/2026-27/IND2348)	44.93

1) ಟೆಂಡರ್‌ಗಳನ್ನು ದಿನಾಂಕ: 25.05.2026 ರಿಂದ ಕೆಪಿಪಿ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು, **2) ಪ್ರಶ್ನೆಗಳಿಗೆ ಕೊನೆಯ ದಿನಾಂಕ:** 01.06.2026 ರ ಸಾಯಂಕಾಲ 5.00 ಗಂಟೆಯವರೆಗೆ, **3)ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ:** 08.06.2026 ರ ಸಾಯಂಕಾಲ 5.00ಗಂಟೆವರೆಗೆ, **4) ತಾಂತ್ರಿಕ ಲಕೋಟೆ (ಮೊದಲನೇಯ ಕವರ್) ತೆರೆಯುವ ದಿನಾಂಕ :** 10.06.2026 ಬೆಳಿಗ್ಗೆ 11.30ಗಂಟೆಗೆ.

ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೆ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ / ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಸದರಿ ಟೆಂಡರ್‌ಗಳ ಯಾವುದೆ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸುಲಾಗುವುದಿಲ್ಲ, ಬದಲಾಗಿ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಆಸಕ್ತಿವುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ ವೆಬ್‌ಸೈಟ್ http://kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ರಾಯಚೂರು

DIP/RCR/89/KSMC&A/91/2025-26

ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ

Tel: 0836-2956097, 2224195, 2224274, 2222161
ನವನಗರ, ಹುಬ್ಬಳ್ಳಿ–580 025

ಕ್ರಸಂ:ಹು.ಧಾ.ನ.ಪ್ರಾ.ಸಂ:ಯೋ.ವಿ/ಭೂ.ಬ/11,25,26/2026–27/1230 ದಿನಾಂಕ:25–05–2026

ಪತ್ರಿಕಾ ಪ್ರಕಟಣೆ

ಹುಬ್ಬಳ್ಳಿ–ಧಾರವಾಡ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ಪರಿಷ್ಕೃತ-II ರ ವ್ಯಾಪ್ತಿಯಲ್ಲಿ ಬರುವ ಈ ಕೆಳಗೆ ವಿವರಿಸಿದ ಜಮೀನುಗಳನ್ನು ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಭೌತೀಕ ಮನವಿಗಳನ್ನು ಸಲ್ಲಿಸಿದ್ದು, ಜಮೀನುಗಳ ವಿವರಣೆ ಈ ಕೆಳಗಿನಂತೆ ಇರುತ್ತದೆ.

ಅ. ನಂ	ಅರ್ಜಿದಾರರ ಹೆಸರು	ಗ್ರಾಮ	ರಿಸನಂ/ ಬ್ಲಾಕ ನಂ	ಕ್ಷೇತ್ರ	ಮ.ಯೋ. ಪ–II ರಂತೆ ಹಾಲಿ ಉಪಯೋಗ	ಭೂಉಪಯೋಗ ಬದಲಾವಣೆಗೆ ಕೋರಿರುವ ಉದ್ದೇಶ	ಸಾರ್ವಜನಿಕ ಹಿತಾಸಕ್ತಿ
1	ಶ್ರೀ ರಾಜೇಸಾಬ ಹು ಹಜರತನವರ	ಉಣಕಲ್ಲ	89/6	2ಎ–20ಗುಂ	ವ್ಯವಸಾಯ	ವಸತಿ	ವಸತಿ ಉದ್ದೇಶದ ನಿವೇಶನಗಳನ್ನು ತಯಾರಿಸಿ ಸಾರ್ವಜನಿಕರಿಗೆ ಮಾರಾಟ ಮಾಡುವುದು ಎಂದು ತಿಳಿಸಿರುತ್ತಾರೆ
2	ಶ್ರೀ ವೀರಣ ಎನ್ ಹರಕುಣಿ ಹಾಗೂ ಇತರರು	ಉಣಕಲ್ಲ	89/1	5ಎ–12ಗುಂ	ವ್ಯವಸಾಯ	ವಸತಿ	
3	ಶ್ರೀ ಬಸವರಾಜ ಎನ್ ಬಡವಣ್ಣವರ ಹಾಗೂ ಇತರರು	ನವಲೂರ	816/2	2ಎ–15ಗುಂ ಪೈಕಿ (01ಗುಂ 'ಅ' ಖರಾಬ ಹೊರತು ಪಡಿಸಿ) 2ಎ–14ಗುಂ	ವ್ಯವಸಾಯ	ವಸತಿ	

ಸದರಿ ಜಮೀನುಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961 ರ ಕಲಂ 14 (ಎ) ರನ್ವಯ ಭೂಉಪಯೋಗ ಬದಲಾವಣೆ ಮಾಡುವ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿ, ಸಾರ್ವಜನಿಕ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಈ ಪ್ರಕಟಣೆ ಆದ ದಿನಾಂಕದಿಂದ 16 ದಿನದೊಳಗಾಗಿ **ಆಯುಕ್ತರು, ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ನವನಗರ ಹುಬ್ಬಳ್ಳಿ–580025** ಇವರಿಗೆ ಸಂಬಂಧಪಟ್ಟ ದಾಖಲೆಗಳೊಂದಿಗೆ ಲಿಖಿತವಾಗಿ ಸಲ್ಲಿಸಲು ಕೋರಲಾಗಿದೆ. ಅವಧಿ ಮುಗಿದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಆಯುಕ್ತರು
ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ

ಡಿಐಪಿಆರ್/ಧಾರವಾಡ/227/ಮಣಿಪಾಲ್/2026–27

ಹಿರಿಯ ಭೂವಿಜ್ಞಾನಿಗಳ ಕಾರ್ಯಾಲಯ, ಜಿಲ್ಲಾಡಳಿತ ಭವನ, ಕೊಪ್ಪಳ

ದೂರವಾಣಿ ಸಂಖ್ಯೆ: 08539–221285 ಈ–ಮೇಲ್: sgdmgkoppal@gmail.com

ಸಂಖ್ಯೆ:ಗಭೂಇ/ಹಿಭೂವಿ/ಗ್ರಾ.ಟೆಂ./2026–27/752 ದಿನಾಂಕ: 25.05.2026

ಜಪ್ತಾದ ಗ್ರಾನೈಟ್ ದಿಮ್ಮಿಗಳಿಗೆ ಇ ಪ್ರಕ್ಯೂರ್‌ಮೆಂಟ್ ಟೆಂಡರ್–ಕಂ–ಹರಾಜು ಅಧಿಸೂಚನೆ (3ನೇ ಕರೆ)

ವಿದ್ಯುನ್ಮಾನ ಸಂಗ್ರಹಣೆ ಮುಖಾಂತರ ಜಪ್ತಾದ ಗ್ರಾನೈಟ್ ಶಿಲಾ ದಿಮ್ಮಿಗಳ ದರಖಾಸು ಮತ್ತು ಹಂಚಿಕೆ ಅಧಿಸೂಚನೆ
ಟಿಸಿಎ ಸಂಖ್ಯೆ 02/2026–27 ದಿನಾಂಕ: 25.05.2026

ಸರ್ಕಾರದ ಪ್ರಕಟಣೆ ಸಂ: ಸಿಐ:418:ಎಂಎಂಎಸ್:2016(Part) ಬೆಂಗಳೂರು ದಿನಾಂಕ 12–08–2016 ರಲ್ಲಿ ಹೊರಡಿಸಿದ ಕರ್ನಾಟಕದ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಾವಳಿ 2016 ರನ್ವಯ ಇಲಾಖಾ ಪ್ರಕರಣಗಳಡಿಯಲ್ಲಿ ಜಪ್ತಾದ ಗ್ರಾನೈಟ್ ಶಿಲಾ ದಿಮ್ಮಿಗಳನ್ನು ವಿದ್ಯುನ್ಮಾನ ಸಂಗ್ರಹಣೆ (ಇ–ಪ್ರೊಕ್ಯೂರ್‌ಮೆಂಟ್) ಅಡಿಯಲ್ಲಿ ಹರಾಜು ಮೂಲಕ ವಿಲೆವಾರಿ ಮಾಡಲು ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ವಹಿಸಿರುತ್ತದೆ.

ಈ ನಿಟ್ಟಿನಲ್ಲಿ ಕೊಪ್ಪಳ ಜಿಲ್ಲೆಯ ಕುಕನೂರು ತಾಲ್ಲೂಕುಗಳಲ್ಲಿ ಜಿಲ್ಲಾ ಟಾಸ್ಕ್‌ಫೋರ್ಸ್ (ಗಣಿ) ಸಮಿತಿ ಸಭೆಯ ನಡವಳಿ ದಿನಾಂಕ 22.09.2020 ಮತ್ತು 05.07.2023 ರಲ್ಲಿ ತೀರ್ಮಾನಿಸಿದಂತೆ ಎಲ್ಲಿದೆಯೋ ಹೇಗಿದೆಯೋ ಹಾಗೆಯೇ ಪರಿಕಲ್ಪನೆಯಡಿ ವಿಲೇವಾರಿ ಮಾಡುವ ಸಂಬಂಧ ಜಪ್ತಾದ ಗ್ರಾನೈಟ್ ದಿಮ್ಮಿಗಳಿಗೆ ಈ ಕೆಳಗಿನ ಕೋಷ್ಟಕದಲ್ಲಿ ಕಾಣಿಸಿದಂತೆ ಮೌಲ್ಯವನ್ನು ನಿಗದಿಪಡಿಸಲಾಗಿರುತ್ತದೆ. ಯಶಸ್ವಿ ಬಿಡ್ಡುದಾರರು ಸದರಿ ಗ್ರಾನೈಟ್ ಶಿಲಾ ದಿಮ್ಮಿಗಳನ್ನು ಹರಾಜಾದ ತಕ್ಷಣದಿಂದ ಸ್ವಯಂ ರಕ್ಷಣೆ ಮಾಡಿಕೊಳ್ಳತಕ್ಕದ್ದು. ಹಾಗೆಯೇ ಇಲಾಖೆಯ ನಿಯಮಾವಳಿಯಂತೆ ಹರಾಜು ಮೌಲ್ಯ, ರಾಜಧನ, ಆದಾಯ ತೆರಿಗೆ, ಹಾಗೂ ಇತರೆ ತೆರಿಗೆಗಳನ್ನು ಪಾವತಿಸಿದ ನಂತರ ಕೇಂದ್ರ ಕಛೇರಿ ಬೆಂಗಳೂರು ಇವರಿಂದ ನೀಡುವ ILMS User Id & Password ಪಡೆದು ಸಾಗಾಣಿಕೆ ಪರವಾನಿಗೆಯನ್ನು ಪಡೆದು ಒಂದು ತಿಂಗಳೊಳಗಾಗಿ ಇ–ಹರಾಜಾದ ಸಂಪೂರ್ಣ ಖನಿಜವನ್ನು ಸಾಗಾಣಿಕೆ ಮಾಡತಕ್ಕದ್ದು. ತಪ್ಪಿದಲ್ಲಿ ಮುಂದಿನ ಆಗು ಹೋಗುಗಳಿಗೆ ಇಲಾಖೆ ಜವಾಬ್ದಾರರಾಗಿರುವುದಿಲ್ಲ ಹಾಗೂ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರಂತೆ ಮುಂದಿನ ಕ್ರಮ ಕೈಗೊಳ್ಳುವ ಷರತ್ತುಗಳಿಗೆ ಒಳಪಟ್ಟಿರುತ್ತದೆ.

ಜಪ್ತಾದ ಗ್ರಾನೈಟ್ ಶಿಲಾ ದಿಮ್ಮಿಗಳನ್ನು ವಿದ್ಯುನ್ಮಾನ ಸಂಗ್ರಹಣೆ (ಇ–ಪ್ರೊಕ್ಯೂರ್‌ಮೆಂಟ್) ಯಡಿಯಲ್ಲಿ ಹರಾಜು ಮುಖಾಂತರ ವಿಲೇವಾರಿ ಮಾಡುವ ಈ ಅಧಿಸೂಚನೆಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000 ರಂತೆ ಆಹ್ವಾನಿಸಲಾಗಿದೆ. ಅಸಕ್ತ ಸಾರ್ವಜನಿಕರು/ಬಿಡ್‌ದಾರರು ತಮ್ಮ ದರಖಾಸುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಜಾಲತಾಣವಾದ http://www.KPPP.gov.in ರಲ್ಲಿ ಸಲ್ಲಿಸಬಹುದಾಗಿರುತ್ತದೆ.

: ಕೋಷ್ಟಕ :

ಕ್ರಮ ಸಂಖ್ಯೆ	ಜಪ್ತಾದ ಸ್ಥಳ	ಕಲ್ಲು ದಿಮ್ಮಿಗಳ ಸಂಖ್ಯೆ	ಪ್ರಮಾಣ(ಘನ ಮೀಟರ್‌ಗಳಲ್ಲಿ)	ಮೌಲ್ಯ (ರೂ.ಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)
1	ಸರ್ವೆ ನಂ. 49 & 50, ಕಲ್ಲು ಗಣಿ ಗುತ್ತಿಗೆ ಸಂಖ್ಯೆ 656, ಕಕ್ಕಿಹಳ್ಳಿ ಗ್ರಾಮ, ಕುಕನೂರು ತಾಲೂಕು	26	79.423	2,38,269	59,568

ಆಸಕ್ತ ಸಾರ್ವಜನಿಕರು ಮೇಲಿನ ಕೋಷ್ಟಕದಲ್ಲಿ ಸೂಚಿಸಿದ ಇಎಂಡಿ ಮೊತ್ತವನ್ನು ಹಾಗೂ ನೋಂದಣಿ ಶುಲ್ಕಗಳನ್ನು (ಹಿಂದಿರುಗಿಸಲಾಗುವುದಿಲ್ಲ) ಇ–ಪೋರ್ಟಲ್‌ನಲ್ಲಿ ಸಲ್ಲಿಸತಕ್ಕದ್ದು. ಟೆಂಡರ್ ಕಂ ಹರಾಜಿಗೆ ಸಂಬಂಧಿಸಿದಂತೆ ವಿಧಿಸಲಾಗಿರುವ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಾಗಿ ಹಿರಿಯ ಭೂವಿಜ್ಞಾನಿಯವರ ಕಚೇರಿ, ಗಣಿ ಮತ್ತು ಭೂವಿಜ್ಞಾನಿ ಇಲಾಖೆ, ಜಿಲ್ಲಾಡಳಿತ ಭವನ, ಕೊಪ್ಪಳ ರವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ. **(ದೂರವಾಣಿ ಸಂಖ್ಯೆ: 08539–221285)**

ಈ ಮೇಲ್ಕಾಣಿಸಿದ ಗ್ರಾನೈಟ್ ಶಿಲಾ ದಿಮ್ಮಿಗಳ ಅರ್ಹತಾಪೂರ್ವ ದರಖಾಸು ಪ್ರಕ್ರಿಯೆಯ ವೇಳಾ ಪಟ್ಟಿ ಈ ಕೆಳಗಿನಂತಿದೆ
(1) ಇ–ಹರಾಜಿಗೆ ಸಂಬಂಧಿಸಿದ ಬಿಡ್ ಡಾಕ್ಯೂಮೆಂಟ್ ಹಾಗೂ ಇತರೆ ವಿವರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾದ **ದಿನಾಂಕ ಹಾಗೂ ಸಮಯ : 27.05.2026 ಬೆಳಿಗ್ಗೆ 10.00 ಗಂಟೆಯ** ನಂತರ (2) ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ **ದಿನಾಂಕ ಮತ್ತು ಸಮಯ : 06.06.2026 ಬೆಳಿಗ್ಗೆ 10.00 ಗಂಟೆಯೊಳಗಾಗಿ** (3) ಇ–ಹರಾಜಿನಲ್ಲಿ ನೇರ ಬಿಡ್ಡಿಂಗ್ ಆರಂಭಿಸುವ **ದಿನಾಂಕ & ಸಮಯ : 09.06.2026 ಬೆಳಿಗ್ಗೆ 10.00 ಗಂಟೆಯಿಂದ** (4) ಇ–ಹರಾಜನ್ನು ಮುಕ್ತಾಯಗೊಳಿಸಲು ಕೊನೆಯ **ದಿನಾಂಕ & ಸಮಯ : 09.06.2026 ಸಾಯಂಕಾಲ 5.30 ಗಂಟೆಯವರೆಗೆ**

ಸಹಿ/– ಹಿರಿಯ ಭೂವಿಜ್ಞಾನಿಗಳು
ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕೊಪ್ಪಳ.

ವಾ.ಸಾ.ಸಂ.ಇ/ಕೊಪ್ಪಳ/108/ದೇಶಪಾಂಡೆಪಬ್ಲಿಸಿಟಿ/2026–27

CHANGE OF NAME

I, **NEERAJA** (Old Name) R/o. 856 Akbar Angadi old court Road Yellapur 581359 , have changed my name as **NEERAJA DINESH SHETTY** (New Name) henceforth I will be called and recognized by new name for all future purposes, dated: 25/05/2026.

CHANGE OF NAME

I, **DINESHA SHETTY KULLANJA** (Old Name) R/o. 856 Akbar Angadi old court Road Yellapur 581359 , have changed my name as **KULLANJA DINESH SHETTY** (New Name) henceforth I will be called and recognized by new name for all future purposes, dated: 25/05/2026.

CHANGE OF NAME

I, **RAVIKANT** (Old Name) R/o. Padmashri Hostel Road Nellikeri Kumta 581343, have changed my name as **RAVIKANT SHRINIVAS KAMAT** (New Name) henceforth I will be called and recognized by new name for all future purposes, dated: 25/05/2026.

CHANGE OF NAME

I, **UMESHA KRISHNAMURTHY** (Old Name) Resident of Plot No 31/2, Gamanagatti Road, Near Tulaja Bhavani Temple, Keertana Park, Navanagar, Hubballi - Dharwad City - 580025, Karnataka, India, have changed my name as **UMESH KRISHNAMURTHY GRAMPUROHIT** (New Name) henceforth I will be called and recognized by new name for all future purposes, dated: 24/05/2026.

CHANGE OF NAME

I, **ANAND SHANKAR LAXMESHWARAMATH** (Old Name) Resident of 33B, Near Om Shanti, Shanti Nagar, Athani, Dist: Belagavi - 591304, Karnataka, India, have changed my name as **ANAND SHANKAR LAXMESHWARMATH** (New Name) henceforth I will be called and recognized by new name for all future purposes, dated: 24/05/2026.

ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
3ನೇ ಮತ್ತು 4ನೇ ಮಹಡಿ, ಜನೋಪಯೋಗಿ ಕಟ್ಟಡ, ಎಂ.ಜಿ.ರಸ್ತೆ, ಬೆಂಗಳೂರು–560001.
ದೂ:080– 25586550/25586402, ಇ–ಮೇಲ್: info@ksicsilk.com

ಸಂಖ್ಯೆ: ಕೆಎಸ್‌ಐಸಿ/ಐಟಮ್ಸ್&ಡಬ್ಲ್ಯೂ/2026–27 ದಿನಾಂಕ: 25.05.2026

ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕೆಳಗಿನ ವಿವರವಾದ ವಸ್ತುಗಳು ಮತ್ತು ಕೆಲಸಗಳಿಗಾಗಿ ತಯಾರಕರು/ಡೀಲರ್‌ಗಳು/ಗುತ್ತಿಗೆದಾರರಿಂದ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ವಿವರಗಳು	ಇಎಂಡಿ (ರೂ.ಗಳಲ್ಲಿ)	ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ
1	KSIC, SWF ಮೈಸೂರು ಮತ್ತು SWU ಚನ್ನಪಟ್ಟಣಕ್ಕೆ ಆರು ತಿಂಗಳ ಅವಧಿಗೆ 222 ಟಿನ್‌ಗಳು (ತಲಾ 15 ಕೆಜಿ) KCOGF ಅಥವಾ ಸಮಾನ ಬ್ರಾಂಡ್ ತೆಂಗಿನ ಎಣ್ಣೆಯ ಖರೀದಿಗಾಗಿ **ಮರು–ಟೆಂಡರ್.**	28,500	03.06.2026 @03.00 PM	04.06.2026 @03.30 PM
2	ಕೆಎಸ್‌ಐಸಿ ಲೋಗೋ ಮತ್ತು ಕಾಲರ್ ಮೇಲೆ ಸೈಜ್ ಇರುವ ಹಾಗೂ ಎಡಭಾಗದಲ್ಲಿ ಪಾಕೆಟ್ ಹೊಂದಿರುವ 1,000 ರೇಷ್ಮೆ ಶರ್ಟ್‌ಗಳ ಹೊಲಿಗೆ ಕೆಲಸಕ್ಕಾಗಿ **ಟೆಂಡರ್,** (ಸೈಜ್, ಬಣ್ಣ ಮತ್ತು ಬೆಲೆಯನ್ನು ಉಲ್ಲೇಖಿಸುವ ಲೇಬಲ್ ಹೊಂದಿರುವ ಕೆಎಸ್‌ಐಸಿ ಡಿಸೈನ್ ಬಾಕ್ಸ್ ಸೇರಿದಂತೆ).	6,000	24.06.2026 @03.00 PM	25.06.2026 @03.30 PM
3	1,000 ಬಿಳಿ ಜರಿ ಸೀರೆಗಳಿಗೆ ಬಾಡಿ ಮತ್ತು ಪಲ್ಲು ಕಾಂಟ್ರಾಸ್ಟ್ ಡೈಯಿಂಗ್ ಕೆಲಸದ **ಟೆಂಡರ್**	20,000	09.06.2026 @03.00 PM	10.06.2026 @03.30 PM

ಟೆಂಡರ್ ದಾಖಲೆಗಳು, ಅಧಿಸೂಚನೆಯ ವಿವರಗಳು, ವೇಳಾಪಟ್ಟಿ ನಿಯಮಗಳು ಮತ್ತು ಷರತ್ತುಗಳನ್ನು **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಬಹುದು. ಹೆಚ್ಚಿನ ವಿವರಗಳನ್ನು ಕೆಳಗೆ ಸಹಿ ಮಾಡಿದವರ ಕಚೇರಿಯಿಂದ ಕೆಲಸದ ಸಮಯದಲ್ಲಿ ಅಥವಾ ಕೆಪಿಪಿ ಪೋರ್ಟಲ್ – ಸಹಾಯವಾಣಿ: 080–46010000 ಮತ್ತು 080–68948777 ನಿಂದ ಪಡೆಯಬಹುದು.

ಸಹಿ/–
ಪ್ರಧಾನ ವ್ಯವಸ್ಥಾಪಕರು(ಸಂ)

ವಾಸಾಸಂಇ/ವಾಪ್ರ/ಜಿಎ/750/2026–27

CHANGE OF NAME

I, **MAHMED SHAHID A** (Old Name) Resident of At Channapur Post Mavali Tq: Sorab, Shivamogga 577429 Karnataka, have changed my name as **MAHAMAD SHAHID ABDULMUNAF** (New Name) henceforth I will be called and recognized by new name for all future purposes, dated: 24/05/2026.

CHANGE OF NAME

I, **SHANKAR DUSHYANTSA ATHANI ALIAS SHANKAR D ATHANI ALIAS ATHANI SHANKAR ALIAS SHANKAR S/O DUSHYANTSA** Residing at 002 Rotson Manor, Kavi Raj Marg, Deshpande Nagar, Hubli Traffic Island Hubli, Dharwad, Karnataka - 580029 have changed my name and shall hereafter be known as **SHANKARASA ATHANI** henceforth I will be called and recognized by new name for all future purposes, dated: 25/05/2026.

ಕರ್ನಾಟಕ ಸರ್ಕಾರ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ಅರಣ್ಯ ಉಪ ವಿಭಾಗ, ಕಲಬುರಗಿ

ಪ್ರಾದೇಶಿಕ ಅರಣ್ಯ ವಿಭಾಗ ಕಛೇರಿ, ಎಸ್.ಬಿ. ದೇವಸ್ಥಾನ ರಸ್ತೆ, ಕಲಬುರಗಿ–585102
ದೂರವಾಣಿ ಸಂಖ್ಯೆ: 08472–256601, ಮಿಂಚಂಚೆ ವಿಳಾಸ : acfkalaburgit@gmail.com

ಸಂಖ್ಯೆ: ಸಅಸಂ/ಉವಿಕ/ಇ–ಟೆಂಡರ್/ಸಿಆರ್–02/2026–27/118 ದಿನಾಂಕ : 25–05–2026

:: ಅಲ್ಪಾವಧಿ ಟೆಂಡರ ಪ್ರಕಟಣೆ (ಇ–ಟೆಂಡರ್) ::

2026–27ನೇ ಸಾಲಿನಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಪ್ರಾದೇಶಿಕ ಅರಣ್ಯ ಉಪ ವಿಭಾಗ ಕಲಬುರಗಿ ವ್ಯಾಪ್ತಿಯಲ್ಲಿ ಬರುವ ಕಲಬುರಗಿ ವಲಯದಲ್ಲಿ ಕೆ.ಎಫ್.ಡಿ.ಎಫ್–ಆರ್.ಎಸ್.ಪಿ. ಯೋಜನೆಗಳಡಿ ಮುಂದುವರೆದ **ಅರಣ್ಯೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಮೂರನೇ ಬಾರಿಗೆ ಟೆಂಡರ್ ಆಹ್ವಾನಿಸಲಾಗಿದೆ.** ವಿವರ ಈ ಕೆಳಗಿನಂತಿದೆ.

ಕಾಮಗಾರಿಯ ವಿವರ : **ಕಲಬುರಗಿ ಪ್ರಾದೇಶಿಕ ಅರಣ್ಯ ಉಪ ವಿಭಾಗದಲ್ಲಿ ಪ್ರತ್ಯಕವಾಗಿ ಟೆಂಡರ್ ಅಹ್ವಾನಿಸಲಾಗಿದೆ.** 1) ಟೆಂಡರ್ ಮೊತ್ತ : **ಕನಿಷ್ಠ ರೂ. 1097500, ಗರಿಷ್ಠ ರೂ. 1569645,** 2) ಲೆಕ್ಕ ಶೀರ್ಷಿಕೆ : ಕೆ.ಎಫ್.ಡಿ.ಎಫ್–ಆರ್.ಎಸ್.ಪಿ., 3) **ಮೂರನೇ ಅವಧಿ :** ತಾಂತ್ರಿಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **30–05–2026 ಅಪರಾಹ್ನ 4.00 ಗಂಟೆವರೆಗೆ,** ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **01–06–2026 ಅಪರಾಹ್ನ 11.00 ಗಂಟೆಯ,** ಆರ್ಥಿಕ ಬಿಡ್ ತೆರೆಯುವ ದಿನಾಂಕ : **02–06–2026 ಅಪರಾಹ್ನ 11.30 ಗಂಟೆಯ,** 4) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ : ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಾದೇಶಿಕ ಅರಣ್ಯ ಉಪ ವಿಭಾಗ ಕಲಬುರಗಿ, ಎಸ್.ಬಿ. ಟೆಂಪಲ್ ರೋಡ್, ಕಲಬುರಗಿ, 5) ಅಂತರಜಾಲ ತಾಣದ ವಿಳಾಸ : https://kppp.karnataka.gov.in

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು
ಪ್ರಾದೇಶಿಕ ಅರಣ್ಯ ಉಪ ವಿಭಾಗ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/159/ಕೆ.ಎಸ್.ಎಂ.ಸಿ.&ಎ/2026–27

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕೇಂದ್ರ ಕಚೇರಿ, ಕಲಬುರಗಿ

(ಉಗ್ರಾಣ ಇಲಾಖೆ) ದೂರವಾಣಿ: 77606 86172 (COSP), 77609 92029 (S.O)

ಸಂ.ಕಕರಸಾ/ಕೇಕ/ಉ&ಮಖನಿ/02/2026–27 ದಿನಾಂಕ:25.05.2026

ಟೆಂಡರ್ ಪ್ರಕಟಣೆ. (ಇ–ಪ್ರೊಕ್ಯೂರ್‌ಮೆಂಟ್ ಮೋಡ್‌ನಲ್ಲಿ ಮಾತ್ರ)

ಈ ಕೆಳಗಿನ ವಸ್ತುಗಳನ್ನು ಪೂರೈಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಪ್ರಿ ಕ್ವಾಲಿಫಿಕೇಶನ್ ಮತ್ತು ಕಮರ್ಷಿಯಲ್) ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

Sl. No	Tender No.	Tender Nomenclature	Estimate Value(Rs.)	Last date for submission of tender
1.	KKRTC/2025-26/ IND0189/CALL-2	Supply of Plywood Sheets	0.58 Core	10.06.2026 at 15.00 hrs
2.	KKRTC/2024-25/ IND0125/CALL-7	Procurement of Oil Seals.	0.90 Crore	10.06.2026 at 15.00 hrs
3.	KKRTC/2025-26/ IND0192/CALL-2	Procurement of Thin walled Bearings.	0.70 Crore	10.06.2026 at 15.00 hrs
4.	KKRTC/2026-27/ IND0208	Procurement of Fasteners	0.94 Crore	10.06.2026 at 15.00 hrs
5.	KKRTC/2026-27/ IND0209	Supply of Curing Envelops and Curing Bags	0.58 Crore	10.06.2026 at 15.00 hrs
6.	KKRTC/2024-25/ IND0119/CALL-7	Procurement of Fuel Injection pipes & Leak off pipes	0.41 Crore	10.06.2026 at 15.00 hrs
7.	KKRTC/2026-27/ IND0207	Procurement of Head Lamp Assemblies and Accessories	4.02 Crore	22.06.2026 at 15.00 hrs
8.	KKRTC/2026-27/ IND0206	Supply of Desktop Computers, Laptops, Printers & Tabs	3.14 Crore	22.06.2026 at 15.00 hrs
9.	KKRTC/2026-27/ IND0212	Supply of First Aid Box with Medicine	0.35 Crore	22.06.2026 at 15.00 hrs
10.	KKRTC/2026-27/ IND0211	Supply of Fire detection & Suppression System(FDSS)	0.40 Crore	22.06.2026 at 15.00 hrs
11.	KKRTC/2026-27/ IND0203	Supply of Automotive Grease	3.49 Crore.	27.06.2026 at 15.00 hrs
12.	KKRTC/2026-27/ IND0205	Supply of PCTR & Allied Materials	11.02 Crore	27.06.2026 at 15.00 hrs
13.	KKRTC/2026-27/ SE8553	Engaging an agency for providing technical assistants to the divisions of KKRTC	9.52 Crore	27.06.2026 at 15.00 hrs
14.	KKRTC/2026-27/ SE8258-CALL-2	Identifying agency for providing IT Staff (Software & System Engineer on contract basis to KKRTC.	0.39 Crore	27.06.2026 at 15.00 hrs
15.	KKRTC/2025-26/ IND0176/CALL-3	Supply of Fan Belts	0.38 Crore	10.06.2026 at 15.00 hrs
16.	KKRTC/2024-25/ IND0101/CALL-5	Supply of Piston Assembly and Ring Sets	0.89 Crore	10.06.2026 at 15.00 hrs
17.	KKRTC/2026-27/ IND0213	Supply of King pin Components & Stub Axles	2.13 Crore	27.06.2026 at 15.00 hrs

ಟೆಂಡರ್, ನೊಂದಣೆ, ಟೆಂಡರ್ ಫಾರ್ಮ ದಾಖಲಾತಿಗಳ ಎಲ್ಲಾ ವಿವರಗಳು **https://kppp.karnataka.gov.in/#/portal/portal-home** ನಲ್ಲಿ ಲಭ್ಯವಿರುತ್ತವೆ. ಅಗತ್ಯವಿದ್ದರೆ ಹೆಚ್ಚಿನ ಮಾಹಿತಿಗಾಗಿ **cospnekrtc@gmail.com** ಅಥವಾ **support@eprochelpdesk.com** ಗೆ–ಮೇಲ್ ಮುಖಾಂತರ ಸಂಪರ್ಕಿಸಬಹುದಾಗಿದೆ. ಪರಿಭಾಷೆಯಲ್ಲಿನ ಬದಲಾವಣೆಗಳಿಗೆ ಸಂಬಂಧಿಸಿದಂತೆ ಯಾವುದೇ ಅಡೆಂಡಮ್ /ಕೊರಿಜೆಂಡಮ್ ಮತ್ತು ಟೆಂಡರ್ ಷರತ್ತು ಮತ್ತು ನಿಭಂಧನೆಗಳು, ಸ್ಪೆಸಿಫಿಕೇಶನ್ ಮತ್ತು ಘಟನೆಗಳ ಕ್ಯಾಲೆಂಡರ್ ಇತ್ಯಾದಿಗಳನ್ನು ಇ–ಪ್ರಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ ಅಪ್ಲೋಡ್ ಮಾಡಲಾಗುತ್ತದೆ.

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರಸ್ಥರು)

ವಾ.ಸಾ.ಸಂ.ಇ.ಕಲಬುರಗಿ/158/ದೇಶಪಾಂಡೆ ಪಬ್ಲಿಸಿಟಿ/2026–27/

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ ಲೋಕೋಪಯೋಗಿ ಇಲಾಖೆ ಹಾಸನ ವಿಭಾಗ, ಹಾಸನ.

ಸಂ:ಕಾ.ಇಂ/ಲೋ.ಇ.ವಿ/ಹಾಸನ/ಕಿ.ಇಂ–2/2026–27/
ದಿನಾಂಕ:25.05.2026.

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:11/2026–27: ದಿನಾಂಕ:25.05.2026.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4ರ ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ದರ್ಜೆ ಗುತ್ತಿಗೆದಾರರಿಂದ ಹಾಸನ ವಿಭಾಗದಡಿ 01 ಸಂಖ್ಯೆ ಕಾಮಗಾರಿಗಾಗಿ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ನಲ್ಲಿನ ಟೆಂಡರ್‌ಗೆ ಇಡಲಾದ ಮೊತ್ತ ರೂ.199.20ಲಕ್ಷ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕಡೆಯ ದಿನಾಂಕ:04.06.2026ರ ಸಂಜೆ 4.00ಗಂಟೆವರೆಗೆ. ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ನೋಡುವುದು ಅಥವಾ ಈ ಕಛೇರಿಯ ಸಹಾಯಕ ದೂರವಾಣಿ ಸಂಖ್ಯೆ: 08172 – 268437 ರಿಂದ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋಇ ಹಾಸನ ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/168/ಕೆಎಸ್‌ಎಂಸಿಎ/2026–27

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿ), ಕೊಪ್ಪಳ

(ಕರ್ನಾಟಕ ಸರಕಾರದ ಸ್ವಾಯತ್ತ ಸಂಸ್ಥೆ)
ನೊಂದಣಿ ಸಂಖ್ಯೆ : KOL-S243-2012-13
ದಿನಾಂಕ : 15–03–2013
ದೂರವಾಣಿ : 08539 225522 / 23,
ಇ–ಮೇಲ್ : directorkimskoppal@gmail.com,
ವೆಬ್‌ಸೈಟ್ : www.kimskoppal.com

ಸಂಖ್ಯೆ : ಕಿಮ್ಸ್/ಕೊಪ್ಪಳ/ಟೆಂಡರ್/ಪತ್ಯಾಹಾರ/2026–27
ದಿನಾಂಕ : 26–05–2026

ಟೆಂಡರ್ ಅಧಿಸೂಚನೆ

ಕಿಮ್ಸ್ ಕೊಪ್ಪಳ ಸಂಸ್ಥೆಯ ಜಿಲ್ಲಾಬೋಧಕ ಆಸ್ಪತ್ರೆಗೆ ಸಿದ್ದಪಡಿಸಿದ ಪತ್ಯಾಹಾರವನ್ನು ಪೂರೈಸಲು 01 ವರ್ಷದ ಅವಧಿಗೆ ಕೆ.ಟಿ.ಪಿ.ಪಿ. ಕಾಯ್ದೆ 1999 – 2000 ರ ಅನ್ವಯ ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣ ಕೋಶದ ಪೋರ್ಟಲ್ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಅರ್ಹ ಟೆಂಡರ್‌ದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.

1) ಟೆಂಡರ್ ಅಂದಾಜು ಮೊತ್ತ : ರೂ. 159.00 ಲಕ್ಷಗಳು, 2) ಇ.ಎಂ.ಡಿ. : ರೂ. 2,38,500/–, 3) ಟೆಂಡರ್‌ನ್ನು ದಿನಾಂಕ : 26–05–2026 ರಿಂದ ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು, 4) ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 29–06–2026 ರ ಸಂಜೆ 5.30 ಗಂಟೆವರೆಗೆ.

ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ **ವೆಬ್‌ಸೈಟ್ : https://kppp.karnataka.gov.in** ನಲ್ಲಿ ಹಾಗೂ ಈ ಸಂಸ್ಥೆಯ **ವೆಬ್‌ಸೈಟ್ : http//www.kimskoppal.kar.nic.in** ನಿಂದ ಡೌನ್‌ಲೋಡ್ ಮಾಡಿ ಕೊಳ್ಳಬಹುದು.

ಸಹಿ/– ನಿರ್ದೇಶಕರು,
ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಕೊಪ್ಪಳ.

ಡಿಐಪಿಆರ್/ಕೊಪ್ಪಳ/107/ಮಣಿಪಾಲ್/2026–27

ಫಾರ್ಮ್ ಬಿ
ಸಾರ್ವಜನಿಕ ಘೋಷಣೆ

[ಭಾರತದ ದಿವಾಳಿತನ ಮತ್ತು ಪಾಪರಿಕೆ ಮಂಡಳಿ (ದಿವಾಳಿತನ ಪ್ರಕ್ರಿಯೆ) ನಿಬಂಧನೆಗಳು–2016ರ ನಿಬಂಧನೆ 12 ಅನ್ವಯ]
ಮೆಸರ್ಸ್ ವಿಭಾ ಆಗ್ರೋ ಟೆಕ್ ಲಿಮಿಟೆಡ್‌ನ ಹಕ್ಕುದಾರರ ಗಮನಕ್ಕೆ

ಕ್ರ. ಸಂ.	ಸೂಕ್ತ ವಿವರಗಳು	ವಿವರಗಳು
1.	ಕಾರ್ಪೊರೇಟ್ ವ್ಯಕ್ತಿಯ ಹೆಸರು	**ಮೆಸರ್ಸ್ ವಿಭಾ ಆಗ್ರೋ ಟೆಕ್ ಲಿಮಿಟೆಡ್**
2.	ಕಾರ್ಪೊರೇಟ್ ವ್ಯಕ್ತಿಯ ಸಂಸ್ಥಾಪನೆ ದಿನಾಂಕ	10ನೇ ಮೇ 1995
3	ಯಾವ ಪ್ರಾಧಿಕಾರದಡಿ ಕಾರ್ಪೊರೇಟ್ ವ್ಯಕ್ತಿ ಸಂಸ್ಥಾಪನೆ/ ನೋಂದಣಿಯಾಗಿದ್ದಾರೆ	ರಿಜಿಸ್ಟಾರ್ ಆಫ್ ಕಂಪನೀಸ್ (ಆರ್‌ಒಸಿ), ಹೈದರಾಬಾದ್
4	ಕಾರ್ಪೊರೇಟ್ ವ್ಯಕ್ತಿಯ ಕಾರ್ಪೊರೇಟ್ ಐಡೆಂಟಿಟಿ ನಂಬರ್	ಯು24110ಟಿಜಿ1995ಪಿಎಲ್‌ಸಿ029318
5	ಕಾರ್ಪೊರೇಟ್ ವ್ಯಕ್ತಿಯ ನೋಂದಾಯಿತ ಕಚೇರಿ ಮತ್ತು ಪ್ರಧಾನ ಕಚೇರಿ (ಇದ್ದಲ್ಲಿ) ವಿಳಾಸ	ಫ್ಲಾಟ್ ನಂ. 501, ಎ & ಬಿ, ಸುಭಾನ್ ಸಿರಿಸಂಪದ, ನಂ. 6–3–1090/ಎ/1 (ಪ್ಲಾಟ್ ನಂ. 12), ರಾಜಭವನ ರಸ್ತೆ, ಸೋಮಾಜಿಗುಡ, ಹೈದರಾಬಾದ್–500082
6	ಕಾರ್ಪೊರೇಟ್ ವ್ಯಕ್ತಿಯ ಸಮಾಪನಾ ನಿರ್ಣಯ ಪ್ರಕ್ರಿಯೆ ಮುಕ್ತಾಯ ದಿನಾಂಕ	22.05.2026
7	ಕಾರ್ಪೊರೇಟ್ ವ್ಯಕ್ತಿಯ ಸಮಾಪನಾ ಪ್ರಕ್ರಿಯೆ ಆರಂಭದ ದಿನಾಂಕ	22.05.2026
8	ಸಮಾಪನಾದಾರರಾಗಿ ಕಾರ್ಯನಿರ್ವಹಿಸುವ ಸಮಾಪನಾ ವೃತ್ತಿಪರರ ಹೆಸರು ಮತ್ತು ನೋಂದಣಿ ಸಂಖ್ಯೆ	ದಂತು ಇಂದು ಶೇಖರ್ ಐಬಿಬಿಐ/ಐಪಿಎ–003/ಐಪಿಎ–ಐಸಿಎಐ–ಎನ್–00233/2019–2020/ 12773
9	ಮಂಡಳಿಯಲ್ಲಿ ನೋಂದಾಯಿಸಿದಂತೆ ಸಮಾಪನಾದಾರರ ವಿಳಾಸ ಮತ್ತು ಇ-ಮೇಲ್	29–1401/6/1, ಪ್ಲಾಟ್ ನಂ. 253, ರಸ್ತೆ ಸಂಖ್ಯೆ 2 (ಪಶ್ಚಿಮ), ದೀನದಯಾಳ್ ನಗರ, ರಾಮಕೃಷ್ಣಾಪುರಂ, ನರೇಡ್‌ಮೆಟ್, ಹೈದರಾಬಾದ್, ತೆಲಂಗಾಣ– 500056 ಇ-ಮೇಲ್: indu.sekhar3@gmail.com
10	ಸಮಾಪನಾದಾರರ ಜತೆ ಸಂಪರ್ಕಕ್ಕೆ ಬಳಸುವ ವಿಳಾಸ ಮತ್ತು ಇ–ಮೇಲ್	ಫ್ಲಾಟ್ ನಂ. 104, ಕವೂರಿ ಸುಪ್ರೀಂ ಎನ್‌ಕ್ಲೇವ್, ಕವೂರಿ ಹಿಲ್ಸ್, ಹೈದರಾಬಾದ್–500033, ತೆಲಂಗಾಣ ಇ–ಮೇಲ್: cirpvibha@gmail.com
11	ಕ್ಲೇಮ್‌ಗಳ ಸಲ್ಲಿಕೆಗೆ ಕೊನೆಯ ದಿನಾಂಕ	**21.06.2026** (ಸಮಾಪನೆ ಆರಂಭದ ದಿನಾಂಕದಿಂದ 30 ದಿನಗಳು)

ಈ ಮೂಲಕ ತಿಳಿಯಪಡಿಸುವುದೇನೆಂದರೆ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ ಹೈದರಾಬಾದ್ ಪೀಠ–1 ವತಿಯಿಂದ ಐಬಿಸಿ–2016 ಸೆಕ್ಷನ್ 33ರ ಅನ್ವಯ **ಮೆಸರ್ಸ್ ವಿಭಾ ಆಗ್ರೋ ಟೆಕ್ ಲಿಮಿಟೆಡ್**‌ನ ಸಮಾಪನಾ ಪ್ರಕ್ರಿಯೆ ಆರಂಭಿಸಲು ದಿನಾಂಕ: 22.05.2026ರಂದು ಆದೇಶ ನೀಡಲಾಗಿದೆ.

ಮೆಸರ್ಸ್ ವಿಭಾ ಆಗ್ರೋ ಟೆಕ್ ಲಿಮಿಟೆಡ್ ಹಕ್ಕುದಾರರಿಗೆ ಈ ಮೂಲಕ ತಮ್ಮ ಕ್ಲೇಮ್‌ಗಳ ಪುರಾವೆಯನ್ನು **21.06.2026ರ ಒಳಗಾಗಿ** ಐಟಂ–10ರ ಎದುರು ನೀಡಿರುವ ಸಮಾಪನಾದಾರರ ವಿಳಾಸಕ್ಕೆ ಸಲ್ಲಿಸುವಂತೆ ಗಮನ ಸೆಳೆಯಲಾಗುತ್ತಿದೆ.

ಹಣಕಾಸು ಸಾಲದಾರರು ತಮ್ಮ ಕ್ಲೇಮ್‌ಗಳ ಪುರಾವೆಗಳನ್ನು ಎಲೆಕ್ಟ್ರಾನಿಕ್ ವಿಧಾನದ ಮೂಲಕವಷ್ಟೇ ಸಲ್ಲಿಸಬೇಕು. ಎಲ್ಲ ಇತರ ಹಕ್ಕುದಾರರು ತಮ್ಮ ಕ್ಲೇಮ್‌ಗಳ ಪುರಾವೆಗಳನ್ನು ವೈಯಕ್ತಿಕವಾಗಿ, ಅಂಚೆ ಮೂಲಕ ಅಥವಾ ಎಲೆಕ್ಟ್ರಾನಿಕ್ ವಿಧಾನದಲ್ಲಿ ಸಲ್ಲಿಸಬಹುದಾಗಿದೆ.


ಸುಳ್ಳು ಅಥವಾ ತಪ್ಪುದಾರಿಗೆಳೆಯುವಂಥ ಪುರಾವೆಗಳನ್ನು ಸಲ್ಲಿಸುವುದು ದಂಡವನ್ನು ಆಹ್ವಾನಿಸುತ್ತದೆ.

ಒಂದು ವೇಳೆ ಹಕ್ಕುದಾರರು ಸಮಾಪನಾ ಪ್ರಕ್ರಿಯೆ ವೇಳೆ ತಮ್ಮ ಕ್ಲೇಮ್‌ಗಳನ್ನು ಸಲ್ಲಿಸದೇ ಇದ್ದಲ್ಲಿ, ಹಕ್ಕುದಾರರು ಭಾರತದ ಪಾಪರಿಕೆ ಮತ್ತು ದಿವಾಳಿತನ ಮಂಡಳಿ (ಕಾರ್ಪೊರೇಟ್ ವ್ಯಕ್ತಿಗಳ ಸಮಾಪನಾ ನಿರ್ಣಯ ಪ್ರಕ್ರಿಯೆ) ನಿಬಂಧನೆ–2016ರ ಅಡಿಯಲ್ಲಿ ಕಾರ್ಪೊರೇಟ್ ಸಮಾಪನಾ ನಿರ್ಣಯ ಪ್ರಕ್ರಿಯೆಯ ವೇಳೆ ಸಲ್ಲಿಸಿದ ಕ್ಲೇಮ್‌ಗಳನ್ನು, ಸೆಕ್ಷನ್ 38ರ ಅಡಿಯಲ್ಲಿ ಸಲ್ಲಿಸಿದ ಕ್ಲೇಮ್‌ಗಳೆಂದು ಪರಿಗಣಿಸಲಾಗುತ್ತದೆ.

ಸಮಾಪನಾ ಪ್ರಕ್ರಿಯೆ ಅರ್ಜಿ ನಮೂನೆಯ ಡೌನ್‌ಲೋಡ್ ಸೆಕ್ಷನ್ ಅಡಿಯಲ್ಲಿ https://ibbi.gov.in/home/downloads ನಿಂದ ಕ್ಲೇಮ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ದಂತು ಇಂದು ಶೇಖರ್
ಸಮಾಪನಾದಾರರು
ಮೆಸರ್ಸ್ ವಿಭಾ ಆಗ್ರೋ ಟೆಕ್ ಲಿಮಿಟೆಡ್
ರಿಜಿಸ್ಟರ್ಡ್ ನಂ: ಐಬಿಬಿಐ/ಐಪಿಎ–003/ಐಪಿಎ–ಐಸಿಎಐ–ಎನ್–00233/2019–2020/12773.
ಎಎಫ್‌ಎ 31.12.2026ರವರೆಗೆ ಮಾನ್ಯತೆ ಹೊಂದಿದೆ

ದಿನಾಂಕ: 26.05.2026
ಸ್ಥಳ: ಹೈದರಾಬಾದ್



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ	14	9	5	0	18	+0.783
ಗುಜರಾತ್	14	9	5	0	18	+0.695
ಹೈದರಾಬಾದ್	14	9	5	0	18	+0.524
ರಾಜಸ್ಥಾನ	14	8	6	0	16	+0.189
ಪಂಜಾಬ್	14	6	6	1	15	+0.309
ಕೆಕೆಆರ್	13	6	6	1	13	+0.011
ಚೆನ್ನೈ	14	6	8	0	12	-0.345
ದಿಲ್ಲಿ	14	6	7	0	12	-0.871
ಮುಂಬೈ	14	4	10	0	8	-0.584
ಲಖನೌ	14	4	10	0	8	-0.740

ಕಿರುಸುದ್ದಿ

ಇಂದು ಆರ್‌ಸಿಬಿ ಪರ ಸಾಲ್ಟ್ ಆಡುವ ಸಾಧ್ಯತೆ



ಹೊಸದಿಲ್ಲಿ: ಏ.18ರಂದು ನಡೆದಿದ್ದ ದಿಲ್ಲಿ ಕ್ಯಾಪಿಟಲ್ಸ್ ಎದುರಿನ ಪಂದ್ಯದಲ್ಲಿ ಕ್ಷೇತ್ರರಕ್ಷಣೆ ವೇಳೆ ಬೆರಳಿನ ಗಾಯಕ್ಕೊಳಗಾದ ಫಿಲ್ ಸಾಲ್ಟ್ ಭಾರತಕ್ಕೆ ಮರಳಿದ್ದಾರೆ. ತಮ್ಮ ಗಾಯದ ಚಿಕಿತ್ಸೆಗಾಗಿ ಸಾಲ್ಟ್ ಇಂಗ್ಲೆಂಡ್‌ಗೆ ತೆರಳಿದ್ದರು. ಚಿಕಿತ್ಸೆಯ ಬಳಿಕ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಫಿಟ್ ಆಗಿದ್ದೇನೆಂಬ ಪೋಸ್ಟ್ ಮಾಡಿದ್ದು, ಅವರು ಗುಜರಾತ್ ವಿರುದ್ಧ ಕ್ವಾಲಿಫೈಯರ್ 1 ಪಂದ್ಯದಲ್ಲಿ ಆರ್‌ಸಿಬಿ ಪರ ಮತ್ತೊಮ್ಮೆ ಆರಂಭಿಕರಾಗಿ ಕಣಕ್ಕಿಳಿಯುವ ಸಾಧ್ಯತೆಯಿದೆ. ವಿರಾಟ್ ಜತೆ ಸಾಲ್ಟ್ ಆರಂಭಿಕರಾಗಿ ಕ್ರೀಸ್ ಆಕ್ರಮಿಸಿದರೆ, ಆರ್‌ಸಿಬಿ ಗೆಲುವಿನ ಸಾಧ್ಯತೆ ಹೆಚ್ಚಾಗಲಿದೆ. ಸಾಲ್ಟ್ ಸ್ಥಾನವನ್ನು ತುಂಬುವಲ್ಲಿ ಇನ್ನೋರ್ವ ಇಂಗ್ಲೆಂಡ್ ಬ್ಯಾಟರ್ ಜೇಕಬ್ ಬೆಥೆಲ್ ವಿಫಲರಾಗಿದ್ದಾರೆ. ಸಾಲ್ಟ್ ಪ್ಲೇಆಫ್‌ಗೆ ಮರಳುತ್ತಿರುವುದು ಆರ್‌ಸಿಬಿ ಪಾಳಯದಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಲಿದೆ. ಸಾಲ್ಟ್ ಆಡುವ ಬಳಗದಲ್ಲಿ ಸೇರಿಸುವ ಕುರಿತ ಪ್ರಶ್ನೆಗೆ ನೇರ ಉತ್ತರ ನೀಡದರೆ ನಾಯಕ ರಜತ್ ಪಾಟಿದಾರ್, ಅಭ್ಯಾಸದ ವೇಳೆ ಸಾಲ್ಟ್ ಫಿಟ್ ಆಗಿದ್ದಾರೆ. ಆದರೆ ಆಡುವ ಬಳಗದಲ್ಲಿ ಸೇರಿಸುವ ಬಗ್ಗೆ ಇನ್ನೂ ನಿರ್ಧಾರ ತೆಗೆದುಕೊಂಡಿಲ್ಲ ಎಂದು ಹೇಳಿದ್ದಾರೆ. ವಿರಾಟ್ ಜತೆ ಸಾಲ್ಟ್ ಅಭ್ಯಾಸ ನಡೆಸಿದ ಚಿತ್ರವನ್ನು ಆರ್‌ಸಿಬಿ ಎಕ್ಸ್‌ನಲ್ಲಿ ಹಂಚಿಕೊಂಡು ಸೂಚನೆ ನೀಡಿದೆ.

ವನಿತೆಯರಿಗೆ 7 ವಿಕೆಟ್ ಜಯ

ಚೆಮ್ಸ್‌ಫೋರ್ಡ್: ಇಂಗ್ಲೆಂಡ್ ಪ್ರವಾಸದಲ್ಲಿರುವ ಸ್ಮೃತಿ ಮಂದನಾ ನೇತೃತ್ವದ ಭಾರತ ಮಹಿಳಾ ಕ್ರಿಕೆಟ್ ತಂಡವು ಸೋಮವಾರ ನಡೆದ ಇಸಿಬಿ ಮಹಿಳಾ ಇಲೆವನ್ ವಿರುದ್ಧದ ಟಿ20 ಅಭ್ಯಾಸ ಪಂದ್ಯದಲ್ಲಿ 7 ವಿಕೆಟ್ ಜಯ ಸಾಧಿಸಿದೆ. 22 ಎಸೆತಗಳು ಉಳಿದಿರುವಂತೆ ಭಾರತ ತಂಡ ಗುರಿಮುಟ್ಟಿದರೂ ಅಭ್ಯಾಸದ ಉದ್ದೇಶದಿಂದ ಸಂಪೂರ್ಣ 20 ಓವರ್ ಬ್ಯಾಟಿಂಗ್ ಮಾಡಿಸಲಾಯಿತು.

ಇಂಗ್ಲೆಂಡ್ ಪ್ರವಾಸ: ಇಸಿಬಿ ವಿರುದ್ಧ ಟಿ20 ಅಭ್ಯಾಸ ಪಂದ್ಯ

ಟಾಸ್ ಇಲ್ಲದೆ ಪಂದ್ಯ ಆರಂಭವಾಗಿದ್ದು, ಇಂಗ್ಲೆಂಡ್ ಕ್ರಿಕೆಟ್ ಮಂಡಳಿ (ಇಸಿಬಿ) ಡೆವಲಪ್‌ಮೆಂಟ್ ವುಮೆನ್ಸ್ ಇಲೆವೆನ್ ತಂಡ ಮೊದಲು ಬ್ಯಾಟ್ ಮಾಡಿದ್ದು, 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 154 ರನ್‌ಗಳನ್ನು ಪೇರಿಸಿತು. ಭಾರತದ ಪರ ಬೌಲಿಂಗ್‌ನಲ್ಲಿ ಮಿಂಚಿದ ಅರುಂಧತಿ ರೆಡ್ಡಿ 29 ರನ್ ನೀಡಿ 3 ವಿಕೆಟ್ ಕಬಳಿಸಿದ್ದರು. ಉಳಿದಂತೆ ಕ್ರಾಂತಿ ಗೌಡ, ಶ್ರೇಯಾಂಕ ಪಾಟೀಲ್, ದೀಪ್ತಿ ಶರ್ಮಾ ತಲಾ 1 ವಿಕೆಟ್ ಪಡೆದರು. 155 ರನ್ ಬೆನ್ನತ್ತಿದ ಭಾರತ ಪರ ಶೆಫಾಲಿ ವರ್ಮಾ ಸ್ಫೋಟಕ ಅರ್ಧ ಶತಕ ಸಿಡಿಸಿದರು. ಕೇವಲ 25 ಎಸೆತಗಳಲ್ಲಿ ಭರ್ತಿ 50 ರನ್ ಹೊಡೆದ ಶೆಫಾಲಿ ರಿಟಾಯರ್ಡ್ ಹರ್ಟ್ ಘೋಷಿಸಿ ತೆರಳಿದ್ದಾರೆ. ಉಳಿದಂತೆ ನಾಯಕಿ ಮಂದನಾ 21, ಯಸ್ತಿಕಾ 47, ಭಾರ್ತಿ 48 ಹಾಗೂ ಅರುಂಧತಿ 20 ರನ್ ಹೊಡೆದರು. ಪಂದ್ಯ ಗೆದ್ದ ಬಳಿಕವೂ 20 ಓವರ್ ಪೂರ್ತಿ ಬ್ಯಾಟ್ ಮಾಡಿದ ಭಾರತ 6 ವಿಕೆಟ್‌ಗಳ ನಷ್ಟಕ್ಕೆ 200 ರನ್ ಕಲೆಹಾಕಿತು.

ಸಂಕ್ಷಿಪ್ತ ಸ್ಕೋರ್

ಇಸಿಬಿ ವನಿತೆಯರ ಇಲೆವೆನ್ 154/6 (20): ಫ್ಲೋರೆನ್ಸ್ 48, ಜೊವನ್ನೆ 36, ಸೋಫಿಯಾ 27★ (ಅರುಂಧತಿ 29ಕ್ಕೆ 3)
ಭಾರತ ವನಿತೆಯರು 200/6 (20): ಸ್ಮೃತಿ 21, ಶೆಫಾಲಿ 50, ಯಸ್ತಿಕಾ 47, ಭಾರ್ತಿ 48, ಅರುಂಧತಿ 20 (ಎಲ್ಲಿ 39ಕ್ಕೆ 2)

ಇಂದು ಬೆಂಗಳೂರು–ಟೈಟಾನ್ಸ್ ಸೆಣಸಾಟ | ಗೆದ್ದವರು ನೇರ ಫೈನಲ್‌ಗೆ | ಸೋತವರಿಗೆ ಇನ್ನೊಂದು ಅವಕಾಶ

ಹಾಲಿ ಚಾಂಪಿಯನ್ನರಿಗೆ ಗುಜರಾತ್ ಚಾಲೆಂಜ್

ಧರ್ಮಶಾಲಾ: ಈ ಆವೃತ್ತಿಯ ಟೇಬಲ್ ಟಾಪರ್ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು(ಆರ್‌ಸಿಬಿ) ಮತ್ತು ದ್ವಿತೀಯ ಸ್ಥಾನ ಪಡೆದ ಗುಜರಾತ್ ಟೈಟಾನ್ಸ್ ಮಂಗಳವಾರ ಮೊದಲ ಕ್ವಾಲಿಫೈಯರ್‌ನಲ್ಲಿ ಸೆಣಸಾಡಲಿವೆ. ಫುಟ್ಬಾಲ್ ಪಂದ್ಯಾವಳಿ ಮಾದರಿಯ ಪ್ಲೇಆಫ್ ನಡೆಯುವುದರಿಂದ ಮೊದಲ ಕ್ವಾಲಿಫೈಯರ್ ಗೆದ್ದ ತಂಡ ನೇರ ಫೈನಲ್ ಪ್ರವೇಶಿಸಲಿದೆ. ಕ್ವಾಲಿಫೈಯರ್ 1ರಲ್ಲಿ ಸೋತ ತಂಡವು ಇನ್ನೊಂದು ಅವಕಾಶ ಪಡೆಯಲಿದೆ. ಈ ಪಂದ್ಯ ಅತ್ಯಂತ ಒತ್ತಡದಿಂದ ಕೂಡಿದ್ದರೂ, ಸೋತರೆ ಏಕಾಏಕಿ ಫೈನಲ್ ರೇಸ್‌ನಿಂದ ಹೊರಬೀಳಲ್ಲ, ಸೋತ ತಂಡವು ಸನ್‌ರೈಸರ್ಸ್ ಹೈದರಾಬಾದ್ ಅಥವಾ ರಾಜಸ್ಥಾನ್ ರಾಯಲ್ಸ್ ವಿರುದ್ಧ ದ್ವಿತೀಯ ಕ್ವಾಲಿಫೈಯರ್ ಆಡಬೇಕಾಗುತ್ತದೆ. ರಜತ್ ಪಾಟಿದಾರ್ ನೇತೃತ್ವದ ಹಾಲಿ ಚಾಂಪಿಯನ್ ಆರ್‌ಸಿಬಿ ಸತತ 2ನೇ ಬಾರಿಗೆ ಐಪಿಎಲ್ ಕಿರೀಟ ಮುಡಿಗೇರಿಸುವ ದೊಡ್ಡ ಗುರಿಯೊಂದಿಗೆ ಧರ್ಮಶಾಲಾದಲ್ಲಿ ಶುಬ್ಮನ್ ಗಿಲ್ ನಾಯಕತ್ವದ ಗುಜರಾತ್ ಟೈಟಾನ್ಸ್ ವಿರುದ್ಧ ಸೆಣಸಾಡಲಿದೆ.



ಕೊಹ್ಲಿಗೆ ಜಿಟಿ ವೇಗಿಗಳ ಸವಾಲು

ವಿರಾಟ್ ಕೊಹ್ಲಿ ಅವರಿಲ್ಲದ ಆರ್‌ಸಿಬಿ ಬ್ಯಾಟಿಂಗ್ ಕ್ರಮಾಂಕವನ್ನು ಊಹಿಸಲೂ ಸಾಧ್ಯವಿಲ್ಲ. ಪ್ರತಿ ಐಪಿಎಲ್‌ನಲ್ಲೂ ಆರ್‌ಸಿಬಿ ದೊಡ್ಡ ಸ್ಕೋರ್ ಮಾಡುವಾಗಲೆಲ್ಲಾ ನಿರಂತರ 18 ವರ್ಷಗಳಿಂದ ಕೊಹ್ಲಿ ಹೆಸರು ಕೇಳಿ ಬರುತ್ತಿತ್ತು. ಆದರೆ ಈ ಐಪಿಎಲ್ ಕೊಹ್ಲಿ ಹೊರತುಪಡಿಸಿ ಆರ್‌ಸಿಬಿ ಬ್ಯಾಟಿಂಗ್ ಕ್ರಮಾಂಕ ಬಲಾಢ್ಯವಾಗಿದ್ದು, ಕೆಲವು ಪಂದ್ಯಗಳಲ್ಲಿ ನಾಯಕ ಪಾಟಿದಾರ್, ಪಡಿಕ್ಕಲ್, ಡೇವಿಡ್, ಕೃಣಾಲ್ ಪಂದ್ಯಗಳನ್ನು ಗೆಲ್ಲಿಸಿಕೊಟ್ಟಿದ್ದಾರೆ. ಆದರೂ ಕೊಹ್ಲಿ ಬೇಗನೆ ಔಟಾದರೆ ಆರ್‌ಸಿಬಿ ಕುಸಿಯುವುದೂ ಇನ್ನೂ ಮುಂದುವರಿದಿದೆ. ಈ ಆವೃತ್ತಿಯಲ್ಲೂ ಕೊಹ್ಲಿ ಆರ್‌ಸಿಬಿ ಪರ ಅತ್ಯಧಿಕ 557 ರನ್ ಕಲೆಹಾಕಿದ್ದು, ಆಗಾಗ ಆರೆಂಜ್ ಕ್ಯಾಪ್ ಧರಿಸಿದ್ದಾರೆ. ಸತತ ಎರಡು ಗೋಲ್ಡನ್ ಡಕ್ ನಂತರ ಶತಕ ದಾಖಲಿಸಿ ಅಗ್ರಸ್ಥಾನಕ್ಕೇರಿದ್ದರು (9ನೇ ಸ್ಥಾನದಲ್ಲಿದ್ದಾರೆ). ಪ್ಲೇಆಫ್‌ನಲ್ಲಿ ಟೈಟಾನ್ಸ್ ವೇಗಿಗಳು ಕೊಹ್ಲಿ ಔಟ್ ಮಾಡಲು ಏನೆಲ್ಲಾ ಯೋಜನೆ ಹಾಕಿಕೊಂಡಿದ್ದಾರೋ ಕೊಹ್ಲಿ ಎದುರಿಸಬೇಕಿದೆ. ಪವರ್‌ಪ್ಲೇ ಓವರ್‌ಗಳಲ್ಲಿ ವೇಗಿ ಕಗಿಸೊ ರಬಾಡ ಹಾಗೂ ಕೊಹ್ಲಿ ನಡುವಿನ ಸೆಣಸಾಟ ವೀಕ್ಷಕರಿಗೆ ವಿಶ್ವದರ್ಜೆ ಕ್ರಿಕೆಟ್ ಅನುಭವ ನೀಡಲಿದೆ. ಪ್ಲೇಆಫ್ ಪಂದ್ಯಗಳಲ್ಲಿ ವಿರಾಟ್ ದೊಡ್ಡ ಇನ್ನಿಂಗ್ಸ್ ಆಡುವುದರಿಂದ ಆರ್‌ಸಿಬಿ ದೊಡ್ಡ ಮೊತ್ತ ಕಲೆಹಾಕಲು ಸಾಧ್ಯ ಅಥವಾ ದೊಡ್ಡ ಮೊತ್ತ ಬೆನ್ನತ್ತಲೂ ಸಾಧ್ಯವೆಂಬುದು ಸಾರ್ವಕಾಲಿಕ ಸತ್ಯ.

ಪಿಚ್ ಹೇಗಿರಲಿದೆ?

ವೇಗವಾದ ಔಟ್‌ಫೀಲ್ಡ್ ಹೊಂದಿರುವ ಅತ್ಯಂತ ಸುಂದರವಾದ ಹಸಿರು ಮೈದಾನವಾಗಿದ್ದು, ನ್ಯೂಬಾಲ್ ಎಸೆಯಲು ನೆರವಾಗುತ್ತದೆ. ಬೌಂಡರಿ ಗೆರೆ ದೂರವಿರಲಿದ್ದು, ಮಂಜಿನ ಹನಿ ಬಿದ್ದರೆ ಸುಲಭವಾಗಿ ರನ್ ಬೆನ್ನತ್ತಲು ಸಾಧ್ಯ ಎಂಬುದು ಕ್ರಿಕೆಟ್ ಪಂಡಿತರ ಅಭಿಪ್ರಾಯ.

ಮೊದಲ ಇನ್ನಿಂಗ್ಸ್ ಸ್ಪರ್ಧಾತ್ಮಕ ಸ್ಕೋರ್: 185-205 ರನ್



ಕ್ವಾಲಿಫೈಯರ್-1

ಆರ್‌ಸಿಬಿ-ಜಿಟಿ,
ಎಚ್‌ಪಿಸಿಎ ಸ್ಟೇಡಿಯಂ,
ಧರ್ಮಶಾಲಾ, ರಾತ್ರಿ 7.30ರಿಂದ
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೋ ಹಾಟ್‌ಸ್ಟಾರ್.

ಬೌಲಿಂಗ್ ಅಸ್ತ್ರಗಳು

- ಆರ್‌ಸಿಬಿ: ಭುವನೇಶ್ವರ್ ಕುಮಾರ್ + ಕೃಣಾಲ್
- ಟೈಟಾನ್ಸ್: ಕಗಿಸೋ ರಬಾಡ + ರಶೀದ್ ಖಾನ್

ಯಾರು ಪ್ರಬಲ?

- ಚಾಲೆಂಜರ್ಸ್: 11 ಬಾರಿ ಪ್ಲೇಆಫ್ ಪ್ರವೇಶ, ಉತ್ತಮ ಬೌಲಿಂಗ್, ಉತ್ತಮ ನೆಟ್ ರನ್‌ರೇಟ್‌ನೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಪಡೆದ ಆತ್ಮವಿಶ್ವಾಸ.
- ಟೈಟಾನ್ಸ್: ಲಯದಲ್ಲಿರುವ ಆರಂಭಿಕರು, ದ್ವಿತೀಯಾರ್ಧ ಕಂಬ್ಯಾಕ್ ಮೂಲಕ ಪ್ಲೇಆಫ್ ಪ್ರವೇಶಿಸಿದ ಆತ್ಮವಿಶ್ವಾಸ.
- ಚಾಲೆಂಜರ್ಸ್ ಶೇ.52, ಟೈಟಾನ್ಸ್ ಶೇ.48

ಪ್ರಮುಖ ಆಕರ್ಷಣೆಗಳು

- ಪಡಿಕ್ಕಲ್ (ಆರ್‌ಸಿಬಿ)
- ಹ್ಯಾಜೆಲ್‌ವುಡ್ (ಆರ್‌ಸಿಬಿ)
- ಫಿಲ್ ಸಾಲ್ಟ್ (ಆರ್‌ಸಿಬಿ)
- ಟಿಮ್ ಡೇವಿಡ್ (ಆರ್‌ಸಿಬಿ)
- ಸಾಯಿ ಸುದರ್ಶನ್ (ಜಿಟಿ)
- ಕಗಿಸೋ ರಬಾಡ (ಜಿಟಿ)
- ಜೋಸ್ ಬಟ್ಲರ್ (ಜಿಟಿ)
- ರಶೀದ್ ಖಾನ್ (ಜಿಟಿ)



ಬ್ಯಾಟಿಂಗ್ ಅಸ್ತ್ರಗಳು

- ಬೆಂಗಳೂರು: ಕೊಹ್ಲಿ, ದೇವದತ್ತ್ ಪಡಿಕ್ಕಲ್, ರಜತ್ ಪಾಟಿದಾರ್, ವೆಂಕಟೇಶ್ ಅಯ್ಯರ್, ಜಿತೇಶ್ ಶರ್ಮಾ
- ಗುಜರಾತ್: ಸಾಯಿ ಸುದರ್ಶನ್, ಶುಬ್ಮನ್ ಗಿಲ್, ಜೋಸ್ ಬಟ್ಲರ್, ವಾಷಿಂಗ್ಟನ್ ಸುಂದರ್,

ಈ ಆವೃತ್ತಿಯ ಕಥೆ

ಆರ್‌ಸಿಬಿ: ಹಾಲಿ ಚಾಂಪಿಯನ್ ಆಗಿ ಗೆಲುವಿನ ಆರಂಭ ಕಂಡ ಆರ್‌ಸಿಬಿ ದ್ವಿತೀಯಾರ್ಧ ಸ್ವಲ್ಪ ಒತ್ತಡ ಎದುರಿಸಿದ್ದರೂ ಅಗ್ರಸ್ಥಾನ ಸಂಪಾದಿಸಿದೆ.

- ಪ್ರಬಲ ಅಗ್ರ ಕ್ರಮಾಂಕದ ಬ್ಯಾಟಿಂಗ್
- ಹೊಂದಿಕೊಳ್ಳಬಲ್ಲ ಮಧ್ಯಮ ಕ್ರಮಾಂಕ
- ಕಳೆದ ಆವೃತ್ತಿಗಿಂತ ಉತ್ತಮ ಡೆತ್ ಓವರ್ ಬೌಲಿಂಗ್
- ಯಾವುದೇ ಹಿನ್ನಡೆಯಿಂದ ಪುಟಿದೇಳಬಲ್ಲ ತಂಡ

ಗುಜರಾತ್: ದ್ವಿತೀಯಾರ್ಧ ಪುಟಿದೇಳುವ ಮೂಲಕ ಪ್ಲೇಆಫ್ ಹಂತ ಪ್ರವೇಶ, ಸ್ಥಿರತೆ ಕಾಯ್ದುಕೊಂಡ ತಂಡ.

- ನಂಬಿಕಸ್ಥ ಆರಂಭಿಕ ಬ್ಯಾಟರ್ಸ್
- ಎಲೈಟ್ ಕ್ಲಾಸ್ ಮಿಡಲ್ ಓವರ್ ಬೌಲಿಂಗ್
- ಆವೃತ್ತಿಯಲ್ಲೇ ಶ್ರೇಷ್ಠ ವೇಗ-ಸ್ಪಿನ್ ಸಂಯೋಜನೆ
- ಸ್ಥಿರ ಪ್ರದರ್ಶನ

ಅತ್ಯಧಿಕ ವಿಕೆಟ್‌ಗಳು

- ಭುವನೇಶ್ವರ್ ಕುಮಾರ್ (ಆರ್‌ಸಿಬಿ)-24 ವಿಕೆಟ್
- ಕಗಿಸೋ ರಬಾಡ (ಜಿಟಿ)-24 ವಿಕೆಟ್
- ರಶೀದ್ ಖಾನ್ (ಜಿಟಿ)-19 ವಿಕೆಟ್
- ರಸಿಕ್ ದಾರ್ (ಆರ್‌ಸಿಬಿ)-14 ವಿಕೆಟ್

ಅತ್ಯಧಿಕ ರನ್‌ಗಳು

- ಸಾಯಿ ಸುದರ್ಶನ್ (ಜಿಟಿ) - 638 ರನ್
- ಶುಬ್ಮನ್ ಗಿಲ್ (ಜಿಟಿ) - 616 ರನ್
- ವಿರಾಟ್ ಕೊಹ್ಲಿ (ಆರ್‌ಸಿಬಿ) - 557 ರನ್
- ದೇವದತ್ತ್ ಪಡಿಕ್ಕಲ್ (ಆರ್‌ಸಿಬಿ) - 433 ರನ್

ಪವರ್‌ಪ್ಲೇ ನಿರ್ಣಾಯಕ

ಪವರ್‌ಪ್ಲೇ 6 ಓವರ್‌ಗಳು ನಿರ್ಣಾಯಕ ಪರಿಣಾಮ ಬೀರಲಿವೆ. ಪವರ್‌ಪ್ಲೇನಲ್ಲಿ ಪ್ರಾಬಲ್ಯ ಮೆರೆಯುವ ತಂಡ ಕ್ವಾಲಿಫೈಯರ್ ಗೆಲ್ಲುವ ಸಾಧ್ಯತೆಯಿದೆ.

ತವರಿನಲ್ಲಿ 40 ರನ್ ಸೋಲುಂಡ ನೈಟ್‌ರೈಡರ್ಸ್

ದಿಲ್ಲಿ ಗೆಲುವಿನ ವಿದಾಯಕ್ಕೆ ಕುಲ್ದೀಪ್, ರಾಹುಲ್ ಗಿಫ್ಟ್





ಕೋಲ್ಕತ: ಭಾನುವಾರದ ಮೊದಲ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ 30 ರನ್‌ಗಳ ಗೆಲುವು ಸಾಧಿಸಿದ ರಾಜಸ್ಥಾನ್ ರಾಯಲ್ಸ್ ನಾಲ್ಕನೇ ತಂಡವಾಗಿ ಪ್ಲೇಆಫ್ ಪ್ರವೇಶಿಸಿದ್ದು, ಪಂಜಾಬ್ ಕಿಂಗ್ಸ್ ಮತ್ತು ಕೋಲ್ಕತ ನೈಟ್‌ರೈಡರ್ಸ್ ಈ ಆವೃತ್ತಿಯಿಂದ ಹೊರಬಿದ್ದಿದ್ದವು. ರಾಯಲ್ಸ್ ಗೆದ್ದಿದ್ದರಿಂದ ಈಡನ್ ಗಾರ್ಡನ್ಸ್‌ನಲ್ಲಿ ನೈಟ್‌ರೈಡರ್ಸ್ ಮತ್ತು ದಿಲ್ಲಿ ನಡುವಿನ ಪಂದ್ಯವು, ಮೊದಲ ಇನ್ನಿಂಗ್ಸ್‌ನ 4 ಓವರ್ ಮುಗಿಯುತ್ತಲೇ ಔಪಚಾರಿಕ ಎನಿಸಿಕೊಂಡಿತು. ದಿಲ್ಲಿ ಕೆಕೆಆರ್ ವಿರುದ್ಧ ದಿಲ್ಲಿ 40 ರನ್ ಅಂತರದ ಗೆಲುವು ಪಡೆದಿದ್ದು, ಈ ಆವೃತ್ತಿಗೆ ದಿಲ್ಲಿ ಗೆಲುವಿನ ವಿದಾಯಕ್ಕೆ ಕುಲ್ದೀಪ್ ಮತ್ತು ರಾಹುಲ್ ಕೊಡುಗೆ ನೀಡಿದರು. ಇದೇ ಸಂದರ್ಭ ತವರಿನ ಸೋಲಿನೊಂದಿಗೆ ಕೆಕೆಆರ್ ತನ್ನ ಅಭಿಯಾನ ಕೊನೆಗೊಳಿಸಿತು.

ಸಂಕ್ಷಿಪ್ತ ಸ್ಕೋರ್

ದಿಲ್ಲಿ 203/5 (20): ರಾಹುಲ್ 60(30), ಅಕ್ಷರ್ 39(25), ದುಬೆ 28ಕ್ಕೆ 2.
ಕೆಕೆಆರ್ 163/10 (20)
ರಹಾನೆ 63(39), ಪೊವೆಲ್ 29(21), ಎನ್‌ಗಿಡಿ 27ಕ್ಕೆ 3, ಕುಲ್ದೀಪ್ 29ಕ್ಕೆ 3.

ಮಿಂಚಿದ ರಹಾನೆ, ಕುಲ್ದೀಪ್ ಕೈಚಳಕ!

204 ರನ್ ಸವಾಲನ್ನು ಬೆನ್ನತ್ತಲು ಆರಂಭಿಸಿದ ಕೆಕೆಆರ್ ತಂಡಕ್ಕೆ ಸ್ಫೋಟಕ ಆರಂಭಿಕ ಫಿನ್ ಅಲೆನ್ ಮತ್ತು ನಾಯಕ ಅಜಿಂಕ್ಯಾ ಉತ್ತಮ ಆರಂಭ ನೀಡಿದ್ದು, ನಾಲ್ಕು ಓವರ್‌ಗಳಲ್ಲಿ 43 ರನ್ ಕಲೆಹಾಕಿದ್ದರು. ಅಲೆನ್ ಮತ್ತು ಮನೀಶ್ ವಿಕೆಟ್ ಕಬಳಿಸುವ ಮೂಲಕ ಎನ್‌ಗಿಡಿ ಮೊದಲೆರಡು ಆಘಾತ ನೀಡಿದರೆ, ಕುಲ್ದೀಪ್ ಲೆಗ್‌ಸ್ಪಿನ್ ಮೋಡಿ ಮಾಡಿದರು. ನಾಯಕ ರಹಾನೆಯೊಬ್ಬರೆ ಕೆಕೆಆರ್ ಆಧಾರಸ್ತಂಭವಾಗಿ ಬಿರುಸಿನ ಆಟ ಪ್ರದರ್ಶಿಸಿದ್ದರು. ಈ ಆವೃತ್ತಿಯ ಕೊನೆಯ ಪಂದ್ಯದಲ್ಲಿ ಸಿಡಿದ ಅವರು 2ನೇ ಅರ್ಧ ಶತಕ ದಾಖಲಿಸಿದ ರಹಾನೆ, 31 ಎಸೆತಗಳಲ್ಲಿ ಅರ್ಧ ಶತಕ ಪೂರೈಸಿದ್ದರು.

37ಕ್ಕೆ 7 ವಿಕೆಟ್ ಕಳೆದುಕೊಂಡ ಕೆಕೆಆರ್: ಗ್ರೀನ್ ವಿಕೆಟ್ ಕಬಳಿಸಿದ್ದ ಕುಲ್ದೀಪ್, ಇನ್ನೂ ಎರಡು ಪ್ರಮುಖ ವಿಕೆಟ್‌ಗಳನ್ನು ಕಬಳಿಸಿದ್ದರು. ರಹಾನೆ ಮತ್ತು ರಿಂಕು ವಿಕೆಟ್ ಪಡೆದ ಕುಲ್ದೀಪ್ ಹ್ಯಾಟ್ರಿಕ್ ಅವಕಾಶ ಮಿಸ್ ಮಾಡಿದ್ದರು. ಕೆಕೆಆರ್ ತನ್ನ 7 ವಿಕೆಟ್‌ಗಳನ್ನು 37 ರನ್‌ಗಳ ಅಂತರದಿಂದ ಕಳೆದುಕೊಂಡು 40 ರನ್ ಸೋಲೊಪ್ಪಿತು.

ಫ್ರೆಂಚ್ ಓಪನ್: ಮಿಂಚಿದ ಭಾರತೀಯ ಮೂಲದ ಟೆನಿಸಿಗ

ಬಸವರೆಡ್ಡಿ ಆಟಕ್ಕೆ ಬಸವಳಿದ ಫ್ರಿಟ್ಜ್!

ಪ್ಯಾರಿಸ್: ಭಾರತೀಯ ಮೂಲದ 21ರ ಹರೆಯದ ಅಮೆರಿಕ ಟೆನಿಸಿಗ ನಿಶೇಶ್ ಬಸವರೆಡ್ಡಿ 7ನೇ ಶ್ರೇಯಾಂಕದ ಟೇಲರ್ ಫ್ರಿಟ್ಜ್ ಅವರಿಗೆ ಆಘಾತವನ್ನು ನೀಡಿದ್ದಾರೆ. ಭಾನುವಾರ ತಡರಾತ್ರಿ ನಡೆದ ಫ್ರೆಂಚ್ ಓಪನ್ ಮೊದಲ ಸುತ್ತಿನ ಪಂದ್ಯದಲ್ಲಿ ಫ್ರಿಟ್ಜ್ ಅವರನ್ನು 7-6(5), 7-6(5), 6-7(9), 6-1 ಸೆಟ್‌ಗಳ ಅಂತರದಿಂದ ಸೋಲಿಸುವ ಮೂಲಕ ಅಚ್ಚರಿಯ ಫಲಿತಾಂಶ ಸೃಷ್ಟಿಸಿದ್ದಾರೆ. ಫ್ರೆಂಚ್ ಓಪನ್ ಮೈನ್ ಡ್ರಾದಲ್ಲಿ ತಮ್ಮ ಪದಾರ್ಪಣೆಗೈದ ಬಸವರೆಡ್ಡಿ ತಮ್ಮದೇ ದೇಶದ ಟೆನಿಸ್ ತಾರೆಯನ್ನು ಗ್ರ್ಯಾಂಡ್ ಸ್ಲಾಮ್ ಪಂದ್ಯಾವಳಿಯಿಂದಲೇ ಹೊರಹಾಕಿದ್ದಾರೆ. 148ನೇ ಶ್ರೇಯಾಂಕದ ಬಸವರೆಡ್ಡಿ ವಿರುದ್ಧ ಸೋತ ಫ್ರಿಟ್ಜ್ ಎರಡನೇ ಬಾರಿಗೆ ರೋಲ್ಯಾಂಡ್ ಗ್ಯಾರೊಸ್‌ನಲ್ಲಿ ಮೊದಲ ಸುತ್ತಿನ ಸೋಲುಂಡಿದ್ದಾರೆ.



"ಇದು ಕಣ್ತೆರೆಸಿದ ಗೆಲುವಿನ ಆರಂಭ. ಈ ಟೂರ್ನಿಯಲ್ಲಿ ಎಲ್ಲರೂ ವಿಶ್ವಶ್ರೇಷ್ಠ ಆಟಗಾರರೇ ಇದ್ದು, ಶ್ರೇಷ್ಠ ಪ್ರದರ್ಶನ ನೀಡುತ್ತಾರೆ. ನಾನು ನನ್ನ ಶ್ರೇಷ್ಠ ಪ್ರದರ್ಶನ ನೀಡುತ್ತಿದ್ದೇನೆ. ಇದೇ ರೀತಿ ಉತ್ತಮ ಪ್ರದರ್ಶನ ಮುಂದುವರಿಸುತ್ತಾ ಹೋದರೆ ಇನ್ನಷ್ಟು ಗೆಲ್ಲುವ ಅವಕಾಶಗಳಿವೆ.

■ ನಿಶೇಶ್ ಬಸವರೆಡ್ಡಿ, ಟೆನಿಸ್ ಆಟಗಾರ

ದ್ವಿತೀಯ ಸುತ್ತಿಗೆ ಜೊಕೊ, ಸ್ವಿಯಾಟೆಕ್







ಪ್ಯಾರಿಸ್: ಇತ್ತೀಚೆಗೆ ಇಟಾಲಿಯನ್ ಓಪನ್ ಪಂದ್ಯಾವಳಿಯಲ್ಲಿ ಮೊದಲ ಸುತ್ತಲ್ಲೇ ಹೊರಬಿದ್ದಿದ್ದ ಸರ್ಬಿಯಾ ದಂತಕತೆ ನೊವಾಕ್ ಜೊಕೊವಿಕ್ ಮೊದಲ ಸುತ್ತಿನ ಭೀತಿಯಿಂದ ಬಚಾವಾಗಿದ್ದು, ಪುರುಷರ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಸ್ಥಳೀಯ ಆಟಗಾರ ಜಿಯೊವನ್ನಿ ಎಂಪೆಟ್ಶಿ ಪೆರ್ರಿಕಾರ್ಡ್ ಅವರನ್ನು ಸೋಲಿಸುವ ಮೂಲಕ ದ್ವಿತೀಯ ಸುತ್ತನ್ನು ಪ್ರವೇಶಿಸಿದ್ದಾರೆ. ಜೊಕೊವಿಚ್ 5-7, 7-5, 6-1, 6-4 ಸೆಟ್ ಅಂತರದಿಂದ ಪಂದ್ಯ ಗೆದ್ದಿದ್ದಾರೆ. 25ನೇ ಗ್ರ್ಯಾಂಡ್ ಸ್ಲಾಮ್ ಗೆಲ್ಲುವ ಗುರಿಯೊಂದಿಗೆ ರೋಲ್ಯಾಂಡ್ ಗೇರೊಸ್ ಆವೆಮಣ್ಣಿನ ಅಂಗಣಕ್ಕಿಳಿದಿರುವ ಜೊಕೊವಿಚ್ ಗೆಲುವಿನ ವಿಶ್ವಾಸದಲ್ಲಿ ಭೇಟೆ ಆರಂಭಿಸಿದ್ದಾರೆ.

ಸ್ವಿಯಾಟೆಕ್ ದ್ವಿತೀಯ ಸುತ್ತಿಗೆ ಲಗ್ಗೆ: ನಾಲ್ಕು ಬಾರಿಯ ಚಾಂಪಿಯನ್ ಇಗಾ ಸ್ವಿಯಾಟೆಕ್ ಆಸ್ಟ್ರೇಲಿಯಾದ ವೈಲ್ಡ್ ಕಾರ್ಡ್ ಎದುರಾಳಿ ಎಮರ್ಸನ್ ಜೋನ್ಸ್ ಅವರನ್ನು 6-1, 6-2 ನೇರ ಸೆಟ್‌ಗಳ ಅಂತರದಿಂದ ಮಣಿಸಿ ದ್ವಿತೀಯ ಸುತ್ತನ್ನು ಪ್ರವೇಶಿಸಿದ್ದಾರೆ. ಒಂದೇ ಗಂಟೆಯಲ್ಲಿ ಸ್ವಿಯಾಟೆಕ್ ಪಂದ್ಯ ಮುಗಿಸಿದ್ದಾರೆ.

ರಾಡುಕಾನುಗೆ ಆಘಾತ!: ಇನ್ನೊಂದು ಮಹಿಳಾ ಸಿಂಗಲ್ಸ್ ರೋಚಕ ಪಂದ್ಯದಲ್ಲಿ ಎಮ್ಮಾ ರಾಡುಕಾನು ಅರ್ಜೆಂಟೀನಾ ಎದುರಾಳಿ ಸೋಲಾನಾ ಸಿಯೆರಾ ವಿರುದ್ಧ ನೇರ ಸೆಟ್‌ಗಳಿಂದ ಭಾರೀ ಸೋಲುಂಡಿದ್ದಾರೆ. ಮೊದಲ ಸೆಟ್‌ನಲ್ಲಿ ರಾಡುಕಾನು ಒಂದು ಸೆಟ್ ಅಂಕವನ್ನೂ ಗಳಿಸಿರಲಿಲ್ಲ, ಅಂದರೆ 0-6 ಅಂತರದಿಂದ ಮೊದಲ ಸೆಟ್ ಸೋತ ಎಮ್ಮಾ, ಎರಡನೇ ಸೆಟ್‌ನಲ್ಲಿ ಭಾರೀ ರೋಚಕ ಹೋರಾಟ ನೀಡಿದರೂ ಸಹ ಸಿಯೆರಾ 7-6(4) ಸೆಟ್ ಅಂಕಗಳಿಂದ ಗೆಲುವು ಸಾಧಿಸಿದರು.

ಪದ್ಮ ಸಹಿತ ಮೂರು ಕ್ರೀಡಾ ಪ್ರಶಸ್ತಿ ಪಡೆದ ಪ್ಯಾರಾ ಅಥ್ಲೀಟ್ ಪ್ರವೀಣ್

ಕ್ರೀಡಾ ಸಾಧಕರಿಗೆ ಪದ್ಮ ಪ್ರಶಸ್ತಿ ಗರಿ

ಹೊಸದಿಲ್ಲಿ: ರಾಷ್ಟ್ರಪತಿ ಭವನದಲ್ಲಿ ಸೋಮವಾರ ಸಂಜೆ ಭಾರತೀಯ ಮಹಿಳಾ ಕ್ರಿಕೆಟ್ ರಾಷ್ಟ್ರೀಯ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್, ಪ್ಯಾರಾ ಅಥ್ಲೀಟ್ (ಹೈ ಜಂಪ್) ಪ್ರವೀಣ್ ಕುಮಾರ್, ಪ್ರಾಚೀನ ಸಮರ ಕಲೆ ಸಿಲಂಬಮ್ ಮಾಸ್ಟರ್ ಮತ್ತು ಪುದುಚೇರಿ ಸಾಂಸ್ಕೃತಿಕ ಪಾಲಕ ಕೆ.ಪಳನಿವೇಲ್ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರತಿಷ್ಠಿತ ಪದ್ಮ ಶ್ರೀ ಪ್ರಶಸ್ತಿ ಪ್ರದಾನ ಮಾಡಿದರು. ಮಹಿಳಾ ರಾಷ್ಟ್ರೀಯ ಕ್ರಿಕೆಟ್ ತಂಡದ ನಾಯಕಿಯಾಗಿ ಮಾಡಿದ ಸಾಧನೆಗಾಗಿ ಹಾಗೂ 2026ರಲ್ಲಿ ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಗೆಲ್ಲಿಸಿಕೊಟ್ಟ ನಾಯಕಿ ಎಂಬ ಕಾರಣಕ್ಕಾಗಿ ಹರ್ಮನ್‌ಪ್ರೀತ್ ಅವರಿಗೆ ಈ ಪದ್ಮ ಪ್ರಶಸ್ತಿಯ ಗೌರವ ಸಂದಿದೆ. 23ರ ಹರೆಯದ ನಂ.1 ಪ್ಯಾರಾ-ಹೈ ಜಂಪ್ ಅಥ್ಲೀಟ್ ಪ್ರವೀಣ್ ಕುಮಾರ್ ಅವರು ಅರ್ಜುನ, ಖೇಲ್ ರತ್ನ ಮತ್ತು ಪದ್ಮ ಶ್ರೀ ಈ ಮೂರೂ ಪ್ರಶಸ್ತಿಗಳಿಗೆ ಭಾಜನರಾದ ವಿಶೇಷ ಅಥ್ಲೀಟ್ ಎನಿಸಿಕೊಂಡಿದ್ದಾರೆ.


ಪ್ರವೀಣ್


ಹರ್ಮನ್‌ಪ್ರೀತ್


ಪಳನಿವೇಲ್

ಪದ್ಮ ಭೂಷಣ

- ವಿಜಯ್ ಅಮೃತ್‌ರಾಜ್ (ಟೆನ್ನಿಸ್), ತಮಿಳುನಾಡು

ಪದ್ಮ ಶ್ರೀ (ಮರಣೋತ್ತರ)

- ಭಗ್ವನ್‌ದಾಸ್ ರಾಯ್ಕ್‌ವರ್ (ಬುಂದೇಲಿ ಸಮರ ಕಲೆ-ಅಖಾಡ), ಮಧ್ಯಪ್ರದೇಶ
- ವ್ಲಾಡಿಮಿರ್ ಮೆಸ್ಟ್‌ವಿರಿಶ್ವಿಲಿ (ಕುಸ್ತಿ ತರಬೇತಿ), ಜಾರ್ಜಿಯಾ

ಪದ್ಮ ಶ್ರೀ

- ರೋಹಿತ್ ಶರ್ಮಾ (ಕ್ರಿಕೆಟ್), ಮಹಾರಾಷ್ಟ್ರ
- ಹರ್ಮನ್‌ಪ್ರೀತ್ ಕೌರ್ (ಕ್ರಿಕೆಟ್), ಪಂಜಾಬ್
- ಸವಿತಾ ಪೂನಿಯಾ (ಹಾಕಿ), ಹರ್ಯಾಣ
- ಪ್ರವೀಣ್ ಕುಮಾರ್ (ಪ್ಯಾರಾ ಅಥ್ಲೆಟಿಕ್ಸ್- ಹೈ ಜಂಪ್), ಉತ್ತರಪ್ರದೇಶ
- ಬಲ್‌ದೇವ್ ಸಿಂಗ್ (ಹಾಕಿ ತರಬೇತಿ), ಪಂಜಾಬ್
- ಕೆ. ಪಳನಿವೇಲ್ (ಸಿಲಂಬಂ ಸಮರ ಕಲೆ), ಪುದುಚೇರಿ

ಪದಬಂಧ

ರಾಜಾ ಸಂಗಮೇಶ ಹಿರೇಮಠ



5995

5994 ಉತ್ತರ

ಎಡದಿಂದ ಬಲಕ್ಕೆ:
1.ತೀರಿಸು 3.ಪುಟಮಾಡು
4.ಕಾರೋಡಲ
6.ಕದ್ದಿಂಗಳು 8.ಕಪಿಕೂಟ
10.ತೇರೀಜು 11.ಸಿಡಿತ
13.ಕಮಲ 15.ತುಕ್ಕುಹಿಡಿ
16.ಕುಳವಾಡಿ
ಮೇಲಿನಿಂದ ಕೆಳಕ್ಕೆ :
1.ತೀಡು 2.ಕಾಸು
3.ಪುಸ್ತಕ 5.ಲಲಾಟ
7.ಗರಜು 9.ಪಿಕಾಸಿ
10.ತೇಲುಮಾತು
12.ತಡೆಹಿಡಿ 13.ಕನ್ನಡಿ
14.ಕುಟಿಲ

ಎಡದಿಂದ ಬಲಕ್ಕೆ
1.ದೈತ್ಯರು ಕಟ್ಟಿಕೊಂಡ ಮೂರು ಪಟ್ಟಣಗಳು (3)
2.ಅಕ್ಟೋಬರ್-ನವೆಂಬರ್‌ನಲ್ಲಿ ಬರುವ ಹಿಂದೂ ತಿಂಗಳು (3)
4.ಮೇಲಧಿಕಾರಿಯಿಂದ ಬಂದ ಸೂಚನೆ (3)
6. ನೀರನ್ನು ಸಂಗ್ರಹಿಸಿಟ್ಟ ಸ್ಥಳ (4)
7. ಪೂರ್ವಾಪರ ವೃತ್ತಾಂತವಿದು (4)
8.ನೀರಿಗೆ ಆಶ್ರಯವಾದುದು-ಸರೋವರ (4)
10.ಸ್ಥಿರ-ಅಸ್ಥಿರವಾದುದು ತಿರುಗಿ ಕಾಣುತ್ತಿವೆ (4)
13.ಕಾಳಗದಲ್ಲಿ ಪ್ರೀತಿಯುಳ್ಳವನು-ಯುದ್ಧೋತ್ಸಾಹಿ (5)
16.ಈ ಔಷಧಿ ಧಾತುವಿನ ಕಡೆಯಲ್ಲಿ ಜನರಿದ್ದಾರೆ (4)
17.ಕತ್ತು ಇದರ ನಡುವೆ ಅಚ್ಚರಿ ಮೂಡಿಸುವ ಸಾಧನೆಯಿದೆ (4)
ಮೇಲಿನಿಂದ ಕೆಳಕ್ಕೆ
1.ಮೂರು ಬಾಹುಗಳುಳ್ಳ ಆಕೃತಿ (3)
3.ಜ್ಯೋತಿಷ್ಯದಲ್ಲಿ ಲಗ್ನದಿಂದ ಎಂಟನೆಯ ಸ್ಥಾನ (3)
4.ಆದಾಯ-ಖರ್ಚಿನ ಲೆಕ್ಕ-ಹಣದ ವ್ಯವಹಾರ (4)
5.ರಾಮಸೀತೆಯರ ಜೋಡಿಕುಮಾರರು ತಲೆಕೆಳಗಾಗಿದ್ದಾರೆ (4)
8.ರಣವನ್ನೊಳಗೊಂಡ ಹೆಬ್ಬಾಗಿಲು (5)
9.ಕ್ರಿಕೆಟ್ ಆಟಗಾರನ ನೂರು ಓಟಗಳು (3)
11.ಚೆನ್ನಾಗಿ ಬೇಯುತ್ತಿರುವ ತೊಗರಿಬೇಳೆಯ ಬಗೆ (3)
12.ತುಟಿ ಪಿಟಕ್ಕೆನ್ನು ಎಂಬರ್ಥದ ಶಬ್ದ (5)
14.ದನದ ನಡುವೆ ನಾಶ ಮಾಡುವಿಕೆಯಿದೆ (3)
15.ಇದು ಆರಸರ ಗುಂಪು (3)

ಕಿರುಸುದ್ದಿ

ಬಕ್ರೀದ್: ಶಾಂತಿ ಸಭೆ



ನರೇಗಲ್ಲ: ಶಾಂತಿ ಸೌಹಾರ್ದತೆಯಿಂದ ಮುಸ್ಲಿಂ ಬಾಂಧವರು ಬಕ್ರೀದ್ ಹಬ್ಬವನ್ನು ಆಚರಣೆ ಮಾಡಬೇಕು ಎಂದು ರೋಣ ಸಿಪಿಐ ವಿಜಯಕುಮಾರ ನಾಯಕ ಹೇಳಿದರು.ಸ್ಥಳಿಯ ಪೊಲೀಸ್ ಠಾಣೆ ಆವರಣದಲ್ಲಿ ಆಯೋಜಿಸಿದ್ದ ಬಕ್ರೀದ್ ಹಬ್ಬದ ಶಾಂತಿ ಸಭೆಯಲ್ಲಿ ಮಾತನಾಡಿ, ನರೇಗಲ್ಲ ಪಟ್ಟಣದಲ್ಲಿ ಸಾರ್ವಜನಿಕರ ಸಹಕಾರವಿದ್ದರೆ ಕಾನೂನು ಪಾಲನೆ ಸರಳವಾಗುತ್ತದೆ. ಎಲ್ಲ ಜಾತಿ ಧರ್ಮದ ಹಬ್ಬಗಳನ್ನು ಶಾಂತತೆಯಿಂದ ನಡೆಸಿಕೊಂಡು ಹೋಗುವುದು ಎಲ್ಲರ ಕರ್ತವ್ಯ ಎಂದರು.

ಪಿಎಸ್ಐ ಐಶ್ವರ್ಯ ನಾಗರಾಳ ಮಾತಾನಾಡಿ, ಎಲ್ಲ ಹಬ್ಬಗಳಲ್ಲಿ ಶಾಂತಿ ಕಾಪಾಡಿಕೊಂಡು ಕಾನೂನು ಸುವ್ಯವಸ್ಥೆ ಕಾಪಾಡಲು ಸಹಕಾರ ನೀಡಿದ್ದಾರೆ. ಎಲ್ಲ ಸಮುದಾಯದವರ ಸಹಕಾರದಿಂದ ಹಬ್ಬ ಆಚರಿಸಬೇಕು ಎಂದರು. ಈ ಸಭೆಯಲ್ಲಿ ರಾಜ್ಯ ದಲಿತ ಸಂಘರ್ಷ ಸಮಿತಿ ಉಪಾಧ್ಯಕ್ಷ ಮೈಲಾರಪ್ಪ ಚಳ್ಳಮರದ, ನಿವೃತ್ತ ಶಿಕ್ಷಕ ಎಂ.ಎಸ್ .ದಡೇಸೂರಮಠ, ಎ.ಎ.ನವಲಗುಂದ ಮಾತನಾಡಿದರು ಸಭೆಯಲ್ಲಿ ಎಂ.ಐ.ಹೊಸಮನಿ, ಎಫ್.ಬಿ.ರೇವಡಿಗಾರ, ಎನ್.ಎಚ್.ಕುದರಿ, ಎ.ಎಫ್. ಕೊಪ್ಪದ, ಅಲ್ಲಾಬಕ್ಷಿ ನದಾಫ್, ಎಂ.ಆರ್.ನದಾಫ್, ಎಚ್.ಡಿ.ರಾಹುತ, ಡಿ.ಎಂ. ಹವಾಲ್ದಾರ, ಖಾದರಬಾಷಾ ಹೂಲಗೇರಿ, ಹನುಮಂತಪ್ಪ ದ್ವಾಸಲ್, ಶೇಖರಪ್ಪ ಕೆಂಗಾರ, ಯಮನೂರಪ್ಪ ದ್ವಾಸಲ್, ಎಸ್.ಜೆ.ಮೆಣಸಿಗಿ, ವೈ.ಎಸ್.ನವಲಗುಂದ, ಎಸ್ .ಇ.ಮಡಿವಾಳರ ಪೊಲೀಸ್ ಸಿಬ್ಬಂದಿಗಳಾದ ಎಎಸ್ಐ ಎಂ.ಆರ್.ಬಾರಕೇರ, ವಿಜಯ ಗೋಗನೂರ, ಆರ್. ಎಸ್. ಕಪ್ಪತ್ತಣವರ, ಬಿ.ಎಸ್.ಮಾಯಮ್ಮನವರ, ಉಮೇಶ ಬಂಗಾರಿ, ಕೆ.ವಿ.ಹೀರೇಮಠ ಇದ್ದರು.

ನಿಧನ ಸುದ್ದಿ

ದೊಡ್ಡಬಸಪ್ಪ ತಟ್ಟಿ

ಲಕ್ಷ್ಮೇಶ್ವರ: ತಾಲೂಕ ನಿವಾಸಿ ದೊಡ್ಡಬಸಪ್ಪ (ಅಪ್ಪಣ್ಣ) ತಟ್ಟಿ(85) ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಪುತ್ರರು, ಐವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವಿದೆ.



ಸಂತಾಪ: ಡಿ.ಬಿ.ತಟ್ಟಿ ಅವರ ನಿಧನಕ್ಕೆ ಅನೇಕ ಗಣ್ಯರು ಸಂತಾಪ ವ್ಯಕ್ತಪಡಿಸಿದ್ದು ಓರ್ವ ಜನಾನುರಾಗಿ ಸಮಾಜಸೇವಕನನ್ನು ಕಳೆದುಕೊಂಡಿದೆ ಎಂದು ಹೇಳಿದ್ದಾರೆ. ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ, ಮಾಜಿ ಸಂಸದ ಶಿವಕುಮಾರ ಉದಾಸಿ, ವಿ.ಪ.ಸದಸ್ಯ ಎಸ್.ವಿ.ಸಂಕನೂರ, ಶಾಸಕ ಡಾ.ಚಂದ್ರು ಲಮಾಣಿ, ಮಾಜಿ ಶಾಸಕರುಗಳಾದ ಜಿ.ಎಂ. ಮಹಾಂತಶೆಟ್ಟರ, ಜಿ.ಎಸ್.ಗಡ್ಡದೇವರಮಠ, ರಾಮಣ್ಣ ಲಮಾಣಿ, ರಾಮಕೃಷ್ಣ ದೊಡ್ಡಮನಿ, ಗಣ್ಯ ವರ್ತಕ ಬಸವರಾಜ ನೆಲವಿಗಿ, ಬಣಜಿಗ ಕ್ಷೇಮಾಭಿವೃದ್ಧಿ ಟ್ರಸ್ಟ್‌ನ ಸದಸ್ಯರು, ಲೋಹಿತ ನೆಲವಿಗಿ, ಸೇರಿದಂತೆ ಅನೇಕರು ಸಂತಾಪ ವ್ಯಕ್ತಪಡಿಸಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಅವರೆ	4014-4014
ಕಡಲೆಕಾಳು	2044-6279
ಉದ್ದಿನಕಾಳು	4144-5424
ಧನಿಯಾ	6569-11889
ಅಲಸಂದೆ	3089-6529
ಹೆಸರುಕಾಳು	1569-9733
ಶೇಂಗಾ	2811-8282
ಹುರಳಿಕಾಳು	3689-3689
ಬೆಲ್ಲ	4200-4200
ಜೋಳ	1477-4683
ಮೆಕ್ಕೆಜೋಳ	1517-1677
ಮಡಿಕೆ	9100-10024
ಸಾಸುವೆ	4465-4579
ಕುಸುಬೆ	2814-5309
ಸಜ್ಜೆ	2814-5309
ಸೂರ್ಯಕಾಂತಿ	6879-7301
ತೊಗರಿ	3289-5744
ಗೋಧಿ	1433-6279



ಗದಗ: ಜಿಲ್ಲೆಯ ರೈತರಿಗೆ ಕೃಷಿ ಇಲಾಖೆಯಿಂದ ಮುಂಗಾರು ಬಿತ್ತನೆಗಾಗಿ ಬೀಜ, ಗೊಬ್ಬರವನ್ನು ವಿತರಣೆ ಕಾರ್ಯಕ್ರಮವನ್ನು ಕೃಷಿಕ ಸಮಾಜದ ಜಿಲ್ಲಾ ಉಪಾಧ್ಯಕ್ಷ ರಾಮಣ್ಣ ಹೂವಣ್ಣವರ ಉದ್ಘಾಟಿಸಿದರು. ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಮಲ್ಲಯ್ಯ ಕೊರವನವರ, ಕೃಷಿ ಅಧಿಕಾರಿ ರಾಜೇಶ್ವರಿ ಸಜ್ಜನ, ರೈತ ಮುಖಂಡ ಆರ್.ಆರ್. ಕಾತಪ್ಪನವರ, ಹುಚ್ಚಣ್ಣ ಶ್ಯಾಪೂರ, ತಾಲೂಕಾಧ್ಯಕ್ಷ ಯಲ್ಲಪ್ಪ ಬಾಬರಿ, ಹಿರೇಮಠ ಇದ್ದರು.

ಉದ್ಯೋಗಾಕಾಂಕ್ಷಿಗಳ ಮೇಲೆ ಕರುಣೆ ಬರುತ್ತಿಲ್ಲ: ಶರಣ

ಗದಗ: ಸರ್ಕಾರಿ ಹುದ್ದೆ ನೀಡುತ್ತೇವೆ ಎಂದು ಅಧಿಕಾರಕ್ಕೆ ಬಂದು ಮೂರು ವರ್ಷವಾದರೂ ಯಾವುದೇ ಇಲಾಖೆಗಳಲ್ಲಿ ಗಮನಾರ್ಹ ನೇಮಕಾತಿ ಮಾಡಿಕೊಳ್ಳದೇ ದಿನದೂಡುತ್ತಿರುವ ಕಾಂಗ್ರೆಸ್ ಸರ್ಕಾರ ಉದ್ಯೋಗಾಕಾಂಕ್ಷಿಗಳ ಭವಿಷ್ಯ ನಿರ್ನಾಮಗೊಳಿಸುತ್ತಿದೆ ಎಂದು ಬಿಜೆಪಿ ಮುಖಂಡರು ಹಾಗೂ ಉಸಿರು ಫೌಂಡೇಶನ್ ಅಧ್ಯಕ್ಷ ಶರಣ ಪಾಟೀಲ ಅಭಿಪ್ರಾಯಪಟ್ಟಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಇಲ್ಲಿತನಕ ಒಳಮೀಸಲಾತಿ ತೀರ್ಪು ಬರಬೇಕು ಎಂದು ನ್ಯಾಯಾಲಯಕ್ಕೆ ಬೊಟ್ಟು ತೋರಿಸುತ್ತಿದ್ದ ಸರ್ಕಾರ ಈಗ ಎಲ್ಲ ಗೊಂದಲಗಳು ಬಗೆಹರಿದರೂ ಯಾವುದೇ ಇಲಾಖೆಯಲ್ಲಿ ನೇಮಕಾತಿ ಮಾಡುವ ಮನಸ್ಸು ಮಾಡದಿರುವುದು ಈ ಸರ್ಕಾರದ ಅಸಲಿ ಮುಖವನ್ನು ತೋರಿಸಿದೆ. ಸಾರಿಗೆ, ಶಿಕ್ಷಣ, ಒಳಾಡಳಿತ, ಸಹಕಾರ, ಕಂದಾಯ ಹೀಗೆ ಎಲ್ಲ ಇಲಾಖೆಗಳಲ್ಲೂ ಸಾವಿರಾರು ಹುದ್ದೆಗಳು ಖಾಲಿ ಇದ್ದೂ, ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಈ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂದು ಚುನಾವಣೆಗೂ ಮುನ್ನ ಆಮಿಷ ತೋರಿಸಿತ್ತು. ಸರ್ಕಾರಿ ಉದ್ಯೋಗವನ್ನೇ ನಂಬಿ ವರ್ಷಗಟ್ಟಲೇ ಓದುತ್ತಾ ಕುಳಿತುಕೊಳ್ಳುವ ವಿದ್ಯಾರ್ಥಿಗಳು ಈಗಾಗಲೇ ಹಲವು ಬಾರಿ ಧಾರವಾಡ ಹಾಗೂ ಬೆಂಗಳೂರಿನಲ್ಲಿ ಪ್ರತಿಭಟನೆ ಮಾಡಿದ್ದಾರೆ, ಉದ್ಯೋಗ ಗಿಟ್ಟಿಸುವ ಅವರ ವಯಸ್ಸು ಮುಗಿದುಹೋಗುತ್ತಿದೆ ವಿನಃ ಸಿದ್ದರಾಮಯ್ಯನವರಿಗೆ ಮಾತ್ರ ಉದ್ಯೋಗಾಕಾಂಕ್ಷಿಗಳ ಮೇಲೆ ಕರುಣೆ ಬರುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.





ಗದಗ: ನಗರದ ಜಿಲ್ಲಾಧಿಕಾರಿ ಕಾರ್ಯಾಲಯ ಆವರಣದಲ್ಲಿ ಸೋಮವಾರ ಪ್ರವಾಸೋದ್ಯಮ ಇಲಾಖೆ ಮೊಬೈಲ್ ಕ್ಯಾಂಟೀನ್ ವಾಹನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಬಿ.ಬಿ.ಅಸೂಟಿ, ತಾ.ಅಧ್ಯಕ್ಷ ಅಶೋಕ ಮಂದಾಲಿ, ನೀಲವ್ವ ಬೋಳನವರ, ಮಾಜಿ ಶಾಸಕ ರಾಮಣ್ಣ ಲಮಾಣಿ, ಪಾರುಕ್ ಹುಬ್ಬಳ್ಳಿ, ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ, ಅಪರ ಜಿಲ್ಲಾಧಿಕಾರಿ ಡಾ.ದುರಗೇಶ ಕೆ.ಆರ್., ಜಿಲ್ಲಾ ವಾರ್ತಾಧಿಕಾರಿ ವಸಂತ ಮಡ್ಲೂರ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಕೋಟ್ರೇಶ ವಿಭೂತಿ ಇದ್ದರು.

ವಕೀಲರಿಗೆ ಕಾನೂನಿನ ಕೌಶಲ್ಯ ಅಗತ್ಯ

ಗದಗ: ನ್ಯಾಯಾಂಗ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಲು ಕೇವಲ ಪದವಿ ಸಾಕಾಗುವುದಿಲ್ಲ. ಕಾನೂನು ಜ್ಞಾನ, ವಾದ ಸಾಮರ್ಥ್ಯ, ನೈತಿಕತೆ ಮತ್ತು ಸಮಾಜದ ಮೇಲಿನ ಹೊಣೆಗಾರಿಕೆ ಅಗತ್ಯ ಎಂದು ಕರ್ನಾಟಕ ಹೈಕೋರ್ಟ್‌ನ ಮಾಜಿ ನ್ಯಾಯಾಧೀಶ ಬಿ.ಎ.ಪಾಟೀಲ ಹೇಳಿದರು.

ನಗರದ ಕೆಎಲ್‌ಇ ಸಂಸ್ಥೆಯ ಎಸ್.ಎ.ಮಾನ್ವಿ ಕಾನೂನು ಮಹಾವಿದ್ಯಾಲಯದಲ್ಲಿ ಕೆಎಲ್‌ಇ ಕಾನೂನು ಅಕಾಡೆಮಿ 3ನೇ ರಾಷ್ಟ್ರೀಯ ಅಣಕು ನ್ಯಾಯಾಲಯ ಸ್ಪರ್ಧೆ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಕೇವಲ ಪದವಿ ಪಡೆದು ಯಶಸ್ವಿ ವಕೀಲರಾಗುವುದು ಸಾಧ್ಯವಿಲ್ಲ. ವಾಗ್ಮಿತೆ, ತಾರ್ಕಿಕ ಚಿಂತನೆ, ಆತ್ಮವಿಶ್ವಾಸ, ಸಂಶೋಧನಾ ಸಾಮರ್ಥ್ಯ ಹಾಗೂ ಕ್ಷಣಾರ್ಧದಲ್ಲಿ ಕಾನೂನು ಅಂಶಗಳನ್ನು ಮಂಡಿಸುವ ಕೌಶಲ್ಯ ಅಗತ್ಯವಾಗಿದೆ. ಈ ಎಲ್ಲ ಗುಣಗಳನ್ನು ಬೆಳೆಸುವ ಅತ್ಯುತ್ತಮ ವೇದಿಕೆಯೇ ಅಣಕು ನ್ಯಾಯಾಲಯ. ವಿದ್ಯಾರ್ಥಿಗಳು ಇಲ್ಲಿ ಸೋಲು-ಗೆಲುವಿಗಿಂತ ಹೆಚ್ಚು ಅನುಭವವನ್ನು ಸಂಪಾದಿಸುತ್ತಾರೆ ಎಂದರು.

ಕರ್ನಾಟಕ ಹೈಕೋರ್ಟ್‌ನ ಮಾಜಿ ನ್ಯಾಯಾಧೀಶ ಉಮೇಶ್ ಅಡಿಗ ಮಾತನಾಡಿ, ಅಣಕು ನ್ಯಾಯಾಲಯ ಸ್ಪರ್ಧೆಗಳು ವಿದ್ಯಾರ್ಥಿಗಳಲ್ಲಿ ನ್ಯಾಯಾಂಗದ ಬಗ್ಗೆ ಆತ್ಮವಿಶ್ವಾಸ ಬೆಳೆಸುವುದರ ಜೊತೆಗೆ ನ್ಯಾಯಾಲಯದ ಪ್ರಾಯೋಗಿಕ ಅನುಭವವನ್ನು ನೀಡುತ್ತವೆ. ಇಂತಹ ಸ್ಪರ್ಧೆಗಳು ವಿದ್ಯಾರ್ಥಿಗಳನ್ನು ಭವಿಷ್ಯದ ಸಮರ್ಥ ವಕೀಲರು ಹಾಗೂ ನ್ಯಾಯಾಧೀಶರನ್ನಾಗಿ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದರು.

ಜಿಲ್ಲಾ ಗ್ರಾಹಕ ಪರಿಹಾರ ಆಯೋಗದ ಅಧ್ಯಕ್ಷ ಎಂ.ಐ.ಶಿಗ್ಲಿ ಮಾತನಾಡಿ, ಕಾನೂನು ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಅಣಕು ನ್ಯಾಯಾಲಯಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ನ್ಯಾಯಾಂಗದ ಭವಿಷ್ಯ ಯುವಕರ ಕೈಯಲ್ಲಿದೆ. ಇಂತಹ ಸ್ಪರ್ಧೆಗಳು ಕೇವಲ ಟ್ರೋಫಿ ಗೆಲ್ಲುವ ವೇದಿಕೆಗಳಲ್ಲ, ದೇಶದ ಭವಿಷ್ಯದ ನ್ಯಾಯಾಧೀಶರು, ವಕೀಲರು, ಕಾನೂನು ತಜ್ಞರನ್ನು ರೂಪಿಸುವ ಶಕ್ತಿ ಕೇಂದ್ರಗಳಾಗಿವೆ ಎಂದರು.

ಪ್ರಾಚಾರ್ಯ ಪ್ರೊ.ಡಾ.ಜೆ. ಎಂ.ಮಲ್ಲಿಕಾರ್ಜುನಯ್ಯ ಮಾತನಾಡಿ, ವಿದ್ಯಾರ್ಥಿಗಳು ಕೇವಲ ಪಠ್ಯಾಧಾರಿತ ಜ್ಞಾನಕ್ಕೆ ಸೀಮಿತವಾಗದೆ, ನ್ಯಾಯಾಂಗದ ನೈಜ ಪ್ರಕ್ರಿಯೆ ಅರಿತುಕೊಳ್ಳಲು ಇಂತಹ ಸ್ಪರ್ಧೆಗಳು ಅತ್ಯಂತ ಅಗತ್ಯವಿದೆ. ಕಾನೂನು ಕ್ಷೇತ್ರದಲ್ಲಿ ಸ್ಪರ್ಧಾತ್ಮಕ ಮನೋಭಾವ ಮತ್ತು ವೃತ್ತಿಪರತೆ ಬೆಳೆಸುವಲ್ಲಿ ರಾಷ್ಟ್ರೀಯ ಮಟ್ಟದ ಅಣಕು ನ್ಯಾಯಾಲಯ ಸ್ಪರ್ಧೆಗಳು ಮಹತ್ವದ ಪಾತ್ರ ವಹಿಸುತ್ತವೆ ಎಂದರು.

ಎಸ್.ಎ ಮಾನ್ವಿ, ಎಸ್.ಎಫ್. ಹಾದಿಮನಿ, ಎಸ್ .ಜಿ. ಶಿಳ್ಳಿಕೇರಿ, ಎಸ್.ಎ. ಮಾನ್ವಿ, ಡಾ.ಸಂಜೀವ ಹುಲ್ಲೂರ, ಡಾ.ವಿಜಯ ಮುರದಂಡೆ, ಡಾ. ಶ್ರೀನಿವಾಸ ಪಾಲ್ಗೊಂಡ, ಡಾ.ಜ್ಯೋತಿ ಸಿ.ವಿ., ಡಾ.ಸಿ.ವಿ. ರಣಗಟ್ಟಿಮಠ ಇದ್ದರು.



ಜೆಕೆ ಕಾನೂನು ಕಾಲೇಜ್ ರನ್ನರ್ ಅಪ್

ಬೆಂಗಳೂರಿನ ಬಿಎಂಎಸ್ ಕಾನೂನು ಕಾಲೇಜು ಅತ್ಯುತ್ತಮ ಪ್ರದರ್ಶನ ನೀಡಿ ವಿಜೇತ ಪಟ್ಟವನ್ನು ತನ್ನದಾಗಿಸಿಕೊಂಡಿತು. ಹುಬ್ಬಳ್ಳಿಯ ಕೆಎಲ್‌ಇ ಸೊಸೈಟಿ ಜೆಕೆ ಕಾನೂನು ಕಾಲೇಜು ರನ್ನರ್ಸ್ ಅಪ್ ಸ್ಥಾನ ಪಡೆದುಕೊಂಡಿತು. ಅತ್ಯುತ್ತಮ ಮೆಮೋರಿಯಲ್ ಪ್ರಶಸ್ತಿಯನ್ನು ಬೆಂಗಳೂರಿನ ಕೆಎಲ್‌ಇ ಕಾನೂನು ಕಾಲೇಜು ಪಡೆದರೆ, ಅತ್ಯುತ್ತಮ ಮಹಿಳಾ ನ್ಯಾಯವಾದಿ ಪ್ರಶಸ್ತಿ ಬೆಂಗಳೂರಿನ ವಿವೇಕಾನಂದ ಕಾನೂನು ಕಾಲೇಜಿನ ವಿಜುಷಾಗೆ ದೊರೆಯಿತು. ಅತ್ಯುತ್ತಮ ಪುರುಷ ನ್ಯಾಯವಾದಿ ಪ್ರಶಸ್ತಿ ಹುಬ್ಬಳ್ಳಿ ಕೆಎಸ್ಎಲ್‌ಯು ಕಾನೂನು ಕಾಲೇಜಿನ ದರ್ಶನ ಪಡೆದು ಗಮನ ಸೆಳೆದರು.

ಗಂಗಿಮಡಿ ಪ್ರದೇಶಕ್ಕೆ ಸಚಿವ ಪಾಟೀಲ ಭೇಟಿ

ಗದಗ: ನಗರದ ಗಂಗಿಮಡಿ ಪ್ರದೇಶದಲ್ಲಿ ಅಧಿಕ ಮಳೆಯಿಂದ ತೊಂದರೆಗೀಡಾದ ಕುಟುಂಬಗಳಿಗೆ ಧೈರ್ಯ ತುಂಬಲು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಸೋಮವಾರ ಸ್ಥಳಕ್ಕೆ ಭೇಟಿ ನೀಡಿ, ಸಂತ್ರಸ್ತರ ಸಮಸ್ಯೆಗಳನ್ನು ಆಲಿಸಿ ಪರಿಸ್ಥಿತಿ ಪರಿಶೀಲಿಸಿದರು.

ಸ್ಥಳದಲ್ಲೇ ಅಧಿಕಾರಿಗಳಿಂದ ಮಾಹಿತಿ ಪಡೆದು, ಅಗತ್ಯ ನೆರವು ಕಲ್ಪಿಸುವಂತೆ ಸೂಚಿಸಿದರು. ಸಂತ್ರಸ್ತರೊಂದಿಗೆ ಮಾತನಾಡಿದ ಸಚಿವರು, ನಿಮ್ಮ ಪರಿಸ್ಥಿತಿ ನಾನು ಖುದ್ದಾಗಿ ಅವಲೋಕನ ಮಾಡಿದ್ದೇನೆ. ಸಂಕಷ್ಟದಲ್ಲಿರುವ ಜನರ ನೆರವಿಗೆ ನಮ್ಮ ಸರ್ಕಾರ ಸದಾ ಬದ್ಧವಾಗಿದೆ. ಯಾರೂ ಆತಂಕಪಡುವ ಅಗತ್ಯ ಇಲ್ಲ ಎಂದು ಭರವಸೆ ನೀಡಿದರು.

ಗಂಗಿಮಡಿ ಪ್ರದೇಶದಲ್ಲಿ ಒಟ್ಟು 96 ಕುಟುಂಬಗಳು ತಗಡಿನ ಶೆಡ್‌ಗಳಲ್ಲಿ ಜೀವನ ಸಾಗಿಸುತ್ತಿದ್ದು, ಇದರಲ್ಲಿ 9 ಶೆಡ್‌ಗಳು ಸಂಪೂರ್ಣ ಕುಸಿದಿವೆ. ಈಗಾಗಲೇ ಜಿಲ್ಲಾಡಳಿತದಿಂದ 96 ಕುಟುಂಬಗಳಲ್ಲಿ 88 ಕುಟುಂಬಗಳಿಗೆ ತಲಾ 5 ಸಾವಿರ ರೂಪಾಯಿ ಸಹಾಯಧನ ವಿತರಿಸಲಾಗಿದ್ದು, ಉಳಿದ ಕುಟುಂಬಗಳಿಗೂ ಶೀಘ್ರವೇ ನೆರವು ನೀಡಲಾಗುವುದು ಎಂದು ಸಚಿವರು ತಿಳಿಸಿದರು. ಈ ವೇಳೆ ಅಧಿಕಾರಿಗಳು ಸಚಿವರಿಗೆ ಮಾಹಿತಿ ನೀಡಿ, ಗಂಗಿಮಡಿ ಪ್ರದೇಶದ 96 ಕುಟುಂಬಗಳಲ್ಲಿ ಸುಮಾರು 60 ಶೇಕಡಾ ಕುಟುಂಬಗಳಿಗೆ ಮನೆ ಮಂಜೂರಾಗಿರುವುದಾಗಿ ತಿಳಿಸಿದರು. ಸಂತ್ರಸ್ತರಿಗೆ ಆಹಾರ, ಆರೋಗ್ಯ ಸೇವೆ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಜಿಲ್ಲಾಡಳಿತದಿಂದ ಒದಗಿಸಲಾಗಿದೆ ಎಂದರು.

ಸಾರ್ವಜನಿಕರು ಸಚಿವರ ಮುಂದೆ ತಮ್ಮ ಅಳಲನ್ನು ತೋಡಿಕೊಂಡು, ಮಂಜೂರಾದ ಮನೆಗಳ ಮರುಸರ್ವೇ ನಡೆಸಬೇಕು, ಕೆಲವರು ಮಂಜೂರಾದ ಮನೆಗಳನ್ನು ಬಾಡಿಗೆಗೆ ನೀಡಿ ಶೆಡ್‌ಗಳಲ್ಲಿ ವಾಸಿಸುತ್ತಿದ್ದಾರೆ, ಮನೆ ಇಲ್ಲದವರು ತಾತ್ಕಾಲಿಕ ಶೆಡ್‌ಗಳಲ್ಲಿ ಜೀವನ ನಡೆಸುತ್ತಿದ್ದಾರೆ ಎಂದು ದೂರಿದರು.

ಈಗಾಗಲೇ ಸರ್ಕಾರ ನೀಡಿರುವ ನೆರವು ಸಾಕಾಗುತ್ತಿಲ್ಲ, ಹೆಚ್ಚುವರಿ ಸಹಾಯಧನ ನೀಡಬೇಕು ಹಾಗೂ ಶಾಶ್ವತ ಸೂರು ಕಲ್ಪಿಸಬೇಕು ಎಂದು ಮನವಿ ಮಾಡಿದರು.ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರ್ ಸಾಬ್ ಬಬರ್ಜಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಬಿ.ಬಿ. ಅಸೂಟಿ, ತಾಲೂಕು ಅಧ್ಯಕ್ಷ ಅಶೋಕ ಮಂದಾಲಿ, ಜಿಲ್ಲಾ ಕೆಡಿಪಿ ಸಮಿತಿ ಸದಸ್ಯ ಎಸ್.ಎನ್.ಬಳ್ಳಾರಿ, ನೀಲವ್ವ ಬೋಳನವರ, ಸಿದ್ದು ಪಾಟೀಲ, ಎಸಿ ಗಂಗಪ್ಪ ಎಂ, ತಹಶೀಲ್ದಾರ್ ಶ್ರೀನಿವಾಸ ಮೂರ್ತಿ, ಡಾ.ಎಸ್.ಎಸ್.ನೀಲಗುಂದ, ಆರ್.ಎಸ್.ಬುರಡಿ ಇದ್ದರು.



ಮೇ 31 ರಂದು ಬೃಹತ್ ಹಿಂದೂ ಸಮಾವೇಶ

ಲಕ್ಷ್ಮೇಶ್ವರ: ಗದಗನ ಕನ್ನೇರಿಮಠ ಅದೃಶ್ಯ ಕಾಡಸಿದ್ದೇಶ್ವರ ಶ್ರೀಗಳ ನೇತೃತ್ವದಲ್ಲಿ ಮೇ 31 ರಂದು ಬಸವಾದಿ ಶಿವಶರಣ ಬೃಹತ್ ಹಿಂದೂ ಸಮಾವೇಶ ಆಯೋಜಿಸಲಾಗಿದೆ. ಇಂತಹ ಅಭೂತಪೂರ್ವ ಹಿಂದೂ ಸಮಾವೇಶಕ್ಕೆ ಸಹಸ್ರ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿ ಎಂದು ಹಿಂದೂ ಸಂಘಟನೆಗಳ ಮುಖಂಡ ರಾಜು ಖಾನಪ್ಪನವರ ಹೇಳಿದರು,

ಸಮಾವೇಶದ ಕುರಿತು ಪಟ್ಟಣದ ಶ್ರೀ ವೀರಗಂಗಾಧರ ಸಮುದಾಯ ಭವನದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಕನ್ನೇರಿ ಶ್ರೀಗಳು ಹಿಂದೂ ಸಮಾಜವನ್ನು ಒಗ್ಗೂಡಿಸುವ ನಿಟ್ಟಿನಲ್ಲಿ ಮುಂದಾಗುತ್ತಿದ್ದು, ಈ ಹಿನ್ನಲೆಯಲ್ಲಿ ಅವರನ್ನು ಈ ಸಮಾವೇಶದ ನೇತೃತ್ವ ವಹಿಸುವಂತೆ ವಿನಂತಿಸಲಾಗಿದೆ. ಯುವಕರು, ಹಿರಿಯರು, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಎಂದು ಮನವಿ ಮಾಡಿದರು.

ಹಿರಿಯ ಮುಖಂಡ ವೆಂಕಟೇಶ ಕುಲಕರ್ಣಿ ಮಾತನಾಡಿ, ಹಿಂದೂಗಳು ಎಲ್ಲರೂ ಒಂದೇ ಎಂಬ ಭಾವನೆ ಬರಬೇಕು. ಹಿಂದೂಗಳು ಒಗ್ಗೂಡಬೇಕು. ಜಿಲ್ಲೆಯ ಪ್ರತಿ ಹಳ್ಳಿ ಹಳ್ಳಿ ಹೋಗಿ ಸಂಘಟನೆ ಮಾಡುತ್ತಿದ್ದು ಕಾರ್ಯಕ್ರಮಕ್ಕೆ 40 ರಿಂದ 50 ಸಾವಿರ ಜನ ಸೇರುವ ನಿರೀಕ್ಷೆ ಇದೆ. 200 ಕ್ಕಿಂತಲೂ ಹೆಚ್ಚಿನ ಮಠಾಧೀಶರು ಭಾಗವಹಿಸಲಿದ್ದಾರೆ. 4000 ಮುತ್ತೈದೆಯರಿಂದ ಕುಂಭ ಮೇಳದೊಂದಿಗೆ ಶೋಭಾಯಾತ್ರೆ ನಡೆಯಲಿದೆ ಎಂದರು. ಶ್ರೀಧರ ಕುಲಕರ್ಣಿ, ಸ್ಥಳೀಯ ಮುಖಂಡರಾದ ಚಂಬಣ್ಣ ಬಾಳಿಕಾಯಿ, ನಿಂಗಪ್ಪ ಬನ್ನಿ, ಹೊನ್ನಪ್ಪ ವಡ್ಡರ, ಮಂಜುನಾಥ ಹೊಗೆಸೊಪ್ಪಿನ, ಅನಿಲ ಮುಳಗುಂದ, ಗಂಗಾಧರ ಮೆಣಸಿನಕಾಯಿ ಮಾತನಾಡಿದರು. ಈ ವೇಳೆ ವಿಜಯ ಮಹಾಂತಶೆಟ್ಟರ, ಕೆ.ಎಸ್ ಹಿರೇಮಠ, ಗುರುರಾಜ ಪಾಟೀಲಕುಲಕರ್ಣಿ, ಈರಣ್ಣ ಪೂಜಾರ, ಶಿವಯೋಗಿ ಅಂಕಲಕೋಟಿ, ಮಹೇಶ ಕಲಘಟಗಿ, ಬಾಳಪ್ಪ ಗೋಸಾವಿ, ನೀಲಪ್ಪ ಹತ್ತಿ, ಅಮಿತ ಗುಡಗೇರಿ, ಮುತ್ತಣ್ಣ ಕರ್ಜಕಣ್ಣವರ, ಪ್ರವೀಣ ಬೋಮಲೆ, ನವೀನ ಹಿರೇಮಠ, ಪ್ರಾಣೇಶ ವ್ಯಾಪಾರಿ, ಶಂಕರ ಬ್ಯಾಡಗಿ, ವಿಜಯ ಕುಂಬಾರ, ರಾಜು ಕಳ್ಳಿ, ಖಂಡೋಬಾ ನವಲೆ, ಕಿರಣ ಚಿಲ್ಲೂರಮಠ, ಭರಮಣ್ಣ ಶೇರಸೂರಿ, ಚಿನ್ನು ಹಾಳದೋಟದ, ಬಸವರಾಜ ಕಲ್ಲೂರ, ವೈಭವ ಗೋಗಿ, ಅಭಿಷೇಕ ಉಮಚಗಿ ಸೇರಿದಂತೆ ಅನೇಕರಿದ್ದರು.



ಶಿಕ್ಷಣದ ಜೊತೆ ಆರೋಗ್ಯ ಕಡೆ ಗಮನ ಇರಲಿ:ಡಾ.ನಾಗರಾಜ

ನರೇಗಲ್ಲ : ವಿದ್ಯಾರ್ಥಿಗಳಿಗೆ ತಾವು ಅಧ್ಯಯನಶೀಲರಾಗಿ ವಿದ್ಯಾಭ್ಯಾಸ ಮಾಡಲು ಅವರ ಆರೋಗ್ಯ ಬಹಳ ಮುಖ್ಯವಾಗಿರುತ್ತದೆ. ಆದಕ್ಕಾಗಿ ಎಲ್ಲ ವಿದ್ಯಾರ್ಥಿಗಳು ನಿಮ್ಮ ಶೈಕ್ಷಣಿಕ ಜೀವನದಲ್ಲಿ ಶಿಕ್ಷಣದ ಜೊತೆಗೆ ಆರೋಗ್ಯದ ಕಡೆ ಗಮನ ಕೊಡುವುದು ಬಹಳ ಮುಖ್ಯವಾಗಿರುತ್ತದೆ ಎಂದು ನರೇಗಲ್ಲ ದತ್ತ ಮಂಡಳಿ ಅಧ್ಯಕ್ಷ ಡಾ.ನಾಗರಾಜ ಗ್ರಾಮಪುರೋಹಿತ ಹೇಳಿದರು.

ಸ್ಥಳೀಯ ದತ್ತಾತ್ರೇಯ ದೇವಸ್ಥಾನದ ಸಭಾಭವನದಲ್ಲಿ ಸಾಧನ ಕೋಚಿಂಗ್ ಸೆಂಟರ್ ವತಿಯಿಂದ ನಡೆದ 2025-26ನೇ ಸಾಲಿನ ಬೇಸಿಗೆ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ವಿದ್ಯಾರ್ಥಿಗಳ ಆರೋಗ್ಯ ಮತ್ತು ಶೈಕ್ಷಣಿಕ ಅಭಿವೃದ್ಧಿ ಇಂದಿನ ಕಾಲಘಟ್ಟದಲ್ಲಿ ಅತ್ಯಂತ ಪ್ರಮುಖ ವಿಷಯವಾಗಿದ್ದು, ಈ ಎರಡು ಅಂಶಗಳು ಪರಸ್ಪರ ಸಂಬಂಧವಾಗಿವೆ. ಉತ್ತಮ ಆರೋಗ್ಯವಿದ್ದಾಗ ಮಾತ್ರ ವಿದ್ಯಾರ್ಥಿಗಳು ಅಧ್ಯಯನದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.ಈ ವೇಳೆ ಕೆಎಸ್‌ಎಸ್ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಶಿವಾನಂದ ಗೊಗೇರಿ, ಅನ್ನದಾನೇಶ್ವರ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ವಾಯ್.ಸಿ.ಪಾಟೀಲ, ಉಪನ್ಯಾಸಕ ಮುತ್ತು ಹೊನ್ನವಾಡ ಮಾತನಾಡಿದರು.ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.90ರಷ್ಟು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಈ ವೇಳೆ ಪತ್ರಕರ್ತ ಮಲ್ಲಯ್ಯ ಗುಂಡುಗೋಪುರಮಠ, ಮಂಜುನಾಥ ಪಾಯಪ್ಪಗೌಡ್ರ, ಮುತ್ತಣ ಗೆದಗೇರಿ, ಶೇಖಪ್ಪ ಹೊನ್ನವಾಡ, ಉದಯಕುಮಾರ ಸವದಿ, ಉಪನ್ಯಾಸಕರಾದ ನಂದೀಶ್ ಅಚ್ಚಿ, ವಿರೂಪಾಕ್ಷ ಸಂಗನಾಳ, ದೇವರಡ್ಡಿ ಗುಲಗಂಜಿಕೊಪ್ಪ, ಶರಣಯ್ಯ ಬಾಗಲತ್ತಿಮಠ, ಕಿರಣ ರಂಜಣಗಿ ಮುಂತಾದವರು ಉಪಸ್ಥಿತರಿದ್ದರು.



ಅಧ್ಯಕ್ಷರಾಗಿ ಕಳಕಪ್ಪ ಪೋತಾ ಆಯ್ಕೆ

ಗಜೇಂದ್ರಗಡ: ಜಯ ಕರ್ನಾಟಕ ಜನಪರ ವೇದಿಕೆ ಸಂಘಟನೆ ವತಿಯಿಂದ ಇತ್ತೀಚೆಗೆ ಸ್ಥಳೀಯ ಪ್ರವಾಸಿ ಮಂದಿರದಲ್ಲಿ ನಡೆದ ಪದಾಧಿಕಾರಿಗಳ ಸಭೆಯಲ್ಲಿ ಕಳಕಪ್ಪ ಪೋತಾ ತಾಲೂಕಾ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

ಸಂಘಟನೆ ರಾಜ್ಯ ಉಪಾಧ್ಯಕ್ಷ ಹಾಲಪ್ಪ ವರವಿ ಮಾತನಾಡಿ, ನಮ್ಮ ಸಂಘಟನೆ ಜನರಿಂದ ಜನರ ಸಮಸ್ಯೆ ಬಗೆಹರಿಸಲು ಸಂಘಟಿತವಾಗಿ ರಾಜ್ಯಾದ್ಯಾಂತ ಹೋರಾಟ ರೂಪಿಸುತ್ತಾ ಬಂದಿದೆ. ಜನಪರ ಯೋಜನೆಗಳ ಜಾರಿಗೆ ಒತ್ತಾಯ, ಬಡವರ, ದೀನರ, ದಲಿತರ ಪರವಾದ ನಿಲುವು ಪ್ರಸ್ತುತ ಪಡಿಸುತ್ತಾ ಬಂದಿದೆ ಎಂದರು. ಸಂಘಟನೆ ಜಿಲ್ಲಾಧ್ಯಕ್ಷ ಸಣ್ಣಯಲ್ಲಪ್ಪ ವಳಗೇರಿ ಮಾತನಾಡಿ, ಜನರ ಸಮಸ್ಯೆಗಳಿಗೆ ಧ್ವನಿಯಾಗಿ ಆಳುವ ಸರ್ಕಾರಗಳನ್ನು ಎಚ್ಚರಿಸುವ ಕೆಲಸ ನಮ್ಮ ಸಂಘಟನೆ ಸದಾ ಮಾಡುತ್ತಾ ಬಂದಿದೆ. ಇಂದು ಗಜೇಂದ್ರಗಡ ತಾಲೂಕಾ ಘಟಕದ ಪದಾಧಿಕಾರಿಗಳ ಆಯ್ಕೆಯಿಂದ ಸಂಘಟನೆಗೆ ಬಲ ಬಂದಂತಾಗಿದೆ ಎಂದರು.

ಸಂಸ್ಥಾಪಕ ಅಧ್ಯಕ್ಷ ಗುಣರಂಜನಶೆಟ್ಟಿ ಮತ್ತು ರಾಜ್ಯಾಧ್ಯಕ್ಷ ಜೆ.ಶ್ರೀನಿವಾಸ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದೆ. ತಾಲೂಕಿನ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಕಳಕಪ್ಪ ಪೋತಾರವರು ಮಾತನಾ, ಸದಾ ಜನಪರ ಕಾಳಜಿಯೊಂದಿಗೆ ಅನೇಕ ಸಂಘಟನೆಯಲ್ಲಿ ಹೋರಾಟ ರೂಪಿಸುತ್ತಾ ಬಂದಿದ್ದೇನೆ. ಜನಪರ ಹೋರಾಟದಲ್ಲಿ ನನಗೆ ಬೆಂಬಲ ನೀಡಿರುವಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತ ಮುಂದಿನ ಹೋರಾಟದ ಬದುಕನ್ನು ಜಯ ಕರ್ನಾಟಕ ಜನಪರ ವೇದಿಕೆ ಮೂಲಕ ಮುನ್ನಡೆಸುತ್ತ ಬಡವರ ಪರವಾಗಿ ಕೆಲಸ ಮಾಡುತ್ತೇವೆ ಎಂದರು.

ಕೆ.ಎಂ.ನಂದನಜವಳಕರ ಅವರನ್ನು ಕಾನೂನು ಘಟಕದ ಅಧ್ಯಕ್ಷರನ್ನಾಗಿ ಮತ್ತು ಎಂ. ಡಿ. ಪೂಜಾರ, ರಾಜು ವನ್ನಾಲ,ಕಾಸಿಂಸಾಬ್ ಮುಚ್ಚಾಲಿ,ಮಾರುತಿ ಜಾನಾಯಿ, ಚಂದ್ರಪ್ಪ ಚಿನ್ನೂರ, ಕಳಕಪ್ಪ ಹಾಳಕೇರಿ, ಸುರೇಶ ಕಮಿತ್ಕರ, ಉಮೇಶ ಕಲಮಶೆಟ್ಟಿ, ನಾಗಪ್ಪ ಪೂಜಾರ, ಬ್ರಹ್ಮಾನಂದ ಪತ್ತಾರ, ಶ್ರೀಕಾಂತ ಪಾತರೊಟ, ಶರಣಪ್ಪ ಗುಳಗುಳಿ, ಶಿವರಾಜ ಪೂಜಾರ ಸೇರಿದಂತೆ ಅನೇಕರನ್ನು ಪದಾಧಿಕಾರಿಗಳಾಗಿ ಆಯ್ಕೆ ಮಾಡಲಾಯಿತು.



ಬಿತ್ತನೆ ಬೀಜ, ಗೊಬ್ಬರ ಖರೀದಿಗೆ ರಶೀದಿ ಕಡ್ಡಾಯ

ನರಗುಂದ: ರೈತರು ಮುಂಗಾರು ಬಿತ್ತನೆಗೆ ಬೀಜ ಗೊಬ್ಬರ ಖರೀದಿಸುತ್ತಿದ್ದಾರೆ. ಅಂಗಡಿಯವರು ಕಡ್ಡಾಯವಾಗಿ ರಶೀದಿ ನೀಡಬೇಕೆಂದು ತಾಲೂಕಾ ರೈತ ಸಂಘ ಹಾಗೂ ಹಸಿರು ಸೇನೆ ಅಧ್ಯಕ್ಷ ಉಮೇಶ ಮರ್ಚಪ್ಪನವರು ಆಗ್ರಹಿಸಿದರು.

ಸೋಮವಾರ ಪಟ್ಟಣದ ಕೃಷಿ ಇಲಾಖೆ ಅಧಿಕಾರಿಗೆ ಮನವಿ ನೀಡಿ ಮಾತನಾಡಿ, 2026-27ನೇ ಸಾಲಿನ ಮುಂಗಾರು ಹಂಗಾಮಿನ ಬಿತ್ತನೆಗಾಗಿ ಖಾಸಗಿ ಬೀಜ ಮತ್ತು ಗೊಬ್ಬರ ಅಂಗಡಿಗಳಲ್ಲಿ ರೈತರು ಖರೀದಿಸುವ ರೈತರಿಗೆ ಅಂಗಡಿಯವರು ರಶೀದಿ ನೀಡದೇ, ಕೇವಲ ಬಿಳಿ ಹಾಳೆಯಲ್ಲಿ ಬರೆದು ಕೊಡುತ್ತಿರುವುದು ಕಾನೂನು ಬಾಹಿರವಾಗಿದೆ. ಆದ್ದರಿಂದ ಅಂಗಡಿಯವರು ಅಂಗಡಿ ಹೆಸರು ಮತ್ತು ಸೀಲ್ ಹಾಕಿ ಸಹಿ ಮಾಡಿ ಕೊಡಬೇಕೆಂದು ಹೇಳಿದರು.

ಗೊಬ್ಬರ ಖರೀದಿ ಮಾಡುವ ರೈತರಿಗೆ ಇಚ್ಛೆ ಇದ್ದರೆ ಮಾತ್ರ ಜಿಂಕ್ ನೀಡಬೇಕು. ಪ್ರತಿ ತಾಲೂಕಿನಲ್ಲಿ ಗೊಬ್ಬರ ಮಾರಾಟ ಮಾಡಲು ಅಂಗಡಿಗಳು ಪ್ರಾರಂಭವಾಗಿವೆ. ಆದರೆ ಅಂಗಡಿಕಾರರು ತಮ್ಮ ಲಾಭಕ್ಕಾಗಿ ನಮ್ಮ ಪಕ್ಕದ ತಾಲೂಕಿನ ರೈತರಿಗೆ ಬೀಜ ಗೊಬ್ಬರ ನೀಡುತ್ತಿರುವದರಿಂದ ಇವತ್ತು ನಮ್ಮ ತಾಲೂಕಿನ ರೈತರಿಗೆ ಬೀಜ ಮತ್ತು ಗೊಬ್ಬರ ಸಿಗದ ಪರಿಸ್ಥಿತಿ ಬಂದಿದೆ. ಆದ್ದರಿಂದ ಕೃಷಿ ಇಲಾಖೆಯ ಅಧಿಕಾರಿಗಳು ಅಂಗಡಿಯವರು ಬೇರೆ ತಾಲೂಕಿನ ರೈತರಿಗೆ ಬೀಜ ಮತ್ತು ರಾಸಾಯನಿಕ ಗೊಬ್ಬರ ಮಾರಾಟ ಮಾಡಿದರೆ ಅಂತವರ ಲೈಸೆನ್ಸ್ ರದ್ದು ಮಾಡಲು ಮುಂದಾಗಬೇಕೆಂದು ಆಗ್ರಹಿಸಿದರು.

ಕೃಷಿಸಹಾಯಕ ಅಧಿಕಾರಿ ಪ್ರವೀಣ ಪಾಟೀಲ ರೈತರ ಮನವಿ ಸ್ವೀಕರಿಸಿ ಕ್ರಮ ತೆಗೆದುಕೊಳ್ಳಲಾಗುವುದೆಂದು ಹೇಳಿದರು.

ಈ ವೇಳೆ ಟಿ.ಬಿ.ಶಿರಿಯಪ್ಪಗೌಡ್ರ, ಭರತೇಶ ಬೋಗಾರ, ಎಸ್ಪಿ ಶಿರಿಯಪ್ಪಗೌಡ್ರ, ಅನಂತಕುಮಾರ ಭೋಗಾರ, ಬಸಪ್ಪ ಅಳಗವಾಡಿ, ಹೇಮಣ್ಣ ಬೋಗಾರ, ತಿಮ್ಮರೆಡ್ಡಿ ವಾಸನ, ದೇವರಾಜ ನಾಗನೂರು, ಸೇರಿದಂತೆ ಮುಂತಾದವರು ಇದ್ದರು.



ಜ್ಞಾನ ವಿಕಾಸ ಕೇಂದ್ರ ಉದ್ಘಾಟನೆ

ಮುಂಡರಗಿ: ಗ್ರಾಮಾಭಿವೃದ್ಧಿ ಯೋಜನೆ ಬೆಳೆದು ಬಂದ ದಾರಿ, ಮಾತೃಶ್ರೀ ಡಾ.ಹೇಮಾವತಿ ವಿ.ಹೆಗಡೆ ಅವರ ಅಧ್ಯಕ್ಷತೆಯಲ್ಲಿ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮವು ಕರ್ನಾಟಕದ ರಾಜ್ಯದ ಎಲ್ಲ ಗ್ರಾಮಗಳಲ್ಲಿದ್ದು, ಮಹಿಳೆಯರ ಸಬಲೀಕರಣ, ಜ್ಞಾನ ವಿಕಾಸ ಕಾರ್ಯಕ್ರಮದ ಮೂಲ ಆಶಯವಾಗಿದೆ. ಕಣ್ಣುಗಳಿಲ್ಲದೆ ಬದುಕಬಹುದು ಕನಸುಗಳಿಲ್ಲದೆ ಬದುಕಲು ಸಾಧ್ಯವಿಲ್ಲ ಎಂಬ ಮಾತೃಶ್ರೀ ಹೇಮಾವತಿ ಅಮ್ಮನವರ ಮಾತಿನಂತೆ ಜ್ಞಾನ ವಿಕಾಸ ಕೇಂದ್ರ ಉತ್ತಮವಾಗಿ ಅನುಷ್ಠಾನವಾಗಲಿ ಎಂದು ಗದಗ ಜಿಲ್ಲಾ ನಿರ್ದೇಶಕ ಕೇಶವ ದೇವಾಂಗ ಮಾಹಿತಿ ನೀಡಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ತಾಲೂಕಿನ ರಾಮೇನಹಳ್ಳಿ ಗ್ರಾಮದಲ್ಲಿ ಶ್ರೀಲಕ್ಷ್ಮೀ ವೆಂಕಟೇಶ ಜ್ಞಾನ ವಿಕಾಸ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದರು.ಕ್ಷೇತ್ರ ಯೋಜನಾಕಾರಿ ವಿಶಾಲ ಮಲ್ಲಾಪುರ, ಮಹಿಳಾ ಸಾಂತ್ವನ ಕೇಂದ್ರದ ಆಪ್ತ ಸಮಾಲೋಚಕ ನಿಲ್ಲವ್ವ ಹೊಸಮನಿ ಮಾತನಾಡಿದರು. ವಲಯದ ಮೇಲ್ವಿಚಾರಕರ ರಾಜಪ್ಪ ಸ್ವಾಗತಿಸಿ,ನಿರೂಪಿಸಿದರು. ಜ್ಞಾನವಿಕಾಸ ಸಮನ್ವಯಕಾರಿ ಮಂಜುಳಾ ಜೈನ, ನ್ಯೂಡಲ್ ಅಧಿಕಾರಿ ಕಿರಣ್, ಸೇವಾಪ್ರತಿನಿಧಿ ಕವಿತಾ ಹಾಗೂ ಜ್ಞಾನವಿಕಾಸ ಸದಸ್ಯರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದ್ದರು.



ಸಿದ್ದನಗೌಡ ಪಾಟೀಲರ ಕಾರ್ಯ ಶ್ಲಾಘನೀಯ

ಗಜೇಂದ್ರಗಡ: ಸಹಕಾರಿ ಸಂಘ ಸ್ಥಾಪಿಸಿದಕಣಗಿನಹಾಳದಸಿದ್ದನಗೌಡ ಪಾಟೀಲ ಹೆಸರು ಅಜರಾಮರವಾಗಿ ಉಳಿಯಬೇಕೆಂದರೆ ಗದಗ ರೇಲ್ವೆ ನಿಲ್ದಾಣಕ್ಕೆ ನಾಮಕರಣ ಮಾಡುವಂತೆ ಶ್ರೀವೀರ ಸಂಗೊಳ್ಳಿ ರಾಯಣ್ಣ ಕೊ-ಆಪ್ ಕ್ರೆಡಿಟ್ ಸೊಸೈಟಿ ಅಧ್ಯಕ್ಷ ಎಚ್.ಎಸ್.ಸೋಂಪೂರ ಸರ್ಕಾರವನ್ನು ಒತ್ತಾಯಿಸಿದರು.

ನಗರದ ವೀರ ಸಂಗೊಳ್ಳಿ ರಾಯಣ್ಣ ಕೋ.ಆಫ್.ಕ್ರೇಡಿಟ್ ಸೊಸೈಟಿಯಲ್ಲಿ ನಡೆದ ಸಿದ್ದನಗೌಡ ಪಾಟೀಲ 184ನೇ ಜನ್ಮದಿನದ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೇರವೇರಿಸಿ ಮಾಡನಾಡಿ, 1905 ರಲ್ಲಿಯೇ ಬ್ರಿಟಿಷ್‌ರಲ್ಲಿ ಸಹಕಾರ ಸಂಘ ಸ್ಥಾಪಿಸಲು ಹಲವಾರು ಜನನ್ನು ಸಂಪರ್ಕಿಸಿದಾಗ ಯಾರೂ ಮುಂದೆ ಬರಲಿಲ್ಲ. ಆಗ ಕಣಗಿನಹಾಳ ಗ್ರಾಮದ ಸಿದ್ದನಗೌಡ ಪಾಟೀಲ ಅವರು ಮುಂದೆ ಬಂದರು. ಜತೆಗೆ ಗ್ರಾಮಸ್ಥರ ಪರವಾಗಿ ಮೂರು ಬೇಡಿಕೆ ಇಟ್ಟು, ಅವುಗಳನ್ನು ಈಡೇರಿಸಿದರೆ ಸಹಕಾರ ಸಂಘ ಸ್ಥಾಪನೆಗೆ ಭರವಸೆ ನೀಡಿದರು. ಆದರಂತೆ ಕಣಗಿನಹಾಳ ಗ್ರಾಮಕ್ಕೆ ರೈಲು ನಿಲ್ದಾಣ, ಗ್ರಾಮದಲ್ಲಿ ಸರ್ಕಾರಿ ಶಾಲೆ ಸ್ಥಾಪನೆಗೆ ಹಾಗೂ ಶಾಶ್ವತವಾಗಿ ಕುಡಿಯುವ ನೀರು ಪೂರೈಕೆ ಮಾಡಲು ಒಂದು ಬಾವಿಯನ್ನು ನಿರ್ಮಿಸಲಾಯಿತು. ಬಳಿಕ ಸಿದ್ದನಗೌಡ ಪಾಟೀಲರು ಮೇ 8 ರಂದು ಪ್ರಥಮ ಸಹಕಾರಿ ಸಂಘದ ನೊಂದಣಿ ಮಾಡಿಸಿದರು. ಅಂದಿನ ದಿನಗಳಲ್ಲಿ 2ಸಾವಿರ ಠೇವಣಿ ಇಟ್ಟು ಸಂಘವನ್ನು ಸ್ಥಾಪಿಸಿ ಸಹಕಾರ ರಂಗಕ್ಕೆ ಮುನ್ನುಡಿ ಬರೆದಿದ್ದು ಇತಿಹಾಸ ಎಂದರು.

ಈ ವೇಳೆ ಎಲ್‌ಐಸಿ ಅಭಿವೃದ್ಧಿ ಅಧಿಕಾರಿ ಶರಣಪ್ಪ ಕಂಬಳಿ, ಸೊಸೈಟಿ ಉಪಾಧ್ಯಕ್ಷ ಶರಣಪ್ಪ ರಂಗಣ್ಣವರ, ಶಂಕ್ರಪ್ಪ ಜೂಲಗುಡ್ಡ, ಮುತ್ತಪ್ಪ ಕೊಪ್ಪಳ, ಭೀಮಪ್ಪ ಜೂಲಗುಡ್ಡ, ಶರಣಪ್ಪ ದೊಣ್ಣೆಗುಡ್ಡ, ಸಂಗಪ್ಪ ಯಲಿಗಾರ, ಗಂಗಪ್ಪ ಗುಂಡೆ, ಬಸವರಾಜ ಗುಳಗುಳಿ, ಸಿದ್ದಪ್ಪ ಹಳ್ಳದ, ಬಸವರಾಜ ಅಗಸಿನಮುಂದಿನ, ಪ್ರಕಾಶ ಚಪ್ಪರದ, ಹುಸೇನಸಾಬ ಹುನಗುಂದ, ಬಿ.ಎಸ್.ಸಂಕನೂರ, ಎಸ್.ಎಚ್.ಜೂಲಗುಡ್ಡ ಸೇರಿದಂತೆ ಇತರರಿದ್ದರು.



ವಿವಾದಿತ ಲಾಡ್ಲೇ ಮಶಾಕ್ ದರ್ಗಾ ಗಲಾಟೆ ಪ್ರಕರಣ ವಾಪಸ್

ಶಿವಸೇನೆಯಿಂದ ಬೃಹತ್ ಪ್ರತಿಭಟನೆ



ಕಲಬುರಗಿ: 2022ರಲ್ಲಿ ಜಿಲ್ಲೆಯ ಆಳಂದ ಪಟ್ಟಣದ ವಿವಾದಿತ ಲಾಡ್ಲೇ ಮಶಾಕ್ ದರ್ಗಾದಲ್ಲಿನ ಶಿವಲಿಂಗ ಪೂಜೆವೇಳೆಪೊಲೀಸ್ ಅಧಿಕಾರಿ, ಜನಪ್ರತಿನಿಧಿಗಳಮೇಲೆ ನಡೆಸಿದ ಕಲ್ಲು ತೂರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಗಲಭೇಕೋರರ ಮೇಲೆ ದಾಖಲಾಗಿದ್ದ 8 ಕೇಸ್‌ಗಳನ್ನು ಕಾಂಗ್ರೆಸ್ ಸರ್ಕಾರ ಸಚಿವ ಸಂಪುಟ ಸಭೆಯಲ್ಲಿ ವಾಪಸ್ ಪಡೆದಿರುವುದನ್ನು ಖಂಡಿಸಿ ಸೋಮವಾರ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಶಿವಸೇನೆ ಪಕ್ಷದಿಂದ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಸರ್ದಾರ್ ವಲ್ಲಭಭಾಯಿ ಪಟೇಲ್ ವೃತ್ತದಿಂದ ಡಿಸಿ ಕಚೇರಿಗೆ ಪಾದಯಾತ್ರೆ ಮೂಲಕ ಆಗಮಿಸಿ ರಾಜ್ಯ ಸರ್ಕಾರದ ನಡೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ,ಸರ್ಕಾರದ ತುಷ್ಟೀಕರಣ ನೀತಿ ವಿರುದ್ಧ ಧಿಕ್ಕಾರ ಕೂಗಿ ಮಾತನಾಡಿದ ಶಿವಸೇನೆ ಪಕ್ಷದ ರಾಜ್ಯಾಧ್ಯಕ್ಷ ಸಿದ್ದಲಿಂಗ ಸ್ವಾಮೀಜಿ, ರಾಜ್ಯ ಸರ್ಕಾರ ಕಳೆದ ಗುರುವಾರ ನಡೆಸಿದ ತನ್ನ ಸಚಿವ ಸಂಪುಟ ಸಭೆಯಲ್ಲಿ ರಾಜ್ಯದ ಪೊಲೀಸರ ಮೇಲೆ, ಕಲಬುರಗಿ ಜಿಲ್ಲಾಧಿಕಾರಿ, ಕೇಂದ್ರ ಸಚಿವರ ಮೇಲೆ ನಡೆಸಿದ ಕಲ್ಲು ತೂರಾಟದ ವಿರುದ್ಧ ದಾಖಲಾಗಿರುವ ಕೇಸ್ ವಾಪಸ್ ಪಡೆದಿರುವುದು ತಪ್ಪು ನಿರ್ಧಾರ. ಶಾಂತ ವಾತಾವರಣದಲ್ಲಿದ್ದ ಆಳಂದನಲ್ಲಿ ಗಲಭೆ ಎಬ್ಬಿಸಿದ ಗಲಭೇಕೋರರ ಮೇಲಿನ ಕೇಸುಗಳನ್ನು ವಾಪಸ್ ಪಡೆಯುತ್ತಿರಿ ಎಂದರೆ, ನೀವು ಯಾವ ರೀತಿ ಸರ್ಕಾರ ನಡೆಸುತ್ತಿದ್ದಿರಾ ಎಂದು ಪ್ರಶ್ನಿಸಿದರು.

ಸ್ಪೀಕರ್ ಯುಟಿ ಖಾದರ್,ಸಚಿವ ಪ್ರಿಯಾಂಕ್ ಖರ್ಗೆ, ಶಾಸಕಿ ಕನೀಜ್ ಫಾತಿಮಾ ಹಾಗೂ ಆಳಂದ ಶಾಸಕ ಬಿ.ಆರ್.ಪಾಟೀಲ್ ಶಿಫಾರಸು ಮೇರೆಗೆ 2022ರಲ್ಲಿ ಶಾಂತಿ ಭಂಗ ಮಾಡಿ ಸಮಾಜದಲ್ಲಿ ದಂಗೆ ಎಬ್ಬಿಸಿದವರ ಮೇಲೆ ದಾಖಲಾದ ಪ್ರಕರಣಗಳನ್ನು ವಾಪಸ್ ಪಡೆದಿದ್ದು ಮುಸ್ಲಿಂರಿಗೆ ಮೆಚ್ಚಿಸುವ ಕೆಲಸವಾಗಿದೆ.

ರಾಜ್ಯದಲ್ಲಿರುವ ಸಿಎಂ ಸಿದ್ದರಾಮಯ್ಯ ಸರ್ಕಾರ ಗೂಂಡಾಗಿರಿ ಮಾಡುವವರಿಗೆ ಬೆಂಬಲ ನೀಡುತ್ತಿದೆ. ಸಮಾಜದಲ್ಲಿ ಅಶಾಂತಿ ಉಂಟು ಮಾಡುವ ಶಕ್ತಿಗಳನ್ನು ಸದೆಬಡೆಯುವ ಬದಲು ಅವರ ರಕ್ಷಣೆಗೆ ನಿಂತಿರುವುದು ಯಾವ ಕಾರಣಕ್ಕೆ ಎಂದ ಅವರು, ಕೂಡಲೇ ಕೇಸ್ ವಾಪಸ್ ನಿರ್ಧಾರ ಹಿಂಪಡೆಯಬೇಕು. ಇಲ್ಲವಾದರೇ ಹೈಕೋರ್ಟ್ ಮೆಟ್ಟಿಲೇರಲಾಗುವುದು ಎಂದು ಎಚ್ಚರಿಸಿದರು.

> ಕೇವಲ ಮುಸ್ಲಿಂ ತುಷ್ಟೀಕರಣಕ್ಕಾಗಿ ಆಡಳಿತಕ್ಕೆ ಬಂದ ಕಾಂಗ್ರೆಸ್ ಸರ್ಕಾರ, ಭಂಡರಿಗೆ, ಭಯೋತ್ಪಾದಕರಿಗೆ ರಕ್ಷಣೆ ನೀಡುತ್ತಿದೆ. ಕೋಮುಗಲಭೆ, ಜಿಹಾದ್ ಬೇಕಾದ್ದನ್ನು ಮಾಡಿ ಎಂಬ ಸಂದೇಶವನ್ನು ಸಚಿವ ಸಂಪುಟದಿಂದ ನೀಡಿದೆ. ಇದರ ಪರಿಣಾಮ ನಿನ್ನೆಯಷ್ಟೇ ಭಟ್ಕಳದಲ್ಲಿ ಹಿಂದೂ ದೇವಾಲಯ ಒಡೆದು ಅಟ್ಟಹಾಸ ಮೆರೆದಿದ್ದಾರೆ. ಈ ರೀತಿ ಕಾಂಗ್ರೆಸ್ ಸಲಿಗೆಯಿಂದಲೇ ರಾಜ್ಯದಲ್ಲಿ ಮುಸ್ಲಿಂ ಗೂಂಡಾಗಳು ಹಿಂದುಗಳ ಮೇಲೆ ದಾಳಿ ದೌರ್ಜನ್ಯ ನಡೆಸುತ್ತಿದ್ದಾರೆ.
>
> ■ **ಸಿದ್ದಲಿಂಗ ಸ್ವಾಮೀಜಿ,** ಶಿವಸೇನೆ ರಾಜ್ಯಾಧ್ಯಕ್ಷ

ಬಿಜೆಪಿ ಮುಖಂಡ ಹರ್ಷ ಗುತ್ತೇದಾರ್ ಮಾತನಾಡಿ, ವ್ಯವಸ್ಥಿತವಾಗಿ ಸಂಚು ರೂಪಿಸಿ ಶಿವಲಿಂಗ ಪೂಜೆ ವೇಳೆ ಕಲ್ಲು ತೂರಾಟ ನಡೆಸಿರುವ ಗಲಭೇಕೋರರ ಮೇಲಿನ ಕೇಸ್ ವಾಪಸ್ ಪಡೆದಿರುವುದು ಮುಕ್ತವಾಗಿ ಮುಂದಿನ ದಿನಗಳಲ್ಲಿ ಮತ್ತಷ್ಟು ಗಲಭೆ ನಡೆಸಲು ಗಲಭೇಕೋರರಿಗೆ ಪ್ರಚೋದನೆ ನೀಡಿದಂತಾಗಿದೆ. ಸರ್ಕಾರ ಕೇವಲ ಮುಸ್ಲಿಂರಿಗೆ ಖುಷಿ ಪಡಿಸುವ ಕೆಲಸ ಮಾಡುತ್ತಿರುವುದು ಖಂಡನೀಯವಾಗಿದೆ. ಕೂಡಲೇ ವಾಪಸ್ ಪಡೆದ ಕೇಸ್ ಹಿಂಪಡೆಯಬೇಕು ಇಲ್ಲವಾದರೆ ಕಾನೂನಿನ ಮೊರೆ ಹೋಗಲಾಗುವುದು ಎಂದು ಹೇಳಿದರು.

> ದಾವಣಗೆರೆಯಲ್ಲಿ ಮುಸ್ಲಿಂರಿಗೆ ಟಿಕೆಟ್ ನೀಡಲಿಲ್ಲ ಎಂದು ಕೋಪಗೊಂಡವರಿಗೆ ಸಮಾಧಾನ ಪಡಿಸಲು ಹಾಗೂ ಮುಸ್ಲಿಂ ಓಲೈಕೆಗಾಗಿ ಪ್ಲ್ಯಾನ್ ಮಾಡಿ ಮುಸ್ಲಿಂರ ಮೇಲಿನ ಕೇಸ್ ವಾಪಸ್ ಪಡೆಯಲು ನಿರ್ಧರಿಸಲಾಗಿದೆ. ಕೇಸ್ ಹಿಂಪಡೆಯದಿದ್ದರೆ ನಾವು ಕಾನೂನು ಹೋರಾಟಕ್ಕೆ ಸಿದ್ಧರಾಗಲಿದ್ದೇವೆ.
>
> ■ **ಹರ್ಷಾ ಗುತ್ತೇದಾರ್,** ಬಿಜೆಪಿ ಮುಖಂಡ

ಪ್ರತಿಭಟನೆಯಲ್ಲಿ ಪಾಳಾ ಶ್ರೀಗಳು ಮಾತನಾಡಿದರು. ಮಿಣಜಗಿ ಶ್ರೀಗಳು,ಓಂಕಾರ್ ಶ್ರೀಗಳು, ಬೆಣ್ಣೂರ ಶ್ರೀಗಳು, ಬಿಜೆಪಿ ಮಹಿಳಾ ಮೋರ್ಚಾದ ಭಾಗೀರಥಿ ಗುನ್ನಾಪುರ, ಎಂ.ಎಸ್.ಪಾಟೀಲ್ ನರಿಬೋಳ,ಶಿವಸೇನೆ ಜಿಲ್ಲಾಧ್ಯಕ್ಷ ಗುರುಶಾಂತ ಟೆಂಗಳಿ,ಯುವ ಘಟಕದ ಅಧ್ಯಕ್ಷ ರಾಕೇಶ ಜಮಾದಾರ,ಮಲ್ಲಣ್ಣ ಹಿರೇಪೂಜಾರಿ, ಮಡಿವಾಳಪ್ಪ ಅಮರಾವತಿ,ಮಲ್ಲನಗೌಡ ಮಾಲಿ ಪಾಟೀಲ್,ರೋಹಿತ್ ಪಿಸ್ಕೆ,ಚೆನ್ನರೆಡ್ಡಿಗೌಡ, ಶಿವರಾಜ್ ಬಾಳಿ,ಸುರೇಶ್ ತಳವಾರ, ಮಹೇಶ್ ಗೌಳಿ,ಪ್ರದೀಪ ಹೇರೂರು,ಭಗವಂತ ನೆಲೋಗಿ. ಭಾಗ್ಯವಂತ ಯಡ್ರಾಮಿ ಸೇರಿದಂತೆ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

ಮುಸ್ಲಿಂ ಉದ್ರಿಕ್ತ ಗುಂಪಿನಿಂದ ಮೂರಿನಕಟ್ಟೆ ಮೇಲೆ ದಾಳಿ

ಹಿಂದೂ ಸಂಘಟನೆಯಿಂದ ಆಕ್ರೋಶ

ಭಟ್ಕಳ: ಪಟ್ಟಣದ ನವಾಯತ್ ಕಾಲೋನಿ ಸನಿಹದ ರಾಷ್ಟ್ರೀಯ ಹೆದ್ದಾರಿ ಪಕ್ಕದ ಮಾರಿ ಒಜ್ಜೆ ಇಡುವ ಪ್ರದೇಶವಾದ ಮೂರಿನಕಟ್ಟೆಯಲ್ಲಿ ಭಾನುವಾರ ಬೆಳಗ್ಗೆ ನಿರ್ಮಿಸಿದ ಮುರಿನಕಟ್ಟೆಯನ್ನು ಮುಸ್ಲಿಂ ಉದ್ರಿಕ್ತ ಗುಂಪೊಂದು ಧ್ವಂಸಗೊಳಿಸಿದ್ದರಿಂದ ತೀವ್ರ ಆಕ್ರೋಶಗೊಂಡ ಹಿಂದೂ ಸಂಘಟನೆಯವರು ಭಾನುವಾರ ತಡರಾತ್ರಿಯವರೆಗೂ ನಗರ ಠಾಣೆಯಲ್ಲಿ ಧರಣಿ ನಡೆಸಿ ತೀವ್ರ ಆಕ್ರೋಶ ವ್ಯಕ್ತಪಡಿಸಿತು.



ಮಾಜಿ ಶಾಸಕ ಸುನೀಲ ನಾಯ್ಕ, ಬಿಜೆಪಿ ಪ್ರಮುಖರಾದ ಗೋವಿಂದ ನಾಯ್ಕ, ಶ್ರೀಕಾಂತ ನಾಯ್ಕ ಮತ್ತು ಹಿಂದೂ ಸಂಘಟನೆಯ ಪ್ರಮುಖರು, ಕಾರ್ಯರ್ತರು ಬೆಳಗ್ಗೆ ನಿರ್ಮಿಸಲಾದ ಮೂರಿನಕಟ್ಟೆಯನ್ನು ಪೊಲೀಸರ ಎದುರೇ ಧ್ವಂಸಗೊಳಿಸಿರುವುದಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಮೂರಿನಕಟ್ಟೆ ಪ್ರದೇಶಕ್ಕೆ ಇತಿಹಾಸ ಇದೆ. ಇದೊಂದು ಹಿಂದೂಗಳ ಧಾರ್ಮಿಕ ಭಾವನೆ ಇರುವ ಪ್ರದೇಶವಾಗಿದೆ. ಇಲ್ಲಿ ಬೇರೆ ಬೇರೆ ಊರಿನಿಂದ ಮಾರಿಯಮ್ಮನ ಹೊರೆ ಬಂದು ಕುಳಿತುಕೊಳ್ಳುತ್ತದೆ. ಇದೊಂದು ಧಾರ್ಮಿಕ ಭಾವನಾತ್ಮ ಪ್ರದೇಶವಾಗಿದ್ದು, ಇದನ್ನು ಪೊಲೀಸ್ ಅಧಿಕಾರಿಗಳ ಎದುರೇ ಧ್ವಂಸ ಮಾಡಿದ್ದಾರೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು. ಅವರನ್ನು ಬಂಧಿಸಬೇಕು ಎಂದು ಆಗ್ರಹಿಸಿದರು.

ಪೊಲೀಸ್ ಅಧಿಕಾರಿಗಳು ಸಮಾಧಾನಿಸಲು ಯತ್ನಿಸಿದರೂ ಸಹ ಹಿಂದೂ ಮುಖಂಡರು, ಕಾರ್ಯಕರ್ತರು ಮೂರಿನಕಟ್ಟೆ ಧ್ವಂಸದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿ ಕಟ್ಟೆ ಪುನರ್ ನಿರ್ಮಾಣ ಮಾಡಿಕೊಡಬೇಕು. ಇಲ್ಲವೇ ಕಟ್ಟೆಯನ್ನು ನಾವೇ ಪುನರ್ ನಿರ್ಮಾಣ ಮಾಡುತ್ತೇವೆಂದು ಹೇಳಿದರು.

ನಂತರ ತಡರಾತ್ರಿ 2.30ರ ಸುಮಾರಿಗೆ ಮೂರಿನಕಟ್ಟೆ ಪ್ರದೇಶಕ್ಕೆ ತೆರಳಿದ ಸುಮಾರು 15ಕ್ಕೂ ಅಧಿಕ ಹಿಂದೂ ಸಂಘಟನೆ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿರುವುದಾಗಿ ತಿಳಿದು ಬಂದಿದೆ.

ಇದಕ್ಕೂ ಪೂರ್ವದಲ್ಲಿ ಮೂರಿನಕಟ್ಟೆ ಪ್ರದೇಶದಲ್ಲಿ ಭಾನುವಾರ ರಾತ್ರಿ 8.30 ಗಂಟೆಗೆ ನೂರಾರು ಮುಸ್ಲಿಮರು ಸೇರಿ ಕಟ್ಟೆ ನಿರ್ಮಾಣಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಭಾನುವಾರ ಬೆಳಗ್ಗೆ ನಿರ್ಮಿಸಿದ ಮೂರಿನಕಟ್ಟೆಯ ಕಲ್ಲನ್ನು ಕಬ್ಬಿಣದ ರಾಡಿನಿಂದ ಗುಂಪಿನಲ್ಲಿದ್ದ ಕೆಲವರು ದೂಡಿ ಹಾಕಿದರು.

ಪೊಲೀಸರ ಪಥಸಂಚಲನ

ಪಟ್ಟಣದಲ್ಲಿ ಮೂರಿನಕಟ್ಟೆ ವಿವಾದದಿಂದ ಬಿಸಿ ವಾತಾವರಣ ನಿರ್ಮಾಣವಾದ ಹಿನ್ನೆಲೆಯಲ್ಲಿ ಪೊಲೀಸರು ಪಟ್ಟಣದಲ್ಲಿ ಸೋಮವಾರ ಸಂಜೆ ಪಥಸಂಚಲನ ನಡೆಸಿ ಜನರಲ್ಲಿ ಧೈರ್ಯ ತುಂಬಿದರು.

ಮುರಿನಕಟ್ಟೆಗೆ ಬಿಗಿ ಬಂದೋಬಸ್ತ್

ಪಟ್ಟಣದ ನವಾಯತ್ ಕಾಲೋನಿಯ ಮೂರಿನಕಟ್ಟೆ ವಿವಾದಿತ ಪ್ರದೇಶವಾಗಿದ್ದರಿಂದ ಮುಂಜಾಗ್ರತಾ ಕ್ರಮವಾಗಿ ಸ್ಥಳದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಹಾಕಲಾಗಿದೆ. ಸ್ಥಳದಲ್ಲಿ ಬ್ಯಾರಿಕೇಡ್ ಹಾಕಿ ಬಂದೋಬಸ್ತ್ ಮಾಡಲಾಗಿದೆ. ಸ್ಥಳದಲ್ಲಿ ಪೊಲೀಸರು ತೀವ್ರ ನಿಗಾ ಇಟ್ಟಿದ್ದಾರೆ. ಹೊರಗಿನಿಂದ ಬಂದ ಡಿವೈಎಸ್ಪಿ, ಸಿಪಿಐ, ಪಿಎಸ್‌ಐಗಳನ್ನು ಇಲ್ಲಿ ಬಂದೋಬಸ್ತ್‌ಗೆ ನಿಯೋಜಿಸಲಾಗಿದೆ.

ಎಸ್ಪಿ ದೀಪನ್, ಇನ್ಸಪೆಕ್ಟರ್ ದಿವಾಕರ ಜೊತೆ ಕಟ್ಟೆ ನಿರ್ಮಾಣದ ಬಗ್ಗೆ ತೀವ್ರ ಚರ್ಚೆ ನಡೆಸಿದರು. ಕೆಲವರು ದೊಡ್ಡದಾಗಿ ಬೊಬ್ಬೆ ಹೊಡೆದರು.

ಈ ಸಂದರ್ಭದಲ್ಲಿ ಕೆಲವರು ಹೆದ್ದಾರಿ ತಡೆ ಮಾಡಿ ವಾಹನ ಸಂಚಾರ ಅಸ್ತವ್ಯಸ್ಥ ಆಗುವಂತೆ ಮಾಡಿದರು. ಸ್ಥಳದಲ್ಲಿ ಒಂದು ರೀತಿಯ ಗೊಂದಲ ವಾತಾವರಣ

ಕಿರುಸುದ್ದಿ

2026ನೇ ಸಾಲಿನ ವಿಭಾ ಸಾಹಿತ್ಯ ಪ್ರಶಸ್ತಿಗೆ ಕಾವ್ಯ ಹಸ್ತಪ್ರತಿ ಆಹ್ವಾನ

ಹುಬ್ಬಳ್ಳಿ: ಕನ್ನಡ ಕವಯಿತ್ರಿ ವಿಭಾ ಅವರ ನೆನಪಿನಲ್ಲಿ 'ವಿಭಾ ಸಾಹಿತ್ಯ ಪ್ರಶಸ್ತಿ–2026'ಕ್ಕಾಗಿ ಕನ್ನಡದ ಕವಿ, ಕವಿಯಿತ್ರಿಯರಿಂದ ಮೂವತ್ತಕ್ಕೂ ಹೆಚ್ಚು ಐವತ್ತರ ಒಳಗಿರುವ ಸ್ವರಚಿತ ಕವಿತೆಗಳ ಹಸ್ತಪ್ರತಿಗಳನ್ನು ಆಹ್ವಾನಿಸಲಾಗಿದೆ.



ಅನುವಾದಿತ ಕವಿತೆಗಳು ಬೇಡ. ಚುಟುಕು, ಹನಿಗವನಗಳು ಬೇಡ. ಈ ಪ್ರಶಸ್ತಿಯು ರೂ. 10,000 ನಗದು ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. ಆಸಕ್ತರು ತಮ್ಮ ಹೊಸ ಕವಿತೆಗಳ ಹಸ್ತಪ್ರತಿಯನ್ನು ಸ್ಪರ್ಧೆಗೆ ಕಳುಹಿಸಲು ವಿನಂತಿಸಲಾಗಿದೆ. ಯಾವುದೇ ಕಾರಣಕ್ಕೂ ಹಸ್ತಪ್ರತಿಯನ್ನು ಹಿಂದಿರುಗಿಸಲಾಗುವುದಿಲ್ಲ. ಮೇಲ್ ಮೂಲಕ ಕಳಿಸುವದಕ್ಕಿಂತ ಡಿಟಿಪಿ ಮಾಡಿದ ಹಸ್ತಪ್ರತಿ ಕಳಿಸಿಕೊಡಬೇಕು. ಬರವಣಿಗೆ ಮಾಡಿದ ಹಸ್ತಪ್ರತಿಯನ್ನೂ ಕಳಿಸಬಹುದು. ಹಸ್ತಪ್ರತಿ ಕಳುಹಿಸಲು ಕೊನೆಯ ದಿನಾಂಕ ಜೂನ್ 30. ಹಸ್ತಪ್ರತಿಯನ್ನು ಕಳುಹಿಸಬೇಕಾದ ವಿಳಾಸ ಸುನಂದಾ ಪ್ರಕಾಶ ಕಡಮೆ ಸಂಚಾಲಕರು, ವಿಭಾ ಸಾಹಿತ್ಯ ಪ್ರಶಸ್ತಿ–2026 ನಂ. 90, 'ನಾಗಸುಧೆ ಜಗಲಿ' 6/ಬಿ ಕ್ರಾಸ್, ಕಾಳಿದಾಸನಗರ, ವಿದ್ಯಾನಗರ ವಿಸ್ತೀರ್ಣ ಹುಬ್ಬಳ್ಳಿ–580031 ದೂರವಾಣಿ; 9380613683, 9845779387 ಸಂಪರ್ಕಿಸಬಹುದು ಎಂದು ವಿಭಾ ಸಾಹಿತ್ಯ ಪ್ರಶಸ್ತಿ–2026 ಸಂಚಾಲಕರಾದ ಸುನಂದಾ ಪ್ರಕಾಶ ಕಡಮೆ ತಿಳಿಸಿದ್ದಾರೆ.

ಲಕ್ಕುಂಡಿಯಲ್ಲಿ ಚಾಲುಕ್ಯ ಚಕ್ರವರ್ತಿ 2ನೇ ಜಗದೇಕಮಲ್ಲನ ಆಳ್ವಿಕೆ ಸೂಚಿಸುವ ಶಾಸನ ಪತ್ತೆ

ಗದಗ: 101 ಬಾವಿ, 101 ದೇವಾಲಯಗಳಿಗೆ ಪ್ರಸಿದ್ಧಿ ಹೊಂದಿರುವ ಐತಿಹಾಸಿಕ ಲಕ್ಕುಂಡಿ ಕಟ್ಟಿಹಳ್ಳದಲ್ಲಿ 13 ಸಾಲುಗಳುಳ್ಳ ಶಾಸನವು ಪತ್ತೆಯಾಗಿರುವುದು ಕುತೂಹಲ ಮೂಡಿಸಿದೆ.

ಲಕ್ಕುಂಡಿಯಲ್ಲಿ ನಡೆಯುತ್ತಿರುವ ಪ್ರಾಚ್ಯಾವಶೇಷಗಳ ಅನ್ವೇಷಣೆಯಲ್ಲಿ ಸೋಮವಾರ ಲಕ್ಕುಂಡಿಯ ರಾಷ್ಟ್ರೀಯ ಹೆದ್ದಾರಿಯ ಬಲಗಡೆ ಇರುವ ಬಟ್ಟೂರು ಮತ್ತು ಕವಲೂರ ಅವರಿಗೆ ಸೇರಿದ ಜಮೀನಿನ ಹತ್ತಿರದ ಕಟ್ಟಿಹಳ್ಳದ ಪಕ್ಕದಲ್ಲಿ 13 ಸಾಲುಗಳನ್ನು ಹೊಂದಿರುವ ಹೊಸ ಶಾಸನ ದೊರೆತಿದ್ದು, ಇದನ್ನು ಬಸಪ್ಪ ಮುಸುಕಿನಬಾವಿ ಎಂಬುವರು ತೋರಿಸಿದ್ದಾರೆ.

ಕನ್ನಡ ಲಿಪಿ ಮತ್ತು ಭಾಷೆಯಲ್ಲಿರುವ ಶಾಸನವಾಗಿದ್ದು, 13 ಸಾಲುಗಳನ್ನು ಒಳಗೊಂಡಿದೆ. ಚಾಲುಕ್ಯ ಪ್ರಶಸ್ತಿಯನ್ನು ಹೆಸರಿಸುವ ಈ ಶಾಸನವು ಚಾಲುಕ್ಯ ಚಕ್ರವರ್ತಿ 2ನೇ ಜಗದೇಕಮಲ್ಲನ ಆಳ್ವಿಕೆಯನ್ನು ಸೂಚಿಸುತ್ತಿದೆ.ಇದರಲ್ಲಿ ಕುಂತಳನಾಡು. ಮಾಸವಾಡಿ ಆಡಳಿತ ಘಟಕಗಳ ಉಲ್ಲೇಖವಿದ್ದು, 2ನೇ ಜಗಮಲ್ಲದೇವನ ಒಬ್ಬ ಮಹಾಮಂಡಳೇಶ್ವರನ ಪ್ರಶಸ್ತಿಯನ್ನು ಹೊಗಳಿದೆ. ಆದರೆ, ಅವನ ಹೆಸರು ಲಭ್ಯವಿಲ್ಲ. ಶಾಸನದ ಭಾಗ ಬಹುತೇಕ ತುಂಡಾಗಿ ಕಳೆದು ಹೋಗಿರುವುದರಿಂದ ಹೆಚ್ಚಿನ ವಿವರಗಳು ಲಭ್ಯವಾಗಿಲ್ಲ.

ಶಾಸನದ ಆರಂಭದಲ್ಲಿ ಶಿವಸ್ತುತಿ ಇರುವುದರಿಂದ ಇದು ಶಿವಾಲಯಕ್ಕೆ ಭೂದಾನ ಕೊಟ್ಟ ಶಾಸನವಾಗಿರಬಹುದು. ಈ ತುಂಡು

12ನೇ ಶತಮಾನದ 13 ಸಾಲುಗಳುಳ್ಳ ಶಾಸನ ಪತ್ತೆ



ಶಾಸನದ ಸ್ಪಷ್ಟವಾದ ಕಾಲ ಲಭ್ಯವಿಲ್ಲ. ಜಗದೇಕಮಲ್ಲನ ಆಳ್ವಿಕೆಯ ಕಾಲ ಕ್ರಿಶ 1139–1149. ಹಾಗಾಗಿ ಜಗದೇಕಮಲ್ಲನ ಹತ್ತು ವರ್ಷದ ರಾಜ್ಯಾಡಳಿತದ ಅವಧಿಯಲ್ಲಿ ಈ ಶಾಸನ ರಚನೆಯಾಗಿದೆ ಎನ್ನಬಹುದಾಗಿದೆ.

ಲಿಪಿದೃಷ್ಟಿಯಿಂದಶಾಸನದಕಾಲವನ್ನು12ನೇ ಶತಮಾನದ ರಚನೆ ಎಂದೂ ಹೇಳಬಹುದು ಎಂದು ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಶರಣು ಗೋಗೇರಿ ಹಾಗೂ ರಾಜ್ಯ ಸಲಹಾ ಸಮಿತಿ ಸದಸ್ಯ ಸಿದ್ದು ಪಾಟೀಲ ಮಾಹಿತಿ ನೀಡಿದ್ದಾರೆ.

ಟಿಬಿ ಡ್ಯಾಂ ಕ್ರಸ್ಟ್ ಗೇಟ್‌ಗಳ ಚೈನ್ ಅಳವಡಿಕೆ ಕಾರ್ಯ ಚುರುಕು

ಕಾಮಗಾರಿ ಶೀಘ್ರ ಪೂರ್ಣ: ಶಾಸಕ ಗವಿಯಪ್ಪ

ವಿಜಯನಗರ: ತುಂಗಭದ್ರಾ ಜಲಾಶಯದ ಸುರಕ್ಷತೆ ಮತ್ತು ಗೇಟ್‌ಗಳ ಆಧುನೀಕರಣ ಕಾರ್ಯ ಸದ್ಯ ತೀವ್ರಗತಿಯಲ್ಲಿ ಸಾಗುತ್ತಿದ್ದು, ಜೂನ್ ಮೂರನೇ ವಾರದೊಳಗಾಗಿ ಎಲ್ಲ 33 ಗೇಟ್‌ಗಳ ಚೈನ್ ಅಳವಡಿಕೆ ಕಾರ್ಯ ಪೂರ್ಣಗೊಳ್ಳಲಿದೆ.

ತುಂಗಭದ್ರಾ ಜಲಾಶಯದ ಕ್ರಸ್ಟ್ ಗೇಟ್‌ಗಳ ಲಿಂಕ್ ಚೈನ್ ಅಳವಡಿಕೆ ಕಾರ್ಯವನ್ನು ಜಲಾಶಯದ ತಾಂತ್ರಿಕ ತಂಡ, ಟಿಬಿ ಬೋರ್ಡ್ ಹಾಗೂ ಕಾಡಾ ಅಧಿಕಾರಿಗಳೊಂದಿಗೆ ಜಂಟಿ ಪರಿಶೀಲನೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಜಲಾಶಯದ ಎಲ್ಲಾ 33 ಗೇಟ್‌ಗಳ ಪ್ರಾಥಮಿಕ ಕೆಲಸಗಳು ಮುಗಿದಿದ್ದು, ಎರಡು ಗೇಟ್‌ಗಳಿಗೆ ಚೈನ್ ಅಳವಡಿಸಲಾಗಿದೆ. ಮೇ ತಿಂಗಳ ಅಂತ್ಯಕ್ಕೆ 15 ಗೇಟ್‌ಗಳ ಕೆಲಸ ಮುಗಿಯಲಿದ್ದು, ಜೂನ್ 15ರಿಂದ 20 ರೊಳಗಾಗಿ ಇನ್ನುಳಿದ ಎಲ್ಲಾ ಗೇಟ್‌ಗಳ ಚೈನ್ ಫಿಕ್ಸ್ ಮಾಡಲಾಗುವುದು ಎಂದು ತಿಳಿಸಿದರು.



ಜಲಾಶಯಕ್ಕೆ ಅಳವಡಿಸುತ್ತಿರುವ ಒಂದೊಂದು ಚೈನ್ ಸುಮಾರು 1.8 ರಿಂದ 1.9 ಟನ್ ತೂಕ ಹೊಂದಿದ್ದು, ಪ್ರತಿ ಗೇಟ್‌ಗೆ ಎರಡು ಚೈನ್‌ಗಳ ಅವಶ್ಯಕತೆ ಇರುತ್ತದೆ. ಜಲಾಶಯದ ಗೇಟಿನ ತೂಕವೇ ಸುಮಾರು 50 ಟನ್ ಇರಲಿದ್ದು, ಚೈನ್ ಸೇರಿದಂತೆ ಒಟ್ಟು ತೂಕ 55 ಟನ್ ತಲುಪುತ್ತದೆ. ಇದರೊಂದಿಗೆ ತುಕ್ಕು ಹಿಡಿದಿದ್ದ ಮೇಲ್ಭಾಗದ ಇತರೆ ಯಂತ್ರೋಪಕರಣಗಳನ್ನೂ ಸಹ ಹೊಸದಾಗಿ ಬದಲಾಯಿಸಲಾಗುತ್ತಿದೆ. ಆಧುನೀಕತೆಯ ಕಾಮಗಾರಿಯಿಂದ ಜಲಾಶಯದ ಆಯಸ್ಸು 30–40 ವರ್ಷಗಳಿಗೆ ಹೆಚ್ಚಲಿದೆ ಎಂದು ಮಾಹಿತಿ ನೀಡಿದರು.

ಸುರಕ್ಷತಾ ವರದಿ ಬಹಿರಂಗಕ್ಕೆ ಒತ್ತಾಯ: ಕಳೆದ ಮೂರ್ನಾಲ್ಕು ವರ್ಷಗಳ ಹಿಂದೆಯೇ ಜಲಾಶಯದ ಸಂಪೂರ್ಣ ಸುರಕ್ಷತಾ ಸರ್ವೆ ನಡೆಸಲಾಗಿದ್ದು, ಸೋರಿಕೆಯಾಗುತ್ತಿದ್ದ ಜಾಗಗಳಲ್ಲಿ ಗ್ರೌಟಿಂಗ್ ಮಾಡಲಾಗಿದೆ. ಜಲಾಶಯಕ್ಕೆ ಇನ್ನು 40 ವರ್ಷ ಏನೂ ಆಗುವುದಿಲ್ಲ ಎಂದು ಬೋರ್ಡ್ ಭರವಸೆ ನೀಡಿದೆ. ಆದರೆ, ಈ ವರದಿಯನ್ನು ಟಿಬಿ ಬೋರ್ಡ್ ಬಹಿರಂಗಪಡಿಸುತ್ತಿಲ್ಲ ಎಂಬ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಅವರು, ಈ ವಿಷಯ ಕುರಿತು ಉಪಮುಖ್ಯಮಂತ್ರಿ ಹಾಗೂ ನೀರಾವರಿ ಸಚಿವರಾದ ಡಿ.ಕೆ. ಶಿವಕುಮಾರ್ ಅವರೊಂದಿಗೆ ಮಾತನಾಡಿ ಶೀಘ್ರದಲ್ಲೇ ವರದಿ ತರಿಸಿಕೊಂಡು ಪರಿಶೀಲಿಸಲಾಗುವುದು ಎಂದರು.

ಹದಗೆಟ್ಟ ಹುಲಗಬಾಳ ರಸ್ತೆ | ಹೊಸದಿಗಂತ ವರದಿಗೆ ಸ್ಪಂದನೆ

ಮಾಹಿತಿ ಕೇಳಿದ ಮುಖ್ಯಮಂತ್ರಿ ಕಾರ್ಯಾಲಯ

ಹುಬ್ಬಳ್ಳಿ: ಅಥಣಿ ತಾಲೂಕಿನ ಹಲ್ಯಾಳದ ಹುಲಗಬಾಳ ಗ್ರಾಮದಿಂದ ಐನಾಪುರ ರಸ್ತೆ ಮತ್ತು ಸಂಗಮೇಶ್ವರ ದೇವಸ್ಥಾನಕ್ಕೆ ಹೋಗುವ ರಸ್ತೆ ಹದಗೆಟ್ಟಿರುವ ಕುರಿತಾಗಿ ತಕ್ಷಣ ಪರಿಶೀಲನೆ ನಡೆಸಿ ವರದಿ ನೀಡುವಂತೆ ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿ ಡಾ. ಕೆ.ವೈಷ್ಣವಿ ಬೆಳಗಾವಿ ಜಿ.ಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ನಿರ್ದೇಶನ ನೀಡಿದ್ದಾರೆ.

"ಹದಗೆಟ್ಟ ಹುಲಗಬಾಳ ರಸ್ತೆ" ಶೀರ್ಷಿಕೆಯಲ್ಲಿ 13.05.2026ರಂದು ಹೊಸದಿಗಂತ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ವರದಿಯ ಹಿನ್ನೆಲೆಯಲ್ಲಿ ಈ ಸೂಚನೆ ನೀಡಲಾಗಿದೆ.



ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಹಲ್ಯಾಳದ ಹುಲಗಬಾಳ ಗ್ರಾಮದಿಂದ ಐನಾಪುರ ರಸ್ತೆ ಮತ್ತು ಸಂಗಮೇಶ್ವರ ದೇವಸ್ಥಾನಕಕ ಹೋಗುವ ರಸ್ತೆ ಹದಗೆಟಿದ್ದು ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ. 2 ಸಾವಿರಕ್ಕೂ ಅಧಿಕ ಜನಸಂಖ್ಯೆ ಇರುವ ಗ್ರಾಮಕ್ಕೆ ಸಮರ್ಪಕ ರಸ್ತೆ ಇಲ್ಲದಿರುವುದು ವಿಪರ್ಯಾಸ.

ಈ ರಸ್ತೆಯಲ್ಲೇ ಸಂಚರಿಸಿ ಅನೇಕರು ತಮ್ಮ ಪ್ರಾಣ, ಕೈ ಕಾಲುಗಳು ಕಳೆದುಕೊಂಡಿದ್ದಾರೆ. ಈ ಕುರಿತು ಸಾಕಷ್ಟು ಬಾರಿ ಗ್ರಾಮ ಪಂಚಾಯತಿಗೆ ಸಂಬಂಧಿಸಿದ ಅಧಿಕಾರಿಗಳಿಗೆ ಹಲವಾರು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಈ ವಿಷಯದ ವಾಸ್ತವಾಂಶದ ಬಗ್ಗೆ ಆದ್ಯತೆಯ ಮೇರೆಗೆ ನಿಯಮಾನುಸಾರ ಪರಿಶೀಲಿಸಿ ತಕ್ಷಣವೇ ಅಗತ್ಯ ಕ್ರಮ ಕೈಗೊಂಡು, ಅನುಪಾಲನಾ ವರದಿಯನ್ನು ಅತಿ ಜರೂರಾಗಿ ಕಳಿಸುವಂತೆ ಮುಖ್ಯಮಂತ್ರಿಯವರಿಂದ ನಿರ್ದೇಶಿತಳಾಗಿದ್ದೇನೆ ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಗ್ರಾ.ಪಂ ಉತ್ತರ: ಹುಲಗಬಾಳಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮುಖ್ಯಮಂತ್ರಿ ಕಚೇರಿಯಿಂದ ಬಂದ ಪತ್ರಕ್ಕೆ ಉತ್ತರ ಬರೆದಿದ್ದಾರೆ.

ಹದಗೆಟ್ಟ ಹುಲಗಬಾಳಿ ರಸ್ತೆಯ ಬಗ್ಗೆ ಸ್ಥಾನಿಕವಾಗಿ ಪರಿಶೀಲನೆ ಮಾಡಲಾಗಿ ಹುಲಗಬಾಳಿಯಿಂದ ಐನಾಪೂರ ರಸ್ತೆಯು ಈ ಮೊದಲು ಸುಮಾರು ವರ್ಷಗಳ ಹಿಂದೆ ಡಾಂಬರಿಕರಣ ಆಗಿದೆ. 2019–20 ಮತ್ತು 2020–21ರಲ್ಲಿ ಹಾಗೂ ಪ್ರತಿ ವರ್ಷ ಕೃಷ್ಣಾ ನದಿ ಪ್ರವಾಹದಿಂದ ರಸ್ತೆಯ ಮೇಲ್ಪದರು ಹಾಳಾಗಿದೆ. ಮುಂದುವರೆದು ಸಂಗಮೇಶ್ವರ ದೇವಸ್ಥಾನದವರಗೆ ಈ ರಸ್ತೆಯು ಕಚ್ಚಾ ರಸ್ತೆಯಾಗಿದ್ದು (ತೋಟಪಟ್ಟಿ) ತಾಲೂಕು ಪಂಚಾಯತ ಅನುದಾನದಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಮೊರಮ ರಸ್ತೆಯನ್ನು ಮಾಡಲಾಗಿದೆ. ಮಳೆ ಆಗಿದ್ದರಿಂದ ಅಲ್ಲಲ್ಲಿ ಸ್ವಲ್ಪ ತಗ್ಗು ಗುಂಡಿ ಉಂಟಾಗಿದೆ ಎಂದು ಪಿ.ಡಿ.ಓ ಅವರು ವರದಿ ಸಲ್ಲಿಸಿದ್ದಾರೆ. ಆದರೆ ಈ ರಸ್ತೆ ದುರಸ್ತಿಯ ಬಗ್ಗೆ ಗ್ರಾ.ಪಂ ತನ್ನ ವರದಿಯಲ್ಲಿ ಏನೂ ಉಲ್ಲೇಖ ಮಾಡಿಲ್ಲ.

ಪರವಾನಗಿ ದುರುಪಯೋಗ: 36 ಮೆಟ್ರಿಕ್ ಟನ್ ಅಕ್ರಮ ಅದಿರು ವಶ

ಬಳ್ಳಾರಿ: ಪರವಾನಗಿ ದುರುಪಯೋಗ ಪಡಿಸಿಕೊಂಡು ಅಕ್ರಮವಾಗಿ ಕಬ್ಬಿಣದ ಅದಿರು ಸಾಗಿಸುತ್ತಿದ್ದ ಎರಡು ಟಿಪ್ಪರ್ ಲಾರಿಗಳನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳು ಹಾಗು ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ, ಜಪ್ತಿ ಮಾಡಿಕೊಂಡಿದ್ದು, ಇಬ್ಬರು ಚಾಲಕರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬಳ್ಳಾರಿಯ ಕೌಲ್ ಬಜಾರ್ ನಿವಾಸಿ ಕೆ.ಸತ್ಯನಾರಾಯಣ, ನೆರೆಯ ಆಂಧ್ರಪ್ರದೇಶದ ಓಬಳಾಪುರಂ ಗ್ರಾಮದ ಕೆ.ನಾಗರಾಜ್ ಬಂಧಿತ ಚಾಲಕರು. ನೆರೆಯ ಆಂಧ್ರಪ್ರದೇಶದ ಸೋಮಲಾಪುರ ರೈಲ್ವೆ ಸೈಡಿಂಗ್ಸ್ ಪ್ರದೇಶದಿಂದ ಬಳ್ಳಾರಿ ತಾಲೂಕಿನ ಹಲಕುಂದಿ ಗ್ರಾಮದ ಬಳಿಯಿರುವ ಸ್ಪಾಂಜ್ ಐರನ್ ಘಟಕಕ್ಕೆ ಅನ್ ಲೋಡ್ ಮಾಡಲಾಗುತ್ತಿರುವ ಕುರಿತು ಖಚಿತ ಮಾಹಿತಿ ಅರಿತ ಅಧಿಕಾರಿಗಳು ಏಕಕಾಲಕ್ಕೆ ದಾಳಿ ನಡೆಸಿ, ಲಾರಿಗಳು ಹಾಗೂ ಇಬ್ಬರು ಚಾಲಕರನ್ನು ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.



ಎರಡು ಟಿಪ್ಪರ್‌ಗಳಲ್ಲಿ ಕಬ್ಬಿಣದ ಅದಿರನ್ನು ಸಾಗಣೆ ಮಾಡಲಾಗುತ್ತಿತ್ತು.

ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಭೂ ವಿಜ್ಞಾನಿಗಳಾದ ನವೀನ್ ಜಿ., ಮಹಮ್ಮದ್ ಸಾಧಿಕ್ ಶೇಖ್, ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆ ಪಿಐ ಕೆ. ಸೈಯದ್ ಸೈಫುಲ್ಲಾ ಹಾಗೂ ಸಿಬ್ಬಂದಿಗಳು ಹಲಕುಂದಿ ಗ್ರಾಮದ ವಿ.ಆರ್.ಕೆ. ಪಿ.ರಸ್ತೆಯ ರೈಲ್ವೆ ಗೇಟ್ ಬಳಿ ಜಂಟಿ ನಾಕಾ ಬಂಧಿ ಹೂಡಿದ್ದರು.

ಚಿಪ್ಪಿಕಲ್ಲು ತೆಗೆಯಲು ತೆರಳಿದ್ದ ವೇಳೆ ದುರಂತ | ಸಾವಿನ ಸಂಖ್ಯೆ 11ಕ್ಕೆ ಏರಿಕೆ

ಸಾಮೂಹಿಕ ಅಂತ್ಯಸಂಸ್ಕಾರ: ಗ್ರಾಮದಲ್ಲಿ ಶೋಕದ ಛಾಯೆ

ಭಟ್ಕಳ: ತಾಲೂಕಿನ ಅಳಿವೆಕೋಡಿ ಸಮುದ್ರ ತೀರದಲ್ಲಿ ಚಿಪ್ಪಿಕಲ್ಲು ತೆಗೆಯಲು ತೆರಳಿದ್ದ ವೇಳೆ ಸಂಭವಿಸಿದ ದುರಂತದಲ್ಲಿ ಮೃತಪಟ್ಟವರ ಶವಗಳ ಸಾಮೂಹಿಕ ಅಂತ್ಯಸಂಸ್ಕಾರ ಸೋಮವಾರ ಭಾವುಕ ವಾತಾವರಣದಲ್ಲಿ ನೆರವೇರಿತು. ಗ್ರಾಮದಲ್ಲಿ ಎಲ್ಲೆಡೆ ಶೋಕದ ಛಾಯೆ ಆವರಿಸಿತ್ತು.



ನದಿಯ ನೀರಿನಲ್ಲಿ ಸಿಲುಕಿ ಮೃತಪಟ್ಟವರ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದ್ದು, ಅಂತ್ಯ ಸಂಸ್ಕಾರದ ವೇಳೆ ಮನಕಲಕುವ ದೃಶ್ಯಗಳು ಕಂಡು ಬಂದವು.

ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಪೂರ್ಣಗೊಂಡ ಬಳಿಕ ಮೃತದೇಹಗಳನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು. ನಂತರ ಅಳಿವೆಕೋಡಿಯಲ್ಲಿ ಸಾಮೂಹಿಕ ಅಂತ್ಯಸಂಸ್ಕಾರ ನೆರವೇರಿಸಲಾಯಿತು.

ಒಂದೇ ಗ್ರಾಮದ ಹಲವರು ದುರಂತದಲ್ಲಿ ಮೃತಪಟ್ಟಿರುವುದು ಗ್ರಾಮಸ್ಥರನ್ನು ಕಂಬನಿ ಮಿಡಿಯುವಂತೆ ಮಾಡಿತು. ಮೃತರ ಅಂತಿಮ ದರ್ಶನಕ್ಕೆ ಸ್ಥಳೀಯರು, ಸಂಬಂಧಿಕರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಅಂತಿಮ ನಮನ ಸಲ್ಲಿಸಿದರು.

ಪರಿಹಾರದ ಭರವಸೆ

ಉಸ್ತುವಾರಿ ಸಚಿವ ಮಂಕಾಳ ವೈದ್ಯ ಹಾಗೂ ಉತ್ತರ ಕನ್ನಡ ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮೃತರ ಕುಟುಂಬಗಳಿಗೆ ಸಾಂತ್ವನ ಹೇಳಿದ ಅವರು, ಸರ್ಕಾರದಿಂದ ಅಗತ್ಯ ಪರಿಹಾರ ಹಾಗೂ ನೆರವು ನೀಡುವ ಭರವಸೆ ನೀಡಿದರು.

ಒಂದೇ ಕುಟುಂಬದ ಎಂಟು ಮಂದಿಯ ಅಂತ್ಯಸಂಸ್ಕಾರ ಒಂದೇ ಸ್ಥಳದಲ್ಲಿ ನಡೆದಿದ್ದು ಅತ್ಯಂತ ಹೃದಯವಿದ್ರಾವಕ ದೃಶ್ಯಕ್ಕೆ ಸಾಕ್ಷಿಯಾಯಿತು. ಪರಿವಾರದವರ ಹಾಗೂ ಗ್ರಾಮಸ್ಥರ ಆಕ್ರಂದನ ಮನಕಲಕುವಂತಿತ್ತು. ದಂಪತಿಯೊಬ್ಬರ ಮೃತದೇಹವನ್ನು ಒಂದೇ ಚಿತೆಯಲ್ಲಿ ಇರಿಸಿ ಅಂತ್ಯಸಂಸ್ಕಾರ ನೆರವೇರಿಸಿದ ದೃಶ್ಯ ಅಲ್ಲಿದ್ದವರ ಕಣ್ಣೀರನ್ನು ತರಿಸಿತು.

ದುರಂತ ನಡೆದ ದಿನ 10 ಮೃತದೇಹಗಳು ಪತ್ತೆಯಾಗಿದ್ದವು. ಸೋಮವಾರ ಬೆಳಗ್ಗೆ ನಾಪತ್ತೆಯಾಗಿದ್ದ ಮಾದೇವ ನಾಯ್ಕ ಅವರ ಮೃತದೇಹವೂ ಪತ್ತೆಯಾಗಿದ್ದು, ಒಟ್ಟು ಸಾವಿನ ಸಂಖ್ಯೆ 11ಕ್ಕೆ ಏರಿದೆ. ಮೃತದೇಹ ಪತ್ತೆಯಾದ ಬಳಿಕ ಕುಟುಂಬಸ್ಥರ ದುಃಖ ಮತ್ತಷ್ಟು ಮಡುಗಟ್ಟಿತು.

ಗೋ ಹತ್ಯೆ ಮಾಹಿತಿ ನೀಡಿದ ಬಜರಂಗದಳ

ಕಾರ್ಯಕರ್ತನ ಮೇಲೆ ಮಾರಣಾಂತಿಕ ಹಲ್ಲೆ

ರಾಣೇಬೆನ್ನೂರ: ನಗರದಲ್ಲಿ ಅಕ್ರಮವಾಗಿ ಕಸಾಯಿಖಾನೆ ಮಾಡಿಕೊಂಡು ಗೋ ಹತ್ಯೆ ಮಾಡುತ್ತಿದ್ದ ಕುರಿತು ಪೊಲೀಸರಿಗೆ ಮಾಹಿತಿ ನೀಡಿದ ಬಜರಂಗದಳದ ಕಾರ್ಯಕರ್ತರ ಮೇಲೆ ಮಾರಣಾಂತಿಕ ಹಲ್ಲೆ ಮಾಡಿರುವ ಘಟನೆ ಇಲ್ಲಿಯ ಗುತ್ತಲ ಬಸ್ ನಿಲ್ದಾಣದ ಬಳಿಯ ಖತೀಬ್ ಗಲ್ಲಿಯಲ್ಲಿ ನಡೆದಿದೆ.

ಘಟನೆಯಲ್ಲಿ ಇಲ್ಲಿಯ ಮಾರುತಿ ನಗರದ ಬಜರಂಗದಳದ ಕಾರ್ಯಕರ್ತ ರುದ್ರೇಶ ದಿನೇಶ ಬುಕ್ಕಶೆಟ್ಟಿ (28) ಎಂಬುವರು ಗಂಭೀರವಾಗಿ ಗಾಯಗೊಂಡಿದ್ದು ಚಿಕಿತ್ಸೆಗಾಗಿ ತಾಲೂಕು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಈತ ಖತೀಬ್ ಗಲ್ಲಿಯಲ್ಲಿ ಅಕ್ರಮವಾಗಿ ಗೋ ಹತ್ಯೆ ಮಾಡಲಾಗುತ್ತಿದೆ ಎಂದು ಪೊಲೀಸ್‌ರಿಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಬಂದ ಪೊಲೀಸರು ಜಾಗ ತೋರಿಸು ಬಾ ಎಂದು ರುದ್ರೇಶನನ್ನು ಕರೆದಿದ್ದಾರೆ. ರುದ್ರೇಶ ಕಸಾಯಿಖಾನೆ ತೋರಿಸಿ ವಾಪಸ್ ಬರುತ್ತಿದ್ದ ಸಮಯದಲ್ಲಿ 50 ಜನರ ಅನ್ಯಕೋಮಿನ ಗುಂಪು ಈತನ ಮೇಲೆ ದಾಳಿ ನಡೆಸಿದೆ.



ಕ್ರಿಕೆಟ್ ಬ್ಯಾಟ್, ಬಡಿಗೆ ಹಾಗೂ ಇತರ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿದ್ದಾರೆ. ಇದರಿಂದ ಗಂಭೀರವಾಗಿ ಗಾಯಗೊಂಡ ರುದ್ರೇಶ ಸ್ಥಳದಲ್ಲಿಯೆ ಕುಸಿದು ಬಿದ್ದಿದ್ದಾನೆ. ಸ್ಥಳದಲ್ಲಿದ್ದ ಆತನ ಸ್ನೇಹಿತರು ಕೂಡಲೇ ಆತನನ್ನು ನಗರದ ತಾಲೂಕು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ. ಈ ಕುರಿತು ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಆರೋಪಿಗಳ ಪತ್ತೆಗೆ ಜಾಲ ಬೀಸಿದ್ದಾರೆ.

ನಗರದ ಖತೀಬ್ ಗಲ್ಲಿ, ಇಸ್ಲಾಂಪುರ ಓಣಿ ಸೇರಿದಂತೆ ಹಲವೆಡೆ ಅಕ್ರಮವಾಗಿ 25ಕ್ಕೂ ಅಧಿಕ ಕಸಾಯಿಖಾನೆ ಮಾಡಿಕೊಳ್ಳಲಾಗಿದೆ. ಇವುಗಳಲ್ಲಿ ಸರ್ಕಾರದ ನಿಯಮಾವಳಿ ಗಾಳಿಗೆ ತೂರಿ ಹಾಗೂ ಪಶು ವೈದ್ಯರ ಪ್ರಮಾಣಪತ್ರವಿಲ್ಲದೆ ಅಕ್ರಮವಾಗಿ ಗೋ ಹತ್ಯೆ ಮಾಡಲಾಗುತ್ತಿದೆ ಎಂದು ಬಜರಂಗದಳದ ಕಾರ್ಯಕರ್ತರ ಆರೋಪಿಸಿದ್ದಾರೆ.

ಹಿಂದೂ ಕಾರ್ಯಕರ್ತರ ಮೇಲೆ ಹಲ್ಲೆ ಮಾಡಿದ ಆರೋಪಿಗಳ ವಿರುದ್ಧ ಈಗಾಗಲೇ ಶಹರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ಪೊಲೀಸರು ಕೂಡಲೇ ಆರೋಪಿಗಳನ್ನು ಬಂಧಿಸಿ ಕಠಿಣ ಶಿಕ್ಷೆ ವಿಧಿಸಬೇಕು. ಜತೆಗೆ ನಗರದಲ್ಲಿರುವ ಅಕ್ರಮ ಕಸಾಯಿಖಾನೆಗಳನ್ನು ಕೂಡಲೇ ಬಂದ್ ಮಾಡಿಸಬೇಕು. ಇಲ್ಲವಾದರೆ ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳದ ವತಿಯಿಂದ ರಾಣೇಬೆನ್ನೂರು ಬಂದ್‌ಗೆ ಕರೆ ನೀಡಲಾಗುವುದು. ರಾಜ್ಯ ಘಟಕದ ವತಿಯಿಂದ ನಗರದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಬಜರಂಗದಳದ ಜಿಲ್ಲಾ ಸಂಚಾಲಕ ಅನಿಲ ಹಲವಾಗಲ ಹಾಗೂ ಸಹ ಸಂಚಾಲಕ ವಿನಯ ಬಾಳನಗೌಡ್ರ ಎಚ್ಚರಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಮೂರಿನಕಟ್ಟೆ ಒಡೆದವರ ಮೇಲೆ ಕ್ರಮ: ಸಚಿವ ವೈದ್ಯ

◆**ಭಟ್ಕಳ:** ನಾನು ದೇವಸ್ಥಾನ ಕಟ್ಟುವವನೇ ಹೊರತು ಒಡೆಯುವವನಲ್ಲ. ಮೂರಿನಕಟ್ಟೆಯನ್ನು ಸರಕಾರವೇ ನಿರ್ಮಿಸಿದೆ. ಇದನ್ನು ಯಾರೇ ವ್ಯಕ್ತಿಗಳು ಒಡೆದರೂ ಸಹ ಕಾನೂನು ಕ್ರಮ ಎದುರಿಸಬೇಕಾದೀತು ಎಂದು ರಾಜ್ಯದ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವ ಮತ್ತು ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್. ವೈದ್ಯ ಹೇಳಿದರು.ಅವರು ಭಟ್ಕಳದ ಪ್ರವಾಸಿ ಮಂದಿರದಲ್ಲಿ ಅಧಿಕಾರಿಗಳ ಜೊತೆ ಚರ್ಚೆ ಬಳಿಕ ತಮ್ಮನ್ನು ಭೇಟಿಯಾದ ಪತ್ರಕರ್ತರ ಜತೆ ಮಾತನಾಡಿದರು. ಮೂರಿನಕಟ್ಟೆಯನ್ನು ಬಿಜೆಪಿಯವರು, ಹಿಂದೂ ಸಂಘಟನೆಯವರು ಕಟ್ಟಿಲ್ಲ, ಬದಲಾಗಿ ಸರಕಾರವೇ ಕಟ್ಟಿದೆ. ಇದನ್ನು ಒಡೆದವರ ಮೇಲೆ ಕ್ರಮ ಕೈಗೊಳ್ಳುತ್ತೇವೆ. ಈಗಾಗಲೇ ಈ ಸಂಬಂಧ ಅಧಿಕಾರಿಗಳ ಜತೆ ಮಾತನಾಡಿದ್ದೇನೆ ಎಂದ ಅವರು ಶಿರಾಲಿ ತಟ್ಟಿಹಕ್ಲ ದುರಂತದಲ್ಲಿ ಮೃತಪಟ್ಟವರಿಗೆ ರಾಜ್ಯ ಸರಕಾರದಿಂದ 5 ಲಕ್ಷ ಪರಿಹಾರ ಘೋಷಣೆ ಮಾಡಲಾಗಿದೆ. ಮೃತರ ಕುಟುಂಬದ ಪರವಾಗಿ ನಾನಿದ್ದೇನೆ ಎಂದರು.

ಮೇ 27ರವರೆಗೆ ನಿಷೇಧಾಜ್ಞೆ ಜಾರಿ

◆**ಭಟ್ಕಳ:** ತಾಲೂಕಿನ ಜಾಲಿ ಪಟ್ಟಣ ಪಂಚಾಯತ ವ್ಯಾಪ್ತಿಯ ಮೂರಿನಕಟ್ಟೆ ರಾಷ್ಟ್ರೀಯ ಹೆದ್ದಾರಿಯ ನಡುವೆ ಬಂದಿರುವುದರಿಂದ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಪಕ್ಕದಲ್ಲಿರುವ ಸರ್ಕಾರಿ ಜಾಗಕ್ಕೆ ಸ್ಥಳಾಂತರಿಸುವ ವಿವಾದದ ಕುರಿತಂತೆ ಭಟ್ಕಳ ನಗರ ಹಾಗೂ ಜಾಲಿ ಪಟ್ಟಣ ಪಂಚಾಯತ್ ವ್ಯಾಪ್ತಿಯ ಮೇ.25ರ ಬೆಳಿಗ್ಗೆ 6 ಗಂಟೆಯಿಂದ ಮೇ.27ರ ಬೆಳಿಗ್ಗೆ 6 ಗಂಟೆಯ ತನಕ ನಿಷೇಧಾಜ್ಞೆ ಜಾರಿಗೊಳಿಸಿ ಉಪ ವಿಭಾಗಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.ಜನರು ಗುಂಪು ಸೇರುವುದನ್ನುತಡೆಯುವುದ ಕ್ಕೋಸ್ಕರ ಬಿ.ಎನ್.ಎಸ್.ಎಸ್. 163ರಂತೆ ಆದೇಶ ಮಾಡಿದ್ದು ಭಟ್ಕಳ ನಗರ ಹಾಗೂ ಜಾಲಿ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಸಾರ್ವಜನಿಕ ಶಾಂತಿಗೆ ಭಂಗ ಉಂಟಾಗಿದ್ದು ಮತ್ತು ಮುಂದೆ ಸಾರ್ವಜನಿಕ ಆಸ್ತಿ ಪಾಸ್ತಿಗೆ ಹಾನಿ ಉಂಟು ಮಾಡುವ ಹಾಗೂ ಸಾರ್ವಜನಿಕ ಶಾಂತಿ ಸುವ್ಯವಸ್ಥೆಗೆ ಭಂಗ ಉಂಟಾಗುವ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಮುಂಜಾಗ್ರತಾ ಕ್ರಮವಾಗಿ ನಿಷೇಧಾಜ್ಞೆ ಜಾರಿ ಮಾಡಲಾಗಿದೆ.

ನಾಳೆ ವಿದ್ಯುತ್ ವ್ಯತ್ಯಯ

◆**ಕಾರವಾರ:** ಹೆಸ್ಕಾಂ, ಕುಮಟಾ ಉಪವಿಭಾಗದ 110ಕೆ.ವಿ ಕುಮಟಾ ಉಪ ಕೇಂದ್ರದಲ್ಲಿ 11 ಕೆ.ವಿ ಮಿರ್ಜಾನ್ ಮತ್ತು 11ಕೆ.ವಿ ಕತಗಾಲ ಫಿಡರಿನ ಬ್ರೇಕರಗಳ ತುರ್ತುನಿರ್ವಹಣಾ ಕಾಮಗಾರಿಯು ಮೇ. 27 ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆವರೆಗೆ ಇರುವುದರಿಂದ 110ಕೆ.ವಿ ಉಪಕೇಂದ್ರದಿಂದ ವಿದ್ಯುತ್ ಸ್ಥಗಿತವಾಗಲಿದೆ ಹಾಗೂ ಮಿರ್ಜಾನ್ 11ಕೆ.ವಿ ಹೊಸಮಾರ್ಗದ ರಚನೆ ಕಾಮಗಾರಿ ಇರುವುದರಿಂದ ಕುಮಟಾ ಉಪವಿಭಾಗದ 11ಕೆ.ವಿ ಮಿರ್ಜಾನ , 11ಕೆ.ವಿ ಕತಗಾಲ ಫೀಡರಿನ ಎಲ್ಲಾ ಭಾಗಗಳಲ್ಲಿ, 11ಕೆ.ವಿ ಮಾಸುರ ಹಾಗೂ 11ಕೆ.ವಿ ಬಾಡಾ ಫಿಡರಿನ ವಾಹಕ ಬದಲಾವಣೆ ಕಾಮಗಾರಿ ಇರುವುದರಿಂದ ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆವರೆಗೆ ಹಾಗೂ 33ಕೆ.ವಿ ಗೋಕರ್ಣ ಉಪಕೇಂದ್ರದಲ್ಲಿ ತುರ್ತುನಿರ್ವಹಣಾ ಕಾಮಗಾರಿ ಇರುವುದರಿಂದ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಗೋಕರ್ಣ ಶಾಖೆಯ ವ್ಯಾಪ್ತಿಯ ಎಲ್ಲಾ ಭಾಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಹೆಸ್ಕಾಂ, ಕುಮಟಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರು(ವಿ), ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	62699	68500
ಬಿಳಿಗೋಟು	23000	36599
ಕೆಂಪುಗೋಟು	24500	36000
ಬೆಟ್ಟೆ	35199	49169
ರಾಶಿ	49499	52989
ಚಾಲಿ	42066	46639
ಬಿ.ಕಾಳುಮೆಣಸು	70000	70000

ಯಲ್ಲಾಪುರ	ಕನಿಷ್ಠ	ಗರಿಷ್ಠ
ರಾಶಿ	50109	55899
ಬೆಟ್ಟೆ	37500	49069
ಕೆಂಪುಗೋಟು	21089	37081
ಬಿಳಿಗೋಟು	16122	36099
ಚಾಲಿ	36719	46099
ಕೋಕಾ	18909	33972
ಕಾಳುಮೆಣಸು	57995	67000



ಭಟ್ಕಳ: ನಗರದ ಬೀದಿಗಳು, ಮೊಹಲ್ಲಾಗಳಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಪೊಲೀಸ್‌ರಿಂದ ರೂಟ್ ಮಾರ್ಚ್ ನಡೆಸಲಾಯಿತು.

ಶಿವಯೋಗಿ ಉಳ್ಳಾಗಡ್ಡಿ ನಿಧನಕ್ಕೆ ಸಂತಾಪ

◆**ಬನವಾಸಿ:** ಇತ್ತೀಚೆಗೆ ನಿಧನ ಹೊಂದಿದ ಶ್ರೀ ಜಯಂತಿ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಶಿವಯೋಗಿ ಉಳ್ಳಾಗಡ್ಡಿ ಅವರಿಗೆ ಸಂಘದ ಕಾರ್ಯಾಲಯದಲ್ಲಿ ಸೋಮವಾರ ಶ್ರದ್ಧಾಂಜಲಿ ಸಭೆ ನಡೆಸಲಾಯಿತು.

ಶ್ರೀ ಜಯಂತಿ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗಣೇಶ ಸಣ್ಣಲಿಂಗಣ್ಣನವರ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿ, ಶಿವಯೋಗಿ ಉಳ್ಳಾಗಡ್ಡಿ ಅವರು ನೇರ ನುಡಿಯ ವ್ಯಕ್ತಿತ್ವದವರಾಗಿದ್ದರು. ಶ್ರೀ ಜಯಂತಿ ವಿದ್ಯಾವರ್ಧಕ ಸಂಘದ ಶ್ರೇಯಾಭಿವೃದ್ಧಿಗಾಗಿ ಶ್ರಮಿಸಿದ ಶಿಕ್ಷಣ ಪ್ರೇಮಿಯನ್ನು ನಾವು ಕಳೆದುಕೊಂಡಿರುವುದು ದುರದೃಷ್ಟಕರ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡುವುದರ ಜೊತೆಗೆ ಅವರ ಕುಟುಂಬಕ್ಕೆ ನೋವು ಭರಿಸುವ ಶಕ್ತಿ ನೀಡಲಿ ಎಂದರು. ಶ್ರೀ ಜಯಂತಿ ವಿದ್ಯಾವರ್ಧಕ ಸಂಘದ ಸದಸ್ಯ ಗಜಾನನ ಗೌಡ ಮಾತನಾಡಿ, ಅನೇಕ ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದ ಶಿವಯೋಗಿ ಉಳ್ಳಾಗಡ್ಡಿ ಅವರು ಸಂಘದ ಕ್ರಿಯಾಶೀಲ ವ್ಯಕ್ತಿಯಾಗಿದ್ದರು. ಸದಾ ಸಂಘದ ಏಳ್ಗೆಗಾಗಿ ಶ್ರಮಿಸುತ್ತಿದ್ದ ಇವರ ಆದರ್ಶಗಳು ನಮಗೆಲ್ಲರಿಗೂ ಮಾದರಿಯಾಗಿದೆ ಎಂದರು.

ಸಂಘದ ಉಪಾಧ್ಯಕ್ಷರಾದ ಮೃತ್ಯುಂಜಯ ಚೌದರಿ, ರಾಜಶೇಖರ ಗೌಡ, ಕಾರ್ಯದರ್ಶಿ ಎನ್.ಜಿ.ರಾಯಸದ ಸದಸ್ಯರಾದ ಇಂಧುದರ ಗೌಡ, ಸೀಮಾವತಿ ಕೆರೊಡಿ, ಪ್ರೌಢಶಾಲಾ ಮುಖ್ಯೋಪಾಧ್ಯಾಯ ಪುಟ್ಟಸ್ವಾಮಿ, ಜಯಂತಿ ಆಂಗ್ಲ ಮಾಧ್ಯಮದ ಮುಖ್ಯೋಪಾಧ್ಯಾಯಿನಿ ರೇಷ್ಮಾ ಸುಣಗಾರ ಹಾಗೂ ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಇದ್ದರು.



ಬನವಾಸಿ: ಇತ್ತೀಚೆಗೆ ನಿಧನ ಹೊಂದಿದ ಶ್ರೀ ಜಯಂತಿ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಶಿವಯೋಗಿ ಉಳ್ಳಾಗಡ್ಡಿ ಅವರಿಗೆ ಸಂಘದ ಕಾರ್ಯಾಲಯದಲ್ಲಿ ಸೋಮವಾರ ಶ್ರದ್ಧಾಂಜಲಿ ಸಭೆ ನಡೆಸಲಾಯಿತು. ಶ್ರೀ ಜಯಂತಿ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗಣೇಶ ಸಣ್ಣಲಿಂಗಣ್ಣನವರ , ಸಂಘದ ಉಪಾಧ್ಯಕ್ಷರಾದ ಮೃತ್ಯುಂಜಯ ಚೌದರಿ, ರಾಜಶೇಖರ ಗೌಡ, ಕಾರ್ಯದರ್ಶಿ ಎನ್.ಜಿ.ರಾಯಸದ ಸದಸ್ಯರಾದ ಇಂಧುದರ ಗೌಡ, ಸೀಮಾವತಿ ಕೆರೊಡಿ, ಪ್ರೌಢಶಾಲಾ ಮುಖ್ಯೋಪಾಧ್ಯಾಯ ಪುಟ್ಟಸ್ವಾಮಿ ಇತರರು ಇದ್ದರು.

ಮೂರಿನಕಟ್ಟೆಯ ಮೇಲೆ ಮತಾಂಧರ ದಾಳಿ

ಸೂತಕದಲ್ಲೇ ಶಾಂತಿ ಕದಡುವ ಯತ್ನ!

▶ ನಾಗರಾಜ ಶೆಟ್ಟಿ

◆**ಕಾರವಾರ:** ಚಿಪ್ಪುಮೀನು ಆಯಲು ತೆರಳಿದ 11 ಜನ ನದಿಯಲ್ಲಿ ಮುಳುಗಿ ಜೀವ ಕಳೆದುಕೊಂಡ ದಾರುಣ ಘಟನೆ ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗಿ ಇಡೀ ಉತ್ತರ ಕನ್ನಡ ಜಿಲ್ಲೆಯೇ ಶೋಕದ ಸಾಗರದಲ್ಲಿ ಮುಳುಗಿರುವ ಸಂದರ್ಭದಲ್ಲೇ ದುರ್ಘಟನೆ ನಡೆದ ಸ್ಥಳದಿಂದ ಕೆಲವೇ ಅಂತರದಲ್ಲಿ ಕೋಮು ಸೌಹಾರ್ದತೆಗೆ ಧಕ್ಕೆ ತರುವ ಕೃತ್ಯವನ್ನು ಕೆಲವು ಮತಾಂಧರು ನಡೆಸಿರುವುದಕ್ಕೆ ಎಲ್ಲೆಡೆಯಿಂದ ವ್ಯಾಪಕ ಖಂಡನೆ ವ್ಯಕ್ತವಾಗತೊಡಗಿದೆ.

ಭಟ್ಕಳ ಜಾಲಿ ಪಟ್ಟಣ ಪಂಚಾಯಿತಿಯ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಹೆದ್ದಾರಿ 66 ಪಕ್ಕ ಮೂರಿನಕಟ್ಟೆ ಎನ್ನುವ ಹಿಂದೂ ಧಾರ್ಮಿಕ ಶ್ರದ್ಧಾ ಕೇಂದ್ರವಿದ್ದು ಊರಿಗೆ ಯಾವುದೇ ರೋಗ ರುಜಿನ ಬರದಂತೆ ಮಾರಿಹೊರೆ ಗೊಂಬೆಯನ್ನು ಪೂಜಿಸಿ ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ಗ್ರಾಮಸ್ಥರು ಸಾಗಿಸಿ ಶಿರಸಿಯವರೆಗೆ ಸಾಗಿಸುವ ಸಾಂಪ್ರದಾಯ ನೂರಾರು ವರ್ಷಗಳಿಂದ ನಡೆದು ಬರುತ್ತಿದ್ದು ಭಟ್ಕಳದ ಮೂರಿನಕಟ್ಟೆ ಮಾರಿಹೊರೆಯ ಗೊಂಬೆ ಇಟ್ಟು ಪೂಜಿಸುವ ಸ್ಥಳವಾಗಿದೆ.

ಮೂರಿನಕಟ್ಟೆ ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ವ್ಯಾಪ್ತಿಯಲ್ಲಿ ಬರುವುದರಿಂದ ಅದನ್ನು ಉಳಿಸುವಂತೆ ಹಲವಾರು ಹೋರಾಟಗಳು ನಡೆದಿದ್ದು ಇದೀಗ ರಾಷ್ಟ್ರೀಯ ಹೆದ್ದಾರಿಯ ಕಾಮಗಾರಿ ಮುಗಿಸಲೇಬೇಕಾದ ಅನಿವಾರ್ಯತೆ ಇರುವುದರಿಂದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸರ್ಕಾರಿ ಜಾಗದಲ್ಲಿ ಹೊಸದಾಗಿ ಕಟ್ಟೆ ನಿರ್ಮಾಣ ಮಾಡಿ ಪ್ಲಾಸ್ಟರಿಂಗ್ ಕಾರ್ಯ ನಡೆಯುವುದಿತ್ತು.

ಭಾನುವಾರ ಸಂಜೆ ಜಲದುರಂತದ ಮೃತದೇಹಗಳ ಹುಡುಕಾಟ, ಮರಣೋತ್ತರ ಪರೀಕ್ಷೆ ಮತ್ತಿತರ ಕೆಲಸಗಳು ಒಂದೆಡೆ ನಡೆಯುತ್ತಿದ್ದರೆ ಇನ್ನೊಂದೆಡೆ ಹೊಸದಾಗಿ ನಿರ್ಮಿಸುತ್ತಿರುವ ಕಟ್ಟೆಯನ್ನು ಧ್ವಂಸಗೊಳಿಸುವ ಸಂಚು ರೂಪಿಸಿ ನೂರಾರು ಜನರು ಒಂದುಗೂಡಿದ್ದರು ರಾತ್ರಿ ಏಕಾಏಕಿ ನುಗ್ಗಿದ ಗುಂಪು ಕಟ್ಟೆಯನ್ನು ಧ್ವಂಸಗೊಳಿಸುವ ದುಷ್ಕೃತ್ಯ ನಡೆಸಿದ್ದು ತಡೆಯಲು ಬಂದ ಪೊಲೀಸರ ಮೇಲೆ ಹಲ್ಲೆ ನಡೆಸಲಾಯಿತು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಜಾಗದಲ್ಲಿ ನೂತನ ಕಟ್ಟೆಯ ನಿರ್ಮಾಣ ಕಾರ್ಯ ಸಾಗಿದ್ದು ಇದರಿಂದ ಬೇರೆ ಯಾರಿಗೂ ಯಾವುದೇ ತೊಂದರೆ ಇರಲಿಲ್ಲ ಎನ್ನುವುದು ಸ್ಥಳೀಯ ಹಿಂದೂ ಮುಖಂಡರ ಅಭಿಪ್ರಾಯವಾಗಿದ್ದು ಘಟನೆಯಲ್ಲಿ ಭಾಗಿಯಾಗಿರುವವರ ಮೇಲೆ ಸ್ವಯಂಪ್ರೇರಿತ ಪೊಲೀಸ್ ಪ್ರಕರಣ ದಾಖಲಿಸಬೇಕಿದೆ ಎಂದು ಹಿಂದೂ ಸಂಘಟನೆಗಳ ಮುಖಂಡರು ಒತ್ತಾಯಿಸಿದ್ದಾರೆ.

ಶಾಂತವಾಗಿರುವ ಭಟ್ಕಳ ತಾಲೂಕಿನಲ್ಲಿ ಶಾಂತಿ ಕದಡುವ ಕೃತ್ಯವನ್ನು ನಡೆಸುವವರ ಮೇಲೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂಬ ಆಗ್ರಹಗಳು ಹೆಚ್ಚಿವೆ.



▶▶ ಶಾಂತವಾಗಿರುವ ಭಟ್ಕಳ ತಾಲೂಕಿನಲ್ಲಿ ಶಾಂತಿ ಕದಡುವ ಕೃತ್ಯವನ್ನು ನಡೆಸುವವರ ಮೇಲೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂಬ ಆಗ್ರಹಗಳು ಹೆಚ್ಚಿವೆ.

ಶಾಂತಿ ಕಾಪಾಡಲು ಕರೆ

ಉತ್ತರ ಕನ್ನಡ ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ ಸಹ ಪ್ರಕಟಣೆ ಹೊರಡಿಸಿ ಮೂಲಕಟ್ಟೆ ಸಂಪೂರ್ಣ ಸುರಕ್ಷಿತವಾಗಿದೆ ಎಂದು ತಿಳಿಸಲಾಗಿದೆ. ಕೆಂಪು ಕಲ್ಲಿನಿಂದ ಕಟ್ಟಲಾಗಿರುವ ಹೊಸ ಕಟ್ಟೆಯನ್ನು ಕಿಡಿಗೇಡಿಗಳು ಏಪ್ರಿಲ್ 24 ರ ರಾತ್ರಿ ನಾಶಪಡಿಸಿರುವುದು ಕಂಡು ಬಂದಿದ್ದು ಘಟನೆಗೆ ಸಂಬಂಧಿಸಿದಂತೆ 6 ಜನರನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠ ದೀಪನ್.ಎಂ.ಎನ್ ತಿಳಿಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಸಾರ್ವಜನಿಕರ ವಾಹನಗಳಿಗೆ ಅಡೆತಡೆ ಸಂಚಾರಕ್ಕೆ ತೊಂದರೆ, ಪೊಲೀಸ್ ಕರ್ತವ್ಯಕ್ಕೆ ಅಡ್ಡಿ,ಹಲ್ಲೆ ಮತ್ತು ದರೋಡೆ, ಸಾಮಾಜಿಕ ಜಾಲತಾಣಗಳಲ್ಲಿ ಪ್ರಚೋದನಾಕಾರಿ ವಿಡಿಯೋ ಹರಿಬಿಡುವುದು ಹೀಗೆ ನಾಲ್ಕು ಪ್ರತ್ಯೇಕ ಪ್ರಕರಣಗಳು ಭಟ್ಕಳ ನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದು ಸಾರ್ವಜನಿಕರು ಯಾವುದೇ ವದಂತಿಗಳಿಗೆ ಕಿವಿ ಕೊಡಬಾರದು ಎಂದು ಉತ್ತರ ಕನ್ನಡ ಜಿಲ್ಲಾ ಪೊಲೀಸ್ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಆಕ್ರೋಶ

ಆಡಳಿತಾತ್ಮಕ ವೈಫಲ್ಯಕ್ಕೆ ಹಿಡಿದ ಕೈಗನ್ನಡಿ

◆**ಕಾರವಾರ:** ಭಟ್ಕಳ ತಾಲೂಕಿನ ವೆಂಕಟಾಪುರ ಸಮೀಪದ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿದ್ದ, ನೂರಾರು ವರ್ಷಗಳ ಇತಿಹಾಸ ಪ್ರಸಿದ್ಧ ಹಾಗೂ ಹಿಂದೂಗಳ ಧಾರ್ಮಿಕ ಶ್ರದ್ಧಾಕೇಂದ್ರವಾದ 'ಮೂರುನಕಟ್ಟೆ'ಯನ್ನು ಭಾನುವಾರ ತಡರಾತ್ರಿ ಸಮಾಜಘಾತಕ ಶಕ್ತಿಗಳು ಏಕಾಏಕಿ ಗುಂಪು ಕಟ್ಟಿಕೊಂಡು ಬಂದು ಧ್ವಂಸಗೊಳಿಸಿರುವುದು ಅತ್ಯಂತ ಹೇಯ, ವಿಕೃತ ಹಾಗೂ ಸಮಾಜ ತಲೆತಗ್ಗಿಸುವಂತಹ ಸಹಿಸಲಸಾಧ್ಯವಾದ ಕೃತ್ಯ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಖಂಡಿಸಿದ್ದಾರೆ.



ಕಪ್ಪೆ ಚಿಪ್ಪು ಸಂಗ್ರಹಿಸಲು ಹೋಗಿ ಸಮುದ್ರದಲ್ಲಿ ದುರಂತ ಸಾವಿಗೀಡಾದ ಬಡ ಜನರ ಶೋಕಾಚರಣೆಯಲ್ಲಿ ಇಡೀ ಭಟ್ಕಳದ ಜನತೆ ಮುಳುಗಿದ್ದ ಸಂದರ್ಭವನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ. ಇಂತಹ ಸೂಕ್ಷ್ಮ ಪರಿಸ್ಥಿತಿಯಲ್ಲೇ ತಡರಾತ್ರಿ ಸಾವಿರಾರು ಸಂಖ್ಯೆಯಲ್ಲಿ ಸೇರಿದ ಮುಸ್ಲಿಂ ಕಿಡಿಗೇಡಿಗಳು ಈ ಧ್ವಂಸ ಕೃತ್ಯ ಎಸಗಿರುವುದು ಅವರ ವಿಕೃತ ಮನೋಭಾವ ಹಾಗೂ ಕೋಮು ದ್ವೇಷಕ್ಕೆ ಸಾಕ್ಷಿಯಾಗಿದೆ.

ಮುಖ್ಯವಾಗಿ, ಈ ಮೂರುನಕಟ್ಟೆ ಸ್ಥಳವು ಮುಸ್ಲಿಮರಿಗೆ ಯಾವುದೇ ರೀತಿಯಲ್ಲೂ ಸಂಬಂಧಪಡದ ವಿಷಯವಾಗಿತ್ತು. ಇದು ಕೇವಲ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತು ಹಿಂದೂ ಸಮಾಜದ ನಡುವಿನ ಒಪ್ಪಂದದ ಅನ್ವಯ ನಿರ್ಮಾಣಗೊಂಡ ಹಿಂದೂಗಳ ಧಾರ್ಮಿಕ ಭಾಗವಾಗಿತ್ತು. ಇದು ಮುಸ್ಲಿಮರಿಗೆ ಸೇರಿದ ಜಾಗವೂ ಅಲ್ಲ, ಹೀಗಿದ್ದೂ, ಕೇವಲ ಜಿಲ್ಲೆಯ ಕೋಮು ಸೌಹಾರ್ದತೆಯನ್ನು ಕೆಡಿಸಿ, ಗಲಭೆ ಸೃಷ್ಟಿಸುವ ಏಕೈಕ ದುರುದ್ದೇಶದಿಂದಲೇ ಈ ಧ್ವಂಸ ಕೃತ್ಯ ಎಸಗಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ ಎಂದು ಅವರು ಹೇಳಿದ್ದಾರೆ.

ಯಾವುದೇ ಕಾನೂನಾತ್ಮಕ ಆಕ್ಷೇಪಣೆಗಳಿದ್ದರೂ ಸಂಬಂಧಪಟ್ಟ ಮುಖಂಡರು ಅಧಿಕಾರಿಗಳ ಬಳಿ ಶಾಂತಿಯುತ ವಾಗಿ ಚರ್ಚಿಸಬಹುದಿತ್ತು. ಅದನ್ನು ಬಿಟ್ಟು, ಕಾನೂನನ್ನು ಸಂಪೂರ್ಣವಾಗಿ ಕೈಗೆತ್ತಿಕೊಂಡು, ಗೂಂಡಾವರ್ತನೆಯ ಮೂಲಕ ಹಿಂದೂಗಳ ಅಸ್ಮಿತೆಯಂತಿದ್ದ ಪವಿತ್ರ ಕಟ್ಟೆಯನ್ನು ಒಡೆದು ಹಾಕಿರುವದು ಅಕ್ಷಮ್ಯ ಅಪರಾಧವಾಗಿದೆ. ಇಂತಹ ಸಮಾಜಘಾತಕ ಗೂಂಡಾಗಿರಿಯನ್ನು ಹಿಂದೂ ಸಮಾಜವು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ ಮತ್ತು ಕ್ಷಮಿಸುವುದೂ ಇಲ್ಲ ಎಂದಿದ್ದಾರೆ.

ಪ್ರಸ್ತುತ ರಾಜ್ಯ ಸರ್ಕಾರದ ಅತಿರೇಕದ ಅಲ್ಪಸಂಖ್ಯಾತರ ತುಷ್ಟೀಕರಣ ರಾಜಕಾರಣವೇ ಇಂತಹ ಧಾರ್ಮಿಕ ದೌರ್ಜನ್ಯಗಳಿಗೆ ನೇರ ಪ್ರೇರಣೆಯಾಗಿದೆ. ಕ್ಷೇತ್ರದಲ್ಲಿ ಹಿಂದೂ ಕಾರ್ಯಕರ್ತರಿಗಾಗಲಿ ಅಥವಾ ಕರ್ತವ್ಯನಿರತ ಪೊಲೀಸರಿಗಾಗಲಿ ರಕ್ಷಣೆ ಇಲ್ಲದಂತಹ ಅರಾಜಕತೆ ಸೃಷ್ಟಿಯಾಗಿದೆ.

ಸ್ಥಳೀಯ ಶಾಸಕರು ಮತ್ತು ಸಚಿವರ ಸ್ವಕ್ಷೇತ್ರದಲ್ಲೇ ಇಂತಹ ಧಾರ್ಮಿಕ ದೌರ್ಜನ್ಯ ನಡೆದಿರುವುದು ಅವರ ಆಡಳಿತಾತ್ಮಕ ವೈಫಲ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಧ್ವಂಸಗೊಂಡಿರುವ ಪವಿತ್ರ ಕಟ್ಟೆಯನ್ನು ತಕ್ಷಣವೇ ಯಥಾಸ್ಥಿತಿಯಲ್ಲಿ ಅದೇ ಜಾಗದಲ್ಲಿ ಮರುಸ್ಥಾಪಿಸಬೇಕು. ಕಾನೂನು ಕೈಗೆತ್ತಿಕೊಂಡು ಕೋಮು ಸೌಹಾರ್ದತೆ ಕೆಡಿಸಲು ಯತ್ನಿಸಿದ ಪ್ರತಿಯೊಬ್ಬ ಕಿಡಿಗೇಡಿಯನ್ನು ತಕ್ಷಣವೇ ಬಂಧಿಸಿ, ಕಠಿಣ ಕಾನೂನು ಕ್ರಮ ಜರುಗಿಸಬೇಕು. ಇಲ್ಲದಿದ್ದರೆ ಮುಂಬರುವ ದಿನಗಳಲ್ಲಿ ಇಡೀ ಹಿಂದೂ ಸಮಾಜ ಒಗ್ಗೂಡಿ ತೀವ್ರ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಸಮನ್ವಯದಿಂದ ಕಾರ್ಯನಿರ್ವಹಿಸಿ: ಆರ್‌ವಿಡಿ

◆**ದಾಂಡೇಲಿ:** ನಗರದ ಅಂಬೇವಾಡಿಯಲ್ಲಿರುವ ತಾಲೂಕು ಆಡಳಿತ ಸೌಧದ ಸಭಾಂಗಣದಲ್ಲಿ ಶಾಸಕ ಆರ್.ವಿ.ದೇಶಪಾಂಡೆಯವರ ಅಧ್ಯಕ್ಷತೆಯಡಿ ಹಳಿಯಾಳ, ದಾಂಡೇಲಿ ಹಾಗೂ ಜೋಯಿಡಾ ತಾಲೂಕಿನ ವಿವಿಧ ಇಲಾಖೆಗಳ ಉನ್ನತ ಮಟ್ಟದ ಅಧಿಕಾರಿಗಳೊಂದಿಗೆ ಮುಂಗಾರು ಪೂರ್ವ ಸಿದ್ಧತಾ ಸಭೆಯು ಸೋಮವಾರ ನಡೆಯಿತು.

ಮಳೆಗಾಲದ ಸಂದರ್ಭದಲ್ಲಿ ಸಂಭವಿಸಬಹುದಾದ ರಸ್ತೆ ಹಾನಿ, ವಿದ್ಯುತ್ ವ್ಯತ್ಯಯ, ಮರಗಳು ಬೀಳುವುದು ಸೇರಿದಂತೆ ವಿವಿಧ ತುರ್ತು ಪರಿಸ್ಥಿತಿಗಳನ್ನು ಸಮರ್ಥವಾಗಿ ಎದುರಿಸಲು ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಜನರ ಸುರಕ್ಷತೆ ಹಾಗೂ ಮೂಲಭೂತ ಸೌಕರ್ಯಗಳ ನಿರಂತರ ಲಭ್ಯತೆಗಾಗಿ ಎಲ್ಲ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸುವಂತೆ ಆರ್.ವಿ.ದೇಶಪಾಂಡೆಯವರು ಸೂಚನೆ ನೀಡಿದರು.

ಸಭೆಯಲ್ಲಿ ಮೂರು ತಾಲೂಕಿನ ತಹಶೀಲ್ದಾರರಾದ ಶೈಲೇಶ ಪರಮಾನಂದ, ಮಂಜುನಾಥ ಮುನ್ನೊಳ್ಳಿ, ಫಿರೋಜ್ ಶಾ ಸೋಮನಕಟ್ಟಿ, ತಾ.ಪಂ ಕಾರ್ಯ ನಿರ್ವಹಣಾಧಿಕಾರಿಗಳಾದ ಟಿ.ಸಿ. ಹಾದಿಮನಿ, ಭಾರತಿ.ಎನ್ ಮತ್ತು ವಿಲಾಸ್, ಪೌರಾಯುಕ್ತ ವಿವೇಕ ಬನ್ನೆ, ಹೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರ ಪುರುಷೋತ್ತಮ ಮಲ್ಯ, ಹೆಸ್ಕಾಂ ಸ.ಕಾ. ಅಭಿಯಂತರ ದೀಪಕ ನಾಯ್ಕ, ಕೆಪಿಸಿಯ ಕಾರ್ಯನಿರ್ವಾಹಕರ ಅಭಿಯಂತರ ಶಂಕರ ಲಮಾಣಿ, ಗಣಪತಿ ವಡ್ಡರ, ಹಳಿಯಾಳ ಪುರಸಭೆಯ ಮುಖ್ಯಾಧಿಕಾರಿ ಅಶೋಕ ಸಾಳೆನ್ನವರ, ಹಿರಿಯ ಸಹಾಯಕ ಕೃಷಿ ನಿರ್ದೇಶಕ ಪಿ.ಐ.ಮಾನೆ, ಹಿರಿಯ ಸಹಾಯಕ ತೋಟಗಾರಿಕ ನಿರ್ದೇಶಕ ಪಿ.ಐ.ಹೇರಿಯಾಳ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಪ್ರಮೋದ ಮಹಾಲೆ, ಬಶೀರ್ ಶೇಖ, ಸಿಪಿಐಗಳಾದ ಶಿವಾನಂದ ಅಂಬಿಗೇರ ಮತ್ತು ಜೈಪಾಲ್ ಪಾಟೀಲ್, ಲೋಕೋಪಯೋಗಿ ಇಲಾಖೆಯ ಸ.ಕಾ. ಅಭಿಯಂತರ ಸಂತೋಷ ಅಥಣಿ ಹಾಗೂ ಮೂರು ತಾಲೂಕುಗಳ ಅಧಿಕಾರಿಗಳು, ಕಂದಾಯ ನಿರೀಕ್ಷಕರು, ಗ್ರಾ.ಪಂ ಅಭಿವೃದ್ಧಿ ಅಧಿಕಾರಿಗಳು ಉಪಸ್ಥಿತರಿದ್ದರು.



ಮೃತರ ಕುಟುಂಬಸ್ಥರಿಗೆ ಶಾಸಕ ಭೀಮಣ್ಣ ನಾಯ್ಕರಿಂದ ಸಾಂತ್ವನ



◆**ಹೊನ್ನಾವರ:** ಭಟ್ಕಳತಾಲೂಕಿನ ಅಳ್ವೆಕೊಡಿಯ ಹೊಳೆಯಲ್ಲಿ ಭಾನುವಾರ ಸಾವಿಗೀಡಾದ 11 ಸಂತ್ರಸ್ಥರ ಮನೆಗಳಿಗೆ ಶಿರಸಿ ಸಿದ್ದಾಪುರ ವಿಧಾನ ಸಭಾ ಕ್ಷೇತ್ರದ ಶಾಸಕ ಭೀಮಣ್ಣ ನಾಯ್ಕ ಸೋಮವಾರ ಭೇಟಿ ನೀಡಿ ಸಾಂತ್ವನ ಹೇಳಿದರು.

ಮೃತ ಲಕ್ಷ್ಮೀ ನಾಯ್ಕ ಕುಟುಂಬದ ಮೂವರು ಹೆಣ್ಣು ಮಕ್ಕಳಿಗೆ ಹಾಗೂ ಓರ್ವ ಗಂಡು ಮಗುವಿಗೆ ಸಾಂತ್ವನ ಹೇಳಿ ಧೈರ್ಯ ತುಂಬಿದರು.

ರಾಜ್ಯ ಸರ್ಕಾರದಿಂದ ಹಾಗೂ ಕೇಂದ್ರ ಸರ್ಕಾರದಿಂದ ಸಿಗುವ ಸಹಾಯಗಳ ಬಗ್ಗೆ ಈಗಾಗಲೇ ಸಚಿವ ಮಂಕಾಳು ವೈದ್ಯರು ಕಾರ್ಯೋನ್ಮುಖರಾಗಿದ್ದು ಇನ್ನಷ್ಟು ಸಹಾಯವನ್ನು ಸರ್ಕಾರದಿಂದ ದೊರಕಿಸುವ ನಿಟ್ಟಿನಲ್ಲಿ ಮೀನುಗಾರಿಕಾ ಸಚಿವ ಮಂಕಾಳು ವೈದ್ಯರವರೊಂದಿಗೆ ಮಾತನಾಡಿ, ಸರ್ಕಾರದ ಗಮನಕ್ಕೂ ತರುವ ಭರವಸೆ ನೀಡಿದರು.

ಸಂತ್ರಸ್ಥರ ಎಲ್ಲಾ ಮನೆಗಳಿಗೂ ಭೇಟಿ ನೀಡಿದ ಶಾಸಕ ಭೀಮಣ್ಣ ನಾಯ್ಕ ಜೊತೆಯಲ್ಲಿ ಭಟ್ಕಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವೆಂಕಟೇಶ ನಾಯ್ಕ, ಶಾರದ ಹೊಳೆ ವೆಂಕಟರಮಣ ದೇವಸ್ಥಾನದ ಪ್ರಮುಖರಾದ ಕೃಷ್ಣ ನಾಯ್ಕ, ಸುಬ್ರಾಯ ನಾಯ್ಕ, ಕುಮಟಾ ಮಾಜಿ ಜಿ.ಪಂ ಸದಸ್ಯ ರತ್ನಾಕರ ನಾಯ್ಕ, ಹೊನ್ನಾವರ ನ್ಯಾಯವಾದಿ ಎಂ.ಎನ್. ಸುಬ್ರಹ್ಮಣ್ಯ, ಪಂಚಾಯತ ಸದಸ್ಯರಾದ ಗೌರೀಶ ನಾಯ್ಕ, ಗಣಪತಿ ನಾಯ್ಕ ಶಾರದ ಹೊಳೆ, ಕುಮಾರ ನಾಯ್ಕ ಇತರರು ಇದ್ದರು.

ಮೂರಿನಕಟ್ಟೆ ಕೆಡವಿದ ಆರೋಪಿಗಳ ಮೇಲೆ ಕ್ರಮವಾಗಲಿ: ರೂಪಾಲಿ ಎಸ್.ನಾಯ್ಕ

◆**ಕಾರವಾರ:** ಹಿಂದುಗಳ ಪವಿತ್ರ ಸ್ಥಳವಾದ ಭಟ್ಕಳದ ಮೂರಿನಕಟ್ಟೆ ವಿಷಯದಲ್ಲಿ ಮುಸ್ಲಿಮ್ ಸಮಾಜದ ಕಿಡಿಗೇಡಿಗಳು ಅನಗತ್ಯವಾಗಿ ಹಸ್ತಕ್ಷೇಪ ಮಾಡಿ ಸಾಮರಸ್ಯವನ್ನು ಕೆಡಿಸುವ ಕಾರ್ಯಕ್ಕೆ ಕೈಹಾಕಿದ್ದಾರೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷೆ, ಮಾಜಿ ಶಾಸಕಿ ರೂಪಾಲಿ ಎಸ್.ನಾಯ್ಕ ಆಕ್ರೋಶ ವ್ಯಕ್ತಪಡಿಸಿದ್ದಾರೆ.




ಮೂರಿನಕಟ್ಟೆ ಸಾಂಪ್ರದಾಯಿಕ ವಾಗಿ, ಧಾರ್ಮಿಕ ವಾಗಿ ಹಿಂದುಗಳಿಗೆ ಸೇರಿದ್ದು, ಹಿಂದುಗಳ ಪವಿತ್ರ ಸ್ಥಳ. ಹೆದ್ದಾರಿ ಅಗಲೀಕರಣದ ಸಂದರ್ಭದಲ್ಲಿ ಹಿಂದು ಸಮಾಜದ ಮುಖಂಡರು ಹಾಗೂ ಅಧಿಕಾರಿಗಳ ನಡುವೆ ಸಂಬಂಧಿಸಿದ ವಿಷಯದಂತೆ ಕ್ರಮ ಕೈಗೊಳ್ಳಲಾಗಿತ್ತು. ಈಗ ಹಿಂದು ಸಮಾಜದವರು ಆ ಕಟ್ಟೆಯನ್ನು ಮುನರ್ ನಿರ್ಮಿಸಿದರೆ ಮೂಗು ತೂರಿಸುವ ಆವಶ್ಯಕತೆ ಯಾರಿಗೂ ಇಲ್ಲ, ಹೀಗಿರುವಾಗ ಭಟ್ಕಳದಲ್ಲಿ ಅಶಾಂತಿ ಉಂಟು ಮಾಡಿ, ಹಿಂದುಗಳ ಭಾವನೆಯನ್ನು ಕೆರಳಿಸುವ ಕೃತ್ಯಕ್ಕೆ ಇಳಿದಿರುವುದು ಖಂಡನೀಯ.

ರಾಜ್ಯದ ಕಾಂಗ್ರೆಸ್ ಸರ್ಕಾರದ ತುಷ್ಟೀಕರಣ ನೀತಿಯ ಮುಂದುವರಿದ ಭಾಗವಾಗಿ ಇಂತಹ ಘಟನೆಗಳು ಮೇಲಿಂದಮೇಲೆ ಉಂಟಾಗುತ್ತಿವೆ. ತಕ್ಷಣ ಕಿಡಿಗೇಡಿಗಳನ್ನು ಬಂಧಿಸಿ ಅವರ ಮೇಲೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಮೂರನಕಟ್ಟೆಯನ್ನು ಅದೇ ಸ್ಥಳದಲ್ಲಿ ಪುನರ್ ಸ್ಥಾಪಿಸುವಂತಾಗಬೇಕು. ಇಲ್ಲದಿದ್ದಲ್ಲಿ ಮುಂಬರುವ ದಿನಗಳಲ್ಲಿ ಹೋರಾಟ ನಡೆಸಬೇಕಾಗಲಿದೆ ಎಂದು ರೂಪಾಲಿ ಎಸ್.ನಾಯ್ಕ ಎಚ್ಚರಿಕೆ ನೀಡಿದ್ದಾರೆ.

ರಾಷ್ಟ್ರಮಟ್ಟಕ್ಕೆ ರಾಧಾ ಭಟ್ಟ ಆಯ್ಕೆ

◆**ಯಲ್ಲಾಪುರ:** ತಾಲೂಕಿನ ವಜ್ರಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ರಾಧಾ ಭಟ್ಟ ರವರು ಬೆಂಗಳೂರಿನಲ್ಲಿ ನಡೆದ 2025/26 ನೇ ಸಾಲಿನ ಸರಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾ ಕೂಟದ ಕಲಾತ್ಮಕ ಯೋಗ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆಯುವುದರೊಂದಿಗೆ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಹರಿಶ್ಚಂದ್ರ ಗೌಡ,ಉಪಾಧ್ಯಕ್ಷೆ ಉಮಾ ಭಟ್ಟ ಹಾಗೂ ಸಮಿತಿಯ ಸದಸ್ಯರು ಹರ್ಷ ವ್ಯಕ್ತ ಪಡಿಸಿದ್ದಾರೆ.



ಮೂರಿನಕಟ್ಟೆ ಪ್ರಕರಣ ಸಚಿವರು, ಜಿಲ್ಲಾಡಳಿತದ ವೈಫಲ್ಯ: ಮಾಜಿ ಶಾಸಕ

◆**ಭಟ್ಕಳ:** ಹಿಂದೂಗಳ ಧಾರ್ಮಿಕ ಭಾವನಾತ್ಮಕ ಪ್ರದೇಶವಾದ ಪಟ್ಟಣದ ಮೂರಿನಕಟ್ಟೆಯನ್ನು ಪೊಲೀಸ್ ಅಧಿಕಾರಿಗಳ ಎದುರಿನಲ್ಲೇ ಮುಸ್ಲೀಮರು ಧ್ವಂಸ ಮಾಡಿದ್ದು ಇದು ಸಚಿವರು, ಜಿಲ್ಲಾಡಳಿತದ ವೈಫಲ್ಯ ಎದ್ದು ತೋರಿಸುತ್ತದೆ ಎಂದು ಮಾಜಿ ಶಾಸಕ ಸುನೀಲ ನಾಯ್ಕ ಹೇಳಿದರು.



ಬಿಜೆಪಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂರಿನಕಟ್ಟೆ ತನ್ನದೇ ಆದ ಇತಿಹಾಸ ಇದೆ. ಇಲ್ಲಿ ಮಾರಿಯಮ್ಮನ ಹೊರೆ ಇಟ್ಟು ಪೂಜಿಸುತ್ತಾರೆ. ಇಂತಹ ಪ್ರದೇಶವನ್ನು ಪೊಲೀಸರೇ ಎದುರೇ ಸಾವಿರಾರು ಮುಸ್ಲೀಮರು ಬಂದು ಧ್ವಂಸಗೊಳಿಸಿರುವುದು ಭಟ್ಕಳದ ಕಾನೂನು ಸುವ್ಯವಸ್ಥೆ ಏನಾಗಿದೆ ಎನ್ನುವುದು ಸೂಚಿಸುತ್ತದೆ. ಈ ಸಂದರ್ಭದಲ್ಲಿ ಪೊಲೀಸರಿಗೆ ಹಲ್ಲೆ ಮಾಡಿದರೂ ಸುಮ್ಮನಿದ್ದಾರೆ ಎಂದ ಅವರು ಎಸ್ಪಿ ದೀಪನ್ ಮೂರಿನಕಟ್ಟೆಗೆ ಏನೂ ಆಗಿಲ್ಲ ಎಂದು ಹೇಳಿದ್ದು ಸರಿಯಲ್ಲ, ಎಸ್ಪಿ ಅವರು ಸರಿಯಾಗಿ ತಿಳಿದುಕೊಂಡು ಮಾತನಾಡಬೇಕಿತ್ತು. ಘಟನೆ ನಡೆದು 18 ತಾಸಾದರೂ ಸಚಿವ ಮಂಕಾಳ ವೈದ್ಯ ಸ್ಥಳಕ್ಕೆ ಆಗಮಿಸಿಲ್ಲ, ಇವರು ಹಿಂದೂಗಳ ಮತ ಪಡೆದು ಗೆಲ್ಲಲಿಲ್ಲವೇ ಎಂದ ಅವರು ಸಚಿವರು ಹಿಂದೂಗಳ ಋಣ ತೀರಿಸಬೇಕು. ಸಚಿವರು ಕೇವಲ ಒಬ್ಬರ ಪರವಾಗಿ ಇರಬಾರದು. ಮೂರಿನಕಟ್ಟೆ ಯನ್ನು ಸರಕಾರ ಕಟ್ಟಿಲ್ಲ, ಕಟ್ಟಲು ನಯಾಪೈಸೆಯೂ ಕೊಟ್ಟಿಲ್ಲ, ನಾವು ಅಧಿಕಾರದಲ್ಲಿದ್ದಾಗ ರಾಜಾಂಗಣ ನಾಗಬನ, ಆಸರಕೇರಿಯಲ್ಲಿ ದ್ವಾರ ನಿರ್ಮಿಸಲು ಸಹ ತೊಂದರೆ ಕೊಟ್ಟಿದ್ದಾರೆ. ಆದರೂ ಸಹ ನಾವು ಧೈರ್ಯದಿಂದ ಕಟ್ಟಿದ್ದೇವೆ. ಮೂರಿನಕಟ್ಟೆ ಯನ್ನೂ ಸಹ ನಾವು ಕಟ್ಟೇ ಕಟ್ಟುತ್ತೇವೆ ಎಂದರು. ಮಾಜಿ ಸಚಿವ ಶಿವಾನಂದ ನಾಯ್ಕ, ಮೂರಿನಕಟ್ಟೆ ಯನ್ನು ಧ್ವಂಸ ಮಾಡಿದ್ದರೂ ಸಚಿವರು ಸೌಜನ್ಯಕ್ಕೂ ಅಲ್ಲಿಗೆ ಭೇಟಿ ನೀಡಿಲ್ಲ, ಎಸ್ಪಿ ಅವರಿಗೆ ಸರಿಯಾದ ಮಾಹಿತಿ ಇಲ್ಲದೇ ಮೂರಿನಕಟ್ಟೆ ಬಗ್ಗೆ ಮಾತನಾಡುತ್ತಿದ್ದಾರೆ. ಹಿಂದೂಗಳ ಭಾವನೆಗೆ ಧಕ್ಕೆ ತರುವ ಕೆಲಸ ಸರಕಾರ ಮಾಡಬಾರದು ಎಂದರು. ಬಿಜೆಪಿ ಮುಖಂಡ ಗೋವಿಂದ ನಾಯ್ಕ, ತಂಝೀಂ ಅಧ್ಯಕ್ಷ ಮೂರಿನಕಟ್ಟೆ ಬಗ್ಗೆ ಏನೇನೋ ಹೇಳುತ್ತಾರೆ. ಈ ಜಾಗ ತಂಝೀಂನದ್ದಲ್ಲ, ಈ ಘಟನೆಗ ಮೂಲ ಕಾರಣವೇ ತಂಜೀಂ ಸಂಸ್ಥೆಯಾಗಿದೆ. ಮೂರಿನಕಟ್ಟೆ ಗೂ ತಂಝೀಂಗೂ ಏನು ಸಂಬಂಧ ಎಂದು ಪ್ರಶ್ನಿಸಿದರು. ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಶ್ರೀಕಾಂತ ನಾಯ್ಕ, ಕಾಂಗ್ರೆಸ್ ಸರಕಾರದ ಅವಧಿಯಲ್ಲಿ ಹಿಂದೂಗಳ ಮೇಲೆ ದೌರ್ಜನ್ಯ ಹೆಚ್ಚಿದೆ. ಎಸ್ಪಿ ಅವರಿಗೆ ಮೂರಿನಕಟ್ಟೆ ಪ್ರದೇಶದ ಬಗ್ಗೆ ಸರಿಯಾದ ಮಾಹಿತಿಯೇ ಇಲ್ಲವಾಗಿದೆ ಎಂದರು. ಮುಖಂಡರಾದ ಸುಬ್ರಾಯ ದೇವಡಿಗ, ರಾಜೇಶ ನಾಯ್ಕ ಮೂರಿನಕಟ್ಟೆ ಧ್ವಂಸವನ್ನು ತೀವ್ರವಾಗಿ ಖಂಡಿಸಿ ಪೊಲೀಸರು ತಪ್ಪಿತಸ್ಥರ ಮೇಲೆ ಪ್ರಕರಣ ದಾಖಲಿಸುವುದನ್ನು ಬಿಟ್ಟು ನ್ಯಾಯ ಕೇಳಲು ಧರಣಿ ಕುಳಿತವರ ಮೇಲೆ ಪ್ರಕರಣ ದಾಖಲಿಸಿಕೊಂಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾದ ಅಧ್ಯಕ್ಷೆ ಶಿವಾನಿ ಶಾಂತರಾಮ ಭಟ್ಕಳ, ಪ್ರಮುಖರಾದ ದಿನೇಶ ನಾಯ್ಕ, ಖೇದಾರಕೊಲ್ಲೆ, ಪರಮೇಶ್ವರ ಮೇಸ್ತ, ಪ್ರಧಾನ ಕಾರ್ಯದರ್ಶಿಗಳಾದ ಶ್ರೀನಿವಾಸ ನಾಯ್ಕ, ಶ್ರೀಧರ ನಾಯ್ಕ ಮುಂತಾದವರಿದ್ದರು.

ಮನೆ ಮನೆಗಳಲ್ಲಿ ಸಂಸ್ಕಾರಗಳು ಬೆಳೆಯಲಿ: ಸ್ವರ್ಣವಲ್ಲಿ ಶ್ರೀಗಳು

◆**ಯಲ್ಲಾಪುರ:** ಸಂಸ್ಕಾರೋತ್ಸವದಲ್ಲಿ ಸಂಸ್ಕಾರಗಳನ್ನು ಪುನರಜಾಗೃತಿ ಗೊಳಿಸಿಕೊಳ್ಳುವ ಕಾರ್ಯವಾಗಿದೆ ಎಂದು ಸ್ವರ್ಣವಲ್ಲಿ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ನುಡಿದರು.

ಅವರು ಪಟ್ಟಣದ ಕಾರ್ಮಿಕ ಭವನದಲ್ಲಿ ಹವ್ಯಕ ಮಹಾಸಭಾದಿಂದ ನಡೆದ ಸಂಸ್ಕಾರೋತ್ಸವ ಸಮಾರೋಪ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ ಮಾತನಾಡಿದ ಅವರು, ಇಂದಿನ ದಿನಗಳಲ್ಲಿ ಉದ್ಯೋಗ ಹಾಗೂ ಉದ್ವೇಗವೇ ಬದುಕಾಗಿದ್ದು ಸ್ಪರ್ಧಾತ್ಮಕಯುಗದಲ್ಲಿ ಅನಿವಾರ್ಯ ವಾದರೂ ಇಂತಹ ಸಂದರ್ಭ ಉದ್ವೇಗ ಎದುರಿಸಿ ಕರಗಿಸಲು ಸಂಸ್ಕಾರವೇ ದೊಡ್ಡ ತಳಹದಿಯಾಗಿದೆ.

ಪ್ರತಿ ಜೀವವೂ ಸಂಸ್ಕಾರದ ಬಗ್ಗೆ ಉಪೇಕ್ಷೆ ಮಾಡಬಾರದು. ಹುಟ್ಟುವ ಪೂರ್ವದಿಂದಲೇ ಆರಂಭವಾದ ಸಂಸ್ಕಾರ ಪ್ರಕ್ರಿಯೆ ಹುಟ್ಟಿದ ನಂತರ, ಸಾವಿನಲ್ಲೂ ಸಂಸ್ಕಾರದ ಸಿದ್ಧತೆ ನಡೆಯುತ್ತದೆ. ಸಂಸ್ಕಾರದ ಪರಿವರ್ತನೆಗೆ ಒಂದು ಮಿತಿ ಇದೆ.ಯಾವದನ್ನಾದರೂ ಸಂಪೂರ್ಣ ಪರಿವರ್ತನೆ ಸಾಧ್ಯವಿಲ್ಲ, ಸಂಘಟನೆ, ಸಂಖ್ಯೆ, ಸಂಸ್ಕಾರ ಈ ಮೂರು ಸ ಕಾರ ಸಾಕಾರಗೊಳಿಸಬೇಕು. ಹವ್ಯಕ ಸಮುದಾಯದ ಸಂಖ್ಯೆ ವೃದ್ಧಿಯಾಗಬೇಕು. ಹವ್ಯಕ ಸಮುದಾಯದಲ್ಲಿ ವಿವಾಹ ವಿಚ್ಛೇದನ ಇಂದಿನ ದೊಡ್ಡ ಸಮಸ್ಯೆಯಾಗಿದೆ. ಅಂತೆಯೇ ನಾವು ನಮ್ಮ ಮಕ್ಕಳಿಗೆ ಸರಿಯಾದ ವಯಸ್ಸಿಗೆ ವಿವಾಹ ಮಾಡುವುದು ಗುರುತರ ಜವಾಬ್ದಾರಿಯಾಗಿದೆ. ಎಂದರಲ್ಲದೆ ಜನಿವಾರ ತೆಗೆದರೂ ಸಂಸ್ಕಾರ ತೆಗೆದು ಹಾಕಲು ಸಾಧ್ಯವಿಲ್ಲ, ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆ ಆಗಬಾರದು. ಸರಕಾರ ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಯಲ್ಲಾಪುರ ಸಂಸ್ಕಾರದಲ್ಲಿ ಗಟ್ಟಿಯಾದ ನೆಲೆಗಟ್ಟನ್ನು ಹೊಂದಿದ್ದು, ಮನೆ ಮನೆಗಳಲ್ಲಿ ಸಂಸ್ಕಾರಗಳು ಉದ್ದೀಪನಗೊಳ್ಳಲಿ ಎಂದರು.



ಅಖಿಲ ಹವ್ಯಕ ಮಹಾಸಭಾದ ಅಧ್ಯಕ್ಷ ಡಾ. ಗಿರಿಧರ ಕಜೆ ಮಾತನಾಡಿ, ಹವ್ಯಕ ಸಮಾಜದಲ್ಲಿ ಎಲ್ಲರೂ ಸಾಕ್ಷರರು, ಸ್ವಾಭಿಮಾನಿಗಳು ಇದ್ದಾರೆ. ಹವ್ಯಕ ಭಾಷೆಯನ್ನು ಮಾತನಾಡುವವರು ಹವ್ಯಕರು ಮಾತ್ರ. 43 ಬ್ರಾಹ್ಮಣ ಉಪ ಪಂಗಡವಿದೆ. ಅದರಲ್ಲಿ ಅತೀ ಹೆಚ್ಚಿನ ಸಂಖ್ಯೆ ಇರುವುದು ನಮ್ಮ ಹವ್ಯಕ ಸಂಖ್ಯೆ ನಮ್ಮದು. ಇದರ ಶ್ರೇಷ್ಠತೆ ಕಾಪಾಡಿಕೊಳ್ಳುವ ಹೆಚ್ಚಿನ ಜವಾಬ್ದಾರಿ ನಮ್ಮದಿದೆ.ಒಂದೇ ತತ್ವ ಅದ್ವೈತವನ್ನು ಅನುಸರಿಸುವ ಏಕೈಕ ಸಮಾಜ ನಮ್ಮ ಹವ್ಯಕ ಸಮಾಜ ಎಂದರು.

ಶಾಸಕ ಶಿವರಾಮ ಹೆಬ್ಬಾರ್ ಮಾತನಾಡಿ, ಸಂಸ್ಕಾರೋತ್ಸವ ಕಾರ್ಯಕ್ರಮ ಸ್ವರ್ಣವಲ್ಲೀ ಶ್ರೀಗಳ ಅನೇಕ ವರ್ಷಗಳ ಪರಿಶ್ರಮ, ತಪಸ್ಸಿನ ಫಲವಾಗಿದೆ. ಹವ್ಯಕ ಸಮುದಾಯದ ಸರ್ವತೋಮುಖ ಬೆಳವಣಿಗೆಗೆ ಇಂದಿನ ಸಂಸ್ಕಾರೋತ್ಸವ ಕಾರ್ಯಕ್ರಮವು ಅತ್ಯಂತ ಸಹಕಾರಿಯಾಗಲಿದೆ ಎಂದರು.

ಮಹಾಸಭೆಯ ಉಪಾಧ್ಯಕ್ಷ ಶ್ರೀಧರ ಭಟ್ಟ ಕೆಕ್ಕಾರು,, ನಿರ್ದೇಶಕರಾದ ಪ್ರಶಾಂತ ಹೆಗಡೆ ಹಾಗೂ ಗೋಪಾಲಕೃಷ್ಣಭಟ್ ಹಂಡ್ರಮನೆ, ವಿಶ್ವದರ್ಶನ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಹರಿಪ್ರಕಾಶ ಕೋಣೆಮನೆ ವೇದಿಕೆಯಲ್ಲಿದ್ದರು.ಈ ಸಂದರ್ಭದಲ್ಲಿ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದ ವಿಜೇತರಿಗೆ ಬಹುಮಾನ ವಿತರಿಸಲಾಯಿತು. 'ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಮಹಾಸಭಾದ ಪ್ರಧಾನ ಕಾರ್ಯದರ್ಶಿ ಪ್ರಶಾಂತ ಭಟ್ಟ ಮಳವಳ್ಳಿ ಸ್ವಾಗತಿಸಿ, ಪ್ರಾಸ್ತಾವಿಕ ಗೈದರು. ಮಹಾದೇವಿ ಭಟ್ ನಿರ್ವಹಿಸಿದರು. ಸಮೃದ್ಧಿ ಭಾಗ್ವತ್ ಪ್ರಾರ್ಥಿಸಿದರು. ನಿರ್ದೇಶಕ ಸಣ್ಣಪ್ಪ ಭಾಗ್ವತ ವಂದಿಸಿದರು.

ಕಿರುಸುದ್ದಿ

ನರೇಗಾ ಕೂಲಿ ಕಾರ್ಮಿಕರಿಗೆ ಇ-ಕೆವೈಸಿ ಕಡ್ಡಾಯ: ಡಾ.ಪರಮೇಶ

ಹಾವೇರಿ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ನರೇಗಾ) ಅಡಿ ಕೂಲಿ ಕಾರ್ಮಿಕರು ಕಡ್ಡಾಯವಾಗಿ ಇ-ಕೆವೈಸಿ ಮಾಡಿಸಿಕೊಳ್ಳಬೇಕು ಎಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಡಾ.ಪರಮೇಶ ಹುಬ್ಬಳ್ಳಿ ಸಲಹೆ ನೀಡಿದರು.

ತಾಲೂಕಿನ ಸಂಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಂಪನಕಟ್ಟಿ ಕೆರೆ ಹೂಳೆತ್ತುವ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ, ರೋಜಗಾರ್ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ನರೇಗಾ ಯೋಜನೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಿವಿಧ ಆಸ್ತಿಗಳ ಸೃಜನೆಯೊಂದಿಗೆ ಬಡ ಕೂಲಿ ಕಾರ್ಮಿಕರಿಗೆ ಉದ್ಯೋಗ ಭದ್ರತೆ ಒದಗಿಸುತ್ತಿದ್ದು, ಗ್ರಾಮೀಣ ಪ್ರದೇಶಗಳಿಂದ ವಲಸೆ ಹೋಗುವುದನ್ನು ತಡೆಯುವಲ್ಲಿ ಪ್ರಮುಖ ಪಾತ್ರವಹಿಸಿದೆ. ನರೇಗಾ ಯೋಜನೆ ಕೂಲಿ ಬೇಡಿಕೆ ಆಧಾರಿತ ಕಾರ್ಯಕ್ರಮವಾಗಿದ್ದು, ಗ್ರಾಮ ಪಂಚಾಯಿತಿಗಳ ಮೂಲಕ ಸ್ಥಳೀಯ ಮಟ್ಟದಲ್ಲೇ ಕೂಲಿ ಕೆಲಸ ನೀಡಲಾಗುತ್ತದೆ. ಕಾರ್ಮಿಕರು ಯೋಜನೆಯಡಿ ವೈಯಕ್ತಿಕ ಕಾಮಗಾರಿಗಳಾದ ರೇಷ್ಮೆ ಕೃಷಿ, ಕೃಷಿ ಹೊಂಡ, ಬದು ನಿರ್ಮಾಣ, ತೆಂಗು, ಪೇರಲ, ಗುಲಾಬಿ ತೋಟ, ದನದ ಕೊಟ್ಟಿಗೆ ನಿರ್ಮಾಣ ಸೇರಿದಂತೆ ವಿವಿಧ ಕಾಮಗಾರಿಗಳ ಸೌಲಭ್ಯವನ್ನು ಪಡೆದುಕೊಳ್ಳಬಹುದಾಗಿದೆ ಎಂದು ತಿಳಿಸಿದರು.ಈ ಸಂದರ್ಭದಲ್ಲಿ ಪಂಚಾಯಿತಿ ಐಇಸಿ ಸಂಯೋಜಕ ಗಿರೀಶ ಬೆನ್ನೂರ ಅವರು ಯೋಜನೆ ಕುರಿತು ಸಮಗ್ರ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಸಿಬ್ಬಂದಿ ವರ್ಗ ಹಾಗೂ ಕೂಲಿ ಕಾರ್ಮಿಕರು ಉಪಸ್ಥಿತರಿದ್ದರು.

ಸಂಜೀವ ಪೂಜಾರ, ಖಾದರ ಅಲಿ ನದಾಫ್ ಆಯ್ಕೆ

ಶಿಗ್ಗಾವಿ: ಇತ್ತೀಚೆಗೆ ನಡೆದ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆಯಲ್ಲಿ ತಾಲೂಕಿನ ನೂತನ ಅಧ್ಯಕ್ಷರಾಗಿ ಸಂಜೀವ ಪೂಜಾರ, ಪ್ರಧಾನ ಕಾರ್ಯದರ್ಶಿಗಳಾಗಿ ಖಾದರ ಅಲಿ ನದಾಫ್, ಖಜಾಂಚಿಯಾಗಿ ಮಂಗಳಾ ಕೋರಿ, ಉಪಾಧ್ಯಕ್ಷರಾಗಿ ಚಂದ್ರಪ್ಪ ದೊಡ್ಮನಿ, ಝುಡ್ ಕೆ. ಅತ್ತಾರ, ಸಹ ಕಾರ್ಯದರ್ಶಿಯಾಗಿ ಮಂಜುನಾಥ ಬಿಶೆಟ್ಟಿ, ಸಂಘಟನಾ ಕಾರ್ಯದರ್ಶಿಯಾಗಿ ನಾಗಪ್ಪ ಲಮಾಣಿ ಅವರುಗಳು ಅವಿರೋಧವಾಗಿ ಆಯ್ಕೆಯಾಗಿದ್ದು, ಜಿಲ್ಲಾ ಸಂಘದ ನೂತನ ಉಪಾಧ್ಯಕ್ಷರಾಗಿ ಎಫ್. ಸಿ ಕಾಡಪ್ಪಗೌಡ್ರ, ಸಹ ಕಾರ್ಯದರ್ಶಿಗಳಾಗಿ ಸುಮಾ ಆರ್. ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿ ಸಿ.ಡಿ. ಯತ್ನಳ್ಳಿ ಹಾಗೂ ಸಹಾಯಕ ಚುನಾವಣಾಧಿಕಾರಿಯಾಗಿ ಎನ್.ಎಂ. ನದಾಫ್ ಕಾರ್ಯ ನಿರ್ವಹಿಸಿದರು. ಆಯ್ಕೆಯಾದ ನೂತನ ಜಿಲ್ಲಾ ಹಾಗೂ ನೂತನ ತಾಲೂಕಾ ಪದಾಧಿಕಾರಿಗಳಿಗೆ ತಾಲೂಕಾ ನೌಕರರ ಸಂಘದ ಅಧ್ಯಕ್ಷ ಅರುಣ ಹುಡೇದಗೌಡ್ರ ನೇತೃತ್ವದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.




ಅವಿರೋಧ ಆಯ್ಕೆ

ಹಾನಗಲ್ಲ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಹಾನಗಲ್ಲ ತಾಲೂಕು ಘಟಕದ ನೂತನ ಅಧ್ಯಕ್ಷರಾಗಿ ಯು.ಡಿ.ಸವಣೂರ, ಕಾರ್ಯದರ್ಶಿಗಳಾಗಿ ಮಖಬೂಲ್ ಲಿಂಗದಹಳ್ಳಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆಒಟ್ಟು ಐದು ವರ್ಷಗಳ ಅವಧಿಗೆ ನಡೆದ ಚುನಾವಣೆಯಲ್ಲಿ ತಾಲೂಕಾಧ್ಯಕ್ಷರಾಗಿ ಯು.ಡಿ. ಸವಣೂರ ಮತ್ತು ಪ್ರಧಾನ ಕಾರ್ಯದರ್ಶಯಾಗಿ ಮಖಬೂಲ್ ಲಿಂಗದಹಳ್ಳಿ ಸೇರಿದಂತೆ ಏಳು ಮಂದಿ ಪದಾಧಿಕಾರಿಗಳು ಸಹಿತ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ ನೂತನ ಪದಾಧಿಕಾರಿಗಳಾಗಿ ಉಪಾಧ್ಯಕ್ಷರಾಗಿ ಅರ್ಜುನ ಲಮಾಣಿ, ಉಪಾಧ್ಯಕ್ಷರಾಗಿ ಸಾವಿತ್ರಿ ಗೊಂದಿ, ಖಜಾಂಜಿಯಾಗಿ ಜಿ.ಜಿ. ನೂಲ್ವಿ, ಸಹ ಕಾರ್ಯದರ್ಶಿಯಾಗಿ ಮಧುಮತಿ ಅಪ್ಪಣ್ಣನವರ, ಸಹ ಕಾರ್ಯದರ್ಶಿಯಾಗಿ ಪವಿತ್ರಾ ಕಾರಡಗಿ, ಸಂಘಟನಾ ಕಾರ್ಯದರ್ಶಿಯಾಗಿ ಅನಿತಾ ಕಿತ್ತೂರ, ಸಂಘಟನಾ ಕಾರ್ಯದರ್ಶಿಯಾಗಿ ಶಿಲ್ಪಾ ಕೋರಿ ಆಯ್ಕೆಗೊಂಡರು.






ಹಾವೇರಿ: ತಾಲೂಕಿನ ಸಂಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಂಪನಕಟ್ಟಿ ಕೆರೆ ಹೂಳೆತ್ತುವ ಕಾಮಗಾರಿ ಸ್ಥಳಕ್ಕೆ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಡಾ.ಪರಮೇಶ ಹುಬ್ಬಳ್ಳಿ ಅವರು ಭೇಟಿ ನೀಡಿ ರೋಜಗಾರ್ ದಿನಾಚರಣೆ ಕಾರ್ಯಕ್ರಮ ಆಚರಿಸಿದರು.ಈ ಸಂದರ್ಭದಲ್ಲಿ ಪಂಚಾಯಿತಿ ಐಇಸಿ ಸಂಯೋಜಕ ಗಿರೀಶ ಬೆನ್ನೂರ ಅವರು ಯೋಜನೆ ಕುರಿತು ಸಮಗ್ರ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಸಿಬ್ಬಂದಿ ವರ್ಗ ಹಾಗೂ ಕೂಲಿ ಕಾರ್ಮಿಕರು ಉಪಸ್ಥಿತರಿದ್ದರು.

ರೈತ ಸಂಪರ್ಕ ಕೇಂದ್ರದಲ್ಲಿ ರೈತರ ಪ್ರತಿಭಟನೆ

ಗುತ್ತಲ: ಬಿತ್ತನೆ ಬೀಜ ವಿತರಿಸಲು ತಾಂತ್ರಿಕ ದೋಷದಿಂದ ಆಕ್ರೋಶಗೊಂಡ ರೈತರು ನಗರದಲ್ಲಿರುವ ರೈತ ಸಂಪರ್ಕ ಕೇಂದ್ರದಲ್ಲಿ ಪ್ರತಿಭಟಿಸಿ ಅಧಿಕಾರಿಗಳೊಂದಿಗೆ ವಾಗ್ವಾದಕ್ಕಿಳಿದ ಘಟನೆ ಸೋಮವಾರದಂದು ನಡೆದಿದೆ.

ಬೆ.10ಗಂಟೆಯಿಂದಲೇ ರೈತರು ಬಿತ್ತನೆ ಬೀಜ ಖರೀದಿ ಮಾಡಲು ರೈತ ಸಂಪರ್ಕ ಕೇಂದ್ರಕ್ಕೆ ಜಮಾಯಿಸಿದ್ದರು.

ಆದರೆ ಸರ್ವರ್ ಸಮಸ್ಯೆ ಸೇರಿದಂತೆ ತಾಂತ್ರಿಕ ದೋಷದಿಂದ ರೈತರಿಗೆ ಸಂಜೆಯಾದರೂ ಬೀಜ ಗೊಬ್ಬರ ವಿತರಣೆ ಮಾಡಿಲ್ಲ. ಸುಮಾರು ನಾಲ್ಕೈದು ತಾಸು ರೈತರು ಸರದಿ ಸಾಲಿನಲ್ಲಿ ನಿಂತರೂ ಪ್ರಯೋಜನವಾಗಿಲ್ಲ ಇದರಿಂದಾಗಿ ರೈತರು ಆಕ್ರೋಶಗೊಂಡು ಪ್ರತಿಭಟನೆ ಮಾಡಿದರು.

ರೈತರಿಗೆ ಸರಳವಾಗಿ ಬೀಜ ಗೊಬ್ಬರ ವಿತರಿಸಲು ಸರಕಾರ ಮುಂದಾಗಬೇಕು ಇಲ್ಲವಾದರೆ ರೈತರು ಸಂಕಷ್ಟವನ್ನು ಅನುಭವಿಸಬೇಕಾಗುತ್ತದೆ. ಕೂಡಲೇ ಅಧಿಕಾರಿಗಳು ತಾಂತ್ರಿಕ ದೋಷವನ್ನು ಸರಿಪಡಿಸಿ ಬೀಜ ಗೊಬ್ಬರ ವಿತರಣೆ ಮಾಡಲು ಮುಂದಾಗಬೇಕು ಇಲ್ಲವಾದರೆ ರೈತ ಸಂಪರ್ಕ ಕೇಂದ್ರದ ಎದುರು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದರು ಪ್ರತಿಭಟನಾಕಾರರು ಎಚ್ಚರಿಸಿದರು.

ಗುತ್ತಲ ಸೇರಿದಂತೆ ಕೂರಗುಂದ, ಬಸಾಪುರ,ತಿಮ್ಮಾಪುರ, ಕಂಚಾರಗಟ್ಟಿ, ಹರಳಹಳ್ಳಿ ಸೇರಿದಂತೆ ಅನೇಕ ಗ್ರಾಮಗಳ ನೂರಾರು ರೈತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಗುತ್ತಲ: ಬಿತ್ತನೆ ಬೀಜ ವಿತರಿಸಲು ತಾಂತ್ರಿಕ ದೋಷದಿಂದ ಆಕ್ರೋಶಗೊಂಡ ರೈತರು ನಗರದಲ್ಲಿರುವ ರೈತ ಸಂಪರ್ಕ ಕೇಂದ್ರದಲ್ಲಿ ಪ್ರತಿಭಟಿಸಿ ಅಧಿಕಾರಿಗಳೊಂದಿಗೆ ವಾಗ್ವಾದಕ್ಕಿಳಿದ ಘಟನೆ ಸೋಮವಾರದಂದು ನಡೆದಿದೆ.

ಕನಕದಾಸರ 12 ಅಡಿ ಕಂಚಿನ ಪುತ್ಥಳಿ ಅನಾವರಣ

ಕನಕದಾಸರ ಚಿಂತನೆ ಇಂದಿಗೂ ಪ್ರಸ್ತುತ

ಹಾನಗಲ್ಲ: ಬೇಡವಾದುದನ್ನೇ ಹುಡುಕಲು ಹೋಗುತ್ತೇವೆ ವಿನಃ ನಮ್ಮೊಳಗಿನ ಶಕ್ತಿ, ಸಾಮರ್ಥ್ಯ ಅರಿಯದಾಗಿದ್ದೇವೆ. ಒತ್ತಡದ ಬದುಕಿಗೆ ಸಿಲುಕಿ ನಮ್ಮನ್ನು ನಾವೇ ಮರೆಯುತ್ತಿದ್ದೇವೆ, ಸಂಸ್ಕೃತಿ ಹಾಳು ಮಾಡುತ್ತಿದ್ದೇವೆ ಎಂದು ಶಾಸಕ ಶ್ರೀನಿವಾಸ ಮಾನೆ ಬೇಸರ ವ್ಯಕ್ತಪಡಿಸಿದರು.

ಸೋಮವಾರ ಇಲ್ಲಿನ ಬಸ್ ನಿಲ್ದಾಣದ ಬಳಿಯ ಕನಕ ಉದ್ಯಾನವನದಲ್ಲಿ ದಾಸಶ್ರೇಷ್ಠ ಭಕ್ತ ಕನಕದಾಸರ 12 ಅಡಿ ಕಂಚಿನ ಪುತ್ಥಳಿ ಅನಾವರಣಗೊಳಿಸಿ ಬಳಿಕ ಡಾ.ಬಾಬು ಜಗಜೀವರಾಂ ಭವನದಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡಿದ ಅವರು, ಆ ದಿನಗಳಲ್ಲಿಯೇ ಜಾತಿ, ವರ್ಣ ಭೇದಭಾವಗಳ ವಿರುದ್ಧ ಧ್ವನಿ ಎತ್ತಿ ಮಾನವೀಯತೆಯನ್ನೇ ಮಹಾಧರ್ಮ ಎಂದು ಸಾರಿದ ಕನಕದಾಸರ ಕಂಚಿನ ಪುತ್ಥಳಿಯ ಅನಾವರಣದ ಕನಸು ಇಂದು ನನಸಾಗಿದೆ. ಕಂಚಿನ ಪುತ್ಥಳಿ ಅದೊಂದು ಪ್ರತಿಮೆಯಲ್ಲ, ಅದು ಅವರ ಆದರ್ಶ, ಚಿಂತನೆ ಮತ್ತು ಸಂಸ್ಕೃತಿಯ ಪ್ರತೀಕವಾಗಿದೆ. ಮುಂದಿನ ಪೀಳಿಗೆಗೆ ಕನಕದಾಸರ ವಿಚಾರಧಾರೆ ಪರಿಚಯಿಸಲು ಇಂತಹ ಕಾರ್ಯಕ್ರಮಗಳು ಪ್ರೇರಣೆಯಾಗಬೇಕಿದೆ. ಕನಕದಾಸರ ತತ್ವಗಳು ಹೃದಯಾಂತರಾಳದಲ್ಲಿ ನೆಲೆಸಬೇಕಿದೆ ಎಂದು ಹೇಳಿದ ಅವರು ಯಳವಟ್ಟಿ ಗ್ರಾಮದಲ್ಲಿರುವ ಕಾಗಿನೆಲೆ ಗುರುಪೀಠದ ನಿವೇಶನದಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಮುಂದಿನ 2 ವರ್ಷಗಳಲ್ಲಿ ಹಂತ, ಹಂತವಾಗಿ ಅನುದಾನ ದೊರಕಿಸಲು ಕಾಳಜಿ ವಹಿಸುವ ಭರವಸೆ ನೀಡಿದರು.

ಸಾನ್ನಿಧ್ಯ ವಹಿಸಿದ್ದ ಕಾಗಿನೆಲೆಯ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಮಾತನಾಡಿ, ಕಳೆದ ಕೆಲ ವರ್ಷಗಳಿಂದ ಸರ್ಕಲ್‌ಗಳಲ್ಲಿನ ಮೂರ್ತಿ ಅನಾವರಣ ಕಾರ್ಯಕ್ರಮಕ್ಕೆ ಹೋಗದೇ ಇರಲು ಸಂಕಲ್ಪಿಸಿದ್ದೆ. ಈ ಹಿಂದೆ 2003 ರ ಸಂದರ್ಭದಲ್ಲಿ ಹಾನಗಲ್ ನಗರದ ಕನಕ ಉದ್ಯಾನವನದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣ ವಿರೋಧಿಸಿ ಹೋರಾಟ ಕೈಗೊಂಡಿದ್ದೆ. ಹಾಗಾಗಿ ಇದು ತಮ್ಮ ಜೀವನದ ಮೊದಲ ಹೋರಾಟವಾಗಿದ್ದರಿಂದ ಅನಾವರಣ ಸಮಾರಂಭದಲ್ಲಿ ಭಾಗವಹಿಸಿದ್ದೇನೆ. ಹಾದಿಬೀದಿಗಳಲ್ಲಿ ಮೂರ್ತಿಗಳು ಇರಬಾರದು ಎನ್ನುವ ಸುಪ್ರೀಂ ಕೋರ್ಟ್ ನಿರ್ದೇಶನವಿದೆ. ದಾರ್ಶನಿಕರ ಹೆಸರಿನಲ್ಲಿ ಎಂತಹ ಸಂದರ್ಭದಲ್ಲಿ ಸಹ ಸಾಮರಸ್ಯ ಕದಡುವ ಕೆಲಸ ನಡೆಯಬಾರದು. ಆದರೆ ಮೂರ್ತಿಯಿಂದ ಸಹಬಾಳ್ವೆ, ಸಾಮರಸ್ಯ ಮೂಡಿದರೆ ಅಭ್ಯಂತರವಿಲ್ಲ ಎಂದು ಹೇಳಿದ ಅವರು ಪುತ್ಥಳಿಗೆ ಅವಮಾನ ಆಗದ ರೀತಿಯಲ್ಲಿ ನೋಡಿಕೊಳ್ಳುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ಬದಲಾದ ಇಂದಿನ ಸಂದರ್ಭದಲ್ಲಿ ಸತ್ಯಕ್ಕಿಂತಲೂ ಪ್ರಿಯವಾದ ವಿಷಯವನ್ನು ಜನ ನಿರೀಕ್ಷಿಸುತ್ತಿದ್ದಾರೆ. ಶಿಕ್ಷಣಕ್ಕೆ ಮೊದಲಾದ್ಯತೆ ನೀಡಿದರೆ ಮಾತ್ರ ಸಮಾಜ ವಿಕಾಸ ಹೊಂದಲು ಸಾಧ್ಯವಿದೆ ಎಂದರು.

ಹೋತನಹಳ್ಳಿಯ ಸಿದ್ದಾರೂಢ ಮಠದ ಸದ್ಗುರು ಶಂಕರಾನಂದ ಸ್ವಾಮೀಜಿ ಸಮ್ಮುಖ, ಪ್ರದೇಶ ಕುರುಬರ ಸಂಘದ ತಾಲೂಕಾಧ್ಯಕ್ಷ ಮಹೇಶ ಪವಾಡಿ ಅಧ್ಯಕ್ಷತೆ ವಹಿಸಿದ್ದರು.

ಹಾವೇರಿಯ ಮಾಜಿ ಶಾಸಕ ಶಿವರಾಜ ಸಜ್ಜನರ, ಪ್ರಮುಖರಾದ ಯಲ್ಲಪ್ಪ ಕಿತ್ತೂರ, ಭೋಜರಾಜ್ ಕರೂದಿ, ಎಂ.ಬಿ.ಕಲಾಲ, ಎ.ಎಸ್.ಬಳ್ಳಾರಿ, ನಾಗರಾಜ ಅನ್ವೇರಿ, ರಾಜೇಂದ್ರ ಹಾವೇರಣ್ಣನವರ, ರವಿ ಒಡೆಯರ, ಮಾಲತೇಶ ಬ್ಯಾಗವಾದಿ, ಸುರೇಶ ದೊಡ್ಡಕುರುಬರ, ಕೆಪಿಸಿಸಿ ಕಾರ್ಯದರ್ಶಿ ಪ್ರಕಾಶಗೌಡ ಪಾಟೀಲ, ಜೆಡಿಎಸ್ ತಾಲೂಕು ಅಧ್ಯಕ್ಷ ರಾಮನಗೌಡ ಪಾಟೀಲ ಸೇರಿದಂತೆ ಇನ್ನೂ ಹಲವರು ಇದ್ದರು. ದಾನಪ್ಪ ಗಂಟೇರ ಸ್ವಾಗತಿಸಿದರು. ವಿನಾಯಕ ಕುರುಬರ ನಿರೂಪಿಸಿದರು.



> **ಮಾನವನೊಳಗಿರುವ ಮೌಲ್ಯವೇ ನಿಜವಾದ ಶ್ರೀಮಂತಿಕೆ ಎಂಬ ಸಂದೇಶವನ್ನು ಕನಕದಾಸರು ಸಾರಿದ್ದಾರೆ. 'ನಾನು' ಹೋದರೆ ಹೋದೇನು ಎನ್ನುವ ಕನಕದಾಸರ ಮಾತುಗಳ ನಿಜ ಸಾರ ಅರಿತು ಸಾಗಿದರೆ ಬದುಕು ಮಾನ್ಯವಾಗಲಿದೆ.**
> ■ ಶ್ರೀನಿವಾಸ ಮಾನೆ, ಶಾಸಕ

ಉತ್ತಮ ಅಧ್ಯಯನದಿಂದ ಆದರ್ಶ ವ್ಯಕ್ತಿತ್ವ ಸಾಧ್ಯ

ಹಾವೇರಿ: ವಿದ್ಯಾರ್ಥಿಗಳಾದವರು ಕಠಿಣ ಪರಿಶ್ರಮ ಮತ್ತು ಉತ್ತಮ ಅಧ್ಯಯನದಿಂದ ಸಾಗಿದರೆ ಭವಿಷ್ಯದಲ್ಲಿ ಆದರ್ಶ ವ್ಯಕ್ತಿಗಳಾಗಲು ಸಾಧ್ಯವೆಂದು ವಾಣಿಜ್ಯ ವಿಭಾಗದ ಅಧ್ಯಾಪಕ, ಸಾಹಿತಿ ಡಾ.ಗುರುಪಾದಯ್ಯ ಸಾಲಿಮಠ ಅಭಿಪ್ರಾಯಪಟ್ಟರು.

ನಗರದ ಗುದ್ಲೆಪ್ಪ ಹಳ್ಳಿಕೇರಿ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ 2026-27ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಪಿಯು ವಿದ್ಯಾರ್ಥಿಗಳ ಕಾಲೇಜು ಪ್ರಾರಂಭೋತ್ಸವ ಹಾಗೂ ಗಣೇಶ ಮತ್ತು ವಿದ್ಯಾಮಾತೆ ಸರಸ್ವತಿಯ ಪೂಜಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿ, ವಿದ್ಯಾರ್ಥಿಗಳ ಮನಸ್ಸು ಸದಾ ಚಂಚಲ ಮತ್ತು ಚಲನಶೀಲವಾಗಿರುತ್ತದೆ. ವಯೋಸಹಜವಾಗಿ ಚಿಟ್ಟೆಯಂತೆ ಕೈಗೆ ಎಟುಕದೆ ಹಾರಾಡುತ್ತಿರುತ್ತದೆ ಎಂದರು.

ಚಲನಶೀಲ ಮನಸ್ಸನ್ನು ಸಂಸ್ಕಾರಯುಕ್ತವಾಗಿ ಅಧ್ಯಯನದತ್ತ ಕೇಂದ್ರೀಕರಿಸಿದರೆ ಉತ್ತಮ, ಉದಾತ್ತ ಚಿಂತನ ಶೀಲತೆಗಳಿಗೆ ಹಾದಿ ಮಾಡಿಕೊಟ್ಟಂತಾಗುತ್ತದೆ. ಗೆಲುವು ಒಮ್ಮಿಂದಲೇ ಒಲಿಯುವುದಿಲ್ಲ. ಆದಕ್ಕಾಗಿ ನಿರಂತರ ಅಧ್ಯಯನದ ಜೊತೆಗೆ ಸ್ವಅಧ್ಯಾಯನ ರೂಢಿಸಿಕೊಂಡು, ಹೊಸ ಆಲೋಚನೆ, ಹೊಸದೊಂದು ಸೃಷ್ಟಿಯ ಆವಿಷ್ಕಾರದೆಡೆಗೆ ಹೆಜ್ಜೆ ಹಾಕಬೇಕಿದೆ. ನೈತಿಕ ಶಿಕ್ಷಣ ಇಂದಿನ ಅಗತ್ಯವಾಗಿದೆ. ಇದರೊಂದಿಗೆ ಬೆರೆತು ಮೌಲ್ಯಯುತ ಬದುಕನ್ನು ಕಟ್ಟಿಕೊಳ್ಳಬೇಕಿದೆ ಎಂದು ಕಿವಿಮಾತು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಪದವಿಪೂರ್ವ ಪ್ರಾಚಾರ್ಯ ಡಾ.ಜಿ.ಆರ್. ಶಿಂಧೆ ಮಾತನಾಡಿದರು. ಡಾ. ಎಂ.ವಿ. ಸಾತೇನಹಳ್ಳಿ, ಪ್ರೊ.ಆರ್.ಎಸ್. ರಾಯ್ಕರ್, ಪ್ರೊ.ಬಸವರಾಜೇಶ್ವರಿ ಜಿ.ಕೆ., ಮಾತನಾಡಿದರು. ಪದ್ಮ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಪ್ರೊ.ಎಂ.ಎಸ್. ಬೆಂಡಿಗೇರಿ ಪ್ರಾಸ್ತಾವಿಕ ಮಾತನಾಡಿದರು. ಪ್ರೊ.ಸಿದ್ದೇಶ್ವರ ಹುಣಸಿಕಟ್ಟಿಮಠ ಸ್ವಾಗತಿಸಿ, ಪರಿಚಯಿಸಿದರು. ಪ್ರೊ.ಅಕ್ಷತಾ ಹಿರೇಮಠ ನಿರೂಪಿಸಿದರು. ಪ್ರೊ.ಅನಿತಾ ಉಗರಗೋಳ ವಂದಿಸಿದರು. ಪ್ರೊ.ನಾಗರಾಜ ಮುಚ್ಚಟ್ಟಿ, ಡಾ.ಶಿವರಾಜಮಂಟೂರ,ಪ್ರೊ.ಅವಿಷ್ಕಾರಶ್ರೀ ಸವಣೂರ, ಪ್ರೊ. ಜಿಲಾನಿ ದೊಡ್ಮನಿ, ಪ್ರೊ. ಬಸವರಾಜ್ ಹೊಂಗಲ್, ಪ್ರೊ.ಪ್ರಶಾಂತ ಕೋರಿಶೆಟ್ಟರ, ಪ್ರೊ.ಪ್ರವೀಣ್ ಚೂರಿ, ಪ್ರೊ.ಶಿವಮೂರ್ತಿ ಹಿರೇಮಠ, ಪ್ರೊ. ಸ್ನೇಹಾ ಹಿರೇಮಠ, ಪ್ರೊ.ಅಕ್ಕಮ್ಮ ಅಮಾತಿ, ಪ್ರೊ.ಸುಮಾ ನಂದಿಕೊಪ್ಪ ಸೇರಿದಂತೆ ವಿದ್ಯಾರ್ಥಿಗಳು-ಪಾಲಕರು, ಬೋಧಕ ಬೋಧಕೇತರ ಸಿಬ್ಬಂದಿ ಭಾಗವಹಿಸಿದ್ದರು.



ರೈತ ಸಮುದಾಯ ಭವನ ಉದ್ಘಾಟನೆ

ತಡಸ: ಸ್ಥಳೀಯ ಗ್ರಾಮದಲ್ಲಿ ಇಂದು ನೂತನವಾಗಿ ನಿರ್ಮಿಸಲಾದ ರೈತ ಸಮುದಾಯ ಭವನದ ಉದ್ಘಾಟನಾ ಸಮಾರಂಭವು ಅತ್ಯಂತ ಸಡಗರ-ಸಂಭ್ರಮದಿಂದನೆರವೇರಿತು. ಗ್ರಾಮದ ರೈತರ ಬಹುದಿನಗಳ ಕನಸಾಗಿದ್ದ ಈ ಭವನವು ಇಂದಿನಿಂದ ಅಧಿಕೃತವಾಗಿ ಸಾರ್ವಜನಿಕ ಸೇವೆಗೆ ಮುಕ್ತವಾಗಿದೆ.

ಭವನ ಉದ್ಘಾಟಿಸಿ ಮಾತನಾಡಿದ ರೈತ ಸಂಘಟನೆಯ ರಾಜ್ಯ ಗೌರವಾಧ್ಯಕ್ಷ ಸಿದ್ದುನಗೌಡ್ರು ಪಾಟೀಲ ಅವರು, ರೈತರು ಒಗ್ಗೂಡಲು ಮತ್ತು ಕೃಷಿ ಸಂಬಂಧಿತ ಚರ್ಚೆಗಳನ್ನು ನಡೆಸಲು ಈ ಭವನವು ಒಂದು ಪ್ರಮುಖ ಕೇಂದ್ರವಾಗಲಿದೆ ಎಂದರು.

ಒಗ್ಗಟ್ಟು ಪ್ರದರ್ಶಿಸಿದ ರೈತ ಬಾಂಧವರು: ತಡಸ್ ಗ್ರಾಮದ ಕೃಷಿಕರು ಹಾಗೂ ಹಿರಿಯ ಮುಖಂಡರು ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ರೈತ ಸಮುದಾಯದ ಒಗ್ಗಟ್ಟನ್ನು ಪ್ರದರ್ಶಿಸಿದರು.

ಗ್ರಾಮಸ್ಥರ ಹರ್ಷ: ನಮ್ಮದೇ ಆದ ಒಂದು ಸಮುದಾಯ ಭವನ ಬೇಕೆಂಬ ಹಂಬಲ ಇಂದಿಗೆ ಈಡೇರಿದೆ. ಇನ್ಮುಂದೆ ನಮ್ಮ ಸಭೆ-ಸಮಾರಂಭಗಳಿಗೆ, ಕೃಷಿ ತರಬೇತಿಗಳಿಗೆ ಇದು ಆಸರೆಯಾಗಲಿದೆ ಎಂದು ತಡಸ್ ಗ್ರಾಮದ ರೈತ ಬಾಂಧವರು ಅತ್ಯಂತ ಸಂತಸದಿಂದ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ, ರಾಜ್ಯ ಉಪಾಧ್ಯಕ್ಷರು ಕೆ ಎಸ್ ಸುಧೀರಕುಮಾರ, ಚಿಕ್ಕಣ್ಣಾ ಚಳ್ಳಕೆರೆ ಹಿರಿಯ ಮುಖಂಡರು, ಉಳುವಪ್ಪ ಒಡಿಯರ ರಾಜ್ಯ ಉಪಾಧ್ಯಕ್ಷರು,ಮಲ್ಲಿಕಾರ್ಜುನ ಹುಂಬಿ ಜಿಲ್ಲಾ ಅದ್ಯಕ್ಷರು ಬೆಳಗಾವಿ , ಪ್ರಕಾಶ ಯು ಬಾರ್ಕಿ ಜಿಲ್ಲಾ ಅದ್ಯಕ್ಷರು ಹಾವೇರಿ, ಪ್ರಕಾಶ ಹೆಚ್ ಚಳ್ಳಕೆರೆ ತಾಲೂಕು ಅದ್ಯಕ್ಷರು,ಶಂಕರ ಸುಣಗಾರ, ಬಸವರಾಜ ಹಣ್ಣಿಕೇರಿ, ವಿಠ್ಠಲ ಬಿರಾದಾರ, ಕರೆಪ್ಪ ಆಳೂರ, ಪ್ರಕಾಶ ನಿಕ್ಕಂ, ನಿಂಗಪ್ಪ ಕಾಯಿಯವರ, ಹನುಮಂತಪ ಕೋಣನಕೊಪ್ಪ, ಧರ್ಮಗೌಡ ಹೊನ್ನಾಗೌಡರ, ತಡಸ್ ಗ್ರಾಮದ ಅಖಂಡ ರೈತ ಸಂಘದ ಅಧ್ಯಕ್ಷರಾದ ಕರಿಯಪ್ಪ ಆಳೂರ್, ಉಪಾಧ್ಯಕ್ಷರಾದ ಶಿವಪ್ಪ ಗೊಬ್ಬುರ್, ಕಾರ್ಯದರ್ಶಿಗಳಾದ ಪ್ರಕಾಶ್ ನಿಕ್ಕಂ, ಕೃಷ್ಣ ಚೌಡಾಳ, ಡಿಕಪ್ಪ ಗೊಬ್ಬುರ, ನಿಂಗಪ್ಪ ಗುರುನಳ್ಳಿ, ಬುಡ್ಡೆಸಾಭ ಜಮಾದಾರ್, ನಾಗಪ್ಪ ಕಟಗಿ, ಕುಬೇರಪ್ಪ ಕಂಪ್ಲಿಕೊಪ್ಪ, ಕಲ್ಲನಗೌಡ ಪಾಟೀಲ, ವಿಶಾಲ್ ಗೋಡಕೆ, ಮಲ್ಲಯ್ಯ ಪೂಜಾರ್, ರಾಜು ಲಮಾಣಿ, ರಾಜು ಗೋದಕರ್, ರೈತ ಮುಖಂಡರು ಉಪಸ್ಥಿತರಿದ್ದರು.



ಮುಂದುವರಿದ ಡೀಸೆಲ್ ಅಭಾವ: ರೈತರು, ವಾಹನ ಸವಾರರ ಪರದಾಟ



ಹಾವೇರಿ: ಜಿಲ್ಲೆಯಲ್ಲಿ ಡೀಸೆಲ್ ಅಭಾವ ಮುಂದುವರಿದಿದ್ದು, ಸಾರ್ವಜನಿಕರು ಹಾಗೂ ರೈತರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. ಜಿಲ್ಲೆಯ ವಿವಿಧ ಬಂಕ್‌ಗಳ ಎದುರು ವಾಹನಗಳು ಸರದಿ ಸಾಲಿನಲ್ಲಿ ನಿಂತಿರುವ ದೃಶ್ಯ ಸಾಮಾನ್ಯವಾಗಿದೆ. ಹಾವೇರಿ, ರಾಣೆಬೆನ್ನೂರು, ಶಿಗ್ಗಾವಿ, ಸವಣೂರು, ಹಾನಗಲ್ಲ, ಬ್ಯಾಡಗಿ, ಹಿರೇಕೆರೂರು ಹಾಗೂ ರಟ್ಟೀಹಳ್ಳಿ ತಾಲೂಕಿನ ಹಲವೆಡೆ ಡೀಸೆಲ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿರುವ ಹಿನ್ನೆಲೆಯಲ್ಲಿ ವಾಹನ ಸವಾರರು ಗಂಟೆಗಟ್ಟಲೆ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ.

ವಿಶೇಷವಾಗಿ ಕೃಷಿ ಚಟುವಟಿಕೆಗಳು ಚುರುಕುಗೊಂಡಿರುವ ಈ ಸಂದರ್ಭದಲ್ಲಿ ಡೀಸೆಲ್ ಕೊರತೆ ರೈತರಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಟ್ರ್ಯಾಕ್ಟರ್, ಟಿಲ್ಲರ್ ಸೇರಿದಂತೆ ಕೃಷಿ ಯಂತ್ರೋಪಕರಣಗಳಿಗೆ ಅಗತ್ಯವಿರುವ ಡೀಸೆಲ್ ಸಿಗದೆ ಬಿತ್ತನೆ ಕಾರ್ಯ ವಿಳಂಬವಾಗುತ್ತಿದೆ. ಇದರಿಂದ ಕೃಷಿ ಚಟುವಟಿಕೆಗಳಿಗೆ ಹಿನ್ನಡೆಯಾಗುವ ಆತಂಕ ರೈತ ವಲಯದಲ್ಲಿ ವ್ಯಕ್ತವಾಗಿದೆ.

ಕೆಲವು ಬಂಕ್‌ಗಳಲ್ಲಿ ಸೀಮಿತ ಪ್ರಮಾಣದಲ್ಲಿ ಮಾತ್ರ ಇಂಧನ ವಿತರಣೆ ಮಾಡಲಾಗುತ್ತಿದ್ದು, ಇದರಿಂದ ಸಾರ್ವಜನಿಕರು ಬೆಳಗ್ಗಿನಿಂದಲೇ ಬಂಕ್‌ಗಳ ಮುಂದೆ ಸಾಲಿನಲ್ಲಿ ನಿಲ್ಲುವ ಪರಿಸ್ಥಿತಿ ಎದುರಾಗಿದೆ. ದೂರದ ಊರುಗಳಿಂದ ಬಂದ ರೈತರು ಹಾಗೂ ವಾಹನ ಸವಾರರು ಇಂಧನಕ್ಕಾಗಿ ಪರದಾಡುತ್ತಿರುವ ದೃಶ್ಯಗಳು ಕಂಡುಬರುತ್ತಿವೆ. ಇಂಧನ ಸರಬರಾಜು ವ್ಯವಸ್ಥೆಯನ್ನು ತಕ್ಷಣ ಸರಿಪಡಿಸಿ, ಜಿಲ್ಲೆಯಲ್ಲಿ ಸಮರ್ಪಕ ಪ್ರಮಾಣದಲ್ಲಿ ಡೀಸೆಲ್ ಹಾಗೂ ಪೆಟ್ರೋಲ್ ಲಭ್ಯವಾಗುವಂತೆ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಹಾಗೂ ರೈತರು ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ವೈದ್ಯರ ವಿರುದ್ಧ ಆರೋಪ ಖಂಡಿಸಿ ಮನವಿ

ಬ್ಯಾಡಗಿ: ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರ ವಿರುದ್ಧ ಆಧಾರ ರಹಿತ ಮತ್ತು ಸುಳ್ಳು ಆರೋಪಗಳನ್ನು ಮಾಡುತ್ತಿರುವವರನ್ನು ಖಂಡಿಸಿ ಹಾಗೂ ಆಸ್ಪತ್ರೆಯಲ್ಲಿ ಸ್ತ್ರೀ ರೋಗ ತಜ್ಞರ ನೇಮಿಸುವಂತೆ ಆಗ್ರಹಿಸಿ ಕರುನಾಡ ಸಮಗ್ರ ಮಹಿಳಾ ಹಿತ ರಕ್ಷಣಾ ಸಮಿತಿ ಸದಸ್ಯರು ತಾಲೂಕು ಅಧಿಕಾರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಿದರು.

ಈ ವೇಳೆ ಪ್ರತಿಭಟನೆ ನೇತೃತ್ವ ವಹಿಸಿದ್ದ ರಕ್ಷಣಾ ಸಮಿತಿಯ ಸದಸ್ಯ ಅಧ್ಯಕ್ಷ ಪರೀದಾ ಬಾನು ನದಿಮುಲ್ಲಾ ಮಾತನಾಡಿ, ಪಟ್ಟಣದಲ್ಲಿ ಕೆಲವರು ತಮ್ಮ ಸ್ವಾರ್ಥಕ್ಕಾಗಿ ಸರ್ಕಾರಿ ಆಸ್ಪತ್ರೆ ವೈದ್ಯರ ವಿರುದ್ಧ ಸುಳ್ಳು ಆರೋಪ ಮಾಡುತ್ತಿರುವುದು ವಿಷಾದನೀಯ ಸಂಗತಿ. ಇಂತಹ ಆಧಾರ ರಹಿತ ಆರೋಪಗಳಿಂದ ವೈದ್ಯರ ಗೌರವಕ್ಕೆ ಧಕ್ಕೆ ಉಂಟಾಗುತ್ತಿದೆ ಸಂಬಂಧಪಟ್ಟ ಅಧಿಕಾರಿಗಳು ಇಂಥವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ವೇಳೆ ಇನ್ನೊಬ್ಬ ಸದಸ್ಯ ಗುತ್ತೆಮ್ಮ ಮಾಳಗಿ ಮಾತನಾಡಿ, ಪಟ್ಟಣದಲ್ಲಿ ನಮ್ಮ ಆಸ್ಪತ್ರೆಯ ಬರುವ ಸಾರ್ವಜನಿಕ ರೋಗಿಗಳ ತುಂಬಾ ಕಾಳಜಿಯನ್ನು ನೋಡಿಕೊಳ್ಳುತ್ತಾರೆ ಮತ್ತು ರಾಜ್ಯದಲ್ಲಿಯೇ ಸ್ವಚ್ಛತೆಗೆ ಬ್ಯಾಡಗಿ ಆಸ್ಪತ್ರೆಯ ಹೆಸರುವಾಸಿಯಾಗಿದೆ. ಆಸ್ಪತ್ರೆಗೆ ಬರುವಂತ ರೋಗಿಗಳನ್ನು ವೈದ್ಯಾಧಿಕಾರಿಗಳು ಒಳ್ಳೆಯ ರೀತಿಯಲ್ಲಿ ಸ್ಪಂದನೆ ಮಾಡುತ್ತಿರುವುದರಿಂದ ಹಲವು ಜಿಲ್ಲೆಗಳಿಂದ ಹಾಗೂ ತಾಲೂಕುಗಳಿಂದ ಸಾರ್ವಜನಿಕರು ಆಸ್ಪತ್ತೆಗೆ ಬರುತ್ತಾರೆ ಬ್ಯಾಡಗಿ ತಾಲೂಕನಾದ್ಯಂತ ಜನರು ತಮ್ಮ ಆರೋಗ್ಯವನ್ನು ತೋರಿಸಿಕೊಳ್ಳುವುದಕ್ಕೆ ಬರುತ್ತಾರೆ ಆಸ್ಪತ್ರೆಯ ವೈದ್ಯರ ಮೇಲೆ ಕಾಣದ ಕೈಗಳು ಇಲ್ಲ ಸಲ್ಲದ ಆರೋಪಗಳನ್ನು ಮಾಡುತ್ತಿರುವುದು ಖಂಡನೀಯ ಎಂದು ಹೇಳಿದರು.

ಈ ವೇಳೆ ರುಕ್ಮಿಣಿ ಹುಲಿಕಟ್ಟಿ ಮಾತನಾಡಿದರು. ಈ ಸಂದರ್ಭದಲ್ಲಿ ತಾಲೂಕು ವೈದ್ಯಾಧಿಕಾರಿ ಡಾ. ರಾಘವೇಂದ್ರ, ಟಿ ಹೆಚ್ ಓ ಕಾಂತೇಶ್ ಭಜಂತ್ರಿ ಹಾಗೂ ವೈದ್ಯರು ಮತ್ತು ಮಹಿಳಾ ಹಿತರಕ್ಷಣಾ ಸಮಿತಿಯ ಸದಸ್ಯರಾದ ಅನ್ನಪೂರ್ಣ ಸಣ್ಣಮುಟ್ಟಕ್ಕನವರ, ರೂಪಾ ಬಂಗಿ, ಐಶ್ವರ್ಯ ಮಡಿವಾಳರ, ಕರಿಬಸಮ್ಮ ಮಡಿವಾಳರ, ಸೈನಾಜ್ ಮೆಡ್ಲೇರಿ ಹಾಗೂ ಅನೇಕ ಮಹಿಳೆಯರು ಉಪಸ್ಥಿತರಿದ್ದರು.



ಹೆಚ್ಚು ಅಂಕಗಳಿಸಿದ ಪಿಯು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ



ರಾಣೇಬೆನ್ನೂರ: ವಿದ್ಯಾರ್ಥಿಗಳು ಕೇವಲ ಅಂಕಗಳನ್ನು ಪಡೆದರೆ ಸಾಲದು. ಇಂದಿನ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉನ್ನತ ಶಿಕ್ಷಣ, ಶ್ರೇಣಿಯಲ್ಲಿ ಉತ್ತೀರ್ಣರಾದಾಗ ಮಾತ್ರ ಸರ್ಕಾರಿ ಹುದ್ದೆ ಪಡೆಯಲು ಸಾಧ್ಯ ಎಂದು ಮೈಸೂರು ನಿವೃತ್ತ ಜೆಡಿಪಿಐ ಹಾಗೂ ವಿಶ್ವವಿಕಾಸ ಟ್ರಸ್ಟ್ ಅಧ್ಯಕ್ಷ ಮಂಟಲಿಂಗಾಚಾರ್ಯ ಹೇಳಿದರು.

ಇಲ್ಲಿನ ಉಮಾಶಂಕರ ನಗರದಲ್ಲಿರುವ ಶ್ರೀ ವಿಶ್ವವಿಭು ರೇಕಿ ಧ್ಯಾನಪೀಠದಲ್ಲಿ ವಿಶ್ವಕರ್ಮ ಬ್ರಾಹ್ಮಣ ಸಮಾಜದ 2026 ರ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಗುರೂಜೀ ಶ್ರೀ ಮೌನೇಶ್ವರ ಆಚಾರ್ಯರ ಹಿಂದೂಸ್ಥಾನಿ ರಾಷ್ಟ್ರೀಯ ತಬಲಾವಾದನ ದರ್ಶನ ಗ್ರಂಥ ಲೋಕಾರ್ಪಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಮೌನೇಶ್ವರ ಗುರೂಜೀ ಮಾತನಾಡಿ, ಪ್ರತಿಭೆ ಎಂದರೆ ಕಣ್ಣಿಗೆ ಕಾಣಲಾರದ ಅಂತರ್ಮನಸ್ಸಿನಲ್ಲಿ ಸುಪ್ತವಾಗಿರುವ ಅಸಾಧಾರಣ ಜ್ಞಾನ, ಬುದ್ಧಿವಂತಿಕೆ, ಸೃಜನಾ ಶಕ್ತಿ, ಕಲ್ಪನಾ ಶಕ್ತಿ, ಭಾವನಾ ಶಕ್ತಿ ಯಾರು ಈ ಅಸಾಧಾರಣ ಶಕ್ತಿ ವಿವಿಧ ಮಾಧ್ಯಮಗಳ ಮೂಲಕ ಅಭಿವ್ಯಕ್ತಗೊಳಿಸಿ ಜನತೆಯ ಹೃನ್ಮನಗಳಲ್ಲಿ ಆಳವಾಗಿ ಇಳಿದು ಪ್ರತಿಭಾ ಪ್ರದರ್ಶನವನ್ನು ಮಾಡಿ ಆತ್ಮಾನಂದವನ್ನಿ ಕೊಡಬಲ್ಲರೋ ಅಂತಹವರನ್ನು ಪ್ರತಿಭಾವಂತರೆಂದು ಕರೆಯುತ್ತಾರೆ. ಆದ್ದರಿಂದ ವಿದ್ಯಾರ್ಥಿಗಳು ಭವಿಷ್ಯದಲ್ಲಿ ಹೆಚ್ಚಿನ ಶಿಕ್ಷಣವನ್ನು ಪಡೆದು ಉನ್ನತ ಸ್ಥಾನಪಡೆದು ಶಿಕ್ಷಕರು ಹಾಗೂ ತಂದೆ-ತಾಯಿಗಳಿಗೆ ಕೀರ್ತಿ ತರಬೇಕು ಎಂದರು.

ಗದಗಿನ ಪಂಚಾಕ್ಷರಿ ಗವಾಯಿಗಳ ಸಂಗೀತ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ನಾರಾಯಣಾಚಾರ್ಯ ಅರ್ಕಸಾಲಿ ಮಾತನಾಡಿದರು.

ದ್ವಿತೀಯಪಿಯುಸಿಪರೀಕ್ಷೆಯಲ್ಲಿಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಾದ ವಿಜಯಕುಮಾರ ಪತ್ತಾರ ವಿಜ್ಞಾನ (ಶೇ. 93.5), ಸ್ಫೂರ್ತಿ ಬಡಿಗೇರ ವಾಣಿಜ್ಯ (ಶೇ.95.8), ತೇಜಸ್ವಿನಿ ಬಡಿಗೇರ ಕಲಾ (ಶೇ.93.1), ಭರತ ಬಡಿಗೇರ ವಿಜ್ಞಾನ (ಶೇ.85.1), ಸೃಷ್ಟಿ ಮಾಯಾಚಾರಿ ವಿಜ್ಞಾನ (ಶೇ.86.8), ವೇದಶ್ರೀ ಕಮ್ಮಾರ ವಿಜ್ಞಾನ (ಶೇ.96.8) ಇವರನ್ನು ಗುರೂಜೀ ಶ್ರೀ ಮೌನೇಶ್ವರ ಆಚಾರ್ಯ ಮತ್ತು ಲಕ್ಷ್ಮೀದೇವಿ ದಂಪತಿಗಳು ಸನ್ಮಾನಿಸಿ ಗೌರವಿಸಿದರು.

ಶಿಕ್ಷಣಪ್ರೇಮಿ ಬಸವರಾಜ ಬೆಂತೂರು, ಹುಬ್ಬಳ್ಳಿ ವಿಶ್ವಮಯ ಸಾಹಿತ್ಯ ಸಮಿತಿ ಸಂಚಾಲಕ ಭೀಮಸೇನ ಬಡಿಗೇರ, ಡಾ. ಚಾಮರಾಜ ಕಮ್ಮಾರ, ನಾಗರಾಜಚಾರ್ಯ ಅರ್ಕಾಚಾರ, ಡಾ.ಉಮೇಶ ದೈವಜ್ಞ ಅವರು ಮಾತನಾಡಿದರು. ಡಾ. ಮಲ್ಲಿಕಾರ್ಜುನ ಆಚಾರ್ಯ, ಸುನೀತ, ನಾರಾಯಣಚಾರ್ಯ ಅರ್ಕಸಾಲಿ, ಶಿವಾನಂದ ಬಡಿಗೇರ, ಮಹೇಶ ಬಡಿಗೇರ, ಮಂಜಪ್ಪ ಬಡಿಗೇರ, ರಾಘವೇಂದ್ರ, ಬಡಿಗೇರ, ಬಸವರಾಜ ಬಡಿಗೇರ, ಕೃಷ್ಣ ಬಡಿಗೇರ, ಸುರೇಶ ಬಡಿಗೇರ, ತಾರಾದೇವಿ ಬಡಿಗೇರ, ಕಾಳಮ್ಮ ಬಡಿಗೇರ, ವಿಶ್ವಮೂರ್ತಿ ಬಡಿಗೇರ, ಶ್ರೀಕಾಂತಾಚಾರ ಕಮ್ಮಾರ, ಪ್ರದೀಪ ಬಿ.ಜಿ, ಗಂಗಾಧರಾಚಾರ್ಯ ದಾವಣಗೆರೆ, ಜಯವ್ವ ಬಡಿಗೇರ, ಪುಷ್ಪ, ಪ್ರಸಾದ ತಾಂಬೆ, ಅಮೃತ ತಾಂಬೆ, ಅಶೋಕ ಪಾಟೀಲ, ಸ್ವರೂಪ ಆರ್. ಕೆ, ವಿಶ್ವಾಸ ಆರ್.ಕೆ, ಸಂಕೇತ ತಾಂಬೆ, ಪ್ರಕಾಶ ಕಮ್ಮಾರ, ಎಂ.ಜಿ.ಬಡಿಗೇರ, ಸೌಭಾಗ್ಯಮ್ಮ ಜಿ ಸೇರಿದಂತೆ ಮತ್ತಿತರರು ಇದ್ದರು.

ಬಿತ್ತನೆ ಬೀಜದ ದಾಸ್ತಾನು ಖಾಲಿ: ರೈತರ ಪರದಾಟ



ಹಾವೇರಿ: ಇಲ್ಲಿಯ ಹಾವೇರಿ ಮತ್ತು ಕರ್ಜಗಿ ರೈತ ಸಂಪರ್ಕ ಕೇಂದ್ರಗಳಲ್ಲಿ ಸೋಮವಾರ ಸೋಯಾಬಿನ್ ಬಿತ್ತನೆ ಬೀಜ ದಾಸ್ತಾನು ಖಾಲಿಯಾಗಿದ್ದರಿಂದ ಬೀಜ ಖರೀದಿಗೆ ಆಗಮಿಸಿದ್ದ ರೈತರು ಪರದಾಡುವಂತಾಯಿತು. ಮೆಕ್ಕೆಜೋಳದ ಬದಲು ಸೋಯಾಬಿನ್ ಬಿತ್ತನೆಗೆ ಮುಂದಾಗಿರುವ ರೈತರಿಗೆ ಸಕಾಲದಲ್ಲಿ ಸೋಯಾಬಿನ್ ಬೀಜವು ಲಭ್ಯವಾಗದೇ ಆತಂಕ ಸೃಷ್ಟಿಯಾಯಿತು.

ಮುಂಗಾರು ಹಂಗಾಮಿನ ಬಿತ್ತನೆ ಬೀಜಗಳ ಖರೀದಿ ಸಿದ್ಧತೆಯಲ್ಲಿ ತೊಡಗಿರುವ ರೈತರು ನಗರದ ಸಹಾಯಕ ಕೃಷಿ ನಿರ್ದೇಶಕ ಕಚೇರಿಯಲ್ಲಿರುವ ರೈತ ಸಂಪರ್ಕ ಕೇಂದ್ರಕ್ಕೆ ಆಗಮಿಸಿ ಸೋಯಾಬಿನ್ ಬೀಜಕ್ಕಾಗಿ ಬೇಡಿಕೆ ಇಟ್ಟಿದ್ದರು. ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ನೂರಾರು ರೈತರು ಬಿತ್ತನೆ ಬೀಜ ಖರೀದಿ ಮಾಡಿದರು. ಆದರೆ ಮಧ್ಯಾಹ್ನದ ನಂತರ ಏಕಾಏಕಿ ಸೋಯಾಬಿನ್ ಬಿತ್ತನೆ ಬೀಜದ ದಾಸ್ತಾನು ಖಾಲಿಯಾಗಿರುವುದಾಗಿ ಕೃಷಿ ಇಲಾಖೆ ಸಿಬ್ಬಂದಿ ಖರೀದಿಗೆ ಬಂದಿದ್ದ ರೈತರಿಗೆ ತಿಳಿಸಿದರು. ಇದರಿಂದ ಕ್ಷಣಕಾಲ ಖರೀದಿ ಕೇಂದ್ರದಲ್ಲಿ ಆತಂಕದ ವಾತಾವರಣ ಸೃಷ್ಟಿಯಾಯಿತು.


ಬಿತ್ತನೆ ಬೀಜಕ್ಕಾಗಿ ಇರುವ ಕೆಲಸ ಕಾರ್ಯಗಳನ್ನು ಬದಿಗೊತ್ತಿ, ಖಾಲಿ ಹೊಟ್ಟೆಯಲ್ಲಿ ಬೆಳಗ್ಗೆಯೇ ಬಂದು ಪಾಳೆ ಹಚ್ಚಿದ್ದೇವೆ. ಮಧ್ಯಾಹ್ನ ತನಕ ಕೊಟ್ಟು, ಮಧ್ಯಾಹ್ನದ ಬಳಿಕ ಯಾವುದೇ ಮುನ್ಸೂಚನೆಯನ್ನು ನೀಡದೇ ದಾಸ್ತಾನು ಖಾಲಿಯಾಗಿದೆ. ನಾಳೆ (ಮಂಗಳವಾರ) ಬನ್ನಿ ಎಂದು ಹೇಳುತ್ತಿದ್ದಾರೆ. ಕಳೆದ ಐದಾರು ದಿನಗಳಿಂದ ಬಿತ್ತನೆ ಬೀಜ ಪೂರೈಕೆ ಮಾಡುವಾಗ, ಅಕಾರಿಗಳು ಸೋಯಾಬಿನ್ ಬಿತ್ತನೆ ಬೀಜದ ಅಭಾವ ಇಲ್ಲ, ನಮ್ಮಲ್ಲಿ ದಾಸ್ತಾನು ಇದೆ. ರೈತರು ಯಾವುದೇ ಆತಂಕಕ್ಕೆ ಒಳಗಾಗುವ ಅಗತ್ಯ ಇಲ್ಲ ಎಂದು ಮಾಧ್ಯಮಗಳಿಗೆ ಹೇಳಿಕೆ ಕೊಡುತ್ತಿದ್ದರು. ಆದರೆ ಇವತ್ತು ಬೆಳಗ್ಗೆ ಖರೀದಿಗೆ ಆಗಮಿಸಿದ್ದರೆ, ಮಧ್ಯಾಹ್ನ ತನಕ ಸುಮ್ಮನಿದ್ದು, ಏಕಾಏಕಿ ದಾಸ್ತಾನು ಖಾಲಿಯಾಗಿದೆ ಎಂದರೆ ಏನರ್ಥ? ಎಂದು ದೂರದ ಗ್ರಾಮಗಳಿಂದ ಬಂದಿದ್ದ ರೈತರು ಅಳಲು ತೋಡಿಕೊಂಡರು.

ದಾಸ್ತಾನು ಬರಲಿದೆ: ಸೋಯಾಬಿನ್ ಖಾಲಿಯಾಗಿದ್ದರ ಬಗ್ಗೆ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ವೀರಭದ್ರಪ್ಪ ಬಿ.ಹೆಚ್ ಅವರನ್ನು ಕೇಳಿದಾಗ, ಹಾವೇರಿ ಹಾಗೂ ಕರ್ಜಗಿ ರೈತ ಸಂಪರ್ಕ ಕೇಂದ್ರಗಳಲ್ಲಿ ಬೆಳಗ್ಗೆಯಿಂದ 168 ಕ್ವಿಂಟಾಲ್‌ನಷ್ಟು ಸೋಯಾಬಿನ್ ಬೀಜ ಪೂರೈಸಿದ್ದು, ಮಧ್ಯಾಹ್ನದ ವೇಳೆ ದಾಸ್ತಾನು ಖಾಲಿಯಾಗಿದೆ. ಮಂಗಳವಾರ ಲೋಡ್ ಬರಲಿದ್ದು, ಆಯಾ ಆರ್‌ಎಸ್‌ಕೆಗಳಿಗೆ ಹಂಚಿಕೆಯಾಗಲಿವೆ. ಎಂದಿನಂತೆ ಮಂಗಳವಾರದಿಂದ ಮತ್ತೆ ಸೋಯಾಬಿನ್ ಪೂರೈಸಲಾಗುತ್ತಿದ್ದು, ರೈತರು ಸಹಕರಿಸಬೇಕು. ಶೇಂಗಾ, ಮೆಕ್ಕೆಜೋಳ, ತೊಗರಿ, ಹೆಸರು ಬಿತ್ತನೆ ಬೀಜಗಳನ್ನು ವಿತರಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆ ಎಂದು ತಿಳಿಸಿದರು.

ಕಿರುಸುದ್ದಿ

ಇಂದು ನುಡಿ ನಮನ

ಯಮಕನಮರಡಿ: ಸಮೀಪದ ಶಬಂದರ ಭಕ್ತಿ ಮಠದ ಪೂಜ್ಯರಾಗಿದ್ದ ಲಿಂಗೈಕ್ಯ ಸಂಕಪ್ಪಜ್ಜನವರ ಭಕ್ತಿ ನಮನ ಹಾಗೂ ಗದ್ದಿಗೆ ಪೂಜಾ ಸಮಾರಂಭ ಮೇ 26ರಂದು ಬೆಳಿಗ್ಗೆ 10 ಗಂಟೆಗೆ ಹರ ಗುರು ಶರಣರ ಸಮ್ಮುಖದಲ್ಲಿ ಪೂಜಾ ಸಮಾರಂಭ ಹಾಗೂ ನುಡಿ ನಮನ ಕಾರ್ಯಕ್ರಮ ನಡೆಯಲಿದ್ದು, ಕುಂದರ ನಾಡಿನ ಸಕಲ ಭಕ್ತಾದಿಗಳಿಗೆ ಪೂಜಾ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಭಕ್ತಿ ಮಠದ ಆಡಳಿತ ಮಂಡಳಿಯ ಸದಸ್ಯರು ತಿಳಿಸಿದ್ದಾರೆ.



ರಾಷ್ಟ್ರೀಯ ಸತ್ಸಂಗ ಸಂಸ್ಕಾರ ಅಭಿಯಾನ ನಾಳೆ

ಬೆಳಗಾವಿ: ಇಲ್ಲಿನ ಶ್ರೀ ಸ್ವಾಮಿ ಸಮರ್ಥ ಸೇವಾ ಆಧ್ಯಾತ್ಮಿಕ ಮತ್ತು ಬಾಲ ವಿಕಾಸ ಕೇಂದ್ರದ ವತಿಯಿಂದ ಮೇ 27ರಂದು ದೇಶ-ವಿದೇಶ ಅಭಿಯಾನದ ಅಂಗವಾಗಿ 'ರಾಷ್ಟ್ರೀಯ ಸತ್ಸಂಗ ಮತ್ತು ಸಂಸ್ಕಾರ ಅಭಿಯಾನ'ವನ್ನು ಆಯೋಜಿಸಲಾಗಿದೆ. ವಡಗಾವಿಯ ಸಪಾರ್ ಗಲ್ಲಿಯಲ್ಲಿರುವ ಶ್ರೀ ಬನಶಂಕರಿ ಮಂಗಲ ಕಾರ್ಯಾಲಯದಲ್ಲಿ ಈ ಭವ್ಯ ಕಾರ್ಯಕ್ರಮ ಜರುಗಲಿದೆ. ಮೇ 27ರಂದು ನಡೆಯಲಿರುವ ಈ ವಿಶೇಷ ಕಾರ್ಯಕ್ರಮದಲ್ಲಿ ಸ್ವಾಮಿ ಸಮರ್ಥ ಸೇವಾ ಮಾರ್ಗದ ಗುರುಪುತ್ರರಾದ ನಿತೀನ್ಬಾವು ಮೋರೆ ಅವರು ಉಪಸ್ಥಿತಿ ವಹಿಸಲಿದ್ದಾರೆ. ಅಂದು ಬೆಳಿಗ್ಗೆ 8 ಗಂಟೆಯಿಂದಲೇ ವಿವಿಧ ಧಾರ್ಮಿಕ ಹಾಗೂ ಸಂಸ್ಕಾರ ಕಾರ್ಯಕ್ರಮಗಳು ಆರಂಭವಾಗಲಿವೆ. ಈ ಅಭಿಯಾನದ ಮೂಲಕ ಸಂಸ್ಥೆಯು ಸಾರ್ವಜನಿಕರಿಗಾಗಿ ಉಚಿತವಾಗಿ ಹಮ್ಮಿಕೊಳ್ಳುತ್ತಿರುವ ವಿವಿಧ ಜನಪರ ಉಪಕ್ರಮಗಳು, ಆಧ್ಯಾತ್ಮಿಕ ಮಾರ್ಗದರ್ಶನ ಹಾಗೂ ಬಾಲ ವಿಕಾಸದ ಯೋಜನೆಗಳ ಕುರಿತು ಸವಿಸ್ತಾರವಾದ ಮಾಹಿತಿಯನ್ನು ನೀಡಲಾಗುವುದು. ಈ ಮಹತ್ವದ ರಾಷ್ಟ್ರೀಯ ಸತ್ಸಂಗ ಕಾರ್ಯಕ್ರಮದಲ್ಲಿ ಬೆಳಗಾವಿ ನಗರ ಹಾಗೂ ಸುತ್ತಮುತ್ತಲಿನ ಭಕ್ತಾಧಿಗಳು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕಾಗಿ ಸಂಘಟಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿಪ್ಲೋಮಾ: ವಿಶಿಷ್ಟ ಚೇತನರಿಗೆ ಸೀಟ್ ಮೀಸಲು

ಬೆಳಗಾವಿ: 2026-2027ನೇ ಸಾಲಿಗೆ ಬೆಳಗಾವಿ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ವಿಶಿಷ್ಟಚೇತನ ವಿದ್ಯಾರ್ಥಿಗಳಿಂದ ವಿವಿಧ ಕೋರ್ಸಗಳಿಗೆ ಪ್ರವೇಶಾತಿ ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ. ಕೇಂದ್ರ ಸರ್ಕಾರದ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮ ಶೀಲತೆ ಇಲಾಖೆ ವತಿಯಿಂದ ವಿಶೇಷವಾಗಿ ವಿಶಿಷ್ಟಚೇತನ ವಿದ್ಯಾರ್ಥಿಗಳಿಗೆ ಅವರನ್ನು ಮುಖ್ಯವಾಹಿನಿಯಲ್ಲಿ ಸೇರಿಸುವ ಉದ್ದೇಶದಿಂದ, ಮೂರು ವರ್ಷದ ಡಿಪ್ಲೋಮಾ ಕೋರ್ಸ್‌ಗಳಲ್ಲಿ ಸುಮಾರು 50 ಪಾಲಿಟೆಕ್ನಿಕಗಳಲ್ಲಿ 25 ವಿದ್ಯಾರ್ಥಿಗಳಿಗೆ ಪ್ರವೇಶ ಸೌಲಭ್ಯ ದೊರೆಯುತ್ತಿದ್ದು, ಕರ್ನಾಟಕದಲ್ಲಿ ಮಂಗಳೂರು, ಬೆಳಗಾವಿ ಮತ್ತು ಹಾಸನ ಪಾಲಿಟೆಕ್ನಿಕ್ ಗಳಲ್ಲಿ ಡಿಪ್ಲೋಮಾ ಕೊರ್ಸುಗಳಲ್ಲಿ ಪ್ರವೇಶಕ್ಕೆ ಅವಕಾಶ ನೀಡಲಾಗಿದೆ. ಸಿವಿಲ್ ಎಂಜನಿಯರಿಂಗ್ 4, ಎಲೇಕ್ಟ್ರಿಕಲ್, ಎಲೇಕ್ಟ್ರಾನಿಕ್ಸ್ ಎಂಜನಿಯರಿಂಗ್ 4, ಮೆಕ್ಯಾನಿಕಲ್ ಎಂಜನಿಯರಿಂಗ್ 3, ಆಟೋಮೋಬೈಲ್ ಎಂಜನೀಯರಿಂಗ್ 2, ಎಲೇಕ್ಟ್ರಾನಿಕ್ಸ್ ಕಮ್ಯುನಿಕೇಶನ ಎಂಜನೀಯರಿಂಗ್ 5, ಕಮರ್ಶಿಯಲ್ ಪ್ರಾಕ್ಟಿಸ್ (ಇಂಗ್ಲೀಷ) 3, ಕಮರ್ಶಿಯಲ್ ಪ್ರಾಕ್ಟಿಸ್ (ಕನ್ನಡ) 4, ಒಟ್ಟು 25 ಸಿಟುಗಳಿಗೆ ಅವಕಾಶವಿದೆ. ಅರ್ಜಿಯನ್ನು ಜೂನ್ 10 ರೊಳಗಾಗಿ ಸಲ್ಲಿಸಲು ಅವಕಾಶವಿದ್ದು, ಜೂನ್ 11 ರಂದು ಮೆರಿಟ್ ಪಟ್ಟಿ ಪ್ರಕಟಣೆಯಾಗಲಿದೆ ಹಾಗೂ ಜೂನ್ 12 ರಂದು ಬೆಳಿಗ್ಗೆ 11 ಗಂಟೆಗೆ ಸಂದರ್ಶನ ನಡೆಯಲಿದೆ. ಸಂದರ್ಶನಕ್ಕೆ ಬರುವಾಗ ಅಗತ್ಯ ಪತ್ರಗಳನ್ನು ತರಬೇಕೆಂದು ತಿಳಿಸಲಾಗಿದೆ. ಸದರಿ ಕೋರ್ಸುಗಳಿಗೆ ಯಾವುದೇ ಶುಲ್ಕವು ಇರುವುದಿಲ್ಲ, ಪ್ರವೇಶ ಹೊಂದಿದ ವಿದ್ಯಾರ್ಥಿಗಳಿಗೆ ಸ್ಕಾಲರಶಿಪ್, ಹಾಗೂ ಲಭ್ಯವಿರುವ ಇತರೆ ಸೌಲಭ್ಯಗಳನ್ನು ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಬೆಳಗಾವಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಿನ್ಸಿಪಾಲರನ್ನು ಸಂಪರ್ಕಿಸಬಹುದು ಎಂದು ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಸುಂದ್ರಾಬಾಯಿ ಪಾಟೀಲ

ರಾಯಬಾಗ: ಪಟ್ಟಣದ ಸುಂದ್ರಾಬಾಯಿ ನಿಂಗೌಡಾ ಪಾಟೀಲ (92) ಭಾನುವಾರ ನಿಧನರಾಗಿದ್ದಾರೆ. ಮೃತರು ನಾಲ್ಕು ಜನ ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.





ಬೆಳಗಾವಿ: ತಾಲೂಕಿನ ಶಿಂದೊಳ್ಳಿ ಗ್ರಾಮದ ಸರ್ಕಾರಿ ಶಾಲೆಯನ್ನು ಕೆಪಿಎಸ್ ಮ್ಯಾಗ್ನೆಟ್ ಯೋಜನೆಯಡಿ ಮಾಸ್ತಮರಡಿ ಶಾಲೆಗೆ ವಿಲೀನಗೊಳಿಸುವ ಕ್ರಮವನ್ನು ಖಂಡಿಸಿ, ಗ್ರಾಮಸ್ಥರು, ವಿದ್ಯಾರ್ಥಿಗಳು ಹಾಗೂ ಪೋಷಕರು ಶಾಲೆಯ ಮುಂಭಾಗದಲ್ಲೇ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶವನ್ನು ಹೊರ ಹಾಕಿದರು.

ಶಿಂದೊಳ್ಳಿ ಸರ್ಕಾರಿ ಶಾಲೆ ವಿಲೀನಕ್ಕೆ ವಿರೋಧ

ಬೆಳಗಾವಿ: ತಾಲೂಕಿನ ಶಿಂದೊಳ್ಳಿ ಗ್ರಾಮದ ಸರ್ಕಾರಿ ಶಾಲೆಯನ್ನು ಕೆಪಿಎಸ್ ಮ್ಯಾಗ್ನೆಟ್ ಯೋಜನೆಯಡಿ ಮಾಸ್ತಮರಡಿ ಶಾಲೆಗೆ ವಿಲೀನಗೊಳಿಸುವ ಕ್ರಮವನ್ನು ಖಂಡಿಸಿ, ಗ್ರಾಮಸ್ಥರು, ವಿದ್ಯಾರ್ಥಿಗಳು ಹಾಗೂ ಪೋಷಕರು ಶಾಲೆಯ ಮುಂಭಾಗದಲ್ಲೇ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶವನ್ನು ಹೊರ ಹಾಕಿದರು. ನಮ್ಮೂರ ಶಾಲೆ ನಮ್ಮಯ ಕಣ್ಮಣಿ ಎಂಬ ಘೋಷಣೆಯೊಂದಿಗೆ ಪ್ರತಿಭಟನೆ ನಡೆಸಿದ ಗ್ರಾಮಸ್ಥರು, ಶಾಲೆ ಮುಚ್ಚುವ ಯಾವುದೇ ಕ್ರಮವನ್ನು ಸಹಿಸಿಕೊಳ್ಳುವುದಿಲ್ಲ ಎಂದು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ನೂರಾರು ಮಹಿಳೆಯರು, ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಬ್ಯಾನರ್‌ಗಳು ಮತ್ತು ಫಲಕಗಳನ್ನು ಹಿಡಿದು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಮಹಾತ್ಮ ಜ್ಯೋತಿಬಾ ಫುಲೆ ಹಾಗೂ ಸಾವಿತ್ರಿಬಾಯಿ ಫುಲೆ ಅವರ ಭಾವಚಿತ್ರಗಳನ್ನು ಹಿಡಿದು ಶಿಕ್ಷಣ ಉಳಿಸುವ ಹೋರಾಟಕ್ಕೆ ಗ್ರಾಮಸ್ಥರು ಸಂಕೇತಾತ್ಮಕ ರೂಪ ನೀಡಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ರಮಾ ನಾಗಣ್ಣವರ್ ಹಾಗೂ ಲಕ್ಷ್ಮೀ ಕರೇಗಾರ್, ಪ್ರತಿಭಟನೆಯ ನೇತೃತ್ವ ವಹಿಸಿದ್ದ ಎಐಡಿಎಸ್‌ಓ ಜಿಲ್ಲಾ ಸಂಚಾಲಕ ಮಹಾಂತೇಶ ಬಿಳೂರ್ ಮಾತನಾಡಿದರು. ಈ ವೇಳೆ ಶಾಂತಾ ಶಾಪೂರಕರ, ಶಾಂತಾ ತಿಪ್ಪಣ್ಣಗೋಳ, ಭರಮವ್ವ ಶಾಪೂರರ್ಕ, ಲಕ್ಷ್ಮೀ ಶಾಪೂರರ್ಕ, ಬಾಳವ್ವ ಅಗಸೀಮನಿ, ಮಾಳಿಂಗರಾಯ ತಿಪ್ಪಣ್ಣಗೋಳ, ಭಾವಕಣ್ಣ ಕಣಬರಕರ್ , ಪೋಷಕರು, ಗ್ರಾಮಸ್ಥರು ಸೇರಿದಂತೆ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ಬೆಳಗಾವಿ: ಗ್ರಾಮೀಣ ಕ್ಷೇತ್ರದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಶ್ರೀಕ್ಷೇತ್ರ ಉಳವಿ ಯಾತ್ರೆಯ ಕಾರ್ಯಕ್ರಮದಲ್ಲಿ ಪಾಲ್ಗೊಂಡ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ, ಶ್ರೀ ಚನ್ನಬಸವೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ, ಸರ್ವರ ಹಾಗೂ ನಾಡಿನ ಒಳಿತಿಗಾಗಿ ಪ್ರಾರ್ಥನೆ ಸಲ್ಲಿಸಿದರು. ಈ ವೇಳೆ ಬೆಳಗಾವಿ ಗ್ರಾಮೀಣ ಕ್ಷೇತ್ರದ ಪ್ರಮುಖ ಮುಖಂಡರು, ಕಾರ್ಯಕರ್ತರು, ಮಹಿಳೆಯರು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಶಾಸಕರ ಲಿಖಿತ ಭರವಸೆಗೆ ಒತ್ತಾಯ | ತಪ್ಪಿದರೆ ಮಂಗಳವಾರ ಸ್ವಯಂ ಪ್ರೇರಿತ ಬಂದ್

ನೀರಾವರಿ ಯೋಜನೆ ಅನುಷ್ಠಾನಕ್ಕೆ ಆಗ್ರಹ

ರಾಮದುರ್ಗ: ರಾಮದುರ್ಗ ತಾಲೂಕಿನ ರೈತರ ಬಹುದಿನಗಳ ಬೇಡಿಕೆಯಾದ ವೀರಭದ್ರೇಶ್ವರ, ಬಸವೇಶ್ವರ ಏತ ನೀರಾವರಿ ಯೋಜನೆಗಳು ಸ್ಥಗಿತಗೊಂಡ ಹಿನ್ನೆಲೆಯಲ್ಲಿ ರಾಜ್ಯ ರೈತ ಸಂಘವು ರಾಜ್ಯ ಸರ್ಕಾರ ಹಾಗೂ ವಿಧಾನ ಸಭೆಯ ಮುಖ್ಯ ಸಚೇತಕ ಅಶೋಕ ಪಟ್ಟಣ ವಿರುದ್ಧ ಸೋಮವಾರ ರಾಜ್ಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ರಾಮದುರ್ಗ ತಾಲೂಕಿನ ಸಾಲಹಳ್ಳಿಯಲ್ಲಿ ಬಿಜಾಪೂರ-ಬೆಳಗಾವಿ ರಾಜ್ಯ ಹೆದ್ದಾರಿಯಲ್ಲಿ ಮುಖ್ಯ ವೇದಿಕೆ ನಿರ್ಮಿಸಿದ ರೈತರು 9 ಗಂಟೆಗೆ ಗೊಡಚಿ ವೀರರಭದ್ರೇಶ್ವರ ಕ್ಷೇತ್ರದಿಂದ ಸಾಲಹಳ್ಳಿಯ ಮುಖ್ಯ ವೇದಿಕೆ ತನಕ (ಸುಮಾರು 7 ಕಿ. ಮೀ) ಪಾದಯಾತ್ರೆ ನಡೆಸಿ ಮಧ್ಯಾಹ್ನ ಬೃಹತ್ ವೇದಿಕೆಯಲ್ಲಿ ಸಮಾವೇಶಗೊಂಡರು.

ಈ ಸಂದರ್ಭದಲ್ಲಿ ರಾಜ್ಯ ರೈತ ಸಂಘದ ಅಧ್ಯಕ್ಷ ಚೂನಪ್ಪ ಪೂಜಾರಿ ಮಾತನಾಡಿ, ಏತ ನೀರಾವರಿ ಯೋಜನೆ ಮುಕ್ತಾಯಗೊಳಿಸಿ ರೈತರ ಜಮೀನುಗಳಿಗೆ ನೀರು ಹರಿಸುವ ಖಚಿತ ದಿನ ಹಾಗೂ ಭೂಮಿ ಕಳೆದುಕೊಂಡ ರೈತರಿಗೆ ಪರಿಹಾರ ನೀಡುವದನ್ನು ವಿಧಾನ ಸಭೆಯ ಮುಖ್ಯ ಸಚೇತಕ ಅಶೋಕ ಪಟ್ಟಣ ಅವರು ಸ್ಥಳಕ್ಕೆ ಆಗಮಿಸಿ ಲಿಖಿತವಾಗಿ ಭರವಸೆ ನೀಡಬೇಕು. ತಪ್ಪಿದರೆ ಮಂಗಳವಾರ ರಾಮದುರ್ಗ ಪಟ್ಟಣವೂ ಸೇರಿದಂತೆ ತಾಲೂಕಿನ ಎಲ್ಲ ಗ್ರಾಮಗಳಲ್ಲಿ ಸ್ವಯಂ ಪ್ರೇರಿತ ಬಂದ್ ಆಚರಿಸಲಾಗುವುದು. ಮುಂದೊಂದು ದಿನ ಈ ಹೋರಾಟ ಉಗ್ರ ಸ್ವರೂಪ ಪಡೆದುಕೊಂಡರೆ ಶಾಸಕರೇ ಹೊಣೆ ಎಂದು ಎಚ್ಚರಿಕೆ ನೀಡಿದರು.

ಕಳೆದ ಮೂರು ತಿಂಗಳ ಹಿಂದೆಯೆ ನೀರಾವರಿ ಯೋಜನೆ ಅನುಷ್ಠಾನಕ್ಕೆ ಒತ್ತಾಯಿಸಿ ರಾಜ್ಯ ಹೆದ್ದಾರಿ ಬಂದ್ ಮಾಡುವುದಾಗಿ ಹೇಳಲಾಗಿತ್ತು. ಆದರೆ ರೈತರನ್ನು ಗಂಭೀರವಾಗಿ ಪರಿಗಣಿಸದೇ ದಿಡೀರನೆ ಬೆಂಗಳೂರಿಗೆ ಪ್ರಯಾಣ ಬೆಳೆಸಿರುವುದು ಒಳ್ಳೆಯ ಬೆಳವಣಿಗೆ ಅಲ್ಲ. ಜಿಲ್ಲೆಯ ಪ್ರಭಾವಿ ಮತ್ತು ಹಿರಿಯ ರಾಜಕಾರಣಿಯಾಗಿರುವ ಪಟ್ಟಣರು ಸ್ವಂತ ಚಿಂತನೆ ಮಾಡುವ ವಿವೇಚನೆ ಬೆಳೆಸಿಕೊಳ್ಳಬೇಕು. ಶೀಘ್ರ ನೀರಾವರಿ ಯೋಜನೆಗೆ ಪರಿಹಾರ ಕಂಡುಕೊಳ್ಳಬೇಕು ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಹುಕ್ಕೇರಿಯ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಎಂ.ಚಂದರಗಿಯ ವೀರಭದ್ರ ಶಿವಾಚಾರ್ಯ ಸ್ವಾಮೀಜಿ, ಕುಳ್ಳೂರಿನ ಬಸವಾನಂದ ಸ್ವಾಮೀಜಿ, ಹೊಸಕೋಟಿಯ ಅಭಿನವ ರೇವಯ್ಯ ಶಿವಯೋಗಿಗಳು, ಚಿಪ್ಪಲಕಟ್ಟಿಯ ಅಭಿನವ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಕಟಕೋಳದ ಅಭಿನವ ಸಿದ್ಧರಾಯ ಅಜ್ಜನವರು, ತೊಂಡಿಕಟ್ಟಿಯ ಅಭಿನವ ವೆಂಕಟೇಶ ಮಹಾರಾಜರು, ಮುಳ್ಳೂರಿನ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಸೇರಿದಂತೆ ತಾಲೂಕಿನ ಎಲ್ಲ ಮಠಾಧೀಶರು,

ಮಾಜಿ ಶಾಸಕ ಮಹಾದೇವಪ್ಪ ಯಾದವಾಡ, ಡಿಸಿಸಿ ಬ್ಯಾಂಕಿನ ನಿರ್ದೇಶಕ ಮಲ್ಲಣ್ಣ ಯಾದವಾಡ, ಬಿಜೆಪಿ ಮಂಡಲ ಅಧ್ಯಕ್ಷ ಡಾ. ಕೆ.ವಿ. ಪಾಟೀಲ, ರೈತಸಂಘದ ತಾಲ್ಲೂಕು ಅಧ್ಯಕ್ಷ ಜಗದೀಶ ದೇವರಡ್ಡಿ ಸೇರಿದಂತೆ ಸಾವಿರಾರು ರೈತರು ಪಾಲ್ಗೊಂಡಿದ್ದರು.



> ಈ ಹೋರಾಟ ಯಾರದೇ ಸ್ವಾರ್ಥಕ್ಕಾಗಿ ಅಲ್ಲ, ರೈತರ ಹಿತಕ್ಕಾಗಿ ನಡೆಯುತ್ತಿದ್ದು ರೈತರು ಹೋರಾಟದಲ್ಲಿ ರಾಜಕಾರಣಿಗಳು ಒಬ್ಬರು ಅತ್ತಂಗ ಮಾಡುವದು, ಇನ್ನೊಬ್ಬರು ಸತ್ತಂಗ ಮಾಡುವ ಚಟ ನಮ್ಮಲ್ಲಿ ನಡೆಯುವುದಿಲ್ಲ. ರೈತರ ಸ್ವಾಭಿಮಾನಕ್ಕೆ ಧಕ್ಕೆ ಬಂದರೆ ಸಹಿಸುವದಿಲ್ಲ. ಸಂಜೆಯೊಳಗೆ ಶಾಸಕರು ಬರದಿದ್ದರೆ ಮಂಗಳವಾರ ದಿನ ಅವರ ತಿಥಿ ಮಾಡಬೇಕಾಗುತ್ತದೆ.
> ■ **ಶಶಿಕಾಂತ ಗುರೂಜಿ,**
> ರೈತ ಸಂಘದ ಗೌರವಾಧ್ಯಕ್ಷ

ಉತ್ತಮ ಆರೋಗ್ಯವೇ ನಿಜವಾದ ಸಂಪತ್ತು

ಬೆಳಗಾವಿ: ಒಬ್ಬ ವ್ಯಕ್ತಿಯ ಬಳಿ ಎಷ್ಟೇ ಹಣ, ಬಂಗಾರ, ಆಸ್ತಿ ಇದ್ದರೂ ಅವನಿಗೆ ರೋಗಗಳಿದ್ದರೆ ಆ ಸಂಪತ್ತನ್ನು ಅನುಭವಿಸಲು ಸಾಧ್ಯವಿಲ್ಲ. ಧನ-ಸಂಪತ್ತು ಕಳೆದುಹೋದರೆ ಮತ್ತೆ ಗಳಿಸಬಹುದು. ಆದರೆ, ಆರೋಗ್ಯ ಒಮ್ಮೆ ಕೈಕೊಟ್ಟರೆ ಮರಳಿ ಪಡೆಯುವುದು ಕಷ್ಟ. ಶಾರೀರಿಕವಾಗಿ ಸದೃಢರಾಗಿದ್ದರೆ ಮಾತ್ರ ಮನಸ್ಸು ಕೂಡ ಉಲ್ಲಾಸದಿಂದ ಇರುತ್ತದೆ. ಆರೋಗ್ಯವಂತ ವ್ಯಕ್ತಿ ಮಾತ್ರ ಸಮಾಜದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಾಧ್ಯ. ಆದ್ದರಿಂದ ಉತ್ತಮ ಆರೋಗ್ಯವೇ ನಮ್ಮೆಲ್ಲರ ನಿಜವಾದ ಸಂಪತ್ತು ಎಂದು ನಾಗನೂರು ರುದ್ರಾಕ್ಷಿ ಮಠದ ಡಾ. ಅಲ್ಲಮಪ್ರಭು ಸ್ವಾಮೀಜಿ ಹೇಳಿದರು.

ಸೋಮವಾರ ಬೆಳಗಾವಿಯ ಶಿವಬಸವ ನಗರದ ಎಸ್. ಜಿ. ಬಾಳೇಕುಂದ್ರಿ ತಾಂತ್ರಿಕ ಮಹಾವಿದ್ಯಾಲಯದ ಎಸ್. ಜಿ. ಸಂಬರಗಿಮಠ ಸಭಾಭವನದಲ್ಲಿ ಹಮ್ಮಿಕೊಂಡ ಕಾಲೇಜಿನ ವಾರ್ಷಿಕ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ದೈಹಿಕ ನಿರ್ದೇಶಕ ಡಾ. ಪಿ. ವಿ. ಕಡಗದಕಾಯಿ, ವಿದ್ಯಾರ್ಥಿಗಳು ನಿಯಮಿತವಾಗಿ ಆಟ ಆಡುವುದರಿಂದ ದೇಹದ ರಕ್ತ ಪರಿಚಲನೆ ಸುಧಾರಿಸುತ್ತದೆ ಮತ್ತು ಹೃದಯದ ಆರೋಗ್ಯ ಸಹ ಕಾಪಾಡಬಹುದು. ಅದಲ್ಲದೇ ಸ್ಥೂಲಕಾಯ ಹಾಗೂ ದೇಹದ ಹೆಚ್ಚುವರಿ ತೂಕ ಮತ್ತು ಬೊಜ್ಜನ್ನು ಕರಗಿಸಲು ಕ್ರೀಡೆ ಸಹಾಯಕ. ಎಲ್ಲ ವಿದ್ಯಾರ್ಥಿಗಳು ಪ್ರತಿನಿತ್ಯ ವಿವಿಧ ಕ್ರೀಡೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದರು.

ಕಾಲೇಜಿನ ಆಡಳಿತ ಮಂಡಳಿಯ ಚೇರ್ಮನ್ ಡಾ. ಎಫ್. ವಿ. ಮಾನ್ವಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ದೈಹಿಕ ನಿರ್ದೇಶಕ ಶ್ರೀಧರ ನೇಮಗೌಡ, ಕ್ರೀಡಾ ಸಂಯೋಜಕ ಆನಂದ ಬಂಕದ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಕಾಲೇಜಿನ ಪ್ರಾಚಾರ್ಯ ಡಾ. ಬಿ.ಆರ್. ಪಟಗುಂದಿ ಸ್ವಾಗತಿಸಿದರು. ಪ್ರಾಧ್ಯಾಪಕಿ ಲಕ್ಷ್ಮಿ ಪಾಟೀಲ ನಿರೂಪಿಸಿ ಶೃತಿ ಪಾಟೀಲ ವಂದಿಸಿದರು.

ಈ ವೇಳೆ ಎಸ್. ಜಿ. ಬಾಳೇಕುಂದ್ರಿ ತಾಂತ್ರಿಕ ಮಹಾವಿದ್ಯಾಲಯದ, ಆಡಳಿತ ಮಂಡಳಿ, ಶಿಕ್ಷಕರು ವಿಧ್ಯಾರ್ಥಿಗಳು ಸಿಬ್ಬಂದಿ ಸೇರಿದಂತೆ ಇತರರು ಇದ್ದರು.



ಗೋಹತ್ಯೆ ತಡೆಗೆ ಆಗ್ರಹಿಸಿ ಡಿಸಿಗೆ ಮನವಿ

ಬೆಳಗಾವಿ: ಬಕ್ರೀದ್ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಅಕ್ರಮ ಗೋ ಸಾಗಾಟ ಹಾಗೂ ಗೋಹತ್ಯೆಯನ್ನು ಕಟ್ಟುನಿಟ್ಟಾಗಿ ತಡೆಯಬೇಕೆಂದು ಆಗ್ರಹಿಸಿ ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳದ ಕಾರ್ಯಕರ್ತರು ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು ಹಾಗೂ ಬಕ್ರೀದ್ ಹಬ್ಬದ ವೇಳೆ ಕುರಬಾನಿ ಹೆಸರಿನಲ್ಲಿ ನಡೆಯುವ ಅಕ್ರಮ ಗೋವಧೆಯನ್ನು ಸಂಪೂರ್ಣವಾಗಿ ನಿಷೇಧಿಸಬೇಕೆಂದು ಒತ್ತಾಯಿಸಿದ್ದಾರೆ.

ನಗರದಲ್ಲಿ ಚನ್ನಮ್ಮ ವೃತ್ತದಲ್ಲಿ ಪ್ರತಿಭಟನೆ ನಡೆಸಿ ಬಳಿಕ ಪ್ರತಿಭಟನಾ ರ್‍ಯಾಲಿ ಮೂಲಕ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿದ ವಿವಿಧ ಹಿಂದೂಪರ ಸಂಘಟನೆಗಳ ಮುಖಂಡರು ಗೋ ರಕ್ಷಣೆಗೆ ಸರ್ಕಾರ ತಕ್ಷಣ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಪ್ರತಿಭಟನೆಯ ಉದ್ದೇಶಿಸಿ ಮಾತನಾಡಿದ ಮುಪ್ಪಿನ ಕಾಡಸಿದ್ದೇಶ್ವರ ಸ್ವಾಮೀಜಿ, ಕರ್ನಾಟಕದಲ್ಲಿ ಮೇ 28 ರಂದು ಮುಸ್ಲಿಂ ಸಮುದಾಯದ ಬಕ್ರೀದ್ ಹಬ್ಬದ ನಿಮಿತ್ತ ನಡೆಯುವ ಗೋಹತ್ಯೆಯನ್ನು ಸಂಪೂರ್ಣವಾಗಿ ತಡೆಯುವ ಕೆಲಸ ಸರ್ಕಾರ ಮಾಡಬೇಕು. ಗೋವುಗಳಿಗೆ ಮೇವಿನ ವ್ಯವಸ್ಥೆ ಕಲ್ಪಿಸುವ ಜೊತೆಗೆ ಗೋ ರಕ್ಷಣೆಗೆ ಆದ್ಯತೆ ನೀಡಬೇಕು ಎಂದು ಹೇಳಿದರು.

ಮೇ 29ರವರೆಗೆ ಜಾನುವಾರು ಸಂತೆ ಹಾಗೂ ಗೋ ಮಾರಾಟವನ್ನು ನಿಷೇಧಿಸಬೇಕು. ಪ್ರಮುಖ ರಸ್ತೆಗಳಲ್ಲಿ ಪೊಲೀಸ್ ಇಲಾಖೆಯಿಂದ ಚೆಕ್‌ಪೋಸ್ಟ್ ಸ್ಥಾಪಿಸಿ ಪರಿಶೀಲನಾ ತಂಡ ನಿಯೋಜಿಸಬೇಕು ಎಂದು ಒತ್ತಾಯಿಸಿದರು.

ಆರ್‌ಎಸ್‌ಎಸ್ ಪ್ರಮುಖರಾದ ಕೃಷ್ಣಾ ಭಟ್ ಮಾತನಾಡಿ, ಗೋವನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸಬೇಕು ಎಂಬ ಬೇಡಿಕೆ ದೇಶದ ವಿವಿಧ ವಲಯಗಳಿಂದ ಕೇಳಿಬರುತ್ತಿದೆ. ಕೇವಲ ಹೇಳಿಕೆಗಳ ಮಟ್ಟದಲ್ಲಿ ಅಲ್ಲದೆ, ಗೋಹತ್ಯೆ ಸಂಪೂರ್ಣ ತಡೆಗೆ ಸರ್ಕಾರ ಕಾನೂನುಬದ್ಧ ಹಾಗೂ ಆಡಳಿತಾತ್ಮಕ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಈ ವೇಳೆ ವಿಜಯ್ ಜಾಧವ, ಎ.ಎನ್. ಕರಲಿಂಗಣ್ಣವರ, ಡಾ. ಸುಭಾಷ್ ಪಾಟೀಲ್, ಶ್ರೀದೇವಿ ಬುಡವಿ, ಆನಂದ ಕರಲಿಂಗಣ್ಣವರ, ಭಾವಕಣ್ಣಾ ಲೋಹಾರ, ಸುನೀಲ್, ಕಿರಣ್ ಕಿಲ್ಲೇಕರ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಸಮರ್ಪಕವಾಗಿ ಬಿಡುಗಡೆಯಾಗದ ಅನುದಾನ

ಮೂಡಲಗಿ: ನಾಗನೂರ ಪಟ್ಟಣದ ಅಭಿವೃದ್ಧಿಗೆ ಸರ್ಕಾರ ದಿಂದ ಅನುದಾನವನ್ನು ನಿರೀಕ್ಷಿಸಲಾಗುತ್ತಿದೆ ಎಂದು ಶಾಸಕ, ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಹೇಳಿದರು.

ತಾಲೂಕಿನ ನಾಗನೂರ ಪಟ್ಟಣದ ಬಸ್ ನಿಲ್ದಾಣದ ಬಳಿ ಪಟ್ಟಣ ಪಂಚಾಯತಿ ಸಹಯೋಗದಲ್ಲಿ ನಿರ್ಮಿಸಲಾಗಿರುವ ಇಂದಿರಾ ಕ್ಯಾಂಟಿನ್ ಉದ್ಘಾಟಿಸಿ ಮಾತನಾಡಿದರು.

ಪಟ್ಟಣದ ಅಭಿವೃದ್ಧಿಗೆ ಸದಾ ಬದ್ಧತೆಯಿಂದ ಕಾರ್ಯ ನಿರ್ವಹಿಸಲಾಗುತ್ತದೆ. ಈ ಮೊದಲು ಗ್ರಾಮ ಪಂಚಾಯತಿಯಿದ್ದಾಗ ಸರ್ಕಾರದ ಅನುದಾನದಡಿ ಸಾಕಷ್ಟು ಪ್ರಮಾಣದಲ್ಲಿ ಅಭಿವೃದ್ಧಿಯನ್ನು ಮಾಡಲಾಗಿದೆ. ಆದರೆ, ಗ್ರಾಮ ಪಂಚಾಯತಿಯಿಂದ ಪಟ್ಟಣ ಪಂಚಾಯತಿಗೆ ಮೇಲ್ದರ್ಜೆಗೆ ಏರಿಸಿದ್ದರಿಂದ ಪಂಚಗ್ಯಾರಂಟಿ ಯೋಜನೆಗಳಿಂದ ಅನುದಾನವು ಸಮರ್ಪಕವಾಗಿ ಬಿಡುಗಡೆ ಯಾಗುತ್ತಿಲ್ಲ ಎಂದು ಹೇಳಿದರು.

ಬಡವರಿಗಾಗಿ ಅತಿ ಕಡಿಮೆ ದರದಲ್ಲಿ ಊಟ ಮತ್ತು ಉಪಹಾರ ದೊರೆಯಲಿದೆ. ಗುಣಮಟ್ಟದ ಆಹಾರ ಸಿಗಲಿದೆ. ಇದನ್ನು ನಾಗರಿಕರು ಸದ್ಬಳಕೆಯನ್ನು ಮಾಡಿಕೊಳ್ಳಿ ಎಂದರು.

ಮಾಜಿ ಸಚಿವ ಆರ್.ಎಂ. ಪಾಟೀಲ, ಹಿರಿಯ ಸಹಕಾರಿ ಮುಖಂಡ ಬಿ.ಆರ್.ಪಾಟೀಲ, ಪ್ರಭಾ ಶುಗರ್ಸ ನಿರ್ದೇಶಕ ಕೆ.ಎಸ್. ಪಾಟೀಲ, ಗಜಾನನ ಯರಗಣವಿ, ಬಿಜೆಪಿ ಮಂಡಲ ಪ್ರ ಕಾರ್ಯದರ್ಶಿ ಪಿ.ಎಲ್. ಬಬಲಿ, ಸುಭಾಸ ಕ್ಯಾತೆನ್ನವರ, ಮುತ್ತೆಪ್ಪ ಮುತ್ತೆನ್ನವರ, ರಮೇಶ ಬೆಳಕೂಡ, ಬಸು ಹಳಿಗೌಡರ, ಶಂಕರ ದಳ ವಾಯಿ, ಬಸವರಾಜ ಪಾಟೀಲ, ಮಹಾದೇವ ನಾಯಿಕ, ವಾಯ್.ಆರ್. ಕರಬನ್ನವರ, ಬಸವಂತ ಪಡದಲ್ಲಿ, ಅಜ್ಜಪ್ಪ ಗೋಟೂರ, ಲಗಮಣ್ಣ ಗಡ್ಡಿ, ಪಪಂ ಮುಖ್ಯಾಧಿಕಾರಿ ಬಾಳನಾಯಿಕ ಕುಮರೇಶಿ, ಪಪಂ ಸದಸ್ಯರು, ಅನೇಕರು ಉಪಸ್ಥಿತರಿದ್ದರು.



ಸೊಳ್ಳೆ ನಾಶಕ ಪೌಡರ್ ಸಿಂಪಡಣೆ

ಹಲ್ಯಾಳ: ಗ್ರಾಮದಲ್ಲಿ ಸೊಳ್ಳೆ ನಾಶಕ ಪೌಡರ್ ಸಿಂಪಡಣೆ ಹಾಗೂ ಜಲಕುಂಭ ಸ್ವಚ್ಛತಾ ಕಾರ್ಯ ಸೋಮವಾರ ನಡೆಯಿತು. ಪಿಡಿಒ ವಿ.ಕೆ. ಹಟ್ಟಿ ಅವರು ಸಿಬ್ಬಂದಿಗಳಿಗಳಿಗೆ ಅಗತ್ಯ ಸೂಚನೆ ನೀಡುವ ಮೂಲಕ ಸ್ವಚ್ಛತಾ ಕಾರ್ಯವನ್ನು ಮಾಡಿಸಿದರು.

ಮೇ 24ರಂದು ಹೊಸದಿಗಂತ ಪತ್ರಿಕೆ ಸ್ವಚ್ಛತೆ ಮರೀಚಿಕೆ: ಗ್ರಾಮಸ್ಥರಲ್ಲಿ ರೋಗಗಳು ಹರಡುವ ಭೀತಿ ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟಿಸಿತ್ತು. ವರದಿ ಪ್ರಕಟಿಸಿದ 24 ತಾಸಿನಲ್ಲಿಯೇ ಗ್ರಾಮದಲ್ಲಿ ಸ್ವಚ್ಛತಾ ಕಾರ್ಯ ನಡೆದಿದೆ.

ನಾಲ್ಕು ದಿನಗಳಲ್ಲಿ ಗ್ರಾಮದಲ್ಲಿರುವ ಜಲ ಕುಂಭಗಳನ್ನು ಸ್ವಚ್ಛಗೊಳಿಸುತ್ತೇವೆ ಮತ್ತು ಎಲ್ಲ ಓಣಿ ಗಳಲ್ಲಿ ಸೊಳ್ಳೆ ನಾಶಕ ಪೌಡರ್ ಸಿಂಪಡಿಸುತ್ತೇವೆ ಇದು ನಮ್ಮ ಕರ್ತವ್ಯ ನನ್ನ ಗಮನಕ್ಕೆ ಇಲ್ಲದ ಕಾರಣ ಈ ಕಾರ್ಯ ಸ್ವಲ್ಪ ಹಿಂದೆ ಉಳಿದಿತ್ತು ಇನ್ನು ಈ ರೀತಿ ಆಗದ ರೀತಿ ನೋಡಿಕೊಳ್ಳುತ್ತೇವೆ ಎಂದು ಪಿಡಿಒ ತಿಳಿಸಿದ್ದಾರೆ.

ದಿಗಂತ ವರದಿ ಪರಿಣಾಮ



ಅರ್ಜಿ ಆಹ್ವಾನ

ರಾಯಬಾಗ: ತಾಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ/ ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ-1, 2ಎ, 2ಬಿ, 3ಎ, 3ಬಿ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳಿಂದ 2026-27 ನೇ ಸಾಲಿಗೆ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು https://shp.karnataka.gov.in/bcwd ವೆಬ್ ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದು. ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಜೂ.8 ಕೊನೆಯ ದಿನ. ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ (ಪಿ.ಯು.ಸಿ ವಿದ್ಯಾರ್ಥಿಗಳಿಗೆ ಮಾತ್ರ) ಜೂ. 15 ಕೊನೆಯ ದಿನ. ಹೆಚ್ಚಿನ ಮಾಹಿತಿಗಾಗಿ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಚೇರಿಗೆ ಸಂಪರ್ಕಿಸಬಹುದಾಗಿದೆ ಎಂದು ತಾಲೂಕು ಕಲ್ಯಾಣ ಅಧಿಕಾರಿ ಕಲ್ಪನಾ ಕಾಂಬಳೆ ತಿಳಿಸಿದ್ದಾರೆ.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಕಾಗವಾಡ: ಕಾಗವಾಡ ಶಾಸಕ ರಾಜು ಕಾಗೆ ಅವರು ಮತಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗಾಗಿ ಸರ್ಕಾರದಿಂದ ಸಾವಿರಾರು ಕೋಟಿ ರೂ. ಅನುದಾನ ತಂದು ಅಭಿವೃದ್ಧಿ ಪಡಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ವಿನೋದ ಕೋಳಕರ ಹೇಳಿದರು.

ಅವರು ತಾಲೂಕಿನ ಮೋಳೆ ಗ್ರಾಮದ ಮೋಳೆ-ಕಾತ್ರಾಳ ಹಾಗೂ ಮೋಳೆ-ಹುಲಗಬಾಳಿ ರಸ್ತೆಗಳ ಅಭಿವೃದ್ಧಿಗೆ 2025-26ನೇ ಸಾಲಿನ ಮುಖ್ಯಮಂತ್ರಿಗಳ ಮೂಲ ಸೌಕರ್ಯ ವಿಶೇಷ ಅನುದಾನದಲ್ಲಿ ಮಂಜೂರಾದ 40 ಲಕ್ಷ ರೂ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿ, ಕಬ್ಬಿನ ಹಂಗಾಮು ಪ್ರಾರಂಭವಾದಾಗ ನಮ್ಮ ಗ್ರಾಮದ ತೋಟಪಟ್ಟಿ ರಸ್ತೆಗಳಿಗೆ ವಾಹನಗಳನ್ನು ತೆಗೆದುಕೊಂಡು ಹೋಗಲು ಬಹಳತೊಂದರೆಯಾಗುತ್ತಿರುವುದನ್ನು ಶಾಸಕರಿಗೆ ವಿಷಯ ತಿಳಿಸಿದಾಗ ಅವರು ಅನುದಾನ ಬಿಡುಗಡೆಗೊಳಿಸಿದ್ದಾರೆ ಅವರಿಗೆ ಮೋಳೆ ಗ್ರಾಮದ ವತಿಯಿಂದ ಧನ್ಯವಾದಗಳು ತಿಳಿಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ತಾ ಪಂ ಕಾರ್ಯನಿರ್ವಾಹಕ ಅಧಿಕಾರಿ ವೀರಣ್ಣ ವಾಲಿ, ಅಭಿಯಂತರ ಮಡಿವಾಳ ಪಾಟೀಲ, ಶಾಸಕ ರಾಜು ಕಾಗೆ ಆಪ್ತ ಸಹಾಯಕ ಕುಮಾರ ಪಾಟೀಲ ಮುಖಂಡರಾದ ಸಿದ್ದಪ್ಪ ಕನಾಳೆ,ಧರ್ಮಾಜಿ ಕೊಳೇಕರ,ಹನುಮಂತ ಬನಚೋಡ,ಬಾಳು ನರಟ್ಟಿ ಅಪ್ಪಿ ಯರಂಡೋಲಿ, ಅಶೋಕ್ ಹುಗ್ಗಿ, ಬಾಳು ಯರಂಡೋಲಿ, ಭರತೇಶ್ ಪಡನಾಡ, ಸಿದ್ದು ಸೋಂದಕರ, ಗಜು ಮುಂಜೆ, ಸುರೇಶ್ ಆಟಪಟಕರ ಸೇರಿದಂತೆ ಇತರರು ಇದ್ದರು.

ಓದುವ ಹವ್ಯಾಸ ರೂಢಿಸಿಕೊಳ್ಳಿ: ಪಣದಿ

ಗೋಕಾಕ: ಗ್ರಾಮೀಣ ವಲಯದಲ್ಲಿ ಗ್ರಾಮ ಪಂಚಾಯತಿ ಗ್ರಂಥಾಲಯ ಮತ್ತು ಅರಿವು ಕೇಂದ್ರಗಳು ಶಾಲಾ ಮಕ್ಕಳ ಕಲಿಕೆಗೆ ಆಶಾಕಿರಣವಿದ್ದಂತೆ ಎಂದು ಗೋಕಾಕ ತಾಲೂಕಿನ ಬೆಟಗೇರಿ ಗ್ರಾಪಂ ಗ್ರಂಥಾಲಯ ಮತ್ತು ಅರಿವು ಕೇಂದ್ರದ ಮೇಲ್ವಿಚಾರಕ ಬಸವರಾಜ ಪಣದಿ ಹೇಳಿದರು.

ತಾಲೂಕಿನ ಬೆಟಗೇರಿ ಗ್ರಾಮ ಪಂಚಾ ಯತಿ ಹಾಗೂ ಗ್ರಾಮ ಪಂಚಾಯತಿ ಗ್ರಂಥಾಲಯದ ಸಹಯೋಗದಲ್ಲಿ ಸ್ಥಳೀಯ ಗ್ರಾಮ ಪಂಚಾಯತಿ ಗ್ರಂಥಾಲಯ ಮತ್ತು ಅರಿವು ಕೇಂದ್ರದಲ್ಲಿ ಏ.8ರಿಂದ ಮೇ 24ರ ತನಕ ನಡೆದ ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರದ ಸಮಾರೂಪ ಸಮಾರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿ, ಇಂದಿನ ಯುಗದಲ್ಲಿ ಶಾಲಾ ಮಕ್ಕಳು ಓದುವ ಹವ್ಯಾಸ ಬೆಳಸಿ ಕೊಳ್ಳಬೇಕು ಮತ್ತು ಗ್ರಂಥಾಲಯದ ಸದುಪಯೋಗ ಪಡೆದುಕೊಳ್ಳಬೇಕು ಎಂದರು.



ಸ್ಥಳೀಯ ಶಿಕ್ಷಣಪ್ರೇಮಿ ಲಖನ ಚಂದರಗಿ ಮಾತನಾಡಿ, ಜ್ಞಾನ ಸಂಪತ್ತಿಗಿಂತ ಇನ್ನೊಂದು ಸಂಪತ್ತಿಲ್ಲಾ, ನಾವು ಕಷ್ಟಪಟ್ಟು ಸಂಪಾದಿಸಿದ ಆಸ್ತಿ, ಅಂತಸ್ತು ನಶಿಸಿ ಹೋಗಬಹುದು, ಜ್ಞಾನ ಎಂದು ನಶಿಸಿ ಹೋಗುವುದಿಲ್ಲಾ, ವಿದ್ಯಾರ್ಥಿಗಳು ಶಾಲಾ ಬಿಡುವಿನ ವೇಳೆಯಲ್ಲಿ ಉತ್ತಮ ಪುಸ್ತಕಗಳು ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರಕವಾಗುವ ಪುಸ್ತಕಗಳನ್ನು ಓದಬೇಕು ಎಂದು ಅಭಿಪ್ರಾಯಿಸಿದರು.

ಸ್ಥಳೀಯ ಗ್ರಾಪಂ ಕಾರ್ಯದರ್ಶಿ ಮಾರುತಿ ತಳವಾರ ಅಧ್ಯಕ್ಷತೆ ವಹಿಸಿದ್ದರು. ಏ.8ರಿಂದ ಮೇ 24 ತನಕ ಸ್ಥಳೀಯ ಗ್ರಂಥಾಲಯದಲ್ಲಿ ನಡೆದ ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರದಲ್ಲಿ ಪಾಲ್ಗೊಂಡ ಮಕ್ಕಳಿಗೆ ನೋಟಬುಕ್ಕ, ಪೆನ್ನ ಸೇರಿದಂತೆ ಶೈಕ್ಷಣಿಕ ಕಲಿಕಾ ಉಪಕರಣಗಳನ್ನು ಇಲ್ಲಿಯ ಗ್ರಾಮ ಪಂಚಾಯತಿ ವತಿಯಿಂದ ಈ ವೇಳೆ ವಿತರಿಸಿದರು.

ರಾಮಣ್ಣ ಮುಧೋಳ, ವಿಠ್ಠಲ ಕೋಣಿ, ಸಿದ್ಧಾರೂಢ ಸವತಿಕಾಯಿ, ಮಣಿಕಂಠ ಐದುಡ್ಡಿ,ಗ್ರಾಪಂ ಸಿಬ್ಬಂದಿ, ಗಣ್ಯರು, ಶಿಕ್ಷಣ ಪ್ರೇಮಿಗಳು, ಶಾಲಾ ಮಕ್ಕಳು ಇದ್ದರು.

ಅಪರಿಚಿತ ವ್ಯಕ್ತಿ ಸಾವು

ಬೆಳಗಾವಿ: ಬೆಳಗಾವಿ- ಸಾಂಬ್ರಾ ರೈಲು ನಿಲ್ದಾಣಗಳ ಮಧ್ಯ (ರುಕ್ಮಿಣಿ ನಗರ ರೈಲು ಹಳಿಯ ಹತ್ತಿರ) ಮೇ 19ರಂದು ಅಪರಿಚಿತ ವ್ಯಕ್ತಿ (65-70 ವರ್ಷ) ಅಸ್ವಸ್ಥನಾಗಿ ಬಿದ್ದಿದ್ದು ಚಿಕಿತ್ಸೆಗಾಗಿ ಬೆಳಗಾವಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಚಿಕಿತ್ಸೆ ಫಲಕಾರಿಯಾಗದೆ ಮೇ 22ರಂದು ವ್ಯಕ್ತಿಯು ಸ್ವಾಭಾವಿಕವಾಗಿ ಮೃತಪಟ್ಟಿರುತ್ತಾನೆ ಎಂದು ಬೆಳಗಾವಿ ರೈಲ್ವೆ ಪೊಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತನ ಚಹರೆ: 5.6 ಅಡಿ ಎತ್ತರ, ಸಾದಗಪ್ಪು ಮೈ ಬಣ್ಣ, ಮೈಯಿಂದ ತೆಳ್ಳಗೆ, ಉದ್ದ ಮುಖ, ಚೂಪಾದ ಮೂಗು, ತಲೆಯಲ್ಲಿ ಕಪ್ಪು ಬಿಳಿ ಮಿಶ್ರಿತ ಕೂದಲು, ಫ್ರೆಂಚ್ ಟೈಪ್ ಬಿಳಿ ಮೀಸೆ ದಾಡಿ ಬಿಟ್ಟಿರುತ್ತಾನೆ. ಕೊರಳಲ್ಲಿ ಕೆಂಪು ದಾರ ಹಾಗೂ ಬಿಳಿ ಬಣ್ಣದ ಫುಲ್ ಶರ್ಟ, ಕೆಂಪು ಬಣ್ಣದ ಟೀ ಶರ್ಟ, ಬೂದಿ ಬಣ್ಣದ ಹಾಪ್ ಪ್ಯಾಂಟ್ ಧರಿಸಿರುತ್ತಾನೆ. ಈ ಚಹರೆ ಹೋಲುವ ವ್ಯಕ್ತಿ ಕಾಣೆಯಾದ ಬಗ್ಗೆ ಮಾಹಿತಿ ಇದ್ದರೆ ಬೆಳಗಾವಿ ರೈಲ್ವೆ ಪೊಲೀಸ್ ಠಾಣೆ ಸಂಪರ್ಕಿಸಬಹುದು ಎಂದು ಬೆಳಗಾವಿ ರೈಲ್ವೆ ಪೊಲೀಸ್ ಠಾಣೆಯ ತನಿಖಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಿರುಸುದ್ದಿ

ಗಣೇಶ ಅಧಿಕಾರ ಸ್ವೀಕಾರ

ಬೆಳಗಾವಿ: ಬೆಳಗಾವಿ ದಂಡು ಮಂಡಳಿಯ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಮುಕ್ತವಾಗಿ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ದಂಡು ಮಂಡಳಿತ ನೂತನ ಬ್ರಿಗೇಡಿಯರ್ ಗಿರೀಶ್ ಉಪಾಧ್ಯ ಸೂಚನೆ ನೀಡಿದರು.

ಸೋಮವಾರ ದಂಡುಮಂಡಳಿಯ ಸಭಾಂಗಣದಲ್ಲಿ ಜರುಗಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ದಂಡು ಮಂಡಳಿಯ ವ್ಯಾಪ್ತಿಯಲ್ಲಿ ಸಾಕಷ್ಟು ಐತಿಹಾಸಕ ಸ್ಥಳಗಳಿವೆ. ಪ್ರವಾಸಿಗರು ರಜೆಯಲ್ಲಿ ವೀಕ್ಷಣೆಗೆ ಬಂದಾಗ ಪ್ಲಾಸ್ಟಿಕ್ ಬಳಕೆ ಮಾಡಿ ಅಲ್ಲಿಯೇ ಬಿಸಾಡುತ್ತಾರೆ. ದಂಡುಮಂಡಳಿಯಿಂದ ಬೆಳಗಾವಿಯ ಅಸದಖಾನ್ ದರ್ಗಾ ಸೇರಿದಂತೆ ವಿವಿಧ ಪ್ರೇಕ್ಷಣೀಯ ಸ್ಥಳದಲ್ಲಿ ಪ್ಲಾಸ್ಟಿಕ್ ಮುಕ್ತ ದಂಡುಮಂಡಳಿ ಎಂಬ ನಾಮಫಲಕ ಅಳವಡಿಸಿ ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದರು.ಇದೇ ವೇಳೆ ದಂಡುಮಂಡಳಿ ಸಿಇಓ ಮಂಚಲವಾರ ಹರಿವಿಜಯ, ಬ್ರಿಗೇಡಿಯರ್ ಗಣೇಶ್ ಉಪಾಧ್ಯ ಮಾತನಾಡಿದರು.

ಇನ್ನು ಬ್ರಿಗೇಡಿಯರ್ ಗಣೇಶ್ ಉಪಾಧ್ಯ ಅವರನ್ನು ಬೆಳಗಾವಿ ದಂಡುಮಂಡಳಿಯ ನೂತನ ಬ್ರಿಗೇಡಿಯರ್ ಗಿರೀಶ್ ಉಪಾಧ್ಯೆಗೆ ಶಾಸಕ ಆಸೀಫ್ ಸೇಠ್ ಸೋಮವಾರ ಸ್ವಾಗತಿಸಿಕೊಂಡರು.

ಅಧಿಕಮಾಸ: ವಿಶೇಷ ಪೂಜೆ ಸಲ್ಲಿಸಿದ ಭಕ್ತರು

ಯಮಕನಮರಡಿ : ಸ್ಥಳೀಯ ಹರಿ ಮಂದಿರದಲ್ಲಿ ಜೂ.7 ರಂದು 108 ದಂಪತಿ ಪೂಜಾ ಸಮಾರಂಭ ಹಾಗೂ ಕುಂಕುಮಾರ್ಚನೆ ಇತ್ಯಾದಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಶ್ರೀಮಠವು ತಿಳಿಸಿದೆ.

ಅಧಿಕಮಾಸದ ಅಂಗವಾಗಿ ಲಘು ರುದ್ರಾಭಿಷೇಕ ಫಲಹಾಭಿಷೇಕ ಇತ್ಯಾದಿ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದವು. ಅಪಾರ ಭಕ್ತಾದಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅಧಿಕಮಾಸದ ಪುಣ್ಯದ ಫಲ ಪಡೆದುಕೊಂಡರು.ಹರಿ ಮಂದಿರದ ಡಾ.ಆನಂದ ಮಹಾರಾಜ್ ಗೋಸಾವಿ ಅವರು ಸಾನ್ನಿಧ್ಯ ವಹಿಸಿದ್ದರು. ಶ್ರೀಮಠದಲ್ಲಿ ಪ್ರತಿವರ್ಷದ ಪದ್ಧತಿಯಂತೆ ಮಾವಿನಹಣ್ಣಿನ ಫಲ ಅಭಿಷೇಕ ಆಯೋಜಿಸುತ್ತ ಬಂದಿರುವುದು ಶ್ರೀಮಠದ ಸಂಪ್ರದಾಯ. ಗಡಿ ಮಹಾರಾಷ್ಟ್ರದ ಅಪಾರ ಭಕ್ತಾದಿಗಳು ಆಗಮಿಸಿ ಭಕ್ತಿ ಸೇವೆ ಸಲ್ಲಿಸಿದ್ದಾರೆ ಎಂದು ತಿಳಿಸಿದರು.

ಮೇ 29ರಂದು ಉದ್ಯೋಗ ಮೇಳ

ಚಿಕ್ಕೋಡಿ: ನಿಪ್ಪಾಣಿ ತಾಲೂಕಿನ ಬೋರಗಾಂವ ಪಟ್ಟಣದಲ್ಲಿ ಮೇ 29ರಂದು ಆರ್ ಎ ಪಾಟೀಲ ಕೈಗಾರಿಕಾ ಕೇಂದ್ರದ ಹಾಗೂ ಅರಿಹಂತ ಉದ್ಯೋಗ ಸಮೂಹ ವತಿಯಿಂದ ಬೃಹತ್ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದ್ದು, ಮೇಳದಲ್ಲಿ 30ಕ್ಕೂ ಹೆಚ್ಚು ವಿವಿಧ ಕಂಪನಿಗಳು ಭಾಗವಹಿಸಲಿವೆ ಎಂದು ಯುವ ಮುಖಂಡ ಉತ್ತಮ ಪಾಟೀಲ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. 2025ರಲ್ಲಿ ಏರ್ಪಡಿಸಿದ ಉದ್ಯೋಗ ಮೇಳದಲ್ಲಿ 500ಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳು ಆಯ್ಕೆಯಾಗಿದ್ದರು. ಎಸ್ಸೆಸ್ಸೆಲ್ಸಿ, ಪಿಯುಸಿ, ಐಟಿಐ, ಡಿಪ್ಲೋಮಾ, ಇಂಜಿನೀಯರಿಂಗ್ ಹಾಗೂ ಪದವೀಧರ ವಿದ್ಯಾರ್ಥಿಗಳು ಮೇಳದಲ್ಲಿ ಭಾಗವಹಿಸಬಹುದಾಗಿದೆ.

ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿ ಭಾಗದ ಉದ್ಯೋಗಾಕಾಂಕ್ಷಿಗಳಿಗೆ ಮೇಳದ ಆಯೋಜನೆಯಿಂದ ಅನುಕೂಲವಾಗುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಾಕಾಂಕ್ಷಿಗಳು ಆಗಮಿಸಿ ಇದರ ಲಾಭ ಪಡೆಯಬೇಕೆಂದರು. ಸುದ್ದಿಗೋಷ್ಠಿಯಲ್ಲಿ ಅರಿಹಂತ ಉದ್ಯೋಗ ಸಮೂಹದ ಕಾರ್ಯಾಧ್ಯಕ್ಷ ಅಭಿನಂದನ ಪಾಟೀಲ, ಸಿಇಓ ಬಾಳಾಸಾಹೇಬ ಪಾಟೀಲ, ಪ್ರಾಚಾರ್ಯ ವಿದ್ಯಾಧರ ಶಿರಹಟ್ಟಿ, ವಿಕ್ರಮ ಘಾಟಗೆ ಇತರರು ಇದ್ದರು.

ಸೋಯಾಬಿನ್ ಬಿತ್ತನೆ: ಬೀಜೋಪಚಾರ ಕೈಗೊಳ್ಳಿ

ಬೆಳಗಾವಿ : ಜಿಲ್ಲೆಯ ಪ್ರಮುಖ ಎಣ್ಣೆಕಾಳು ಬೆಳೆಯಾದ ಸೋಯಾಬಿನ ಬಿತ್ತನೆ ಸಮಯದಲ್ಲಿ ಹಲವು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದು ಅತ್ಯವಶ್ಯಕವಾಗಿದೆ. ಬಿತ್ತನೆಗೆ ಭೂಮಿ ಹದ ಮಾಡಿದ ನಂತರ 30 ಸೆಂ.ಮೀ. ಅಂತರದ ಸಾಲುಗಳಲ್ಲಿ ಬೀಜದಿಂದ ಬೀಜಕ್ಕೆ 8-10 ಸೆಂ.ಮೀ., ಇರುವಂತೆ ಬಿತ್ತನೆ ಮಾಡಬೇಕು. ಬಿತ್ತನೆ ಬೀಜದ ಪ್ರಮಾಣ ಎಕರೆಗೆ 25 ಕೆ.ಜಿ ಬದಲಾಗಿ ಸ್ವಲ್ಪ ಹೆಚ್ಚುವರಿ ಬೀಜ ಉಪಯೋಗಿಸಬೇಕು. ಬಿತ್ತನೆ ಮಾಡುವ ಪೂರ್ವದಲ್ಲಿ ಕಡ್ಡಾಯವಾಗಿ ಬೀಜೋಪಚಾರ ಮಾಡಿರಿ. ಇದರಿಂದ ರೋಗಗಳನ್ನು ತಡೆಗಟ್ಟುವದರೊಂದಿಗೆ ಸಸಿಗಳಿಗೆ ನೈಸರ್ಗಿಕವಾಗಿ ಪೌಷಾಂಶಗಳನ್ನು ಒದಗಿಸಬಹುದು. ಪ್ರತಿ ಕೆ.ಜಿ ಬೀಜಕ್ಕೆ 2 ಗ್ರಾಂ. ಥೈರಾಮ್ (75 ಡಬ್ಲ್ಯೂ.ಪಿ) ಅಥವಾ 2 ಗ್ರಾಂ. ಕಾರ್ಬಾಕ್ಸಿನ್ (75 ಡಬ್ಲ್ಯೂ.ಪಿ) ರಾಸಾಯನಿಕಗಳಿಂದ ಬೀಜೋಪಚರಿಸಿ ಇದರಿಂದ ರೋಗಗಳನ್ನು ತಡೆಗಟ್ಟಬಹುದಾಗಿದೆ. ಪ್ರತಿ ಕೆ.ಜಿ ಬೀಜಕ್ಕೆ 15 ಗ್ರಾಂ. ರೈಜೋಬಿಯಂ ಜೈವಿಕ ಗೊಬ್ಬರ ಮತ್ತು 15 ಗ್ರಾಂ. ರಂಜಕ ಕರಗಿಸುವ ಜೈವಿಕ ಗೊಬ್ಬರದಿಂದ ಬೀಜೋಪಚಾರ ಮಾಡಿ ಬಿತ್ತನೆ ಕೈಗೊಳ್ಳಲು ತಿಳಿಸಿದೆ. ಬಿತ್ತನೆಯನ್ನು ಜೂನ್ ನಿಂದ ಜುಲೈ 15ನೇ ತಾರೀಖಿನ ವರೆಗೆ ಮಾಡಬಹುದಾಗಿದೆ.



ರಬಕವಿ-ಬನಹಟ್ಟಿ: ರಬಕವಿ ನಗರದ ಹನುಮಂತ ದೇವರ ಹಾಲು ಹಾಗೂ ನೀರೋಕಳಿ ನಿಮಿತ್ತ ನಗರದ ಹಿರಿಯರು ಹೊಂಡ ಪೂಜೆ ನಡೆಯಿತು. ಶ್ರೀಶೈಲ ದಲಾಲ, ಡಾ.ಸಂಗಮೇಶ ಹತಪಕ್ಕಿ, ಮಾರುತಿ ನಾಯಕ, ಸಣ್ಣ ಯಮನಪ್ಪ ನಾಯಕ, ಭೀಮಶಿ ಪಾಟೀಲ, ಬೆನಕಪ್ಪ ಬೆಕ್ಕೇರಿ, ವಲ್ಲಿಸಾಬ ಹುಡೇದಮನಿ, ಸದಾಶಿವ ಪೂಜಾರಿ, ಬಾಬು ತೆಳಗಿನಮನಿ, ಪ್ರದೀಪ ಜುಗಳೆ, ಶಿವಾನಂದ ಕಡಕೋಳ ಸೇರಿದಂತೆ ಅನೇಕರಿದ್ದರು.

ಸರ್ವರ್ ಸಮಸ್ಯೆ ನಿವಾರಿಸಲು ಒತ್ತಾಯ

ಬೆಳಗಾವಿ: ಜಿಲ್ಲೆಯಾದ್ಯಂತ ನ್ಯಾಯಬೆಲೆ ಅಂಗಡಿಗಳಲ್ಲಿ ಉಂಟಾಗುತ್ತಿರುವ ತೀವ್ರ ಸರ್ವರ್ ಸಮಸ್ಯೆಯಿಂದ ಪಡಿತರ ವಿತರಣೆ ಸಂಪೂರ್ಣ ಅಸ್ತವ್ಯಸ್ತಗೊಂಡಿದ್ದು, ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳು ದವಸ ಧಾನ್ಯಕ್ಕಾಗಿ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಕಳೆದ ಹಲವು ದಿನಗಳಿಂದ ಸರ್ವರ್ ಕೈಕೊಡುತ್ತಿರುವ ಹಿನ್ನೆಲೆಯಲ್ಲಿ ಆಕ್ರೋಶಗೊಂಡ ನ್ಯಾಯಬೆಲೆ ಅಂಗಡಿ ಮಾಲೀಕರು ಸೋಮಾವಾರ ಜಿಲ್ಲಾಧಿಕಾರಿಗಳ ಕಚೇರಿ ಎದುರು ಬೃಹತ್ ಪ್ರತಿಭಟನೆ ನಡೆಸಿ ಸರ್ಕಾರದ ವಿರುದ್ಧ ಆಕ್ರೋಶ ಹೊರ ಹಾಕಿದರು. ಬೆಳಗಾವಿ ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ ನ್ಯಾಯಬೆಲೆ ಅಂಗಡಿ ಮಾಲೀಕರು ಪ್ರತಿಭಟನೆಯಲ್ಲಿ ಭಾಗವಹಿಸಿ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ನಿರ್ಲಕ್ಷ್ಯದಿಂದ ಜನಸಾಮಾನ್ಯರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಆರೋಪಿಸಿದರು. ನಂತರ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿ, ತಕ್ಷಣ ಸರ್ವರ್ ಸಮಸ್ಯೆ ಪರಿಹರಿಸುವಂತೆ ಆಗ್ರಹಿಸಿದರು.ಸಂಘದ ಮುಖಂಡ ರಾಜಶೇಖರ್ ತಳವಾರ ಮಾತನಾಡಿದರು.ಮನವಿಯನ್ನು ಸ್ವೀಕರಿಸಿದ ಜಿಲ್ಲಾಧಿಕಾರಿಗಳು ಸಮಸ್ಯೆಯನ್ನು ಸರ್ಕಾರದ ಗಮನಕ್ಕೆ ತರಲಾಗುವುದು ಹಾಗೂ ಸರ್ವರ್ ಸಮಸ್ಯೆ ಪರಿಹಾರಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.ಈ ವೇಳೆ ಪ್ರತಿಭಟನೆಯಲ್ಲಿ ಜಿಲ್ಲೆಯ ವಿವಿಧ ತಾಲೂಕುಗಳ ನ್ಯಾಯಬೆಲೆ ಅಂಗಡಿ ಮಾಲೀಕರು, ಸಂಘದ ಪದಾಧಿಕಾರಿಗಳು ಹಾಗೂ ಸಿಬ್ಬಂದಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.



ಬೆಳಗಾವಿ: ಜಿಲ್ಲೆಯಾದ್ಯಂತ ನ್ಯಾಯಬೆಲೆ ಅಂಗಡಿಗಳಲ್ಲಿ ಉಂಟಾಗುತ್ತಿರುವ ತೀವ್ರ ಸರ್ವರ್ ಸಮಸ್ಯೆಯಿಂದ ಪಡಿತರ ವಿತರಣೆ ಸಂಪೂರ್ಣ ಅಸ್ತವ್ಯಸ್ತಗೊಂಡಿದ್ದು, ಕಳೆದ ಹಲವು ದಿನಗಳಿಂದ ಸರ್ವರ್ ಕೈಕೊಡುತ್ತಿರುವ ಹಿನ್ನೆಲೆಯಲ್ಲಿ ಆಕ್ರೋಶಗೊಂಡ ನ್ಯಾಯಬೆಲೆ ಅಂಗಡಿ ಮಾಲೀಕರು ಸೋಮಾವಾರ ಜಿಲ್ಲಾಧಿಕಾರಿಗಳ ಕಚೇರಿ ಎದುರು ಬೃಹತ್ ಪ್ರತಿಭಟನೆ ನಡೆಸಿ ಸರ್ಕಾರದ ವಿರುದ್ಧ ಆಕ್ರೋಶ ಹೊರ ಹಾಕಿದರು.

ಶಿಕ್ಷಣ-ಸಂಘಟನೆಯಿಂದ ಮಾತ್ರ ಪ್ರಗತಿ

ತೆಲಸಂಗ: ರಾಜ್ಯಾದ್ಯಂತ ಚದುರಿಹೋಗಿರುವ ಇಡೀ ಕುಂಬಾರ ಸಮುದಾಯವನ್ನು ಒಂದೇ ಸೂರಿನಡಿ ತಂದು ಒಗ್ಗಟ್ಟಿನ ಶಕ್ತಿಯನ್ನು ಪ್ರದರ್ಶಿಸಲು ಮತ್ತು ಸರ್ಕಾರದ ಮಟ್ಟದಲ್ಲಿ ಸಮಾಜಕ್ಕೆ ಸಿಗಬೇಕಾದ ರಾಜಕೀಯ, ಸಾಮಾಜಿಕ ಸೌಲಭ್ಯಗಳನ್ನು ಪಡೆದುಕೊಳ್ಳಲು ನಿರಂತರ ಜಾಗೃತಿ ಮೂಡಿಸುವ ಕೆಲಸ ನಡೆಯಬೇಕು ಎಂದು ಕುಂಬಾರ ಗುರುಪೀಠದ ಜಗದ್ಗುರು ಬಸವಗುಂಡಯ್ಯಾ ಸ್ವಾಮೀಜಿ ಹೇಳಿದರು.

ಗ್ರಾಮದ ಕುಂಬಾರ ಗುಂಡಯ್ಯ ಮಹಾಸಂಸ್ಥಾನ ಮಠದ ಕುಂಬಾರ ಗುರು ಪೀಠದಲ್ಲಿ ನೂತನ ಕಲ್ಯಾಣ ಮಂಟಪ ಉದ್ಘಾಟನೆ ಹಾಗೂ ವಿದ್ಯಾರ್ಥಿ ನಿಲಯಕ್ಕೆ ಭೂಮಿ ಪೂಜೆ ನೆರವೇರಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಇಂದು ತೆಲಸಂಗ ಮಠದಲ್ಲಿ ನಿರ್ಮಾಣವಾಗುತ್ತಿರುವ ಈ ವಿದ್ಯಾರ್ಥಿ ನಿಲಯ ನಮ್ಮ ಸಮಾಜದ ಪಾಲಿಗೆ ಜ್ಞಾನದ ದೀವಿಗೆಯಾಗಲಿದೆ. ನಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಸಿಕ್ಕರೆ ಮಾತ್ರ ಬಡತನ ಮತ್ತು ನಿರುದ್ಯೋಗದ ಸರಣಿ ಕಳಚಲು ಸಾಧ್ಯ. ಶಿಕ್ಷಣ ಮತ್ತು ಸಂಘಟನೆ ಮಾತ್ರ ನಮ್ಮನ್ನು ಪ್ರಗತಿಯತ್ತ ಮುನ್ನಡೆಸಬಲ್ಲವು ಎಂದರು.

ರಾಜ್ಯದಲ್ಲಿಯೇ ಏಕೈಕ ಮತ್ತು ಅತ್ಯಂತ ವಿಶಿಷ್ಟವಾದ ಕುಂಬಾರರ ಗುರುಪೀಠವಾಗಿರುವ ತೆಲಸಂಗದ ಕುಂಬಾರ ಗುಂಡಯ್ಯ ಮಹಾಸಂಸ್ಥಾನ ಮಠವು, ಕೇವಲ ಧಾರ್ಮಿಕ ಕೇಂದ್ರವಾಗಿರದೆ ಸಾಮಾಜಿಕ ನ್ಯಾಯದ ಬಲವಾದ ಧ್ವನಿಯಾಗಿ ಹೊರಹೊಮ್ಮಿದೆ. ಜ್ಞಾನ ಮತ್ತು ಕಾಯಕದ ಮಹಾ ಜ್ಯೋತಿಯಾಗಿ ಪೀಠ ಕಾರ್ಯನಿರ್ವಹಿಸಲಿದೆ ಎಂದರು.

ವಿಜಯಪುರ ಜ್ಞಾನಯೋಗಾಶ್ರಮದ ಅಧ್ಯಕ್ಷರಾದ ಬಸವಲಿಂಗ ಸ್ವಾಮೀಜಿ, ಇಲಕಲ್ಲ ಚಿತ್ತರಗಿ ಮಠದ ಗುರು ಮಹಾಂತ ಸ್ವಾಮೀಜಿ, ಚಿತ್ರದುರ್ಗದ ಭೋವಿ ಗುರುಪೀಠದ ಜಗದ್ಗುರು ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಜಗದ್ಗುರು ವಾಲ್ಮೀಕಿ ಪ್ರಸನ್ನಾನಂದಪುರಿ ಸ್ವಾಮೀಜಿ, ಹೊಸದುರ್ಗದ ಭಗೀರಥ ಗುರುಪೀಠದ ಜಗದ್ಗುರು ಪುರುಷೋತ್ತಮನಂದಪುರಿ ಸ್ವಾಮೀಜಿ, ಚಿತ್ರದುರ್ಗದ ಮಾದಾರ ಗುರುಪೀಠದ ಜಗದ್ಗುರು ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಹೊಸದುರ್ಗ ಕಾಗಿನೆಲೆ ಶಾಖಾ ಮಠದ ಜಗದ್ಗುರು ಈಶ್ವರ ನಂದಪುರಿ ಸ್ವಾಮೀಜಿ. ದಾವಣಗೆರೆ ಜಿಲ್ಲೆ ಹರಿಹರ ತಾಲೂಕಿನ ಎರೆಹೊಸಹಳ್ಳಿ ರೆಡ್ಡಿ ಗುರುಪೀಠದ ವೇಮನಾನಂದಪುರಿ ಸ್ವಾಮೀಜಿ, ಚಿತ್ರದುರ್ಗದ ಮಡಿವಾಳ ಗುರುಪೀಠದ ಜಗದ್ಗುರು ಬಸವ ಮಡಿವಾಳ ಮಾಚಿದೇವ ಸ್ವಾಮೀಜಿ, ಶಿವಮೊಗ್ಗ ಈಡಿಗ ಗುರುಪೀಠದ ಜಗದ್ಗುರು ರೇಣುಕಾನಂದ ಸ್ವಾಮೀಜಿ, ಚಿತ್ರದುರ್ಗದ ಯಾದವ ಗುರುಪೀಠದ ಜಗದ್ಗುರು ಬಸವ ಯಾದವಾನಂದ ಸ್ವಾಮೀಜಿ, ಹಾವೇರಿ ಜಿಲ್ಲೆ ಚೌಡದಾನಪುರದ ಅಂಬಿಗ ಗುರುಪೀಠದ ಜಗದ್ಗುರು ಶಾಂತಭೀಷ್ಮ ಸ್ವಾಮೀಜಿ, ತಂಗಡಗಿಯ ಹಡಪದ ಗುರುಪೀಠದ ಜಗದ್ಗುರು ಅನ್ನದಾನಿ ಭಾರತಿ ಅಪ್ಪಣ್ಣ ಸ್ವಾಮೀಜಿ, ಚಿತ್ರದುರ್ಗದ ವನಶ್ರೀ (ಗಾಣಿಗ) ಗುರುಪೀಠದ ಜಗದ್ಗುರು ಬಸವ ಕುಮಾರ ಸ್ವಾಮೀಜಿ, ಚಿತ್ರದುರ್ಗದ ಮೇದಾರ ಗುರುಪೀಠದ ಜಗದ್ಗುರು ಇಮ್ಮಡಿ ಕೇತೇಶ್ವರ ಸ್ವಾಮೀಜಿ. ಕಕಮರಿಯ ರಾಮಲಿಂಗೇಶ್ವರ ಮಠದ ಗುರುಲಿಂಗ ಜಂಗಮ ಸ್ವಾಮೀಜಿ, ಕಕಮರಿಯ ಗುರುದೇವಾಶ್ರಮದ ಆತ್ಮಾರಾಮ ಸ್ವಾಮೀಜಿ, ತೆಲಸಂಗ ಹಿರೇಮಠದ ವೀರೇಶ ದೇವರು ಕಾರ್ಯಕ್ರಮದ ಆಶೀರ್ವಚನ ನೀಡಿದರು.

ಮಾಜಿ ಶಾಸಕ ಮಹೇಶ ಕುಮಠಳ್ಳಿ, ಗಜಾನನ ಮಂಗಸೂಳಿ, ರಾಹೂಲ ಜಾರಕಿಹೊಳಿ, ರಾಜ್ಯಾಧ್ಯಕ್ಷ ಲಿಂಗರಾಜ ಕುಂಬಾರ, ನಿಗಮದ ಅಧ್ಯಕ್ಷ ಡಾ.ಶ್ರೀನಿವಾಸ ವೇಲು ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.



> ಸೃಷ್ಟಿಕರ್ತ ಬ್ರಹ್ಮ ದೇವರಿಗೆ ಹೋಲಿಸಬಹುದಾದ ಏಕೈಕ ಕಾಯಕ ಎಂದರೆ ಅದು ಕುಂಬಾರ ಕಾಯಕ. ನಿರ್ಜೀವ ಮಣ್ಣಿಗೆ ತನ್ನ ಬೆವರಿನ ನೀರೆರೆದು, ಸುಂದರವಾದ ಮಡಕೆ-ಕುಡಿಕೆಗಳನ್ನು ಸೃಷ್ಟಿಸಿ ಜಗತ್ತಿಗೆ ನೀಡುವ ಕಲೆ ಮತ್ತು ಸಂಸ್ಕಾರ ಕುಂಬಾರರ ರಕ್ತದಲ್ಲೇ ಇದೆ.
>
> ■ **ಶಾಂತವೀರ ಶ್ರೀ,** ಹೊಸದುರ್ಗ ಕುಂಚಿಟಿಗ ಮಹಾಸಂಸ್ಥಾನ ಮಠ

ಸತತ ಅಧ್ಯಯನದಿಂದ ಉತ್ತಮ ಸಾಧನೆ

ಕುಡಚಿ : ಇಂದಿನ ತಂತ್ರಜ್ಞಾನ ಹಾಗೂ ಆಧುನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಸ್ಪರ್ಧಾತ್ಮಕತೆ ಹೆಚ್ಚಾಗಿರುವುದರಿಂದ ವಿದ್ಯಾರ್ಥಿಗಳು ಪರೀಕ್ಷೆ ಸಮಯದಲ್ಲಿ ಮಾತ್ರ ಓದದೇ, ನಿರಂತರವಾಗಿ ಅಧ್ಯಯನ ನಡೆಸಿ ಲಭ್ಯವಿರುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡರೆ ಉತ್ತಮ ಸಾಧನೆ ಸಾಧ್ಯವಾಗುತ್ತದೆ ಎಂದು ಡಾ. ಬಿ.ಆರ್. ಅಂಬೇಡ್ಕರ್ ಶಿಕ್ಷಣ ಸಂಸ್ಥೆಯ ಎಸ್ಬಿಜಿ ಗ್ರೂಪ್‌ನ ಸಿಇಓ ಜೆ. ಕರ್ವಾಲೋ ಅಭಿಪ್ರಾಯಪಟ್ಟರು.

ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ಶಿಕ್ಷಣ ಸಂಸ್ಥೆಯ ಬಿ. ಶಂಕರಾನಂದ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳ ಅಭಿನಂದನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿಜ್ಞಾನ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ಮಾರೀಯಾ ಸತ್ತಾರ ಅವರಿಗೆ ಲ್ಯಾಪ್ ಟಾಪ್ ಹಾಗೂ ನಗದು ಬಹುಮಾನ ನೀಡಿ ಸನ್ಮಾನಿಸಲಾಯಿತು. ದ್ವಿತೀಯ ಸ್ಥಾನ ಪಡೆದ ಮುಹಾತಸಮ್ ಪಾಳೇಗಾರ ಹಾಗೂ ತೃತೀಯ ಸ್ಥಾನ ಪಡೆದ ಮೇಹವಿಶ ಜಹಾಂಗೀರ್ ಅವರನ್ನು ಗೌರವಿಸಲಾಯಿತು.

ಕಲಾ ವಿಭಾಗದಲ್ಲಿ ಭಾಗ್ಯಶ್ರೀ ಶಿಂಗಾಡೆ, ಅನುರಾಧ ಕಾಂಬಳೆ, ದಿಲೀಪ ಮೇರಾಪೂರೆ ಹಾಗೂ ವಾಣಿಜ್ಯ ವಿಭಾಗದಲ್ಲಿ ಶಿವಾನಂದ ವಗ್ಯಾಗೋಳ, ರಕ್ಷಿತಾ ನಾಯಿಕ, ಚೈತ್ರಾ ಘೋಂಗಡೆ ಅವರಿಗೆ ನಗದು ಬಹುಮಾನ ಮತ್ತು ಪ್ರಮಾಣಪತ್ರ ನೀಡಿ ಸತ್ಕರಿಸಲಾಯಿತು. ಜೊತೆಗೆ 6ರಿಂದ 10ನೇ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ನೀಡಿ ಗೌರವಿಸಲಾಯಿತು. ಡಾ. ಎಚ್.ಎನ್. ಸಾಬಡೆ, ನಿವೃತ್ತ ಪ್ರಾಚಾರ್ಯ ಎಂ.ಎಸ್. ಯಾದವಾಡ, ಪುರಸಭೆ ಮಾಜಿ ಅಧ್ಯಕ್ಷ ಹಮೀದೋದಿನ್ ರೋಹಿಲೆ, ಕವಿ ಸಾಕೀಬ ಜುನೇದಿ ಹಾಗೂ ಪ್ರಾಚಾರ್ಯ ಕುಮಾರ ಮೋಳವಾಡೆ ಮಾತನಾಡಿದರು.

ಜುನ್ನೇದಿಯಾ ಶಿಕ್ಷಣ ಸಂಸ್ಥೆ ಅಧ್ಯಕ್ಷ ಇಕ್ಬಾಲಹ್ಮದ ಸತ್ತಾರ, ಡಾ. ಎನ್.ಎ. ತಾಜೀನ್, ಪದವಿ ಪ್ರಾಚಾರ್ಯ ಎ.ಎಸ್. ಕಾಂಬಳೆ, ಪ್ರೌಢಶಾಲೆ ಮುಖ್ಯೋಪಾಧ್ಯಾಯ ಎ.ಎಸ್. ಟೋಣ್ಣೆ, ಸರ್ಕಾರಿ ಪ್ರೌಢಶಾಲೆ ಮುಖ್ಯೋಪಾಧ್ಯಾಯ ಜಾವೇದ ಬಾಲಪರ್ವೇಶ, ಅಫ್ತಾಬ್ ಖಿನಿತೋಡ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಬೆಳಗಾವಿ ಸ್ವಾಗತಿಸಿದರು. ಪ್ರೊ. ಕೆ.ಪಿ. ನಡೋಣಿ ನಿರೂಪಿಸಿದರು. ಪ್ರೊ. ವಿ.ಎಲ್. ನಾಡಗೌಡ ವಂದಿಸಿದರು.



ಗುರು ಶಿಷ್ಯರ ಸಂಬಂಧ ಶ್ರೇಷ್ಠವಾದದ್ದು

ಗೋಕಾಕ: ನಮ್ಮ ದೇಶದ ಸಾಂಸ್ಕೃತಿಕ ಶ್ರೀಮಂತಿಕೆಯಲ್ಲಿ ಗುರು ಶಿಷ್ಯ ಪರಂಪರೆ ಒಂದು. ಅನುದಿನವು ಕಾಯಕ ಮಾಡುತ್ತಾ ನಮ್ಮ ಸುಂದರ ಬದುಕನ್ನು ರೂಪಿಸಿಕೊಳ್ಳಬೇಕು. ಗುರು ಶಿಷ್ಯರ ನಡುವೆ ಇರುವ ಸಂಬಂಧ ಭಾವನಾತ್ಮಕ ಸಂಬಂಧವಾಗಿದ್ದು ಜೊತೆಗೆ ಸ್ನೇಹಿತರಲ್ಲಿಯೂ ಅದೇ ಭಾವನಾತ್ಮಕ ಸಂಬಂಧವಿದೆ ಎಂದು ಗೋಕಾಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಲಕ್ಷ್ಮಣ ಭೀಮಪ್ಪ ಪಟಾಯಿತ ಅಭಿಪ್ರಾಯಪಟ್ಟರು.

ಅವರು, ತಾಲೂಕಿನ ಶಿಂದಿಕುರಬೇಟ ಗ್ರಾಮದ ಶ್ರೀ ಸಿದ್ದರಾಮೇಶ್ವರ ಆದರ್ಶ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಅನುದಾನಿತ ಶಾಲೆಯ ಸನ್ 1999-2000 ಸಾಲಿನ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಗುರು ವಂದನಾ ಕಾರ್ಯಕ್ರಮ ಹಾಗೂ ಸ್ನೇಹಿತರ ಪುನರ್ಮಿಲನ ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಮನುಷ್ಯ ಸಮಾಜದಲ್ಲಿ ಏನಾದರೂ ಸಾಧನೆ ಮಾಡಬೇಕಾದರೆ ಉತ್ತಮ ಚಾರಿತ್ರ್ಯ ಮುಖ್ಯವಾಗಿದೆ ಎಂದರಲ್ಲದೇ ಚಾರಿತ್ರ್ಯವೇ ಜೀವನದ ಕಿರೀಟ ವಾಗಿದೆ. ಪ್ರಾಥಮಿಕ ಶಾಲೆಯಲ್ಲಿ ವಿದ್ಯೆ ಕಲಿಸಿದ ಗುರುಗಳನ್ನು ಒಂದೇ ವೇದಿಕೆಯಲ್ಲಿ ಸೇರಿಸಿ ಅವರಿಗೆ ಸತ್ಕಾರದ ಜೊತೆಗೆ ಸಸಿ ನೀಡಿ ಪರಿಸರ ಜಾಗೃತಿ ಮೂಡಿಸಿದ ಹಳೆ ವಿದ್ಯಾರ್ಥಿಗಳ ಕಾರ್ಯ ಶ್ಲಾಘನೀಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಧಾನ ಗುರು ಎಂ.ಆರ್.ಕಡಕೋಳ ಮಾತನಾಡಿದರು. ರಾಜ್ಯ ಮಟ್ಟದ ಪ್ರಶಸ್ತಿ ಪುರಸ್ಕೃತ ಶಿಕ್ಷಕಿ ಎಸ್.ಎಸ್.ದೊಡಮನಿ ಮಾತನಾಡಿದರು. ವೇದಿಕೆ ಮೇಲೆ ಶಿಕ್ಷಕರಾದ ಎಸ್.ಆರ್.ತರಾಳ, ಎಸ್.ಎಲ್.ಅಂಬಿ, ಬಸವರಾಜ ಪೂಜೇರಿ, ಎಲ್.ಆರ್.ಭೋವಿ, ಟಿ.ಐ.ಕಟ್ಟಿಮನಿ, ಎಸ್.ಆರ್. ಅರಳಿಮಟ್ಟಿ, ಪಿ.ಎನ್.ಬಡಕುಂದ್ರಿ, ಆರ್.ಬಿ.ಕರೆಪ್ಪಗೋಳ, ವಿಠ್ಠಲ ಕರೋಶಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ತಮ್ಮ ಶಾಲೆಯ ದಿನಗಳನ್ನು ಸ್ಮರಿಸಿಕೊಂಡರು. ವಿದ್ಯೆ ಕಲಿಸಿದ ಶ್ರೀ ಸಿದ್ದರಾಮೇಶ್ವರ ಪ್ರಾಥಮಿಕ ಶಾಲೆಯ ಶಿಕ್ಷಕರನ್ನು ಸನ್ಮಾನಿಸಿ ಗೌರವಿಸಿದರು. ಸಂಗೀತಾ ಬಳಗಾರ ಸ್ವಾಗತಿಸಿದರು. ರಾಜೇಶ್ವರಿ ನಿಪ್ಪಾಣಿ ನಿರೂಪಿಸಿದರು. ನಾಗೇಶ್ ಬಂಬಲಾಡಿ ವಂದಿಸಿದರು.



ಅಥಣಿ- ಪುಣೆ ಬಸ್‌ಗೆ ಚಾಲನೆ ನೀಡಿದ ಶಾಸಕ ಲಕ್ಷ್ಮಣ ಸವದಿ

ಅಥಣಿ: ಪ್ರತಿ ನಿತ್ಯ ಮಹಾರಷ್ಟ್ರದ ಪುಣೆ ನಗರಕ್ಕೆ ವ್ಯಾಪಾರ, ವಹಿವಾಟು, ಇತರೆ ಕೆಲಸಕ್ಕಾಗಿ ಹೋಗುವ ಪ್ರಯಾಣಿಕರ ಅನಕೂಲಕ್ಕಾಗಿ ಅಥಣಿ - ಪುಣೆ ನೂತನ ಬಸ್ ಸಂಚಾರಕ್ಕೆ ಮಾಜಿ ಉಪ ಮುಖ್ಯ ಮಂತ್ರಿ ಹಾಗೂ ಶಾಸಕ ಲಕ್ಷ್ಮಣ ಸವದಿ ಹಸಿರು ನಿಶಾನೆ ತೋರಿಸಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಅಥಣಿಯಿಂದ ಬೆಳಗಾವಿ, ವಿಜಯಪುರ, ಚಿಕ್ಕೋಡಿ ನಗರಗಳಿಗೆ ತಡೆ ರಹಿತ ಬಸ್ ಪ್ರಾರಂಭಿಸುವ ಕುರಿತು ಚಿಂತನೆ ಮಾಡಲಾಗಿದೆ. ಅಧಿಕ ಮಾಸ ಮುಗಿದ ನಂತರ ಶ್ರಾವಣ ಮಾಸ ಪ್ರಾರಂಭ ಆದ ಮೇಲೆ ಈ ಭಾಗದ ಭಕ್ತರ ಅನುಕೂಲಕ್ಕೆ ಅಥಣಿಯಿಂದ - ಶ್ರೀಶೈಲ ಕ್ಷೇತ್ರಕ್ಕೆ ಪ್ರತಿ ನಿತ್ಯ ನೂತನ ಬಸ್ ಸಂಚಾರ ಪ್ರಾರಂಭವಾಗಲಿದೆ.

ಶಾಲಾ ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳಿಗಾಗಿ ಸ್ಥಳೀಯ ನಿಲ್ದಾಣದಿಂದ ಕಾಲೇಜುಗಳವರಗೆ ಪ್ರತ್ಯೇಕ ಬಸ್ ವ್ಯವಸ್ಥೆಯನ್ನು ಕಲ್ಪಿಸಲಾಗುವುದು. ಈ ಸೌಲಭ್ಯವನ್ನು ಪ್ರಯಾಣಿಕರು ಮತ್ತು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕೆಂದು ಹೇಳಿದರು.

ಘಟಕದ ವ್ಯವಸ್ಥಾಪಕ ಎನ್.ಎಂ. ಕೇರಿ ಮಾತನಾಡಿ, ಅಥಣಿಯಿಂದ ಬೆಳಿಗ್ಗೆ 7:45 ಹೊರಟು ಮತ್ತೆ ಸಂಜೆ 4 ಗಂಟೆಗೆ ಮರಳಿ ಪುಣೆಯಿಂದ ಹೊರಡಲಿದೆ. ಇದರ ಸದುಪಯೋಗವನ್ನು ಪ್ರಯಾಣಿಕರು ಪಡೆದುಕೊಳ್ಳಲು ಪ್ರಯಾಣಿಕರಿಗೆ ತಿಳಿಸಿದರು. ಈ ವೇಳೆ ಚಿಕ್ಕೋಡಿ ಜಿಲ್ಲಾ ನಿಯಂತ್ರಣ ಅಧಿಕಾರಿ ಮಹಾದೇವ ಮುಂಜೆ, ಸಿದ್ದಾರ್ಥ ಶಿಂದೆ, ಪುರಸಭೆ ಸದಸ್ಯ ಕಲ್ಲೇಶ ಮಡ್ಡಿ, ಅಶೋಕ ಮಗದುಮ್ಮ, ಎಟಿಎಸ್ ಬಸವರಾಜ ಜಗದಾಳ, ಟಿ.ಆಯ್. ಸಿದ್ದು ಕಂಕಣವಾಡಿ, ನಿಲ್ದಾಣ ಅಧಿಕಾರಿ ಎ.ಎನ್. ಟರ್ಕಿ, ಎಮ್ ಎನ್ ನಧಾಫ್ ಸೇರಿದಂತೆ ಘಟಕದ ಸಿಬ್ಬಂದಿ ವರ್ಗದವರು, ಚಾಲಕರು, ನಿರ್ವಾಹಕರು ಪಾಲ್ಗೊಂಡಿದ್ದರು.



ಸರ್ಕಾರಿ ಅಧಿಕಾರಿಗಳು ಜನಸ್ನೇಹಿಯಾಗಿ ಕಾರ್ಯ ನಿರ್ವಹಿಸಲಿ: ಶ್ರೀಗಳು

ಬೆಳಗಾವಿ : ಸರ್ಕಾರಿ ನೌಕರಿ ಮಾಡಿ ಕೇವಲ ವೇತನ ಪಡೆಯುವುದು ಮುಖ್ಯವಲ್ಲ, ಅದರೊಟ್ಟಿಗೆ ನಾವು ಜನಸ್ನೇಹಿಯಾಗಿ ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕು. ಅಹಂಭಾವ ಬಿಟ್ಟು ಜನಸೇವೆಯನ್ನು ಮಾಡಿದ ಅಧಿಕಾರಿ ಹೆಸ್ಕಾಂ ಎಇಇ ಅಶ್ವಿನ್ ಶಿಂಧೆ ಎಲ್ಲರಿಗೂ ಮಾದರಿ ಎಂದು ಕಾರಂಜಿಮಠದ ಗುರುಸಿದ್ಧ ಸ್ವಾಮೀಜಿ ತಿಳಿಸಿದರು.

ಸೋಮವಾರ ಬೆಳಗಾವಿಯ ಕೆಪಿಟಿಸಿಎಲ್ ಸಭಾಗೃಹದಲ್ಲಿ ನಡೆದ ಸಮಾರಂಭದಲ್ಲಿ ಹೆಸ್ಕಾಂನಲ್ಲಿ ಸುಮಾರು 38 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿ ಸೇವಾ ನಿವೃತ್ತಿ ಹೊಂದಿದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಅಶ್ವಿನ್ ಶಿಂಧೆ ಅವರನ್ನು ಆತ್ಮೀಯವಾಗಿ ನಾಗರಿಕ ಸನ್ಮಾನದೊಂದಿಗೆ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು,

ಅಶ್ವಿನ್ ಶಿಂಧೆ ಅವರು ಧಾರ್ಮಿಕ ಪ್ರವೃತ್ತಿ, ಸಾತ್ವಿಕ, ಸರಳ ಸಜ್ಜನಿಕಯ ವ್ಯಕ್ತಿತ್ವ ಹೊಂದಿದವರು. ರಾತ್ರಿ ಸಮಯದಲ್ಲಿಯೂ ಕೂಡ ವಿದ್ಯುತ್ ಸಮಸ್ಯೆಗಳಿಗೆ ಪ್ರಾಮಾಣಿಕವಾಗಿ ಅವರು ಸ್ಪಂದಿಸಿದ್ದರು ಎಂದರು.



ಶಾಸಕ ಆಸೀಫ್ ಸೇಠ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಹಾಪೌರ ಪ್ರೀತಿ ಕಾಮಕರ್, ಉಪಮಹಾಪೌರ ಹಣುಮಂತ ಕೊಂಗಾಲಿ ಉಪಸ್ಥಿತರಿದ್ದರು. ವಿಶೇಷ ಆಹ್ವಾನಿತರಾಗಿ ಜಿಲ್ಲಾಧಿಕಾರಿಗಳಾದ ಮೊಹ್ಮದ್ ರೋಷನ್, ಹೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಾದ ವೈಶಾಲಿ, ಎಂ.ಎಲ್., ನಿರ್ದೇಶಕರಾದ ಎಸ್. ಜಗದೀಶ, ಅಧೀಕ್ಷಕ ಅಭಿಯಂತರರಾದ ಪ್ರವೀಣಕುಮಾರ್ ಚಿಕಡೆ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಶಿಕ್ಷಕರ ಸಮಸ್ಯೆ ಪರಿಹರಿಸಲು ಪ್ರಾಮಾಣಿಕವಾಗಿ ಶ್ರಮಿಸುವೆ

ಸವದತ್ತಿ: ತಾಲೂಕಿನಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಮಕ್ಕಳು ಸಾಧನೆ ಮಾಡಲು ಶಿಕ್ಷಕರ ಹಾಗೂ ಶಿಕ್ಷಣಾಧಿಕಾರಿಗಳ ಶ್ರಮ ಕಾರಣ. ಶಿಕ್ಷಕರ ಸೇವೆ ನನ್ನ ಭಾಗ್ಯ. ಮತಕ್ಷೇತ್ರದ ವ್ಯಾಪ್ತಿಯ ಶಿಕ್ಷಕರ ಯಾವುದೇ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಪ್ರಾಮಾಣಿಕವಾದ ಕಾರ್ಯ ಮಾಡುವೆ ಎಂದು ಶಾಸಕ ವಿಶ್ವಾಸ ವೈದ್ಯ ಭರವಸೆ ನೀಡಿದರು.

ಅವರು ತಮ್ಮ ಗೃಹ ಕಾರ್ಯಾಲಯದಲ್ಲಿ ತಾಲೂಕು ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ಅವಿರೋಧವಾಗಿ ಆಯ್ಕೆಯಾದ ಪದಾಧಿಕಾರಿಗಳಿಂದ ಅಭಿನಂದನಾ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಾನು ಶಾಸಕನಾಗಿ ಆಯ್ಕೆಯಾದ ಮೇಲೆ ತಾಲೂಕಿನ ಬಹಳಷ್ಟು ಶಾಲೆಗಳನ್ನು ಅಭಿವೃದ್ಧಿಪಡಿಸಿರುವೆ ಮತ್ತು ಶಾಲೆಗಳನ್ನು ಉನ್ನತೀಕರಿಸಿರುವೆ. ತಾಲೂಕಿನ ಬಡ ಮಕ್ಕಳು ವಿದ್ಯಾವಂತರಾಗಿ ಬಾಳಬೇಕಾಗಿದೆ. ಆ ನಿಟ್ಟಿನಲ್ಲಿ ನಾನು ಶಿಕ್ಷಣ ಇಲಾಖೆಗೆ ಮತ್ತು ಶಿಕ್ಷಕರಿಗೆ ಬೇಕಾಗಿರುವ ಎಲ್ಲ ಸೌಲಭ್ಯಗಳನ್ನು ಪ್ರಾಮಾಣಿಕವಾಗಿ ಒದಗಿಸುವೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎ.ಎ. ಖಾಜಿ ಮಾತನಾಡಿ, ತಾಲೂಕಿನ ಎಲ್ಲ ಶಿಕ್ಷಕ , ಶಿಕ್ಷಕಿಯರು ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ಕೊಡುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ ಎಂದರು

ನಂತರ ಶಿಕ್ಷಕರ ಸಂಘದ ವತಿಯಿಂದ ಶಾಸಕ ವಿಶ್ವಾಸ ವೈದ್ಯರವರನ್ನು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಹಾಗೂ ಜಿಲ್ಲಾ ಸಂಘದ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು.

ನಂತರ ಸವದತ್ತಿ ತಾಲೂಕು ಘಟಕಕ್ಕೆ ಅವಿರೋಧವಾಗಿ ಆಯ್ಕೆಯಾದ ಸಂಘದ ಅಧ್ಯಕ್ಷರನ್ನು ಹಾಗೂ ಉಪಾಧ್ಯಕ್ಷರನ್ನು ಮತ್ತು ಪದಾಧಿಕಾರಿಗಳನ್ನು ಶಾಸಕ ವಿಶ್ವಾಸ ವೈದ್ಯರವರು ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸಂಘದ ಪದಾಧಿಕಾರಿಗಳಾದ ಹಾಗೂ ರಾಜ್ಯ ಸಹ ಕಾರ್ಯದರ್ಶಿಗಳಾದ ಜಯಕುಮಾರ್ ಹೆಬಳಿ, ಜಿಲ್ಲಾ ಅಧ್ಯಕ್ಷರಾದ ರಮೇಶ್ ಗೋಣಿ, ಶಿಕ್ಷಣ ಇಲಾಖೆಯ ನಿವೃತ್ತ ಅಧಿಕಾರಿಗಳಾದ ಗಿರೀಶ್ ಮುನವಳ್ಳಿ , ಅಧಿಕಾರಿಗಳ ಕಾರ್ಯಾಲಯದ ಅಧೀಕ್ಷಕ ಸುರೇಶ್ ಬೆಟಗೇರಿ, ಜಿಲ್ಲಾ ಕಾರ್ಯದರ್ಶಿಗಳಾದ ಕೃಷ್ಣಾ ರಾಚಣ್ಣವರ್, ಜಿಲ್ಲಾ ಸಹಕಾರಿದರ್ಶಿ ಹನುಮಂತ ಪೆಟ್ಲುರ, ತಾಲೂಕು ಅಧ್ಯಕ್ಷರಾದ ಪ್ರಶಾಂತ್ ಹಂಪಣ್ಣವರ, ರಮೇಶ್ ಅಬ್ಬಾರ್, ಗೌರವ ಅಧ್ಯಕ್ಷರಾದ ಎಂ.ಬಿ.ಚುಂಚನೂರ್ ಸೇರಿದಂತೆ ತಾಲೂಕಿನ ಎಲ್ಲ ಶಿಕ್ಷಕರು ಉಪಸ್ಥಿತರಿದ್ದರು.

ಶಿಕ್ಷಕ ಎಫ್. ಜಿ. ನವಲಗುಂದ ನಿರೂಪಿಸಿ, ವಂದಿಸಿದರು.



ವಿದ್ಯಾರ್ಥಿಗಳು ಶೈಕ್ಷಣಿಕ ರಾಯಭಾರಿಗಳು: ಮಿರ್ಜಿ

ಮೂಡಲಗಿ: ಒಂದು ಶಿಕ್ಷಣ ಸಂಸ್ಥೆಯಲ್ಲಿ ಜ್ಞಾನಾರ್ಜನೆ ಪಡೆದು ಉತ್ತೀರ್ಣರಾಗಿ ಅಲ್ಲಿಂದ ಬೀಳ್ಕೊಂಡು, ಉನ್ನತ ಶಿಕ್ಷಣಕ್ಕಾಗಿ ಇನ್ನೊಂದು ಶಿಕ್ಷಣ ಸಂಸ್ಥೆಗೆ ಪ್ರವೇಶ ಪಡೆದರೆ, ಆಗ ಆ ವಿದ್ಯಾರ್ಥಿಗಳು ಈ ಹಿಂದೆ ಕಲಿತ ಶಿಕ್ಷಣ ಸಂಸ್ಥೆಯ ಶೈಕ್ಷಣಿಕ ರಾಯಭಾರಿಗಳಾಗಿ ಹೊಸ ಶಿಕ್ಷಣ ಸಂಸ್ಥೆಯಲ್ಲಿ ತಮ್ಮ ಛಾಪು ಮೂಡಿಸುತ್ತಾರೆ ಎಂದು ಗೋಕಾಕ ಸರ್ಕಾರಿ ಪದವಿ ಪೂರ್ವ ಮಹಾವಿದ್ಯಾಲಯದ ಶಿಕ್ಷಕ ಆರ್. ಎಲ್. ಮಿರ್ಜಿ ಅಭಿಪ್ರಾಯಪಟ್ಟರು.

ಮೂಡಲಗಿ ಶಿಕ್ಷಣ ಸಂಸ್ಥೆಯ ಕಲಾ, ವಾಣಿಜ್ಯ ಹಾಗೂ ಬಿ.ಸಿ.ಎ. ಮಹಾವಿದ್ಯಾಲಯದ 2025-26ನೇ ಸಾಲಿನ ವಾರ್ಷಿಕ ಸ್ನೇಹ ಸಮ್ಮೇಳನದ ಮುಖ್ಯ ಅತಿಥಿಯಾಗಿ ಮಾತನಾಡಿದರು

ಅಧ್ಯಕ್ಷತೆ ವಹಿಸಿದ್ದ ಮೂಡಲಗಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವೆಂಕಟೇಶ ಸೋನವಾಲ್ಕರ ಮಾತನಾಡಿ, ಈ ಶಿಕ್ಷಣ ಸಂಸ್ಥೆಯಲ್ಲಿ ಕಲಿತು ಉನ್ನತ ವ್ಯಾಸಂಗ ಮಾಡಿ, ಭವಿಷ್ಯದಲ್ಲಿ ಹೆಚ್ಚಿನ ಸಾಧನೆ ಮಾಡಿದರೆ, ಶಿಕ್ಷಣ ಸಂಸ್ಥೆಗೆ, ಕಲಿಸಿದ ಗುರುಗಳಿಗೆ ಹಾಗೂ ಪೋಷಕರಿಗೆ ಕೀರ್ತಿ ತಂದಂತಾಗುತ್ತದೆ. ಅದಕ್ಕಾಗಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಸಾಧನೆಯ ಕನಸು ಕಾಣಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಕಬಡ್ಡಿ ಆಟಗಾರ ಚಂದ್ರು ದಾಸನ್ನವರ ಹಾಗೂ ಸೈಕ್ಲಿಂಗ್ ತಂಡದ ಆಟಗಾರ್ತಿ ಪೂಜಾ ಮಠಪತಿ ಅವರನ್ನು ಶಾಲು ಹೊದಿಸಿ ಗೌರವಿಸಲಾಯಿತು.

2025-26ನೇ ಸಾಲಿನ ಆದರ್ಶ ವಿದ್ಯಾರ್ಥಿ ಪ್ರಶಸ್ತಿಯನ್ನು ಸುನೀಲ ಜಡಗನ್ನವರ, ಆದರ್ಶ ವಿದ್ಯಾರ್ಥಿನಿ ಪ್ರಶಸ್ತಿಯನ್ನು ಸುಶ್ಮೀತಾ ಪಾಟೀಲ, ಕ್ರೀಡಾ ವಿಭಾಗದ ವೀರಾಗ್ರ ಪ್ರಶಸ್ತಿಯನ್ನು ಸಿದ್ದು ಹುಣಶ್ಯಾಳ, ವೀರಾಗ್ರಣಿ ಪ್ರಶಸ್ತಿಯನ್ನು ಸಾವಿತ್ರಿ ಗುಡೆನ್ನವರ, ಗ್ರಂಥಾಲಯ ವಿಭಾಗದ ಉತ್ತಮ ಓದುಗ ಪ್ರಶಸ್ತಿಯನ್ನು ರಮೇಶ ಕೃಷ್ಣಪ್ಪ ಕುಲಿಗೊಡ ಹಾಗೂ ಉತ್ತಮ ಓದುಗಾರ್ತಿ ಪ್ರಶಸ್ತಿಯನ್ನು ಪಾರ್ವತಿ ದುರ್ಗಪ್ಪ ಹರಿಜನ ಪಡೆದರು. ರೋವರ್ಸ್ ಸ್ಕೌಟ್ ವಿಭಾಗದಲ್ಲಿ ಉತ್ತಮ ರೋವರ್ಸ್ ಪ್ರಶಸ್ತಿಯನ್ನು ಪ್ರವೀಣ ಸೀತಾರಾಮ ವಡ್ಡರ ಮಹಾಂತೇಶ ಬೀರಪ್ಪ ಬೋರಗೌಡ ಹಾಗೂ ಲಕ್ಷ್ಮಣ ಸುರೇಶ ಭಮ್ಮವ್ವಗೋಳ ಅವರಿಗೆ ನೀಡಲಾಯಿತು.

ಸಮಾರಂಭದಲ್ಲಿ ಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ಎಸ್.ಎಂ. ಸೋನವಾಲ್ಕರ, ಡಾ. ಎಸ್. ವ್ಹಿ. ಹೊಸೂರ, ಎಸ್.ಬಿ. ಖೋತ ಎ ಎಸ್ ಮಿಸಿ ನಾಯಿಕ ಎಮ್ ಎಸ್ ಕುಂದರಗಿ ಡಾ. ಪವನ ಕುಮಾರ ಕೆ., ಎಲ್.ಪಿ. ಹಿಡ್ಕಲ, ಡಾ. ಬಸವಂತ ಬರಗಾಲಿ, ಪಿ.ಬಿ. ಚೌಡಕಿ, , ಕೆ.ಪಿ. ಧೋಣಿ, ವ್ಹಿ ಆರ್ ದೇಶಪಾಂಡೆ, ಭಾರತಿ ತಳವಾರ, ಸವಿತಾ ಕೊತ್ತಲ, ಪ್ರೀತಿ ಬೆಳಗಲಿ, ಎಸ್.ಎಸ್. ಕುಲಿಗೂಡ, ಎಸ್.ಎಸ್. ಹಿರೇಮಠ, ಸುನಂದಾ ಅಂಗಡಿ, ಸಂತೋಷ ಮುಗಳಿ, ವೆಂಕಟೇಶ ಪಾಟೀಲ, ಪ್ರತಿಭಾ ಪಂಡ್ರೊಳಿ, ಶಿಲ್ಪಾ ಕಾಂಬಳೆ ಹಾಗೂ ಎನ್ ಸಿ. ಭರಮನ್ನವರ ಉಪಸ್ಥಿತರಿದ್ದರು.

ಎಸ್.ಕೆ. ಅಂಗಡಿ ಹಾಗೂ ಎಸ್. ಆರ್. ಮುಗಳಿ ನಿರೂಪಿಸಿದರು. ಎಂ.ಎಸ್. ಕುಂದರಗಿ ವಂದಿಸಿದರು.



ಕಿರುಸುದ್ದಿ

ಇಂದಿನಿಂದ ಜಾತ್ರೆ ಪ್ರಾರಂಭ

ಕಲಾದಗಿ: ಗ್ರಾಮದ ಪಾರ್ಥಿಸಮಾಜ ಕಾಲೋನಿಯಲ್ಲಿರುವ ದಂಡಿನ ದುರ್ಗಾದೇವಿ ಜಾತ್ರಾ ಮಹೋತ್ಸವ ಮೇ 26ರಿಂದ ನಡೆಯಲಿದೆ. ಮೇ 26ರಂದು ಮಂಗಳವಾರ ಬೆಳಿಗ್ಗೆ 9ಗಂಟೆಗೆ ದೇವಿಗೆ ಉಡಿ ತುಂಬುವುದು 11ಗಂಟೆಗೆ ಪಲ್ಲಕ್ಕಿ ಮಹೋತ್ಸವ ಹಾಗೂ ಮದ್ಯಾಹ್ನ 3ಗಂಟೆಗೆ ದೇವಿಯ ವಿವಿಧ ಪೂಜಾ ಕಾರ್ಯಕ್ರಮ ಜರುಗುತ್ತವೆ. ರಾತ್ರಿ 8ಗಂಟೆಗೆ ಅನ್ನ ಸಂತರ್ಪಣೆ ಇರುತ್ತದೆ. ರಾತ್ರಿ 9ಗಂಟೆಗೆ ಜಿದ್ದಾಜಿದ್ದಿನ ಡೊಳ್ಳಿನ ಗಾನ ಸ್ಪರ್ಧೆಗಳು ನಡೆಯಲಿವೆ. ಮೇ 27ರಂದು ಸಂಜೆ 5ಗಂಟೆಗೆ ಸಂಗ್ರಾಮ ಕಲ್ಲು ಎತ್ತುವ ಸ್ಪರ್ಧೆ ನಡೆಯಲಿದೆ. ಮೇ 28ರಂದು ಮದ್ಯಾಹ್ನ 3ಗಂಟೆಗೆ ಟಗರಿನ ಕಾಳಗ ಸ್ಪರ್ಧೆಗಳು ನಡೆಯಲಿವೆ. ಮೇ 29ರಂದು ಬೆಳಗ್ಗೆ 10ಗಂಟೆಗೆ ಮುಧೋಳ ಹಾಗೂ ದೇಸಿ ನಾಯಿಗಳ ಓಟದ ಸ್ಪರ್ಧೆ ಮತ್ತು ಮದ್ಯಾಹ್ನ 1.30ಕ್ಕೆ ಗೋಣಿ ಚೀಲ ಜಿಗಿಯುವ ಸ್ಪರ್ಧೆಗಳು ನಡೆಯಲಿವೆ. ವಿಜೇತರಾದವರಿಗೆ ಆಕರ್ಷಕ ಬಹುಮಾನಗಳು ಕೊಡಲಾಗುವುದು ಎಂದು ಜಾತ್ರಾ ಕಮೀಟಿಯವರು ತಿಳಿಸಿದ್ದಾರೆ.

ಮಾಸಾಶನ ಬಿಡುಗಡೆಗೆ ರವಿ ಅಂಗಡಿ ಆಗ್ರಹ

ಗುಳೇದಗುಡ್ಡ: ಕಳೆದ ಮೂರು ತಿಂಗಳಿಂದ ವೃದ್ಧಾಪ್ಯ, ವಿಧವಾ, ಅಂಗವಿಕಲರ ಮಾಸಾಶನ ವೇತನ ಇದುವರೆಗೂ ಬಿಡುಗಡೆಯಾಗಿಲ್ಲ. ಇದರಿಂದ ಮಾಸಾಶನದ ಮೇಲೆ ಜೀವನ ನಡೆಸುತ್ತಿರುವ ಬಡವರು ತಮ್ಮ ದೈನಂದಿನ ಖರ್ಚು ವೆಚ್ಚ ನಿರ್ವಹಿಸಲು ಕಷ್ಟಪಡುತ್ತಿದ್ದು ಕೂಡಲೇ ಸರ್ಕಾರ ಹಣ ಬಿಡುಗಡೆ ಮಾಡಬೇಕು ಎಂದು ನಾಗರಿಕ ಹಿತರಕ್ಷಣಾ ಸಮಿತಿಯ ಅಶೋಕ್ ಹೆಗಡೆ ಹಾಗೂ ಕರವೇ ಅಧ್ಯಕ್ಷ ರವಿ ಅಂಗಡಿ ಪ್ರಕಟಣೆ ಮೂಲಕ ಒತ್ತಾಯಿಸಿದ್ದು, ಈ ತಿಂಗಳು ಕೊನೆಗೆ ಸರಕಾರ ಅಸಹಾಯಕರ ಮಾಸಾಶನದ ಹಣ ಬಿಡುಗಡೆ ಮಾಡದಿದ್ದರೆ, ವೃದ್ಧರು, ಅಂಗವಿಕಲರು ಹಾಗೂ ವಿಧವೆಯರೊಂದಿಗೆ ತಹಶೀಲ್ದಾರ್ ಕಚೇರಿಗೆ ಮುತ್ತಿಗೆ ಹಾಕಲಾಗುವುದು ಎಂದು ತಿಳಿಸಿದ್ದಾರೆ.

ಉಚಿತ ಯೋಗ ತರಬೇತಿಗೆ ನೋಂದಣಿ

ಬಾಗಲಕೋಟೆ: ಭಾರತ ಸರಕಾರದ ಆಯುಷ ಮಂತ್ರಾಲಯವು 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಜೂ.21ರಂದು ರಾಷ್ಟ್ರಾದ್ಯಂತ ಆಚರಿಸಲು ನಿರ್ಧರಿಸಲಾಗಿದ್ದು, ಈ ಹಿನ್ನಲೆಯಲ್ಲಿ ಉಚಿತವಾಗಿ 14 ದಿನಗಳ ಯೋಗ ತರಬೇತಿಯನ್ನು ಆನ್‌ಲೈನ್ ಮೂಲಕ ಮೊರಾರ್ಜಿ ದೇಸಾಯಿ ಯೋಗ ಸಂಸ್ಥೆ ನವದೆಹಲಿಯಿಂದ ಕಾರ್ಯಕ್ರಮ ಆಯೋಜಿಸಲಾಗಿದೆ. ತರಬೇತಿಯಲ್ಲಿ ಪಾಲ್ಗೊಳ್ಳಲು ಆಯುಷ ಮಂತ್ರಾಲಯದ ವೆಬ್‌ಸೈಟ್ http://moahabityoga?ref=karnataka ನಲ್ಲಿ ಜಿಲ್ಲೆಯ ಎಲ್ಲ ಸರಕಾರಿ ನೌಕರರು ಹಾಗೂ ಅವರ ಕುಟುಂಬದ ಸದಸ್ಯರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ನೋಂದಾಯಿಸಿ ತರಬೇತಿ ಪಡೆದು ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಅಧಿಕಾರಿಗಳು ತಿಳಿಸಿದ್ದಾರೆ.

ಮೇ 28ಕ್ಕೆ ಜಾಗೃತಿ ಶಿಬಿರ

ಬಾಗಲಕೋಟೆ: ಭವಿಷ್ಯ ನಿಧಿ ಮತ್ತು ಪಿಂಚಣಿ ಇತ್ಯಾದಿ ಗಳಿಗೆ ಸಂಬಂಧಿಸಿದಂತೆ, ಕುಂದುಕೊರತೆಗಳನ್ನು ಪರಿಹರಿಸುವ ಸಲುವಾಗಿ ಮೇ 28ರಂದು ಜಮಖಂಡಿಯ ಕೆ.ಕೆ.ತುಂಗಳ ಮೆಮೋರಿಯಲ್ ಟ್ರಸ್ಟ್‌ನಲ್ಲಿ ಬೆಳಗ್ಗೆ 9.30ರಿಂದ ಸಂಜೆ 4 ಗಂಟೆವರೆಗೆ ಜಾಗೃತಿ ಶಿಬಿರ ಹಮ್ಮಿಕೊಳ್ಳಲಾಗಿದೆ. ಪಿಂಚಣಿದಾ ರರು, ಇಪಿಎಫ್ ಚಂದಾದಾರರು ಮತ್ತು ಉದ್ಯೋಗದಾತರು ಇದರ ಸದುಪಯೋಗ ಪಡೆದುಕೊಳ್ಳುವಂತೆ ರಾಯಚೂರು ಪ್ರಾದೇಶಿಕ ಕಚೇರಿಯ ಪಿಎಫ್ ಕಮೀಷನರ್-2 ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ sro.raichur@epfindia.gov.in, do.bagalkot@epfindia.gov.in ಇ-ಮೇಲ್ ಸಂಪರ್ಕಿಸಬಹುದಾಗಿದೆ.

ನಾನಾಸಾಹೇಬ ಮಹಲಿನಮನಿ ನಿಧನ



ಬೀಳಗಿ: ಪಟ್ಟಣದ ಯಶಸ್ವಿ ಸೌಹಾರ್ದ ಸಹಕಾರಿ ಸಂಘದ ಸಂಸ್ಥಾಪಕ ಅಧ್ಯಕ್ಷೆ ಡಾ. ಆಶಾ ಶಾಹೀರ ಬೀಳಗಿ ಅವರ ತಂದೆ ನಾನಾಸಾಹೇಬ ಅನ್ವರಹುಸೇನ ಮಹಲಿನಮನಿ(80) ಸೋಮವಾರ ನಿಧನರಾಗಿದ್ದಾರೆ. ಮೃತರಿಗೆ ಪತ್ನಿ, ಚಾರ್ಟಡ್ ಅಕೌಂಟಂಟ್ ಮಹಿಬೂಬ ನಾನಾಸಾಹೇಬ ಮಹಲಿನಮನಿ ಪುತ್ರ ಸೇರಿದಂತೆ ಅಪಾರ ಬಂಧು ಬಳಗವಿದೆ. ಸಂತಾಪ: ನಾನಾಸಾಹೇಬ ಮಹಲಿನಮನಿ ಅವರ ನಿಧನಕ್ಕೆ ಮಾಜಿ ಸಚಿವ ಎಸ್.ಆರ್.ಪಾಟೀಲ, ಶಾಸಕ ಜೆ.ಟಿ.ಪಾಟೀಲ, ಟಿಪಿಸಿಎಂಎಸ್ ಅಧ್ಯಕ್ಷ ಎಂ.ಬಿ.ಕಂಬಿ, ಕೆಪಿಸಿಸಿ ಮಾಜಿ ಕಾರ್ಯದರ್ಶಿಗಳಾದ ಬಸವಪ್ರಭು ಸರನಾಡಗೌಡ, ಎಂ.ಎನ್.ಪಾಟೀಲ, ಬ್ಲಾಕ್ ಕಾಂಗ್ರೆಸ್ ಕಮೀಟಿ ಅಧ್ಯಕ್ಷ ಹನಮಂತ ಕಾಖಂಡಕಿ, ಶಮಶುದ್ಧೀನ ಮುಜಾವರ ಸಂತಾಪ ವ್ಯಕ್ತಪಡಿಸಿದ್ದಾರೆ.



ರಬಕವಿ-ಬನಹಟ್ಟಿ: ರಬಕವಿ ನಗರದ ಹನುಮಂತ ದೇವರ ಹಾಲು ಹಾಗೂ ನೀರೋಕಳಿ ನಿಮಿತ್ತ ನಗರದ ಹಿರಿಯರು ಹೊಂಡ ಪೂಜೆ ನಡೆಯಿತು. ಶ್ರೀಶೈಲ ದಲಾಲ, ಡಾ.ಸಂಗಮೇಶ ಹತಪಕ್ಕಿ, ಮಾರುತಿ ನಾಯಕ, ಸಣ್ಣ ಯಮನಪ್ಪ ನಾಯಕ, ಭೀಮಶಿ ಪಾಟೀಲ, ಬೆನಕಪ್ಪ ಬೆಕ್ಕೇರಿ, ವಲ್ಲಿಸಾಬ ಹುಡೇದಮನಿ, ಸದಾಶಿವ ಪೂಜಾರಿ, ಬಾಬು ತೆಳಗಿನಮನಿ, ಪ್ರದೀಪ ಜುಗಳಿ, ಶಿವಾನಂದ ಕಡಕೋಳ ಸೇರಿದಂತೆ ಅನೇಕರಿದ್ದರು.

ಮಧುರ ಭಾವಗಳ ಸಮ್ಮಿಲನವೇ ಸ್ನೇಹ

ರಬಕವಿ-ಬನಹಟ್ಟಿ: ಮಧುರ ಭಾವಗಳ ಸಮ್ಮಿಲನವೇ ಸ್ನೇಹ. ಸ್ನೇಹಿತ ಅಮರ ಸ್ನೇಹ ಅಜರಾಮರ ಎಂದು ರಬಕವಿಯ ಜನಪದ ಸಾಹಿತಿ ಡಾ.ಶ್ರೀಕಾಂತ ಕೆಂಧೂಳಿ ಹೇಳಿದರು. ರಬಕವಿಯ ಶಿವದಾಸಿಮಯ್ಯ ಕಲ್ಯಾಣ ಮಂಟಪದಲ್ಲಿ 1990ನೇ ಸಾಲಿನ ಎಸ್‌ಎಸ್‌ಎಲ್‌ಸಿ ವರ್ಗದ ಸ್ನೇಹಿತರು ಹಮ್ಮಿಕೊಂಡಿದ್ದ 35 ನೆಯ ಸ್ನೇಹ ಸಂಗಮ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬಿಡುವಿಲ್ಲದ ಸಮಯದಲ್ಲಿ ತಾವೆಲ್ಲರೂ ಬಿಡುಮಾಡಿಕೊಂಡು ಎಲ್ಲರೂ ಒಂದಾಗಿ ಕಾರ್ಯಕ್ರಮವನ್ನು ಆಯೋಜಿಸಿ ಒಬ್ಬರಿಗೊಬ್ಬರು ಸಂತೋಷ ಹಚ್ಚಿಕೊಂಡು ನಲಿಯೂವ ಕಾರ್ಯಕ್ರಮ ಅವಿಸ್ಮರಣೆಯ ಎಂದರು.

ಕಾರ್ಯಕ್ರಮದಲ್ಲಿ ಗೌರವ ಡಾಕ್ಟರೇಟ್ ಪಡೆದ ಶ್ರೀಕಾಂತ ಗುರುರಾಜ ಕೆಂದುಳಿಯವರನ್ನು ಸನ್ಮಾನಿಸಿದರು. ಅಧ್ಯಕ್ಷತೆ ವಹಿಸಿದ್ದ ಇಂಜಿನಿಯರಾದ ಸುರೇಶ ಪಟ್ಟಣಶೆಟ್ಟಿ ಮಾತನಾಡಿ, ಈ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ಎಲ್ಲಾ ಸ್ನೇಹಿತರ ಅಗತ್ಯವಾದ ಸಹಕಾರ ನಮಗಿದೆ. ಆದರಂತೆ ದೂರದ ಊರಿನಿಂದ ಬಂದಿರುವ ಮಹಿಳಾ ಸಹೋದರಿಯರು ಕಾರ್ಯಕ್ರಮಕ್ಕೆ ಬಂದು ಕಾರ್ಯಕ್ರಮ ಯಶಸ್ವಿಗಳಿಸಿದ್ದಾರೆಂದರು. ಮಲ್ಲಿಕಾರ್ಜುನ ಜತ್ತಿ, ಮಹಾದೇವ ಕುಚನೂರ, ಸುಧಾಕರ ಪತ್ತಾರ, ಸಿದ್ದು ಕಲಗುಡಿ, ಸುರೇಶ ಪಟ್ಟಣಶೆಟ್ಟಿ, ರವಿ ಮತ್ತೂರ, ಪ್ರವೀಣ ಸವದಿ, ಡಾ.ಕೆ.ಎಸ್.ಕುಚನೂರ, ಕವಿತಾ ತೆಗ್ಗಿ, ಮಾರುತಿ ನಾಯಕ, ರಶೀಲಾ ಸಣಕಾಲ, ಗೀತಾ ಜಾಧವ, ಮಧು ದುರಡಿ, ಚಿದಾನಂದ ಗಾಳಿ, ಪಾಂಡುರಂಗ ಈಳಿಗೇರ, ಶ್ರೀರಾಮು ಬದಾಮಿಕರ, ದೇವಮಾನೆ, ಶಿವಾನಂದ ಕೋಲಿ ಸೇರಿದಂತೆ ಅನೇಕರು ಇದ್ದರು.



ರಬಕವಿ-ಬನಹಟ್ಟಿ: ರಬಕವಿಯ ಶಿವದಾಸಿಮಯ್ಯ ಕಲ್ಯಾಣ ಮಂಟಪದಲ್ಲಿ 1990ನೇ ಸಾಲಿನ ಎಸ್‌ಎಸ್‌ಎಲ್‌ಸಿ ವರ್ಗದ ಸ್ನೇಹಿತರು ಹಮ್ಮಿಕೊಂಡಿದ್ದ 35 ನೆಯ ಸ್ನೇಹ ಸಂಗಮ ಕಾರ್ಯಕ್ರಮದಲ್ಲಿ ರಬಕವಿಯ ಜನಪದ ಸಾಹಿತಿ ಡಾ.ಶ್ರೀಕಾಂತ ಕೆಂಧೂಳಿ ಮಾತನಾಡಿದರು.

ವಿವಿಧ ಕಾಮಗಾರಿಗಳಿಗೆ ಭೂಮಿಪೂಜೆ | ಶಾಸಕ ಜೆಟಿಪಾ ಸೂಚನೆ
ಕಾಲಮಿತಿಯಲ್ಲಿ ಕಾಮಗಾರಿ ಮುಗಿಸಿ

ಬೀಳಗಿ: ಯೋಜನಾ ವರದಿ ಪ್ರಕಾರ ಗುಣಮಟ್ಟದ ಕೆಲಸವಾಗಬೇಕು. ಕಾಲಮಿತಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು. ಗ್ರಾಮಸ್ಥರು ಮುಂದೆ ನಿಂತುಕೊಂಡು ಕೆಲಸ ತೆಗೆದುಕೊಳ್ಳಬೇಕೆಂದು ಹಟ್ಟಿ ಚಿನ್ನದ ಗಣಿ ನಿಗಮದ ಅಧ್ಯಕ್ಷರು, ಶಾಸಕ ಜೆ.ಟಿ.ಪಾಟೀಲ ಕಿವಿಮಾತು ಹೇಳಿದರು.



ತಾಲೂಕಿನ ಯಡಹಳ್ಳಿ ಗ್ರಾಮದಲ್ಲಿ 2025-26ನೇ ಸಾಲಿನ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ (ಸಿ.ಎಂ.ಐ.ಡಿ.ಪಿ) 20 ಲಕ್ಷ ರೂ. ಅನುದಾನದಲ್ಲಿ ಮಾರುತೇಶ್ವರ ದೇವಸ್ಥಾನ ಅಭಿವೃದ್ಧಿಪಡಿಸುವ ಕಾಮಗಾರಿ ಮತ್ತು 20 ಲಕ್ಷ ರೂ. ಅನುದಾನದಲ್ಲಿ ಯಡಹಳ್ಳಿ ಕ್ರಾಸ್‌ನಲ್ಲಿ ಬಸ್ ನಿಲ್ದಾಣ ನಿರ್ಮಾಣ ಕಾಮಗಾರಿ ಹಾಗೂ 20 ಲಕ್ಷ ರೂ. ಅನುದಾನದಲ್ಲಿ ಹೇಮರಡ್ಡಿ ಮಲ್ಲಮ್ಮ ಸಮುದಾಯ ಭವನ ನಿರ್ಮಾಣ ಕಾಮಗಾರಿಗಳಿಗೆ ಅವರು ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಪರಿಸರವಾದಿ ಡಾ.ಎಂ.ಆರ್.ದೇಸಾಯಿ, ಹೇಮರಡ್ಡಿ ಮಲ್ಲಮ್ಮ ಸಮುದಾಯ ಭವನದ ಅಧ್ಯಕ್ಷ ಬಿ.ಎಂ.ದೇಸಾಯಿ, ಜಿಪಂ ಕೆಡಿಪಿ ಸದಸ್ಯ ಗೋವಿಂದಪ್ಪಗೌಡ ಪಾಟೀಲ, ಮುಳುಗಡೆ ಹಿತರಕ್ಷಣಾ ಸಮಿತಿ ಅಧ್ಯಕ್ಷ ಮುತ್ತು ದೇಸಾಯಿ, ಪ್ರಗತಿಪರ ರೈತ ಎಸ್.ಟಿ.ಪಾಟೀಲ, ಟಿಎಪಿಸಿಎಂಎಸ್ ನಿರ್ದೇಶಕ ದೊಡ್ಡಣ್ಣ ದೇಸಾಯಿ, ಗ್ರಾಪಂ ಮಾಜಿ ಅಧ್ಯಕ್ಷ ಸದಪ್ಪಗೌಡ ನಂದಗಾಂವಿ, ಪಿಕೆಪಿಎಸ್ ಅಧ್ಯಕ್ಷ ಅಶೋಕ ಸೋಮಣ್ಣವರ, ಜಿಪಂ ಮಾಜಿ ಸದಸ್ಯ ಮಗಿಯಪ್ಪ ದೇವನಾಳ, ಎಪಿಎಂಸಿ ಮಾಜಿ ನಿರ್ದೇಶಕ ರವಿ ದೇಸಾಯಿ, ತಾಪಂ ಮಾಜಿ ಸದಸ್ಯ ಜೀತೇಂದ್ರ ಪಾಟೀಲ, ಸೋಮಯ್ಯ ಮಠಪತಿ, ಕರಿಯಪ್ಪ ಖಾಜಿ, ದುಂಡಪ್ಪ ದೇವನಾಳ, ಸಂಜು ಹಾದಿಮನಿ, ಗೈಬು ಮಾದರ, ಮೌಲಾಸಾಬ ಜಮಾದಾರ ಮತ್ತಿತರಿದ್ದರು.

ಭಗವಂತನ ಮೇಲೆ ಗಾಢವಾದ ಪ್ರೀತಿ, ಶ್ರದ್ಧೆ ಇರಲಿ: ಶ್ರೀಗಳು

ಜಮಖಂಡಿ: ಭಗವಂತನ ಮೇಲೆ ಗಾಢವಾದ ಪ್ರೀತಿ, ಶ್ರದ್ಧೆ ಗೌರವವಿಟ್ಟು ನಿಷ್ಠೆ ಮತ್ತು ಅಚಲವಾದ ನಿಜಭಕ್ತಿಯಿಂದ ಆರಾಧನೆ ಮಾಡುವವರನ್ನು ಭಕ್ತ ಎನ್ನಲಾಗುತ್ತದೆ ಎಂದು ಯಂಕಂಚಿಯ ಗುರುದೇವಾಶ್ರಮದ ಗುರುಪಾದ ಶ್ರೀಗಳು ಹೇಳಿದರು.

ತಾಲೂಕಿನ ಹುಲ್ಯಾಳ ಗ್ರಾಮದ ಗುರುದೇವಾಶ್ರಮದ ಗುರುದೇವ ಸತ್ಸಂಗ ಬಳಗದ ಆಶ್ರಯದಲ್ಲಿ ಪ್ರತಿ ತಿಂಗಳ ನಾಲ್ಕನೇ ಭಾನುವಾರ ಹಮ್ಮಿಕೊಳ್ಳುವ ಗುರುದೇವ ಸತ್ಸಂಗ ಮಾಸಿಕ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಷಟ್‌ಸ್ಥಲ ಭಕ್ತ ಮತ್ತು ಭಕ್ತಿ ವಿಷಯ ಕುರಿತು ಆಶೀರ್ವಚನ ನೀಡಿದ ಅವರು, 12ನೇ ಶತಮಾನದ ಬಸವಾದಿ ಶಿವಶರಣರು ಕಟ್ಟಿಕೊಟ್ಟಿರುವ ಷಟ್‌ಸ್ಥಲವು ಸಾಧನೆಯ ಆರು ಮೆಟ್ಟಿಲುಗಳನ್ನು ಹೊಂದಿದೆ. ಭಕ್ತಸ್ಥಲ ಮೊದಲ ಮೆಟ್ಟಿಲಾಗಿದೆ ಎಂದರು

ಹುಲ್ಯಾಳ ಗುರುದೇವಾಶ್ರಮದ ಹರ್ಷಾನಂದ ಸ್ವಾಮಿಗಳು ನೇತೃತ್ವ ವಹಿಸಿ ಮಾತನಾಡಿ, ಷಟ್‌ಸ್ಥಲವು ಅದ್ಭುತವಾದ ಸಾಧನೆ ಪದ್ಧತಿಯಾಗಿದೆ. ಭಕ್ತಸ್ಥಲ ಸಾಧನೆಯಿಂದ ನನ್ನದೆನ್ನುವುದು ಏನೂ ಉಳಿಯುವುದಿಲ್ಲ, ನನ್ನ ದರ್ಶನ ನನಗೆ ಆಗುತ್ತದೆ. ನಾನು ಲಿಂಗ ಸ್ವರೂಪಿ, ಲಿಂಗಮಯ ಎನ್ನುವ ಭಾವ ಮೂಡುತ್ತದೆ ಎಂದು ಆಶೀರ್ವಚನ ನೀಡಿದರು.

ಯಲ್ಲಪ್ಪ ಶಿವಾಪುರ ಮಾತನಾಡಿದರು. ಹುಲ್ಯಾಳದ ನಿಜಗುಣಶಾಸ್ತ್ರಿ ಮಮದಾಪುರ ಹಾಗೂ ಶ್ರೀಮಠದ ವಿದ್ಯಾರ್ಥಿಗಳಿಂದ ಕೈಸನ್ನೆಯಿಂದಲೇ ಶಬ್ದಗಳನ್ನು ಗುರುತಿಸುವ ತರ್ಕಶಾಸ್ತ್ರ ಜ್ಞಾನ ಪ್ರದರ್ಶನ ಜರುಗಿತು.

ಯರಗಟ್ಟಿ ತಾಲೂಕಿನ ಅಕ್ಕಿಸಾಗರ ಮಠದ ರುದ್ರೇಶ ಸ್ವಾಮಿಗಳು, ಗೋಕಾಕ ತಾಲ್ಲೂಕಿನ ತುಕಾನಟ್ಟಿ ಮಠದ ಶಿವಬಸವ ಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು. ಮಹಾಪ್ರಸಾದದ ಸೇವೆ ನೆರವೇರಿಸಿದ ಬಬಲೇಶ್ವರ ತಾಲ್ಲೂಕಿನ ಕುಮಠೆ ಗ್ರಾಮದ ಶೇಖರ ಸಿದ್ರಾಮಪ್ಪ ತೇಲಿ ದಂಪತಿಯನ್ನು ಸನ್ಮಾನಿಸಲಾಯಿತು.

ಗುರುಬಸಗೌಡ ಪಾಟೀಲ, ಪರಮೇಶ್ವರ ತೇಲಿ, ರಾಮಚಂದ್ರ ಹೂಗಾರ, ಶಿವಾಜಿ ಜಾಧವ, ಮಲ್ಲಿಕಾರ್ಜುನ ಹುನ್ನೂರ, ಅಕ್ಷಯ ಹೂಗಾರ ಸಂಗೀತ ಸೇವೆ ಸಲ್ಲಿಸಿದರು. ಪ್ರಾಚಾರ್ಯ ಡಾ.ಟಿ.ಪಿ.ಗಿರಡ್ಡಿ ಸ್ವಾಗತಿಸಿದರು. ಉಪನ್ಯಾಸಕ ಸಂಗಮೇಶ ತೆಲಸಂಗ, ಶಿಕ್ಷಕ ಎಸ್.ಐ.ಚನಪ್ಪನ್ನವರ ನಿರೂಪಿಸಿದರು.



54 ಶಾಲೆಯಲ್ಲಿ ಎಲ್‌ಕೆಜಿ ತರಗತಿ ಪ್ರಾರಂಭ

ಇಳಕಲ್: 2026-27ನೇ ಸಾಲಿನ ಶಾಲಾ ಪ್ರಾರಂಭೋತ್ಸವದ ಅಂಗವಾಗಿ, ಇಲಾಖೆಯಿಂದ ಸರಬರಾಜು ಆಗಿರುವ ಪಠ್ಯಪುಸ್ತಕಗಳನ್ನು ಇಳಕಲ್ ವಲಯದ ಶಾಲೆಗಳ ಮುಖ್ಯ ಗುರುಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ವಿತರಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಜಾಸ್ಮಿನ ಕಿಲ್ಲೆದಾರ ಮಾತನಾಡಿ, ಉತ್ತಮ ಕಲಿಕೆ ಉಜ್ವಲ ಭವಿಷ್ಯ ಧ್ಯೇಯ ವಾಕ್ಯದೊಂದಿಗೆ ಪಠ್ಯ ಪುಸ್ತಕಗಳನ್ನು ಶಾಲೆ ಪ್ರಾರಂಭ ಪೂರ್ವದಲ್ಲಿಯೇ ತಾಲೂಕಿನ ಎಲ್ಲಾ ಶಾಲೆಗಳಿಗೆ ಸರಬರಾಜು ಮಾಡಲಾಗುತ್ತಿದೆ. ಸಾಲಿನಿಂದ ಕನ್ನಡ ಮತ್ತು ಇಂಗ್ಲಿಷ್ ದ್ವಿಭಾಷಾ ಮಾಧ್ಯಮದಲ್ಲಿ ಬೋಧನೆ ನಡೆಯುತ್ತಿದ್ದು, ರಾಜ್ಯದ 15 ಜಿಲ್ಲೆಗಳ ಪೈಕಿ ನಮ್ಮ ಜಿಲ್ಲೆಯ ಸರ್ಕಾರಿ ಶಾಲೆಗಳಲ್ಲಿ ದ್ವಿ ಭಾಷಾ ಮಾಧ್ಯಮ ಪ್ರಾರಂಭವಾಗುತ್ತಿದ್ದೂ, ಎಲ್ಲಾ ಪಾಲಕರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದರು.

ವಿಶಿಷ್ಟಚೇತನ ಕುಂದುಕೊರತೆ ಸಭೆಯಲ್ಲಿ ತಹಶೀಲ್ದಾರ್ ಅಮರೇಶ ಪಮ್ಮಾರ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಸೌಲಭ್ಯಗಳು ಸಾಕಷ್ಟು ಪ್ರಮಾಣದಲ್ಲಿ ಸಿಗುತ್ತಿದ್ದೂ ಪಾಲಕರು ಸದುಪಯೋಗ ಪಡಿಸಿಕೊಳ್ಳಲು ವಿನಂತಿಸಿದರು.



ಕ್ಷೇತ್ರ ಸಮನ್ವಯಾಧಿಕಾರಿ ಸದಾಶಿವ ಗುಡಗುಂಟಿ, ವಿನೋದ ಭೋವಿ, ಸರಕಾರಿ ನೌಕರರ ಸಂಘದ ಅಧ್ಯಕ್ಷ ಪರಶುರಾಮ ಪಮ್ಮಾರ, ಕಾರ್ಯದರ್ಶಿ ಸಂಗಮೇಶ ಬಂಗಾರಿ ಹಾಗೂ ತಾಲೂಕಿನ ಮುಖ್ಯಗುರುಗಳು, ಶಿಕ್ಷಕರು ಉಪಸ್ಥಿತರಿದ್ದರು.

ಸೌಹಾರ್ದತೆಯಿಂದ ಉರುಸು ಆಚರಣೆ: ಮಹಾಂತ ಶ್ರೀಗಳು

ಸಾವಳಗಿ: ದೇವರು ಒಬ್ಬನೇ; ನಾಮ ಹಲವು. ನಾವು ಅರ್ಥಮಾಡಿಕೊಂಡು ನಡೆದರೆ ದೇವರ ಕೃಪೆಯಾಗುತ್ತದೆ. ಹಿಂದು ಮುಸ್ಲಿಂ ಭೇದಭಾವವಿಲ್ಲದೇ ಒಗ್ಗಟ್ಟಿನಿಂದ ಉರುಸು ಆಚರಿಸುತ್ತಿರುವುದು ಪವಿತ್ರ ಕೆಲಸವಾಗಿದೆ. ಮನುಷ್ಯನಿಗೆ ಮೇಳು-ಕೀಳು, ನಾನು ನನ್ನದು ಯಾವುದು ಇರಬಾರದು ಎಂದು ಶೇಗುಣಸಿ ಡಾ.ಮಹಾಂತ ಸ್ವಾಮೀಜಿ ಹೇಳಿದರು.

ತುಂಗಳ ಸಮೀಪದ ಬಾಡಗಿ ಹೊರವಲಯದ ಹಜರತ್ ಜಲಾಲಸಾಬ ದರ್ಗಾದಲ್ಲಿ ಉರುಸು ನಿಮಿತ್ತ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿ, ಮನುಷ್ಯನಾಗಿ ಹುಟ್ಟಿದ ಮೇಲೆ ಮೊದಲು ಸಂಸ್ಕಾರ ಮುಖ್ಯ ಯಾವ ಮನುಷ್ಯನಲ್ಲಿ ಸಂಸ್ಕಾರವಿರುತ್ತದೆ. ಅವನ್ನು ದೊಡ್ಡ ವ್ಯಕ್ತಿಯಾಗಿ ಬೆಳೆಯುತ್ತಾನೆ. ಎಲ್ಲರಲ್ಲಿಯು ನಾನು ಭವಕ್ಕೆ ಯಾಕೆ ಬಂದರು ಎನ್ನುವ ವಿಚಾರವು ಮರೆತು ಹೋಗಿದೆ. ದೇವರು ಶ್ರೇಷ್ಠವಾದ ಮಾನವ ಜನ್ಮ ಕೊಟ್ಟಾಗ ಅದನ್ನ ಹೇಗೆ ರೂಪಿಸಿಕೊಳ್ಳಬೇಕು ಎನ್ನುವುದನ್ನ ಸೃಷ್ಟಿ ನೋಡಿ ಕಲಿಯಬೇಕು. ಸಸ್ಯ ಜಗತ್ತು ಮನುಷ್ಯನಿಗೆ ಹೂ ಹಣ್ಣು, ಹಪ್ಪಲ ಮತ್ತು ಸುವಾಸನೆ ಕೊಡುತ್ತದೆ. ಮನುಷ್ಯ ಸಂತೋಷದಿಂದ ಬಾಳಬೇಕು ಅಂದರೆ ಸೃಷ್ಟಿ ನೋಡಿ ಕಲಿಯಬೇಕು. ಎಲ್ಲರು ಒಂದಾಗಿ ಉರುಸು ಆಚರಣೆ ಮಾಡುತ್ತಿರುವುದು ಪುಣ್ಯದ ಕೆಲಸ. ಈ ಉರುಸು ಕಾರ್ಯಕ್ರಮದಲ್ಲಿ ಸ್ವಾಮೀಜಿಗಳನ್ನು ಕರೆದು ಪ್ರವಚನ ಮಾಡುತ್ತಿರುವುದು ಒಮದು ಒಳ್ಳೆಯ ಸಂಸ್ಕಾರವಾಗಿದೆ ಎಂದರು.

ಜಮಖಂಡಿ ಓಲೆಮಠದ ಪರಮಪೂಜ್ಯ ಆನಂದ ದೇವರು, ನಾಗರಾಳ ಪಪೂ ಜ್ಞಾನೇಶ್ವರ ಸ್ವಾಮೀಜಿ, ಕೋಲೂರ ಕೃಷ್ಣಗೌಡ ಪಾಟೀಲ ಸ್ವಾಮೀಜಿ, ಬಾಡಗಿ ಸಂಗಯ್ಯ ಹಿರೇಮಠ ಸ್ವಾಮೀಜಿ, ಲಾಲಸಾಬ ಮುಲ್ಲಾ, ಅಸ್ಗರ ಮುಲ್ಲಾ, ಬಸಪ್ಪ ಹುನ್ನೂರ, ಸಿದ್ದಪ್ಪ ನೇಮಗೌಡ, ಗುರಪ್ಪ ಹುನ್ನೂರ, ಬಸವರಾಜ ಹುನ್ನೂರ, ಈರಪ್ಪ ನೇಮಗೌಡ, ಅಪ್ಪಸಿ ಬುದಣಿ, ಶಬ್ಬಿರ ಮುಲ್ಲಾ, ರಾಮಣ್ಣಶೇಗುಣಸಿ, ಮೋನಪ್ಪ ಬಡಿಗೇರ, ರಮೇಶ ಪೂಜಾರಿ, ಶಂಭುಲಿಂಗ ಮಮದಾಪೂರ, ಬಿ.ಕೆ. ಮುಧೋಳ, ಸಾಹೇಬಲಾಲ ಮುಲ್ಲಾ ಹಾಗೂ ಗ್ರಾಮಸ್ಥರು ಇದ್ದರು.



ಉತ್ತಮ ಪರಿಸರ ನಿರ್ಮಾಣಕ್ಕೆ ಜಾಗೃತಿ ಮೂಡಿಸಿ: ಶ್ರೀಗಳು

ಗುಳೇದಗುಡ್ಡ: ಭವಿಷ್ಯತ್ತಿನಲ್ಲಿ ಶಿಕ್ಷಕರಾಗುವ ಪ್ರಶಿಕ್ಷಣಾರ್ಥಿಗಳು ಸೇವಾಮನೋಭಾವನೆ ರೂಢಿಸಿಕೊಂಡು ಸಮಾಜದ ಉನ್ನತಿಗೆ ಶ್ರಮಿಸಬೇಕು ಎಂದು ಪಟ್ಟಣದ ಗುರುಸಿದ್ದೇಶ್ವರ ಬೃಹನ್ಮಠದ ಗುರುಸಿದ್ಧ ಪಟ್ಟದಾರ್ಯ ಶ್ರೀಗಳು ಹೇಳಿದರು.



ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ ಹಾಗೂ ಗುರುಸಿದ್ದೇಶ್ವರ ಮಹಿಳಾ ಶಿಕ್ಷಣ (ಬಿಇಡಿ) ಮಹಾವಿದ್ಯಾಲಯದ ಆಶ್ರಯದಲ್ಲಿ ತಾಲೂಕಿನ ಸಬ್ಬಲಹುಣಸಿ ಗ್ರಾಮದಲ್ಲಿ ಹಮ್ಮಿಕೊಂಡಿರುವ ಪೌರತ್ವ ತರಬೇತಿ ಶಿಬಿರ ಉದ್ಘಾಟಿಸಿ ಮಾತನಾಡಿ, ಗ್ರಾಮಗಳಲ್ಲಿ ಸ್ವಚ್ಛತೆ, ಶೌಚಾಲಯ ನಿರ್ಮಾಣ ಅದರ ಉಪಯೋಗ, ಸಸಿಗಳ ನೆಡುವಿಕೆ ಉತ್ತಮ ಪರಿಸರದ ಕುರಿತು ಗ್ರಾಮದಲ್ಲಿ ಜಾಗೃತಿ ಮೂಡಿಸುವ ಮೂಲಕ ಮಾದರಿ ಕಾರ್ಯ ಮಾಡಬೇಕೆಂದು ಹೇಳಿದರು.

ಗುರುಸಿದ್ದೇಶ್ವರ ವಿದ್ಯಾವರ್ಧಕ ಮತ್ತು ಸಾಂಸ್ಕೃತಿಕ ಸಂಸ್ಥೆಯ ಚೇರ್ಮನ್ ರಾಜು ಜವಳಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಹಿರಿಯರಲ್ಲಿ ಹಲವು ಮೌಲ್ಯಗಳಿವೆ ಗ್ರಾಮದಲ್ಲಿರುವ ಹಿರಿಯರ ಮಾರ್ಗದರ್ಶನವನ್ನು ಪಡೆದುಕೊಂಡು ಶಾಲಾ ಮೈದಾನ ಸ್ವಚ್ಛತೆ, ಸಾಮಾಜಿಕ ಪರಿಸರ ಸ್ವಚ್ಛಗೊಳಿಸುವ ಕಾರ್ಯ ಮಾಡಬೇಕು ಎಂದರು.

ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಸುರೇಶ ಘಂಟಿ ಮಾತನಾಡಿ, ಶಿಕ್ಷಣದಿಂದ ಮಾತ್ರ ಗ್ರಾಮಗಳು ಅಭಿವೃದ್ಧಿ ಹೊಂದುತ್ತವೆ. ಪ್ರಶಿಕ್ಷಣಾರ್ಥಿಗಳು ಗ್ರಾಮದಲ್ಲಿ ಪರಿಸರ ಜಾಗೃತಿ ಮೂಡಿಸುವ ಕಾರ್ಯ ಮಾಡಬೇಕು ಎಂದರು.

ಆಡಳಿತಾಧಿಕಾರಿ ರಂಗಪ್ಪ ಶೇಬಿನಕಟ್ಟಿ, ಎಸ್.ಸಿ.ಗದ್ದಿಗೌಡರ, ಪ್ರಾಚಾರ್ಯ ಎಚ್.ಎಸ್.ಘಂಟಿ ಮಾತನಾಡಿದರು. ಗ್ರಾಪಂ ಮಾಜಿ ಸದಸ್ಯರಾದ ರೇಣವ್ವ ನಡಶೇಸಿ, ಪೌರತ್ವ ತರಬೇತಿ ಶಿಬಿರದ ಸಂಯೋಜಕಿ ಸಕ್ಕೂಬಾಯಿ ನೆಲ್ಲೂರು, ಗ್ರಾಪಂ ಮಾಜಿ ಸದಸ್ಯ ದ್ಯಾವಪ್ಪ ನರಹಟ್ಟಿ, ಶಿವಪ್ಪ ಘಂಟಿ, ಪರಸಪ್ಪ ನಡಶೇಶಿ, ರಾಯಪ್ಪ ಘಂಟಿ, ಯಲಗುರ್ದಪ್ಪ ನಡಶೇಸಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ವೈ.ಆರ್.ತಳವಾರ, ಶಿಕ್ಷಕ ಸಿದ್ದಾರೂಢ ಪರಗಿ ಇದ್ದರು.

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಜೆಟಿಪಾ ಭೂಮಿಪೂಜೆ

ಕಲಾದಗಿ: ಬೀಳಗಿ ಮತಕ್ಷೇತ್ರದ ಗದ್ದನಕೇರಿ ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಜೆ.ಟಿ.ಪಾಟೀಲ ಭೂಮಿಪೂಜೆ ನೆರವೇರಿಸಿದರು.



ಪರಿಶಿಷ್ಟ ಯೋಜನೆಗಳ ಅಡಿಯಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಲಿಸುವ ಕಾಮಗಾರಿ ಶಿವು ರಾಠೋಡ ರವರ ಮನೆಯಿಂದ 10 ಲಕ್ಷ ರೂ. ಅನುದಾನದಲ್ಲಿ ಪ್ರವೀಣ ದಾಸರ ಅವರ ಮನೆಯವರೆಗೆ ಸಿಸಿ ರಸ್ತೆ ನಿರ್ಮಾಣ ಕಾಮಗಾರಿ, 20 ಲಕ್ಷ ರೂ ಅನುದಾನದಲ್ಲಿ ಸಿದ್ರಾಮೇಶ್ವರ ದೇವಸ್ಥಾನ ಅಭಿವೃದ್ಧಿಪಡಿಸುವ ಕಾಮಗಾರಿಗೆ ಭೂಮಿಪೂಜೆ 2024-25ನೇ ಸಾಲಿನ ಮಳೆ ಪರಿಹಾರ ಕಾರ್ಯಕ್ರಮದ 5054 ಶಿರ್ಷಿಕೆಯಡಿ 18 ಲಕ್ಷ ರೂಗಳ ವೆಚ್ಚದಲ್ಲಿ ತುಳಸಿಗೇರಿ ಗ್ರಾಮದ ಸಮೀಪದ ಮುಖ್ಯ ರಸ್ತೆಯಿಂದ ತುಗಲಗಟ್ಟಿ ದೇವಸ್ಥಾನಕ್ಕೆ ಹೋಗುವ ರಸ್ತೆ ಸುಧಾರಣೆ ಕಾಮಗಾರಿ ಭೂಮಿ ಪೂಜೆ ಮತ್ತು 2025-26ನೇ ಸಾಲಿನ ಮುಖ್ಯಮಂತ್ರಿ ಮೂಲಸೌಕರ್ಯ ಯೋಜನೆಯಡಿ 10 ಲಕ್ಷ ರೂ.ಗಳ ಅನುದಾನದಲ್ಲಿ ತುಳಸಿಗೇರಿ ಗ್ರಾಮದ ದುರ್ಗಾದೇವಿ ದೇವಸ್ಥಾನದ ದ್ವಾರ ಬಾಗಿಲು ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಸಿದ್ದಣ್ಣ ಛಬ್ಬಿ, ಶಿವು ರಾಠೋಡ, ಮುದಿಯಪ್ಪ ಜಕ್ಕನಗೌಡ್ರ, ಚಂದ್ರು ಕುರಿ, ಸಿದ್ದನಗೌಡ ಜಕ್ಕನಗೌಡ್ರ, ಬಸು ಹಡಪದ, ಪಾಂಡಪ್ಪ ಸನ್ನಪ್ಪನವರ್, ಹನಮಂತ ಪೂಜಾರಿ, ವೆಂಕಟೇಶ ಹಿರೇಮಠ, ಮಲ್ಲು ತುಂಬರಮಟ್ಟಿ, ರಮೇಶ ರೂಗಿ ಇನ್ನಿತರರು ಇದ್ದರು.

ಗುರುವಿನ ಮಾರ್ಗದರ್ಶನವೇ ನೈಜ ಸಂಪತ್ತು

ರಬಕವಿ-ಬನಹಟ್ಟಿ: ವಿದ್ಯಾರ್ಥಿ ದೆಸೆಯಲ್ಲಿ ಕಲಿತ ಪಾಠ ಹಾಗೂ ಗುರುಗಳು ನೀಡಿದ ಸಂಸ್ಕಾರಯುತ ಶಿಕ್ಷಣ ವ್ಯಕ್ತಿಯ ಬದುಕಿನ ದಾರಿದೀಪವಾಗಿರುತ್ತದೆ. ಪ್ರತಿ ಶಿಷ್ಯನಿಗೂ ಗುರು ನೀಡುವ ಮಾರ್ಗದರ್ಶನವೇ ನೈಜ ಸಂಪತ್ತೆಂದು ರಬಕವಿಯ ಗುರುದೇವ ಬ್ರಹ್ಮಾನಂದ ಆಶ್ರಮದ ಗುರುಸಿದ್ದೇಶ್ವರ ಶ್ರೀಗಳು ಆಶೀರ್ವಚನ ನೀಡಿದರು.



ರಾಮಪುರದ ಜ್ಞಾನೋದಯ ಶಿಕ್ಷಣ ಸಂಸ್ಥೆಯ 2000-2001ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪೂರೈಸಿದ ವಿದ್ಯಾರ್ಥಿಗಳು ಆಯೋಜಿಸಿದ್ದ 25ನೇ ಸ್ನೇಹ ಸಂಗಮ ಹಾಗೂ ಗುರುವಂದನಾ ಕಾರ್ಯಕ್ರಮಕ್ಕೆ ಜ್ಯೋತಿ ಬೆಳಗಿಸಿ ಚಾಲನೆ ನೀಡಿಮ, ಇಂದಿನ ಸಮಾಜದಲ್ಲಿ ಶಿಕ್ಷಿತರ ಕೊರತೆಯಿಲ್ಲವಾದರೂ ಮಾನವೀಯ ಮೌಲ್ಯಗಳ ಅಳವಡಿಕೆ ಅತೀ ಅವಶ್ಯಕವಾಗಿದೆ. ಹಣ, ಹುದ್ದೆ, ಅಧಿಕಾರ ಗಳಿಕೆ ದೊಡ್ಡ ಸಾಧನೆಯಲ್ಲ ಬದಲಿಗೆ ಉತ್ತಮ ವ್ಯಕ್ತಿತ್ವ ರೂಪಿಸಿಕೊಂಡು ಅದನ್ನು ನಿತ್ಯ ಆಚರಿಸುವುದು ನಿಜವಾದ ಸಾಧನೆಯಾಗಿದೆ ಎಂದರು. ಅಂದಿನ ವಿದ್ಯಾರ್ಥಿಗಳು ಇಂದು ಎಷ್ಟೇ ಉನ್ನತ ಸ್ಥಾನಕ್ಕೇರಿದ್ದರೂ ಅಕ್ಷರದ ಅರಿವು ಮೂಡಿಸಿದ ಗುರುವಿನ ಮರೆಯುವಾರದು. ಗುರುವಂದನೆ ಒಂದು ಔಪಚಾರಿಕ ಕಾರ್ಯಕ್ರಮವಲ್ಲ, ನಮ್ಮ ಬದುಕಿಗೆ ದಿವ್ಯತೆ ಜೊತೆಗೆ ಭದ್ರತೆ ರೂಪಿಸಿದ ಶಿಕ್ಷಕರಿಗೆ ಸಲ್ಲಿಸುವ ಗೌರವದ ಕುರುಹಾಗಿದೆ. ತಾವೊಂದು ಸಂಸ್ಥೆ ನಡೆಸುವ ಜೊತೆಗೆ ಸರ್ಕಾರಿ ಪ್ರೌಢಶಾಲೆಗೆ ತಮ್ಮ ತಂದೆಯ ಸ್ಮರಣಾರ್ಥ ಎರಡು ಎಕರೆ ಭೂಮಿ ದಾನವಾಗಿ ನೀಡಿದ ಮಹಾನ್ ವ್ಯಕ್ತಿತ್ವದ ಪ್ರಭು ಬಿಳ್ಳೂರ ನೆಮ್ಮೆಲ್ಲರಿಗೂ ಮಾದರಿಯಾಗಲಿ ಎಂದರು.

ಸಂಸ್ಥೆಯ ಚೇರ್ಮನ್ ಪ್ರಭು ಎಂ. ಬಿಳ್ಳೂರ, ಬಿ.ಎಂ.ಬರಗಿ, ಎಸ್.ವಿ.ಗೊಲಭಾಂವಿ, ಚಂದ್ರಶೇಖರ ತೆಳಗಿನಮನಿ, ಬಾಲಚಂದ್ರ ಹೊಸಕೋಟಿ, ವಿವೇಕಾನಂದ ಭಸ್ಮೆ, ಎಸ್.ಕೆ.ಲೋಣಾರಿ, ಜಿ.ಟಿ.ಕೊಡತೆ, ಎಸ್‌ವಿ. ಅಮ್ಮಲಜೇರಿ, ವಿ.ಎಂ. ಬಾವಲತ್ತಿ, ಜಿ.ಪಿ.ಬಿಳ್ಳೂರ ಸೇರಿದಂತೆ ಶಿಕ್ಷಕ-ಶಿಕ್ಷಕಿಯರು, ಹಳೆಯ ವಿದ್ಯಾರ್ಥಿಗಳು ಹಾಗೂ ಅವರ ಕುಟುಂಬ ವರ್ಗದವರು ಉಪಸ್ಥಿತರಿದ್ದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರ ನಡೆಗೆ ಆಕ್ರೋಶ

ಬೀಳಗಿ: ಬಾಗಲಕೋಟ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಚಟುವಟಿಕೆಗಳು ತನ್ನ ಎಲ್ಲೆಯನ್ನು ಮೀರಿದ್ದಲ್ಲದೆ, ಜಿಲ್ಲಾಧ್ಯಕ್ಷರ ಮನಸೋಯಿಚ್ಚೆ ನಡೆಗೆ ಸಾಹಿತಿ ಕಿರಣ ಬಾಳಾಗೋಳ ಆಕ್ರೋಶ ವ್ಯಕ್ತಪಡಿಸಿದರು.



ಪತ್ರಿಕೆಯೊಂದಿಗೆ ಮಾತನಾಡಿ, ಹಣ ಮತ್ತು ಜಾತಿ ಇವೆರಡರ ಪ್ರಾಬಲ್ಯದಿಂದ ಸಾಹಿತ್ಯ ಕ್ಷೇತ್ರವನ್ನು ಬಲಿಕೊಡುತ್ತಿರುವುದು ಅತ್ಯಂತ ಕಳವಳಕಾರಿ ಎಂದು ಅಸಮಾಧಾನ ವ್ಯಕ್ತಪಡಿಸಿದರು.

2005ರಲ್ಲಿ ಬೀಳಗಿಯಲ್ಲಿ ಬಾಗಲಕೋಟ ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನವು ಪ್ರೊ.ಬಿ.ಕೆ.ಹಿರೇಮಠ ಅವರ ಸರ್ವಾಧ್ಯಕ್ಷತೆಯಲ್ಲಿ ನೆರವೇರಿತು. ಆ ಸಂದರ್ಭದಲ್ಲಿ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸಿದ್ದರಾಮ ಶಿರೋಳ ಹಾಗೂ ಗೌರವ ಕಾರ್ಯದರ್ಶಿಗಳಾಗಿ ಕಿರಣ ಬಾಳಗೋಳ ಹಾಗೂ ಶಿವಾನಂದ ಶೆಲ್ಲಿಕೇರಿ, ಕೋಶಾಧ್ಯಕ್ಷರಾಗಿ ಸಿದ್ದಣ್ಣ ಕೆರೂರ ಕಾರ್ಯನಿರ್ವಹಿಸುತ್ತಿದ್ದರು. ಈ ಸಮ್ಮೇಳನದ ಅಂಗವಾಗಿ ಅತಿ ಹೆಚ್ಚು ದತ್ತಿನಿಧಿಗಳನ್ನು ಸ್ಥಾಪಿಸಿ ಅವೆಲ್ಲ ದತ್ತಿನಿಧಿ ಕಾರ್ಯಕ್ರಮಗಳು ಬೀಳಗಿಯಲ್ಲಿಯೇ ನಡೆಯಬೇಕು ಮತ್ತು ಆಯ್ದ ಕೃತಿಗಳಿಗೆ ಪ್ರಶಸ್ತಿಗಳನ್ನು ವಿತರಿಸಬೇಕು ಎನ್ನುವ ನಿರ್ಣಯ ಮಾಡಲಾಗಿತ್ತು.

2008ರಲ್ಲಿ ಬೀಳಗಿ ತಾಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನವು ಅಂದಿನ ತಾಲೂಕಾ ಅಧ್ಯಕ್ಷ ಗುರುರಾಜ ಲೂತಿ ಅವರ ನೇತೃತ್ವದಲ್ಲಿ ನೆರವೇರಿತು. ಈ ಸಂದರ್ಭದಲ್ಲಿ ಸೃಜನಶೀಲ ಮನಸ್ಸುಗಳು ಹಾಗೂ ತಾಲೂಕಿನ ಪಿಕೆಪಿಎಸ್ ಮತ್ತು ಉಳಿದ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ದೇಣಿಗೆಯನ್ನು ಸಂಗ್ರಹಿಸಲಾಯಿತು.

ಸಮ್ಮೇಳನದ ನಂತರ ಉಳಿದ ಹಣವನ್ನು ಹಲವು ನಿಯಮಗಳಡಿಯಲ್ಲಿ ಬೀಳಗಿಯಲ್ಲಿ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವ ಸದುದ್ದೇಶದಿಂದ ದತ್ತಿನಿಧಿಯಾಗಿ ಸ್ಥಾಪನೆ ಮಾಡಲಾಯಿತು ಎಂದ ಅವರು, ವಿಪರ್ಯಾಸವೆಂದರೆ ಈ ಎಲ್ಲ ಕಾರ್ಯಕ್ರಮಗಳು ಪಕ್ಕದ ಮುಧೋಳ ತಾಲೂಕಿನಲ್ಲಿ ನಡೆಯುತ್ತಿರುವುದು ಬೀಳಗಿ ತಾಲೂಕಿನ ಸಾಹಿತ್ಯ ಕ್ಷೇತ್ರಕ್ಕೆ ಎಸುಗುತ್ತಿರುವ ಅವಮಾನವಲ್ಲದೆ ಮತ್ತೇನು ಎಂದು ಖಾರವಾಗಿ ಪ್ರಶ್ನಿಸಿದರು.

ಬೀಳಗಿ ಬಾಗಲಕೋಟ ಜಿಲ್ಲೆಗೆ ಒಂದು ಸಾಂಸ್ಕೃತಿಕ ಪಾಠಶಾಲೆಯಂತಿತ್ತು, ಅದರಲ್ಲಿ ಶ್ರೀರಾಮ ಇಟ್ಟಣ್ಣವರ, ಕಂಠಿ ಹನುಮಂತರಾಯರು, ಎಚ್. ಬಿ. ಧರ್ಮಣ್ಣವರ, ಸಿದ್ದಣ್ಣ ಕೆರೂರ ಅಂತವರು ಇದ್ದರು. ಆದರೆ, ಪ್ರಸ್ತುತ ಕಸಾಪ ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಅವರ ಸರ್ವಾಧಿಕಾರಿ ಧೋರಣೆಗೆ ಸಾಹಿತ್ಯಿಕ ಚಟುವಟಿಕೆಗಳಿಂದ ಹಿರಿಯ ಸಾಹಿತಿಗಳೆಲ್ಲರೂ ದೂರ ಉಳಿದಿದ್ದಾರೆ ಎಂದು ಆಕ್ರೋಶ ಹೊರಹಾಕಿದರು.

ಅಕ್ರಮ ಮರುಳು ಸೀಜ್



ಕಲಾದಗಿ: ಅಕ್ರಮ ಮರುಳು ಸಂಗ್ರಹ ಸ್ಥಳಕ್ಕೆ ಬಾಗಲಕೋಟೆ ತಹಶೀಲ್ದಾರ ವಾಸುದೇವಸ್ವಾಮಿ ನೇತೃತ್ವದಲ್ಲಿ ಕಂದಾಯ ಇಲಾಖಾ ಸಿಬ್ಬಂದಿ, ಪೊಲೀಸ್ ಸಿಬ್ಬಂದಿ ದಾಳಿ ನಡೆಸಿ ಮರುಳು ಸೀಜ್ ಮಾಡಿ ಪ್ರಕರಣ ದಾಖಲಿದ್ದಾರೆ. ಚಿಕ್ಕಸಂಶಿ ಗ್ರಾಮದ ತೋಟದಲ್ಲಿ ಅಕ್ರಮವಾಗಿ 10ರಿಂದ 12 ಟ್ರಿಪ್ ಮರುಳು ಸಂಗ್ರಹ ಮಾಡಿದ್ದ ಖಚಿತ ಮಾಹಿತಿ ಪಡೆದ ಬಾಗಲಕೋಟೆ ತಹಶೀಲ್ದಾರ್ ವಾಸುದೇವ ಸ್ವಾಮಿ, ಉಪ ತಹಶೀಲ್ದಾರ ಆರ್.ಆರ್.ಕುಲಕರ್ಣಿ, ಕಂದಾಯ ನಿರೀಕ್ಷಕ ಎಂ.ಕೆ.ಮಲಕ್ಕನವರ ಅವರನ್ನು ಹೊಂದಿದ ತಂಡ ಚಿಕ್ಕಸಂಶಿಯಲ್ಲಿ ಅಕ್ರಮ ಮರಳು ಸಂಗ್ರಹ ಮಾಡಿದ್ದ ತೋಟಕ್ಕೆ ದಾಳಿ ಮಾಡಿ ಮರಳನ್ನು ಸೀಜ್ ಮಾಡಿ ಪ್ರಕರಣ ದಾಖಲಿಸಿದ್ದಾರೆ.

ಪ್ರವೇಶಾತಿಗೆ ಅರ್ಜಿ ಆಹ್ವಾನ

ಬಾಗಲಕೋಟೆ: ಪ್ರಸಕ್ತ ಸಾಲಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ ಪಿಯುಸಿ ಕೋರ್ಸಿನ ನವೀಕರಣ ವಿದ್ಯಾರ್ಥಿಗಳನ್ನು ಎಸ್‌ಎಚ್‌ಪಿ ಪೋರ್ಟಲ್‌ನಲ್ಲಿ ನವೀಕರಿಸಿ ಪ್ರವೇಶಾತಿ ಕಲ್ಪಿಸಲು ಮೇ 30ರ ವರೆಗೆ ಅವಕಾಶ ಕಲ್ಪಿಸಲಾಗಿದೆ. ನವೀಕರಣ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿ ಖಾಲಿ ಉಳಿದಿರುವ ಸ್ಥಾನಗಳಿಗೆ ಮಾತ್ರ ಹೊಸದಾಗಿ ಪ್ರವೇಶಾತಿ ಕಲ್ಪಿಸಲಾಗಿರುವುದರಿಂದ ವಿದ್ಯಾರ್ಥಿಗಳು ಮುಂದಿನ ತರಗತಿಗೆ ಪ್ರವೇಶ ಪಡೆದಿರುವ ಬಗ್ಗೆ ದಾಖಲಾತಿ ಸಲ್ಲಿಸುವಂತೆ ಬಾಗಲಕೋಟೆ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಿರುಸುದ್ದಿ

ಜೂ.6ರಂದು ಪ್ರತಿಭಾ ಪುರಸ್ಕಾರ

◆ವಿಜಯಪುರ: 2025–26ನೇ ಸಾಲಿನ ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರ ಮತ್ತು ಜಿಲ್ಲಾ ಮಟ್ಟದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸಿದ ಹಡಪದ ವಿದ್ಯಾರ್ಥಿಗಳಿಗೆ ಜೂ.6ರಂದು ಬೆಳಗ್ಗೆ 10 ಗಂಟೆಗೆ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ವೇದ ಅಕಾಡೆಮಿಯ ಸಭಾಭವನ ಇಟ್ಟಂಗಿಹಾಳ ರಸ್ತೆ ವಿಜಯಪುರದಲ್ಲಿ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ 9986091374, 9900643943 ಸಂಪರ್ಕಿಸಲು ಜಿಲ್ಲಾ ಹಡಪದ ನೌಕರರ ಸಂಘ, ವಿಜಯಪುರ ಜಿಲ್ಲಾ ಅಧ್ಯಕ್ಷರು ದಶರಥ ನಾವಿ ತಿಳಿಸಿದ್ದಾರೆ.

ಪ್ರವೇಶಕ್ಕೆ ಅರ್ಜಿ ಆಹ್ವಾನ

◆ಇಂಡಿ: ಶಿರಶ್ಯಾಡ ಗ್ರಾಮದಲ್ಲಿ ಪಿಯುಸಿ ಕಾಲೇಜಿಗೆ ಪ್ರವೇಶ ಪ್ರಾರಂಭವಾಗಿದ್ದರಿಂದ ಪ್ರವೇಶ ಪಡೆಯ ಬಯಸುವ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಪ್ರವೇಶ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ರೂ.650 ಕಟ್ಟಬೇಕಾಗುತ್ತದೆ. ವಿದ್ಯಾರ್ಥಿಗಳು ಕಲಾ ಮತ್ತು ವಾಣಿಜ್ಯ ಅಭ್ಯಾಸ ಮಾಡಲು ಅವಕಾಶ ದೊರೆತಿದೆ. ಅದರ ಸದುಪಯೋಗ ತೆಗೆದುಕೊಳ್ಳಬೇಕೆಂದು ಶಿರಶ್ಯಾಡದ ಪ್ರಗತಿಪರ ರೈತ ಚಂದ್ರಶೇಖರ ಪಾಸೋಡಿ ತಿಳಿಸಿದ್ದಾರೆ. ಹೀಗಾಗಿ ಬಡ ವಿದ್ಯಾರ್ಥಿಗಳು ಸಾಧ್ಯವಾದಷ್ಟು ಗ್ರಾಮದಲ್ಲಿಯೇ ಶಿಕ್ಷಣ ಪಡೆಯಬೇಕು. ಮತ್ತು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಶುಲ್ಕ ಭರಿಸುವೆ ಎಂದರು.

ಅವಿರೋಧವಾಗಿ ಆಯ್ಕೆ





◆ಸಿಂದಗಿ: ತಾಲೂಕಿನ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ರಿ, ಬೆಂಗಳೂರು, ಸಿಂದಗಿ ತಾಲೂಕು ಘಟಕಕ್ಕೆ ನೂತನ ಪದಾಧಿಕಾರಿಗಳು ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ತಾಲೂಕಾಧ್ಯಕ್ಷರಾಗಿ ಗುತ್ತರಗಿ ಎಲ್ ಟಿ ಶಾಲೆಯ ಲಕ್ಷ್ಮಣ ಸೊನ್ನ, ಉಪಾಧ್ಯಕ್ಷರಾಗಿ ಕೆಜಿಎಂಪಿಎಸ್ ಶಾಲೆಯ ಶರಣಬಸಪ್ಪ ಲಂಗೋಟಿ, ಮಹಿಳಾ ಉಪಾಧ್ಯಕ್ಷೆಯಾಗಿ ಸಿಂದಗಿಯ ಯುಬಿಎಲ್‌ಪಿಎಸ್ ಶಾಲೆಯ ಎಫ್.ಎ.ಪಠಾಣ, ಪ್ರಧಾನ ಕಾರ್ಯದರ್ಶಿಯಾಗಿ ಸಿಂದಗಿ ಜಿಪಿಎಲ್‌ಪಿಎಸ್ ಶಾಲೆಯ ಜಗದೇವಪ್ಪ ಸಿಂಗೆ, ಖಜಾಂಚಿಯಾಗಿ ರಾಂಪೂರ ಪಿಎ ಎಲ್ ಟಿ ಜಿಎಸ್‌ಪಿಎಸ್ ಶಾಲೆಯ ರಮೇಶ ಅಡಕಿ, ಸಹ ಕಾರ್ಯದರ್ಶಿಯಾಗಿ ಬಂದಾಳ ಗ್ರಾಮದ ಯುಬಿಎಲ್‌ಪಿಎಸ್ ಶಾಲೆಯ ಡಿ.ಎಚ್. ಚೌಧರಿ, ಮಹಿಳಾ ಸಹ ಕಾರ್ಯದರ್ಶಿಯಾಗಿ ಯರಗಲ್ ಬಿಕೆ ಎಚ್.ಪಿ.ಎಸ್ ಶಾಲೆಯ ಭಾಗ್ಯಶ್ರೀ ತಡಲಗಿ, ಸಂಘಟನಾ ಕಾರ್ಯದರ್ಶಿಯಾಗಿ ಬಬಲೇಶ್ವರ ಗ್ರಾಮದ ಜಿಎಚ್‌ಪಿಎಸ್ ಶಾಲೆಯ ಡಿ.ಸಿ.ಜಾಧವ, ಮಹಿಳಾ ಸಂಘಟನಾ ಕಾರ್ಯದರ್ಶಿಯಾಗಿ ಎಮ್‌ಪಿಎಸ್ ಶಾಲೆಯ ಸುಮಂಗಲಾ ಕೆಂಭಾವಿ ಆಯ್ಕೆಯಾಗಿದ್ದಾರೆ.

ಹೊಸ ಕೋರ್ಸ್ ಆರಂಭ

◆ವಿಜಯಪುರ: ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಸಕ್ತ ಸಾಲಿನಲ್ಲಿ ಬಿಕಾಂ (ಎಇಡಿಪಿ) ಬ್ಯಾಂಕಿಂಗ್ ಹಣಕಾಸು ಸೇವೆಗಳು ಹಾಗೂ ವಿಮೆ (ಇನ್ಸುರೆನ್ಸ್) ಪದವಿ ಕೋರ್ಸ್‌ನ್ನು ಆರಂಭಿಸಲಾಗಿದೆ. ಈ ನೂತನ ಕೋರ್ಸಿನ ಪ್ರಮುಖ ವೈಶಿಷ್ಟ್ಯಗಳೆಂದರೆ ವಿದ್ಯಾರ್ಥಿಗಳಿಗೆ ಮೊದಲ 2ವರ್ಷಗಳ ವರೆಗೆ ತರಗತಿ ಮತ್ತು ಪರೀಕ್ಷೆ ಇರಲಿವೆ. 3ನೇ ವರ್ಷ ಪೂರ್ಣ ಪ್ರಮಾಣದ ತರಬೇತಿ ನೀಡಲಾಗುತ್ತಿದ್ದು ಈ ಅವಧಿಯಲ್ಲಿ 8ಸಾವಿರದಿಂದ 15 ಸಾವಿರ ರೂ.ವರೆಗೆ ಸ್ಟೈಫಂಡ್ ನೀಡಲಾಗುವುದು. 3 ವರ್ಷ ಪೂರ್ಣಗೊಂಡ ನಂತರ ಬಿ.ಕಾಂ ಪದವಿ ಆಧಾರದ ಮೇಲೆ ಎಂಕಾಂ ಮತ್ತು ಎಂಬಿಎ ಸ್ನಾತಕೋತ್ತರ ವಿದ್ಯಾಭ್ಯಾಸ ಮುಂದುವರೆಸಲು ಅವಕಾಶವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಪ್ರಥಮ ದರ್ಜೆ ಕಾಲೇಜಿ ಪ್ರಾಂಶುಪಾಲರ ಕಾರ್ಯಾಲಯ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ನಾಳೆ ಪ್ರತಿಭಟನೆ

◆ಬಸವನಬಾಗೇವಾಡಿ: ಕರ್ನಾಟಕ ಸರ್ಕಾರದ ನೋಂದಣಿ ಹಾಗೂ ಮುದ್ರಾಂಕ ಇಲಾಖೆಯಲ್ಲಿ ಜಾರಿಗೆ ತರುತ್ತಿರುವ ಪೇಪರಲೆಸ್ ವ್ಯವಸ್ಥೆ ಹಾಗೂ ಆನ್‌ಲೈನ್ ವ್ಯವಸ್ಥೆಯಲ್ಲಿ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ವಿರೋಧಿಸಿ ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ, ನಿಡಗುಂದಿ, ಕೊಲ್ಹಾರ ತಾಲೂಕಿನ ಅಧಿಕೃತ ದಸ್ತು ಬರಹಗಾರರ ಕ್ಷೇಮಾಭಿವೃದ್ಧಿ ಟ್ರಸ್ಟ್, ಅಖಂಡ ಕರ್ನಾಟಕ ರೈತ ಸಂಘ ಹಾಗೂ ಕರವೇ ನೇತೃತ್ವದಲ್ಲಿ ಎಲ್ಲ ಸಾರ್ವಜನಿಕರು, ರೈತ ಮುಖಂಡರು ಸೇರಿ ಸ್ಥಳೀಯ ಬಸವೇಶ್ವರ ವೃತ್ತದಿಂದ ತಹಶೀಲ್ದಾರ್ ಕಚೇರಿವರೆಗೆ ಮೇ 27ರಂದು ಬುಧವಾರ ಶಾಂತಯುತ ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. ಪ್ರತಿಭಟನೆಯಲ್ಲಿ 3 ತಾಲೂಕಿನ ರೈತರು ಭಾಗವಹಿಸಲ್ಲಿದ್ದಾರೆ ಎಂದು ದಸ್ತು ಬರಹಗಾರರ ಕ್ಷೇಮಾಭಿವೃದ್ಧಿ ಟ್ರಸ್ಟ್ ತಿಳಿಸಿದೆ.



ವಿಜಯಪುರ: ಪರಿಸರ ಭವನ್ ಧಾರವಾಡದಲ್ಲಿ ಕರ್ನಾಟಕ ರಾಜ್ಯ ಅಮೆಚೂರ್ ಯೋಗ ಕ್ರೀಡಾ ಸಂಸ್ಥೆ ಬೆಂಗಳೂರು ಹಾಗೂ ಯೋಗ ಕ್ರೀಡಾ ಸಂಸ್ಥೆ ಧಾರವಾಡ ಸಂಯುಕ್ತ ಆಶ್ರಯದಲ್ಲಿ ಆನ್ ಲೈನ್ ಮತ್ತು ಆಫ್‌ಲೈನ್ ರಾಜ್ಯಮಟ್ಟದ ಯೋಗ ತೀರ್ಪುಗಾರರ ಕಾರ್ಯಗಾರ ಮತ್ತು ಪರೀಕ್ಷೆ ಉದ್ಘಾಟನಾ ಸಮಾರಂಭ ನಡೆಯಿತು. ಉದ್ಘಾಟಕರಾಗಿ ರಾಜ್ಯ ಸಂಸ್ಥೆಯ ಅಧ್ಯಕ್ಷ ಯೋಗ ಆಚಾರ್ಯ ಡಾ. ಗಣೇಶ್ ಕುಮಾರ, ಕಾರ್ಯದರ್ಶಿ ಎ.ನಟರಾಜ, ಅನಿಲ್ ಕರಿರ, ಪಳ್ಳೇಡ್, ಸಾವಿತ್ರಿ ಧಾರವಾಡ ಭಾಗವಹಿಸಿದ್ದರು.

ಜೂ.5ರಂದು ಪ್ರತಿಭಾ ಪುರಸ್ಕಾರ

◆ದೇವರಹಿಪ್ಪರಗಿ: ಪಟ್ಟಣದ ಸಿದ್ದೇಶ್ವರ ಸ್ವಾಮೀಜಿ ಪ್ರೌಢ ಶಾಲಾ ಆವರಣದಲ್ಲಿ ಜೂ.5ರಂದು ವಿಶ್ವ ಪರಿಸರ ದಿನಾಚರಣೆ ಹಾಗೂ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ. ಎಸ್‌ಬಿ ವಿಜಡಮ್ ಕರಿಯರ್ ಅಕಾಡೆಮಿ ಹಾಗೂ ಅಮ್ಮ ಫೌಂಡೇಶನ್ ಸಹಯೋಗದಲ್ಲಿ ನಡೆಯುವ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ದೇವರಹಿಪ್ಪರಗಿ ತಾಲೂಕಿನ ಎಸ್ ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಪ್ರತಿಶತ 90ಕ್ಕೂ ಹೆಚ್ಚು ಅಂಕ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿಶಿಷ್ಟ ರೀತಿಯಲ್ಲಿ ಸನ್ಮಾನ ಮಾಡಿ ಗೌರವಿಸಲಾಗುವುದು. ವಿಶೇಷವಾಗಿ ಎಸ್‌ಬಿ ವಿಜಡಮ್ ಕರಿಯರ್ ಅಕಾಡೆಮಿ ಸಂಸ್ಥಾಪಕ ಅಧ್ಯಕ್ಷ ಶರಣಯ್ಯ ಭಂಡಾರಿಮಠ ಅವರಿಂದ ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆ ಕುರಿತು ವಿಶೇಷ ಉಪನ್ಯಾಸ ನಡೆಯಲಿದೆ.

ದೇವರಹಿಪ್ಪರಗಿ ತಾಲೂಕಿನ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ 90% ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ತಮ್ಮ ಪಾಲಕರೊಂದಿಗೆ ಅಂಕಪಟ್ಟಿಯೊಂದಿಗೆ ಪಾಲ್ಗೊಳ್ಳಬೇಕು. ಇನ್ನು ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆಯಲ್ಲಿರುವ ನೌಕರಿ ಆಕಾಂಕ್ಷಿಗಳು ಸಹ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕು.

ಹೆಚ್ಚಿನ ಮಾಹಿತಿಗಾಗಿ 9972115502 ಮೊಬೈಲ್ ಸಂಖ್ಯೆಗೆ ಸಂಪರ್ಕಿಸಬೇಕೆಂದು ಎಸ್‌ಬಿ ವಿಜಡಮ್ ಕರಿಯರ್ ಅಕಾಡೆಮಿ ಸಂಸ್ಥಾಪಕ ಅಧ್ಯಕ್ಷ ಶರಣಯ್ಯ ಭಂಡಾರಿಮಠ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ವಿಜಯಪುರ: ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹಾಗೂ ಸರ್ಕಾರಿ ಪಾಲಿಟೆಕ್ನಿಕ್ ಸಹಯೋಗದಲ್ಲಿ ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಮೇ 30ರ ವರೆಗೆ ನಡೆಯಲಿರುವ ಯುಜಿಸಿಇಟಿ 2026 ಸೀಟು ಹಂಚಿಕೆ ಮಂಥನ ಕಾರ್ಯಕ್ರಮ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಪ್ರಾಚಾರ್ಯ ಶಿವಪುತ್ರ ಜವಳಿ ನೇತೃತ್ವದಲ್ಲಿ ಪ್ರಾರಂಭಿಸಲಾಯಿತು. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಸಾಗರ ರಾಠೋಡ, ಸರ್ಕಾರಿ ಪಾಲಿಟೆಕ್ನಿಕ್ ವಿಜಯಪುರದ ಆಯ್ಕೆ ಶ್ರೇಣಿ ಉಪನ್ಯಾಸಕ ಜಯರಾಮ ಎಸ್.ಸೋಮಶೇಖರ ಎಸ್.ಮಾರನೂರ, ಚನ್ನಪ್ಪ ಹುಣಶ್ಯಾಳ, ಜಯರಾಮ ಚವ್ಹಾಣ ಇದ್ದರು.

ಬಹುಹಳ್ಳಿ ಕುಡಿಯುವ ನೀರು ಸರಬರಾಜು ಯೋಜನೆ ಪರಿಶೀಲನೆ

ನೀರಿನ ಸಮಸ್ಯೆಗೆ ಮುನ್ನೆಚ್ಚರಿಕೆ ಅಗತ್ಯ

◆ವಿಜಯಪುರ: ಯಾವುದೇ ರೀತಿಯ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಅಧಿಕಾರಿಗಳು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ರಿಷಿ ಆನಂದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇಂಡಿ ತಾಲೂಕಿನ ಹೊರ್ತಿ ಮತ್ತು ಇತರೆ 31 ಗ್ರಾಮಗಳಿಗೆ ಹಾಗೂ ಚಡಚಣ ತಾಲೂಕಿನ ಇಂಚಗೇರಿ ಮತ್ತು ಇತರೆ 41 ಗ್ರಾಮಗಳಿಗೆ ನೀರು ಪೂರೈಸುವ ಬಹುಹಳ್ಳಿ ಕುಡಿಯುವ ನೀರು ಸರಬರಾಜು ಯೋಜನೆಗಳ ಜಲಮೂಲಗಳು ಹಾಗೂ ನೀರು ಸಂಸ್ಕರಣಾ ಘಟಕಗಳಿಗೆ ಸೋಮವಾರ ಭೇಟಿ ನೀಡಿ ಪರಿಶೀಲಿಸಿ ಅವರು ಮಾತನಾಡಿದರು.

ಇಂಡಿ ತಾಲೂಕಿನ ಅರ್ಜನಾಳ ಮತ್ತು ಹಂಜಗಿ ಕೆರೆಗಳಿಗೆ ಭೇಟಿ ನೀಡಿದ ಅವರು, ಬಹುಹಳ್ಳಿ ಕುಡಿಯುವ ನೀರು ಸರಬರಾಜು ಯೋಜನೆಗಳ ಪ್ರಮುಖ ಜಲಮೂಲಗಳಾದ ಕೆರೆ ಹಾಗೂ ಜಲಾಶಯ ಒತ್ತುವರಿ ಹಾಗೂ ಸಂಗ್ರಹವಾಗಿರುವ ನೀರಿನ ಪ್ರಮಾಣವನ್ನು ಪರಿಶೀಲಿಸಿದ ಅವರು, ಮುಂಬರುವ ದಿನಗಳಲ್ಲಿ ನೀರಿನ ಕೊರತೆ ಉಂಟಾಗದಂತೆ ಭೀಮಾ ನದಿ ಹಾಗೂ ಇಂಡಿ ಶಾಖಾ ಕಾಲುವೆ ಮೂಲಕ ಸಮರ್ಪಕ ಪ್ರಮಾಣದಲ್ಲಿ ನೀರನ್ನು ಸಂಗ್ರಹಿಸಿಕೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ನೀರು ಸಂಸ್ಕರಣಾ ಘಟಕಕ್ಕೆ ಭೇಟಿ ನೀಡಿದ ಸಿಇಒ ಅವರು, ಪಂಪ್ ಹೌಸ್, ಕ್ಲಾರಿನೇಶನ್



ಘಟಕ ಸೇರಿದಂತೆ ವಿವಿಧ ತಾಂತ್ರಿಕ ಘಟಕಗಳ ಕಾರ್ಯವೈಖರಿಯನ್ನು ಪರಿಶೀಲಿಸಿದರು. ಎಲ್ಲಾ ಘಟಕಗಳು ಸುಸೂತ್ರವಾಗಿ ಕಾರ್ಯನಿರ್ವಹಿಸುವಂತೆ ನಿರ್ವಹಣೆ ಮಾಡಬೇಕು ಎಂದರು.

ಯಾವುದೇ ತಾಂತ್ರಿಕ ದೋಷ ಕಂಡುಬಂದಲ್ಲಿ ತಕ್ಷಣ ಸರಿಪಡಿಸಿ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗದಂತೆ ನೋಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಇಂಡಿ ತಾಲೂಕಿನ ಹೊರ್ತಿ ಸೇರಿದಂತೆ 31 ಗ್ರಾಮಗಳು ಹಾಗೂ ಚಡಚಣ ತಾಲೂಕಿನ ಇಂಚಗೇರಿ ಸೇರಿದಂತೆ 41 ಗ್ರಾಮಗಳಿಗೆ ಶುದ್ಧ ಹಾಗೂ ಸಮರ್ಪಕ ಪ್ರಮಾಣದ ಕುಡಿಯುವ ನೀರನ್ನು ನಿರಂತರವಾಗಿ ಪೂರೈಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಅವರು, ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರಿನ ಬೇಡಿಕೆ ಹೆಚ್ಚಾಗುವ ಹಿನ್ನೆಲೆ ಯಾವುದೇ ಗ್ರಾಮದಲ್ಲಿ ಸಮಸ್ಯೆ ಉಂಟಾಗದಂತೆ ಈಗಿನಿಂದಲೇ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ತಿಳಿಸಿದರು.

- ನೀರಿನ ಕೊರತೆ ಉಂಟಾಗುವ ಸಾಧ್ಯತೆಯಿರುವ ಪ್ರದೇಶಗಳನ್ನು ಮುಂಚಿತವಾಗಿ ಗುರುತಿಸಿ ಪರ್ಯಾಯ ವ್ಯವಸ್ಥೆ ಸಿದ್ಧವಾಗಿಟ್ಟುಕೊಳ್ಳಬೇಕು.
- ಪೈಪ್‌ಲೈನ್, ಮೋಟಾರ್ ದುರಸ್ತಿ, ವಿದ್ಯುತ್ ವ್ಯತ್ಯಯ ಸೇರಿದಂತೆ ತಾಂತ್ರಿಕ ಸಮಸ್ಯೆ ತಕ್ಷಣ ಬಗೆಹರಿಸಬೇಕು.

ಗ್ರಾಮಗಳಲ್ಲಿ ನೀರಿನ ಕೊರತೆ ಉಂಟಾಗುವ ಸಾಧ್ಯತೆಯಿರುವ ಪ್ರದೇಶಗಳನ್ನು ಮುಂಚಿತವಾಗಿ ಗುರುತಿಸಿ ಪರ್ಯಾಯ ವ್ಯವಸ್ಥೆಗಳನ್ನು ಸಿದ್ಧವಾಗಿಟ್ಟುಕೊಳ್ಳಬೇಕು.

ಸಾರ್ವಜನಿಕರಿಂದ ಕುಡಿಯುವ ನೀರಿನ ಸಮಸ್ಯೆ ಕುರಿತು ದೂರುಗಳು ಬಂದಲ್ಲಿ ಅಧಿಕಾರಿಗಳು ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ತ್ವರಿತ ಪರಿಹಾರ ಕ್ರಮ ಕೈಗೊಳ್ಳಬೇಕು. ಈ ವಿಷಯದಲ್ಲಿ ಯಾವುದೇ ನಿರ್ಲಕ್ಷ್ಯ ತೋರಬಾರದು ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರಾದ ಸಂಜಯ ಕೋಟೆನ್ನವರ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ರಾಮಚಂದ್ರ ಬಂಡಿ, ಶಾಖಾಧಿಕಾರಿ ಚಂದ್ರಶೇಖರ ಚವ್ಹಾಣ, ಗುಲ್ನಾಜ ಜಮಾದಾರ, ಶಶಿಧರ ಮೇಡೇದಾರ, ಅಧಿಕಾರಿಗಳು ಇದ್ದರು.

ಬಕ್ರೀದ್: ಜಿಲ್ಲಾದ್ಯಂತ ಕಟ್ಟೆಚ್ಚರಕ್ಕೆ ಸೂಚನೆ

◆ವಿಜಯಪುರ: ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಜಿಲ್ಲೆಯಾದ್ಯಂತ ಚೆಕ್ ಪೋಸ್ಟ್‌ಗಳಲ್ಲಿ ಅನಧಿಕೃತವಾಗಿ ಜಾನುವಾರುಗಳ ಸಾಗಣೆಯಾಗದಂತೆ ಅಧಿಕಾರಿಗಳು ತೀವ್ರ ನಿಗಾ ವಹಿಸಬೇಕು ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರಾಮಗೌಡ ಹಟ್ಟಿ ಹೇಳಿದರು.

ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಸಹಯೋಗದಲ್ಲಿ ಸೋಮವಾರ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬಕ್ರೀದ್ ಹಬ್ಬದ ಮುನ್ನಾ ದಿನವಾದ ಮೇ 27 ಹಾಗೂ ಮೇ 28ರಂದು ಜಾನುವಾರುಗಳ ಅಕ್ರಮ ವಧೆ ಹಾಗೂ ಸಾಗಣೆ ತಡೆಗಟ್ಟಲು ನಗರಪಾಲಿಕೆ, ಪಶುಪಾಲನಾ ಇಲಾಖೆ, ಪೊಲೀಸ್ ಇಲಾಖೆ ಅಧಿಕಾರಿಗಳ ತಂಡ ರಚಿಸಿ ಎಲ್ಲ ರೀತಿಯ ಮುನ್ನೆಚ್ಚರಿಕೆ ಕ್ರಮಕೈಕೊಳ್ಳಬೇಕು. ಈ ನಿಟ್ಟಿನಲ್ಲಿ ಮಹಾನಗರ ಪಾಲಿಕೆ ಆಯುಕ್ತರು ತಂಡಗಳನ್ನು ರಚಿಸಿ ಅದರ ಮೇಲುಸ್ತುವಾರಿ ವಹಿಸಿಕೊಳ್ಳಬೇಕು ಎಂದು ಅವರು ಸಭೆಗೆ ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಮಾತನಾಡಿ, ಜಿಲ್ಲೆಯ ತಾಲೂಕು ವ್ಯಾಪ್ತಿಯಲ್ಲಿರುವ ತಹಶೀಲ್ದಾರ್ ನೇತೃತ್ವದಲ್ಲಿ ನಗರ, ಪುರಸಭೆ, ಪಟ್ಟಣಪಂಚಾಯತ ವ್ಯಾಪ್ತಿಯಲ್ಲಿ ಸಂಬಂಧಪಟ್ಟ ಆಯುಕ್ತರು ಹಾಗೂ ಮುಖ್ಯ ಅಧಿಕಾರಿಗಳ ನೇತೃತ್ವದಲ್ಲಿ, ಪಶು ಸಂಗೋಪನಾ ಇಲಾಖೆ ಮತ್ತು ಪೋಲಿಸ ಇಲಾಖೆ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ಒಳಗೊಂಡಂತೆ ತಂಡಗಳನ್ನು ರಚಿಸಿ ಕಾರ್ಯಾಚರಣೆ ನಡೆಸಬೇಕು. ತಿಡಗುಂದಿ ಟೋಲ್ ಗೇಟ್, ಧೂಳಖೇಡ, ಸೊಲಾಪುರ ನಾಕಾ, ಹಾಗೂ ಜಮಖಂಡಿ ನಾಕಾಗಳಲ್ಲಿ ಹೆಚ್ಚುವರಿ ತಂಡ ರಚಿಸಬೇಕು ಸೂಚಿಸಿದರು.

ಪ್ರಭಾರಿ ಉಪ ನಿರ್ದೇಶಕ ಡಾ.ಪ್ರಲ್ಹಾದ ಪಾಟೀಲ, ಮುಖ್ಯ ಪಶು ವೈದ್ಯಾಧಿಕಾರಿ ಡಾ.ಸುಜಾತಾ, ಡಾ.ಶಿವಾನಂದ ಮೇಟಿ, ಡಾ.ಯು.ಜೆ.ನಾಲಾ, ಡಾ.ಬಿ.ಎಸ್‌ಕನಮಡಿ, ಡಾ.ವೆಂಕಟೇಶ ವಾಲಿಕಾರ, ಡಾ.ಶರಣಗೌಡ ಬಿರಾದಾರ, ಡಾ.ಧರಮಪ್ಪ ರಾಠೋಡ, ಡಾ.ತಜಪಶೆಟ್ಟಿ, ಡಾ.ರಾಮು ರಾಠೋಡ, ಡಾ.ಹಿರೇಮಠ, ಡಾ.ಪ್ರವೀಣ ಸುರಪುರ, ಪರಿಸರ ಮಾಲಿನ್ಯ ನಿಯಂತ್ರಣಾಧಿಕಾರಿ, ಪಾಲಿಕೆ ಅಧಿಕಾರಿಗಳು ಇದ್ದರು.



ಯವಕರಿಗೆ ಸದಾ ಬೆಂಬಲ: ಸುನೀಲಗೌಡ

◆ವಿಜಯಪುರ: ದೇಶದ ಬೆನ್ನೆಲುಬಾಗಿರುವ ಯವಕರಿಗೆ ನಾವು ಸದಾ ಬೆಂಬಲವಾಗಿ ನಿಂತಿದ್ದೇವೆ ಎಂದು ವಿಧಾನ ಪರಿಷತ ಶಾಸಕ ಸುನೀಲಗೌಡ ಪಾಟೀಲ ಹೇಳಿದ್ದಾರೆ.

ತಿಕೋಟಾ ಪಟ್ಟಣದಲ್ಲಿ ನಡೆದ ಯುವ ಶಕ್ತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಇಂದಿನ ಕಾರ್ಯಕ್ರಮ ಯುವಕರ ಶಕ್ತಿ ಪ್ರದರ್ಶನ ಮಾತ್ರವಲ್ಲ, ಯುವಕರ ಬೃಹತ್ ಜಾತ್ರೆಯಾಗಿದೆ. ತಮ್ಮೆಲ್ಲರ ಪ್ರೀತಿ, ವಿಶ್ವಾಸ, ಅಭಿಮಾನ ಕಂಡು ಮಂತ್ರಮುಗ್ದನಾಗಿದ್ದೇನೆ. ತಾವು ನಮ್ಮ ಮೇಲೆ ಇಟ್ಟಿರುವ ಪ್ರೀತಿಗೆ ಋಣಿಯಾಗಿದ್ದೇನೆ. ಈ ಕಾರ್ಯಕ್ರಮ ವಿರೋಧಿಗಳಿಗೆ ನಿದ್ದೆಗೆಡಿಸಲಿದೆ. ತಮ್ಮೆಲ್ಲರ ಒಳಿತಿಗಾಗಿ ನಾವು ಸದಾ ಶ್ರಮಿಸುತ್ತೇನೆ ಎಂದು ಅವರು ಹೇಳಿದರು.

ತೊರವಿ ಸಿದ್ದಲಿಂಗೇಶ್ವರ ಸ್ವಾಮೀಜಿ ಮಾತನಾಡಿ, ಯುವಕರ ಇಂದಿನ ಉತ್ಸಾಹ ಹಂಡೆ ಹಾಲು ಕುಡಿದಷ್ಟು ಸಂತೋಷವಾಗಿದೆ. ಇದು ಎಂ.ಬಿ.ಪಾಟೀಲ ಮತ್ತು ಸುನೀಲಗೌಡ ಪಾಟೀಲ ಅವರ ಮೇಲೆ ಯುವಕರಿಗೆ ಇರುವ ಪ್ರೀತಿಗೆ ಸಾಕ್ಷಿಯಾಗಿದೆ. ತಮ್ಮನ್ನು ಹೃದಯಲ್ಲಿ ಇಟ್ಟುಕೊಂಡಿರುವ ಯುವಕರಿಗೆ ಸುನೀಲಗೌಡರು ಬೆನ್ನೆಲುಬಾಗಿ ನಿಂತಿದ್ದಾರೆ. ಸಂತರ ಬಗ್ಗೆ ಅಪಾರ ಗೌರವ ಹೊಂದಿರುವ ಅವರು ಜನಪರ ಕಾಳಜಿಯುಳ್ಳ ನಾಯಕರಾಗಿದ್ದಾರೆ. ಸಚಿವ ಎಂ. ಬಿ. ಪಾಟೀಲರು ರೈತರಿಗಾಗಿ ಮಾಡಿರುವ ಕೆಲಸ ಕಾರ್ಯಗಳು ಇಡೀ ರಾಜ್ಯಾದ್ಯಂತ ಮನೆಮಾತಾಗಿವೆ ಎಂದರು.

ತಿಕೋಟಾ ಶಿವಬಸವ ಶಿವಾಚಾರ್ಯರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿದ್ದು ಗೌಡನವರ, ಈರನಗೌಡ ಬಿರಾದಾರ, ಮುಖಂಡರಾದ ರಾಮು ದೇಸಾಯಿ, ಬಸಯ್ಯ ವಿಭೂತಿ, ಲೇಮು ಕೊಣ್ಣೂರ, ಭಾಗೀರಥಿ ತೇಲಿ, ಶೋಭಾ ಹುಲ್ಯಾಳ, ಪ್ರಶಾಂತ ಪಾಟೀಲ ಕನಮಡಿ, ಕಿರಣ ದಳವಾಯಿ(ದೇಸಾಯಿ), ವಿ.ಎಂ.ಪಾಟೀಲ, ರಾಮರಾವ ದೇಸಾಯಿ, ಬಾಬು ಹಂಚಿನಾಳ, ಪ್ರಕಾಶ ಜಲಗೇರಿ, ಸುರೇಶ ಕೊಣ್ಣೂರ, ಅರುಣ ಖೈರಾವ, ಸಚಿನ ಪಾಟೀಲ, ಅಮರ ಬಿಸನಾಳ, ಸಚಿನ ಚಿನವಾಲ, ಆಕಾಶ ಕಲಬುರ್ಗಿ, ರಾಜು ಚವ್ಹಾಣ, ಯುವ ಮುಖಂಡರಾದ ಶಿವಾನಂದ ಹಂಜಗಿ, ಪ್ರಶಾಂತ ಝುಂಡೆ ಸೇರಿದಂತೆ ಯುವಕರು ಉಪಸ್ಥಿತರಿದ್ದರು.



ಅಸ್ಕಿ ಗ್ರಾಮದಲ್ಲಿ ನರೇಗಾ ಕಾಮಗಾರಿ ವೀಕ್ಷಿಸಿದ ತಾಪಂ ಇಒ

◆ತಾಳಿಕೋಟೆ: ತಾಲೂಕಿನ ಅಸ್ಕಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಹೊಸ ತೋಟ ಹಳ್ಳದ ಹೂಳೆತ್ತುವ ನರೇಗಾ ಕಾಮಗಾರಿ ಸ್ಥಳಕ್ಕೆ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಅನುಸೂಯಾ ಚಲವಾದಿ ಭೇಟಿ ನೀಡಿ ಪರಿಶೀಲಿಸಿದರು.

ಕಾಮಗಾರಿ ವೀಕ್ಷಿಸಿ ಮಾತನಾಡಿದ ಅವರು, ದುಡಿಯುವ ಕೈಗಳಿಗೆ ನರೇಗಾ ಯೋಜನೆ ದೊಡ್ಡ ಬಲ ನೀಡಿದೆ. ಉದ್ಯೋಗ ಚೀಟಿ ಹೊಂದಿದ ಅರ್ಹ ಫಲಾನುಭವಿಗಳು ಕೆಲಸ ಮಾಡಿ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕು ಎಂದರು.

ತಾವೇ ಸ್ವತಃ ತಪಾಸಣೆಗೆ ಒಳಗಾಗುವ ಮೂಲಕ ಕಾರ್ಮಿಕರ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿದ ಅವರು, ಬಡ ಕೂಲಿಕಾರರು ಕಾಲಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು ಎಂದರು.

ನರೇಗಾ ಸಹಾಯಕ ನಿರ್ದೇಶಕ ಪಿ.ಎಸ್.ಕಸನಕ್ಕಿ ಮಾತನಾಡಿ, ಯೋಜನೆಯಡಿ 18 ವರ್ಷ ಮೇಲ್ಪಟ್ಟ ಯುವಕರಿಂದ ವೃದ್ಧರವರೆಗೆ ಎಲ್ಲರಿಗೂ ಅವಕಾಶವಿದೆ. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಬರಬೇಕು. ಗಂಡು–ಹೆಣ್ಣಿಗೆ ರೂ. 370 ಸಮಾನ ಕೂಲಿ ಇದ್ದು, ಯಾರೂ ಕಾಲಹರಣ ಮಾಡಬಾರದು ಎಂದರು. ಅಲ್ಲದೆ, ಪಾರದರ್ಶಕತೆಗಾಗಿ



ಎನ್‌ಎಂಎಂಎಸ್ ತಂತ್ರಾಂಶದಲ್ಲಿ 'ಫೇಸ್ ಅತ್ತೆಂಟಿಕೇಶನ್' ಮೂಲಕ ದಿನಕ್ಕೆ ಎರಡು ಬಾರಿ ಹಾಜರಾತಿ ಕಡ್ಡಾಯ ಎಂದರು.

ಶಿಬಿರದಲ್ಲಿ ಮಧುಮೇಹ, ರಕ್ತದೊತ್ತಡ ತಪಾಸಣೆ ನಡೆಸಿ ಉಚಿತ ಔಷಧಿ ವಿತರಿಸಲಾಯಿತು. 93 ಮಹಿಳೆಯರು, 20 ಪುರುಷರು ಸೇರಿ ಒಟ್ಟು 113 ಕೂಲಿಕಾರರು ಪಾಲ್ಗೊಂಡಿದ್ದರು.

ಪಿಡಿಒ ಬಿ.ಎಂ.ಸಾಗರ, ಐಇಸಿ ಸಂಯೋಜಕ ಮಲಕಪ್ಪ, ತಾಂತ್ರಿಕ ಸಹಾಯಕ ಅನ್ವಾನ್ ಅಹ್ಮದ, ಆರೋಗ್ಯ ಮತ್ತು ಗ್ರಾಪಂ ಸಿಬ್ಬಂದಿ ಉಪಸ್ಥಿತರಿದ್ದರು.

ಜಗತ್ತಿನ ಗಮನ ಸೆಳೆಯುತ್ತಿರುವ ದೇಶದ ಸಂಸ್ಕೃತಿ: ಹಂಚಲಿ

◆ನಾಲತವಾಡ: ಭಾರತದ ನೆಲ ಮತ್ತು ಸಂಸ್ಕೃತಿಗೆ ಜಗತ್ತು ಮಾರು ಹೋಗಿದೆ. ನಮ್ಮ ದೇಶದ ಪರಂಪರೆ, ಆಚರಣೆ, ಸಂಸ್ಕಾರ ಮತ್ತು ಮಾನವೀಯ ಮೌಲ್ಯಗಳು ವಿಶ್ವದ ಗಮನ ಸೆಳೆಯುತ್ತಿವೆ. ಭಾರತೀಯ ಸಂಸ್ಕೃತಿ ಎಲ್ಲರನ್ನು ಒಗ್ಗೂಡಿಸುವ ಶಕ್ತಿ ಹೊಂದಿದ್ದು, ಇಂತಹ ಸಂಸ್ಕೃತಿ ಮತ್ತೆಲ್ಲೂ ಕಾಣಸಿಗುವುದಿಲ್ಲ ಎಂದು ಉಪನ್ಯಾಸಕ ಅಶೋಕ ಹಂಚಲಿ ಹೇಳಿದರು.

ಸ್ಥಳೀಯ ಹಳ್ಳೂರ ಪ್ಯಾಲೆಸ್‌ನಲ್ಲಿ 1987–88ನೇ ಸಾಲಿನ ಸುಮಾರು 200ಕ್ಕೂ ಹೆಚ್ಚು ಹಳೆಯ ವಿದ್ಯಾರ್ಥಿಗಳ ಗುರುವಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿ ಜೀವನದಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಶಿಕ್ಷಕರು ನೀಡಿದ ಮಾರ್ಗದರ್ಶನ ಮತ್ತು ಸಂಸ್ಕಾರಗಳಿಂದಲೇ ವಿದ್ಯಾರ್ಥಿಗಳು ಇಂದು ಸಮಾಜದಲ್ಲಿ ಉತ್ತಮ ಸ್ಥಾನಮಾನ ಗಳಿಸಿದ್ದಾರೆ ಎಂದು ತಿಳಿಸಿದರು.

ನಿವೃತ್ತ ಶಿಕ್ಷಕ ವಿ.ಎಂ.ಹಾದಿಮನಿ ಮಾತನಾಡಿ, ಗುರು–ಶಿಷ್ಯರ ಸಂಬಂಧವು ಜೀವನಪೂರ್ತಿ ಉಳಿಯುವ ಅಮೂಲ್ಯ ಬಂಧವಾಗಿದೆ.



ವಿದ್ಯಾರ್ಥಿಗಳು ತಮ್ಮ ಶಿಕ್ಷಕರನ್ನು ಸ್ಮರಿಸಿ ಗೌರವಿಸುವುದು ಇಂದಿನ ಸಮಾಜಕ್ಕೆ ಮಾದರಿಯಾಗಿದೆ ಎಂದು ಹೇಳಿದರು.

ವಿದ್ಯಾರ್ಥಿಗಳು ಗುರುಗಳನ್ನು ವೀರೇಶ್ವರ ಮಹಾಮನೆಯಿಂದ ಸಾರೋಟ ಮೆರವಣಿಗೆ ಮುಖಾಂತರ ಕಾರ್ಯಕ್ರಮ ಸ್ಥಳಕ್ಕೆ ಕರೆತಂದು ವಿಶೇಷವಾಗಿ ಸನ್ಮಾನಿಸಿ ಗೌರವಿಸಿದರು. ನಿವೃತ್ತ ಶಿಕ್ಷಕರಾದ ವಿ.ಎಂ. ಹಾದಿಮನಿ, ಲ.ರು.ಗೊಳಸಂಗಿ, ಎಂ.ಐ.ಬಿಜ್ಜೂರ, ಎ.ಎಸ್.ಪಟ್ಟಣಶೆಟ್ಟಿ, ಸಿ.ಬಿ.ಇಟಗಿ, ಸಿ.ಎಸ್.ಸ್ಥಾವರಮಠ, ಎಂ.ಬಿ.ಬಿರಾದಾರ, ಪಿ.ಐ.ಮಠ, ಮಹಾದೇವಿ ಮೋಟಗಿ, ಎಸ್.ಐ.ಗೌಡರ, ಎಚ್.ಎಂ.ಅತ್ತಾರ ಇದ್ದರು.

ಶಾಂತಿಯುತವಾಗಿ ಬಕ್ರೀದ್ ಆಚರಿಸಿ: ಕಾಂಬಳೆ

◆ಸಿಂದಗಿ: ಮೇ 28ರಂದು ನಡೆಯಲಿರುವ ಬಕ್ರೀದ್ ಹಬ್ಬವನ್ನು ಶಾಂತಿಯುತವಾಗಿ ಆಚರಿಸಬೇಕು. ಯಾವುದೇ ಗೊಂದಲ ಅಥವಾ ಅಶಾಂತಿಗೆ ಆಸ್ಪದ ನೀಡಬಾರದು. ಸಿಂದಗಿ ಜನತೆ ಶಾಂತಿ ಮತ್ತು ಸೌಹಾರ್ದತೆಗೆ ಹೆಸರುವಾಸಿಯಾದವರು ಪಿಎಸ್‌ಐ ಶ್ರೀಕಾಂತ ಕಾಂಬಳೆ ಹೇಳಿದರು.

ನಗರದ ಪೋಲಿಸ್ ಠಾಣೆಯ ಆವರಣದಲ್ಲಿ ಬಕ್ರೀದ್ ಹಬ್ಬದ ನಿಮಿತ್ಯ ಹಮ್ಮಿಕೊಂಡ ಶಾಂತಿ ಸಭೆಯಲ್ಲಿ ಮಾತನಾಡಿದ ಅವರು, ಎಲ್ಲ ಹಬ್ಬಗಳ ಸಂದರ್ಭದಲ್ಲೂ ಸಾರ್ವಜನಿಕರು ಕಾನೂನು ಸುವ್ಯವಸ್ಥೆ ಕಾಪಾಡಲು ಸಹಕಾರ ನೀಡಿದ್ದಾರೆ. ಇದೇ ಸಹಕಾರ ಮುಂದುವರಿಯಬೇಕು. ಇತರರಿಗೆ ಯಾವುದೇ ರೀತಿಯ ಸಮಸ್ಯೆಯಾಗದಂತೆ ಎಲ್ಲರೂ ನಡೆದುಕೊಳ್ಳಬೇಕು. ಯಾವುದೇ ಅಹಿತಕರ ಘಟನೆ ಕಂಡುಬಂದರೆ ಕಾನೂನು ಕೈಗೆ ತೆಗೆದುಕೊಳ್ಳದೆ ಪೊಲೀಸರ ಗಮನಕ್ಕೆ ತರಬೇಕು. ಹಬ್ಬದ ಸಂದರ್ಭದಲ್ಲಿ ನಗರ ಸೇರಿದಂತೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗುವುದು ಎಂದರು.

ಕ್ರೈಂ ಪಿಎಸ್‌ಐ ಎಂ.ಬಿ.ಬಿರಾದಾರ ಮಾತನಾಡಿ, ಇತ್ತೀಚೆಗೆ ಸಮಾಜಿಕ ಜಾಲತಾಣದಲ್ಲಿ ಸುಳ್ಳು ಸುದ್ದಿಗಳು ಹರಡುತ್ತಿವೆ. ಸಾಮಾಜಿಕ ಜಾಲತಾಣಗಳಲ್ಲಿ ಬರುವ ಸುಳ್ಳು ಸುದ್ದಿಗಳಿಂದ ಯಾರೂ ಪ್ರಚೋದನೆಗೆ ಒಳಗಾಗದೆ



ಎಚ್ಚರಿಕೆ ವಹಿಸಬೇಕು. ಧಾರ್ಮಿಕ ಮತ್ತು ಸಾಮಾಜಿಕ ಘರ್ಷಣೆ ಹೆಚ್ಚಲು ಸುಳ್ಳು ಸುದ್ದಿಗಳೇ ಕಾರಣ. ಹೀಗಾಗಿ ಸುಳ್ಳು ಸುದ್ದಿ ಪತ್ತೆಗೆ ಮತ್ತು ಅದನ್ನು ಹರಡುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಕೈಗೊಳ್ಳಲಾಗುವುದು. ಕಾರಣ ಶಾಂತಿ ಮತ್ತು ಸೌಹಾರ್ದತೆಯಿಂದ ಹಬ್ಬ ಆಚರಣೆ ಮಾಡಲು ಎಲ್ಲ ಸಮುದಾಯಗಳು ಸಹಕರಿಸಬೇಕು ಎಂದರು.

ಹಿರಿಯ ಮುಖಂಡ ರಾಜಣ್ಣ ನಾರಾಯಣಕರ ರಜಾಕ್ ಮುಜಾವರ, ಸೈಫನ್ ನಾಟೀಕಾರ, ರಮೇಶ ಮೋರಟಗಿ, ಎಂ.ಎಂ.ಸಿಂದಗಿಕರ್, ನಾಗಪ್ಪ ಪಾತ್ರೋಟ್ಟಿ, ಅಂಬರೀಷ ಚೌಗಲೆ ಸೇರಿದಂತೆ ಸಾರ್ವಜನಿಕರು ಹಾಗೂ ಪೊಲೀಸ್ ಸಿಬ್ಬಂದಿಗಳು ಇದ್ದರು.

ವಿವಿಧ ಸ್ಥಳಗಳಿಗೆ ತರಬೇತುದಾರರ ಭೇಟಿ

◆ಆಲಮಟ್ಟಿ: ತಟ್ಟಿಹಳ್ಳ ಅರಣ್ಯ ತರಬೇತಿ ಕೇಂದ್ರದಲ್ಲಿ ಬುನಾದಿ ತರಬೇತಿ ಪಡೆಯುತ್ತಿರುವ 58ನೇ ಗಸ್ತು ಅರಣ್ಯ ಪಾಲಕ ತರಬೇತುದಾರರು ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಅಧ್ಯಯನ ಪ್ರವಾಸ ಕೈಗೊಂಡು ಆಲಮಟ್ಟಿ ಹಾಗೂ ಬೇನಾಳ ಸೇರಿದಂತೆ ವಿವಿಧ ಸ್ಥಳಗಳಿಗೆ ಭೇಟಿ ನೀಡಿದರು.

ತಟ್ಟಿಹಳ್ಳ, ಮುದ್ದೇಬಿಹಾಳ ವಲಯದ ಆರ್‌ಎಫ್‌ಒ ಬಸನಗೌಡ ಬಿರಾದಾರ ಹಾಗೂ ಡಿಆರ್ ಎಫ್‌ಒ ಅಶೋಕ ಚವ್ಹಾಣ ಅವರ ನೇತೃತ್ವದಲ್ಲಿ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಅರಣ್ಯ ಸಂರಕ್ಷಣೆ, ಪರಿಸರ ಸಂರಕ್ಷಣೆ, ಸ್ಥಳೀಯ ಅರಣ್ಯ ಪ್ರದೇಶಗಳ ವೈಶಿಷ್ಟ್ಯಗಳು ಹಾಗೂ ಅರಣ್ಯ ಇಲಾಖೆಯ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ನೀಡಲಾಯಿತು. ವಿವಿಧ ಪ್ರದೇಶಗಳ ಪರಿಸರ ವ್ಯವಸ್ಥೆ ಹಾಗೂ ಅರಣ್ಯ ನಿರ್ವಹಣೆಯ ಬಗ್ಗೆ ಪ್ರಾಯೋಗಿಕ ತಿಳುವಳಿಕೆ ಪಡೆಯಲು ಸಹಕಾರಿಯಾಯಿತು ಎಂದು ಅಧಿಕಾರಿಗಳು ತಿಳಿಸಿದರು.



ಉಪನ್ಯಾಸಕರ ನೇಮಕಾತಿ: ಒಳಮೀಸಲಾತಿ ಜಾರಿಗೆ ಆಗ್ರಹ

◆ಸಿಂದಗಿ: ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಇತ್ತೀಚೆಗೆ ಎಸ್‌ಡಿಎ, ಎಫ್‌ಡಿಎ ಹುದ್ದೆಗಳ ಅದಿಸೂಚನೆ ಹೊರಡಿಸಿದ್ದು, ಆ ಸಂಖ್ಯೆ ಕೇವಲ 6 ಹುದ್ದೆಗಳಾಗಿವೆ. ಹೀಗೆ ಕಡಿಮೆ ಹುದ್ದೆಗಳ ಸಂಖ್ಯೆಯಲ್ಲಿ ಆಹ್ವಾನಿಸಿದರೆ ಸರಕಾರಕ್ಕೆ ಲಾಭವೇ ವಿನಃ ಉದ್ಯೋಗಾಂಕ್ಷಿಗಳಿಗಲ್ಲ. ಇದರಿಂದ ಸರಕಾರದ ಖಜಾನೆ ತುಂಬುತ್ತೆ ಹೊರತು ಬಡವರ ಹೊಟ್ಟೆ ತುಂಬುವುದಿಲ್ಲ. ಸರಕಾರದ ಈ ವ್ಯವಸ್ಥಿತ ಪಿತೂರಿ ಲಕ್ಷಾಂತರ ಉದ್ಯೋಗ ಆಕಾಂಕ್ಷಿಗಳಿಗೆ ಮರಣ ಶಾಸನ ಬರೆಯುತ್ತಿದೆ. ಕಡಿಮೆ ಹುದ್ದೆ ಆಹ್ವಾನ ಮಾಡಿದರೆ ಒಳಮೀಸಲಾತಿ ಅನ್ವಯವಾಗುವುದಿಲ್ಲ ಅವು ಪರಿಶಿಷ್ಟ ಜಾತಿ ಇತರೆ ಎಂದು ಪರಿಗಣಿಸಲಾಗುತ್ತದೆ ಕರ್ನಾಟಕ ಆದಿಜಾಂಭವ ಜನಸಂಘದ ಉತ್ತರ ಕರ್ನಾಟಕ ವಲಯ ಅಧ್ಯಕ್ಷ ಸಾಯಬಣ್ಣ ದೇವರಮನಿ ಹೇಳಿದರು.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿದ ಅವರು, ಕರ್ನಾಟಕ ಸರಕಾರ ಇತ್ತೀಚೆಗೆ 2026–27ನೇ ಸಾಲಿನಲ್ಲಿ ಶೈಕ್ಷಣಿಕ ಹಿತದೃಷ್ಟಿಯಿಂದ 51ಸಾವಿರಕ್ಕೂ ಅಧಿಕ ಶಿಕ್ಷಕ ಹಾಗೂ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಆದೇಶ ಹೊರಡಿಸಿದ್ದು, ಇದನ್ನು ಸ್ವಾಗತಿಸುತ್ತೇವೆ. ಕರ್ನಾಟಕ ರಾಜ್ಯದಲ್ಲಿ ಈಗಾಗಲೇ ಒಳಮೀಸಲಾತಿ ಜಾರಿಯಾಗಿದ್ದು, ಅದರನ್ವಯ ಒಳಮೀಸಲಾತಿ ಅಡಿಯಲ್ಲೇ ಅತಿಥಿ ಶಿಕ್ಷಕರು ಹಾಗೂ ಉಪನ್ಯಾಸಕರನ್ನು ನೇಮಿಸಿಕೊಳ್ಳಬೇಕು ಎಂದು ಜಿಲ್ಲಾ ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ, ಹಾಗೂ ಉಪನಿರ್ದೇಶಕರು ಕಾಲೇಜ್ ಶಿಕ್ಷಣ ಇಲಾಖೆಯವರಿಗೆ ವಿನಂತಿಸಿದ್ದಾರೆ. ಇಲ್ಲವಾದಲ್ಲಿ 100ಕ್ಕಿಂತ ಕಡಿಮೆ ಹುದ್ದೆಗಳಿದ್ದರೆ ಎಲ್ಲಾ ವರ್ಗದ ಅಭ್ಯರ್ಥಿಗಳಿಗೆ ಪರೀಕ್ಷಾ ವೆಚ್ಚ ಉಚಿತವಾಗಿ ಘೋಷಿಸಬೇಕು. ಇಲ್ಲದಿದ್ದರೆ ಹೋರಾಟಕ್ಕೆ ಕರೆ ನೀಡಬೇಕಾಗುತ್ತದೆ ಎಂದು ಸರಕಾರಕ್ಕೆ ಆಗ್ರಹ ಮಾಡಿದ್ದಾರೆ.

ಅರ್ಜಿ ಆಹ್ವಾನ

◆ ವಿಜಯಪುರ: 2026–27ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಹೊಸದಾಗಿ ಪ್ರವೇಶ ಬಯಸುವ ಪಿಯುಸಿ ವಿದ್ಯಾರ್ಥಿಗಳಿಂದ ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ. ಪಿ.ಯು.ಸಿ ಕೋರ್ಸಿನ ವಿದ್ಯಾರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ. ಹೊಸ ವಿದ್ಯಾರ್ಥಿಗಳು ಮೇ 25ರಿಂದ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಕೆಗೆ ಜೂನ್ 15 ಕೊನೆಯ ದಿನವಾಗಿದೆ. ಹೊಸ ಅರ್ಜಿಗಳನ್ನು ತಾಲೂಕು ಕಲ್ಯಾಣಾಧಿಕಾರಿಗಳು ಜೂ.17ರಂದು ಪರಿಶೀಲಿಸಲು ದಿನಾಂಕ ನಿಗದಿಪಡಿಸಲಾಗಿದೆ. ಜೂ.19ರಂದು ತಾಲೂಕು ಸಮಿತಿಯ ಮೂಲಕ ಆಯ್ಕೆಯಾದ ಹೊಸ ವಿದ್ಯಾರ್ಥಿಗಳ ಆಯ್ಕೆ ಪಟ್ಟಿ ಪ್ರಕಟಿಸಲಾಗುವುದು. ವಿದ್ಯಾರ್ಥಿಗಳು ವಿದ್ಯಾರ್ಥಿ ನಿಲಯಗಳಿಗೆ ಜೂ.25ರೊಳಗಾಗಿ ಪ್ರವೇಶ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕಿರುಸುದ್ದಿ

ಉತ್ತಮ ಮಳೆ: ರೈತರ ಮುಖದಲ್ಲಿ ಮಂದಹಾಸ



ಕುಷ್ಟಗಿ: ಪಟ್ಟಣ ಸೇರಿದಂತೆ ಕಳೆದ ಎರಡು ಮೂರು ದಿನದಿಂದ ಉತ್ತಮ ಮಳೆಯಾಗಿದ್ದು, ರೈತರ ಮುಖದಲ್ಲಿ ಮಂದಹಾಸ ಬೀರಿದೆ. ಜಮೀನುಗಳನ್ನು ಹಸನು ಮಾಡಿ ಬಿತ್ತನೆಗೆ ಅಣಿಮಾಡಿಕೊಳ್ಳಲು ಹಾಗೂ ಬಿತ್ತನೆ ಕಂಡ ಜಮೀನುಗಳಿಗೆ ಈ ಮಳೆ ಸಹಾಯವಾಗಿದೆ.

ಕೆಲ ಗ್ರಾಮಗಳಲ್ಲಿರುವ ಕೃಷಿ ಹೊಂಡಗಳು ಭರ್ತಿಯಾಗಿದ್ದು, ಇನ್ನೂ ಕೆಲ ಕಡೆ ಭರ್ತಿಯಾಗಬೇಕಿದೆ. ರೈತರ ಜಮೀನುಗಳಲ್ಲಿ ಅಲ್ಲಲ್ಲಿ ನೀರು ಸಂಗ್ರಹಗೊಂಡು ತೇವಾಂಶಗೊಂಡಿವೆ. ಬಿತ್ತನೆ ಪೂರ್ವ ತಯಾರಿ ಕಾರ್ಯ ನಡೆಸಲು ಇದು ಸಕಾಲವಾಗಿದ್ದು ಕೃಷಿ ಚಟುವಟಿಕೆಗಳು ಭರದಿಂದ ಸಾಗಿವೆ. ಬಿತ್ತನೆಗೆ ಬೇಕಾದ ಬೀಜ ರಸಗೊಬ್ಬರಗಳ ಖರೀದಿಗೆ ಅಂಗಡಿಗಳ ಮುಂದೆ ಜನರು ಎಲ್ಲೆಡೆ ಕಂಡು ಬರುತ್ತಿದ್ದಾರೆ. ಬೀಜ ರಸಗೊಬ್ಬರ ಅಂಗಡಿಗಳ ಮುಂದೆ ರೈತರು ನಿಂತು ಬೀಜ ರಸಗೊಬ್ಬರಗಳ ಖರೀದಿಸುತ್ತಿರುವುದು ಕಂಡು ಬಂದಿತು.

ಅರ್ಜಿ ಆಹ್ವಾನ

ವಿಜಯನಗರ: ಜಿಲ್ಲೆಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದ ವಸತಿ ರಹಿತರಿಗೆ ವಸತಿ ಯೋಜನೆಯಡಿಯಲ್ಲಿ ಮನೆ ನಿರ್ಮಾಣಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ನಿವೇಶನ ಹೊಂದಿರುವ ಬಗ್ಗೆ ಹಕ್ಕು ಪತ್ರ ಅಥವಾ ಪೂರಕ ದಾಖಲಾತಿ, ಪಾಸ್ ಪೋರ್ಟ್ ಸೈಜ್ 2 ಭಾವಚಿತ್ರ, ಇತ್ತೀಚಿನ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ರೇಷನ್ ಕಾರ್ಡ್, ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ ಮತ್ತು ಬ್ಯಾಂಕ್ ಪಾಸ್ ಬುಕ್, ಈ ಹಿಂದೆ ಯಾವುದೇ ಯೋಜನೆಯಡಿ ವಸತಿ ಸೌಲಭ್ಯವನ್ನು ಪಡೆದಿಲ್ಲವೆಂದು ಗ್ರಾಮೀಣ ಭಾಗದವರು ಗ್ರಾಮ ಪಂಚಾಯತಿಯಿಂದ ಹಾಗೂ ನಗರ ಪ್ರದೇಶದವರು ಪಟ್ಟಣ ಪಂಚಾಯತಿ, ನಗರಸಭೆ, ಪುರಸಭೆಯಿಂದ ದೃಢೀಕರಣ ಪ್ರಮಾಣ ಪತ್ರವನ್ನು ಪಡೆದು ಜೂನ್ 5 ರ ಒಳಗಾಗಿ ಅರ್ಜಿ ಸಲ್ಲಿಸಬಹುದು.ನಿಗದಿತ ಅರ್ಜಿ ಹಾಗೂ ಹೆಚ್ಚಿನ ಮಾಹಿತಿಗೆ ಆಯಾ ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ಕಚೇರಿಗೆ ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ವೈ.ಎ.ಕಾಳೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮದುವೆ ವಾರ್ಷಿಕೋತ್ಸವ ವಿಭಿನ್ನವಾಗಿ ಆಚರಿಸಿಕೊಂಡ ಪತ್ರಕರ್ತ



ಕುಕನೂರು: ಇತ್ತೀಚಿನ ದಿನಗಳಲ್ಲಿ ಮದುವೆ ವಾರ್ಷಿಕೋತ್ಸವ ಎಂದರೆ ದುಬಾರಿ ಹೋಟೆಲ್‌ಗಳಲ್ಲಿ ಸಂಭ್ರಮ, ಪ್ರವಾಸ, ಕೇಕ್ ಕಟಿಂಗ್ ಹಾಗೂ ವೈಭವದ ಆಚರಣೆಗಳು ಸಾಮಾನ್ಯವಾಗಿವೆ. ಆದರೆ ಕುಕನೂರಿನ ಯುವ ಪತ್ರಕರ್ತ ಚಂದ್ರು ಭಾನಾಪುರ್ ಮತ್ತು ಅವರ ಪತ್ನಿ ಶ್ವೇತಾ ಭಾನಾಪುರ್ ತಮ್ಮ ವೈವಾಹಿಕ ಜೀವನದ ವಿಶೇಷ ದಿನವನ್ನು ಸಮಾಜಮುಖಿ ಹಾಗೂ ವೈಚಾರಿಕ ನೆಲೆಯಲ್ಲಿ ಆಚರಿಸುವ ಮೂಲಕ ಮಾದರಿಯಾಗಿದ್ದಾರೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘದ ತಾಲೂಕು ಅಧ್ಯಕ್ಷರಾಗಿರುವ ಚಂದ್ರು ಭಾನಾಪುರ್ ದಂಪತಿ 'ಸಂವಿಧಾನದೊಂದಿಗೆ ಮದುವೆ ವಾರ್ಷಿಕೋತ್ಸವ' ಎಂಬ ವಿಶಿಷ್ಟ ಕಾರ್ಯಕ್ರಮ ಆಯೋಜಿಸಿ, ಭಾರತೀಯ ಸಂವಿಧಾನದ ಮೌಲ್ಯಗಳನ್ನು ಜನರಿಗೆ ತಲುಪಿಸುವ ಪ್ರಯತ್ನ ಮಾಡಿದರು.

ಪ್ರಗತಿಪರ ಚಿಂತಕ ಹಾಗೂ ನಿವೃತ್ತ ಉಪನ್ಯಾಸಕ ಆರ್.ಪಿ. ರಾಜೂರು ಮಾತನಾಡಿದರು.

ಸಾಮಾಜಿಕ ಹೋರಾಟಗಾರ ಸುರೇಶ್ ಬಳೂಟಗಿ, ಹಿರಿಯರಾದ ಮಹೇಶ್ ಕಲ್ಮಠ, ಪತ್ರಕರ್ತರಾದ ಬಸವರಾಜ್ ಕೊನಾರಿ, ಮಂಜುನಾಥ್ ಅಂಗಡಿ, ಈರಯ್ಯ ಕುರ್ತುಕೋಟಿ, ಮುರಾರಿ ಭಜಂತ್ರಿ, ವಿಶ್ವನಾಥ್ ಪಟ್ಟಣಶೆಟ್ಟಿ, ಮಹಮ್ಮದ್ ಸಲೀಂ ಸಾಹೇಬ್, ಯಮನೂರು ಭಾನಾಪುರ್ ಸೇರಿದಂತೆ ಹಲವರು ಉಪಸ್ಥಿತರಿದ್ದು ದಂಪತಿಗಳ ಕಾರ್ಯವನ್ನು ಶ್ಲಾಘಿಸಿದರು.

ಕಾರ್ಯಕ್ರಮದ ಅಂತ್ಯದಲ್ಲಿ ಸಂವಿಧಾನದ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರತಿಜ್ಞೆ ಕೈಗೊಳ್ಳಲಾಯಿತು.



ಕುಷ್ಟಗಿ: ಬಣಜಿಗ ಸಮಾಜದ ನೂತನ ತಾಲೂಕು ಅಧ್ಯಕ್ಷರಾಗಿ ಶಶಿಧರ ಎಂ.ಕವಲಿ, ಪ್ರಧಾನ ಕಾರ್ಯದರ್ಶಿಯಾಗಿ ರವಿಂದ್ರ ಪಾಟೀಲ ಶನಿವಾರ ಆಯ್ಕೆಯಾಗಿದ್ದಾರೆ. ಬಣಜಿಗ ಸಂಘದ ರಾಜ್ಯ ಉಪಾಧ್ಯಕ್ಷ ಅಂದಪ್ಪ ಜವಳಿ, ಬಸೆಟ್ಟೆಪ್ಪ ಕುಂಬಳಾವತಿ, ಈಶಪ್ಪ ಹನಮಸಾಗರ, ಬಸವರಾಜ ಕುದ್ರಿಮೋತಿ, ಉಮಾಪತಿ ಅಕ್ಕಿ ಸೇರಿದಂತೆ ಸಮಾಜ ಬಾಂಧವರು ಇದ್ದರು.

ಗೋಹತ್ಯೆ ತಡೆಯಲು ಆಗ್ರಹಿಸಿ ಮನವಿ

ಮಾನ್ವಿ: ಗೋಹತ್ಯೆ ತಡೆಯುವಂತೆ ಆಗ್ರಹಿಸಿ ವಿಶ್ವಹಿಂದೂ ಪರಿಷತ್, ಬಜರಂಗದಳ, ಗೋ ರಕ್ಷಾ ವಿಭಾಗದ ವತಿಯಿಂದ ಮಾನ್ವಿ ಪೊಲೀಸ್ ಠಾಣೆಯ ಪಿ.ಐ.ಸೋಮಶೇಖರ ಎಸ್. ಕೆಂಚರೆಡ್ಡಿ ಅವರಿಗೆ ವಿಶ್ವಹಿಂದೂ ಪರಿಷತ್ ತಾ.ಅಧ್ಯಕ್ಷ ವಿಜಯಕುಮಾರ ಇಭ್ರಮಾಪುರ್ ಮನವಿ ಸಲ್ಲಿಸಿದರು. ಬಳಿಕ ಮಾತನಾಡಿ, ರಾಜ್ಯದಲ್ಲಿ ಗೋವಂಶವನ್ನು ರಕ್ಷಿಸುವ ಉದ್ದೇಶದಿಂದ ದನ, ಹೋರಿ, ಕರು ಹಾಗೂ 13 ವರ್ಷದೊಳಗಿನ ಎಮ್ಮೆ ಮತ್ತು ಕೋಣ ಇವುಗಳ ಹತ್ಯೆ, ಹಿಂಸೆ ಹಾಗೂ ಬಲಿಯನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಆದ್ದರಿಂದ ಪೊಲೀಸ್ ಇಲಾಖೆಯಿಂದ ತಾಲೂಕಿನಲ್ಲಿ ಕುರ್ಬಾನಿ ಹೆಸರಿನಲ್ಲಿ ಗೋಹತ್ಯೆಯನ್ನು ತಡೆಯುವುದಕ್ಕೆ ಅಗತ್ಯ ಗಸ್ತು ಹಾಕಬೇಕು ಹಾಗೂ ಗೋಹತ್ಯೆ ನಡೆಸಿದವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು. ಮೇ 28ರವರೆಗೆ ತಾಲೂಕಿನಲ್ಲಿ ಚೆಕ್ ಪೋಸ್ಟ್ ಏರ್ಪಟು ಮಾಡಿ ಗೋಸಾಗಣಿಕೆ ನಡೆಯದಂತೆ ತಡೆಯಬೇಕು. ಗ್ರಾಮೀಣ ಭಾಗದಲ್ಲಿ ಗೋ ಕಳ್ಳತನವಾಗದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು. ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಕುರ್ಬಾನಿಯನ್ನು ತಡೆಯುವುದಕ್ಕೆ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡ ವಿಶೇಷ ತಂಡಗಳನ್ನು ರಚಿಸಬೇಕು ಎಂದು ಒತ್ತಾಯಿಸಿದರು. ವಿಎಚ್‌ಪಿ ತಾ.ಕಾರ್ಯದರ್ಶಿ ನಾಗಭೂಷಣ, ಬಜರಂಗದಳ ವಿಭಾಗೀಯ ಸಂಯೋಜಕ ರವಿಕುಮಾರ, ತಾಲೂಕು ಸಂಯೋಜಕ ಕೃಷ್ಣದೊರೆ, ಜೆ.ಸುಧಾಕರ್ ,ಆರ್.ಮುತ್ತುರಾಜ್‌ಶೆಟ್ಟಿ, ಸುರೇಶ ನಾಡಗೌಡ, ಮಾರುತಿನಾಯಕ, ಈರಣ್ಣ ಶೆಟ್ಟಿ, ವಿನೋದಕುಮಾರ, ಸಂಗಮೇಶ ಗೌಡ,ಕುಮಾರಮೇದಾ, ಬಸವರಾಜ ಶೆಟ್ಟಿ ಇತರರಿದ್ದರು.



ಮಾನ್ವಿ: ಗೋಹತ್ಯೆ ತಡೆಯುವಂತೆ ಆಗ್ರಹಿಸಿ ವಿಶ್ವಹಿಂದೂ ಪರಿಷತ್, ಬಜರಂಗದಳ, ಗೋ ರಕ್ಷಾ ವಿಭಾಗದ ವತಿಯಿಂದ ಮಾನ್ವಿ ಪೊಲೀಸ್ ಠಾಣೆಯ ಪಿ.ಐ.ಸೋಮಶೇಖರ ಎಸ್.ಕೆಂಚರೆಡ್ಡಿ ಅವರಿಗೆ ವಿಶ್ವಹಿಂದೂ ಪರಿಷತ್ ತಾ.ಅಧ್ಯಕ್ಷ ವಿಜಯಕುಮಾರ ಇಭ್ರಮಾಪುರ್ ಮನವಿ ಸಲ್ಲಿಸಿದರು. ವಿಎಚ್‌ಪಿ ತಾ.ಕಾರ್ಯದರ್ಶಿ ನಾಗಭೂಷಣ, ಬಜರಂಗದಳ ವಿಭಾಗೀಯ ಸಂಯೋಜಕ ರವಿಕುಮಾರ, ತಾಲೂಕು ಸಂಯೋಜಕ ಕೃಷ್ಣದೊರೆ ಇತರರಿದ್ದರು.

ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ಸೈಬರ್ ವಂಚನೆ

ನಕಲಿ ಬ್ಯಾಂಕ್ ಸಂದೇಶಗಳಿಗೆ ಜನ ಬಲಿ

ಹುಸೇನಸಾಬ ಕಟಗಿ

ಹನುಮಸಾಗರ: ಪಟ್ಟಣದಲ್ಲಿ ಮೊಬೈಲ್ ಮತ್ತು ಡಿಜಿಟಲ್ ಬ್ಯಾಂಕಿಂಗ್ ಬಳಕೆ ಹೆಚ್ಚುತ್ತಿರುವಂತೆ ಸೈಬರ್ ವಂಚಕರ ಚಟುವಟಿಕೆಗಳೂ ಗ್ರಾಮೀಣ ಭಾಗಗಳಲ್ಲಿ ಆತಂಕ ಮೂಡಿಸುತ್ತಿವೆ. ಬ್ಯಾಂಕ್ ಖಾತೆ ಬಂದ್ ಆಗುತ್ತದೆ, ಕೆವೈಸಿ ನವೀಕರಿಸಿ ಎಂಬ ಹೆಸರಿನಲ್ಲಿ ನಕಲಿ ಸಂದೇಶಗಳನ್ನು ಕಳುಹಿಸಿ ಜನರನ್ನು ಮೋಸಗೊಳಿಸುವ ಘಟನೆಗಳು ದಿನೇದಿನೇ ಹೆಚ್ಚುತ್ತಿವೆ. ಇತ್ತೀಚೆಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಯೋನೋ ಹೆಸರಿನಲ್ಲಿ ಕಳುಹಿಸಲಾದ ನಕಲಿ ಎಪಿಕೆ ಫೈಲ್‌ನ್ನು ಡೌನ್‌ಲೋಡ್ ಮಾಡಿದ ಪರಿಣಾಮ ಹಲವರು ಹಣಕಾಸು ನಷ್ಟ ಅನುಭವಿಸಿರುವ ಘಟನೆ ಬೆಳಕಿಗೆ ಬಂದಿದೆ.

ಸ್ಥಳೀಯ ಯುವಕನೊಬ್ಬರ ಮೊಬೈಲ್‌ಗೆ ವಾಟ್ಸಾಪ್ ಮೂಲಕ "SBI YONO Account will be blocked tonight" ಎಂಬ ಸಂದೇಶ ಬಂದಿತ್ತು. ಅದರೊಂದಿಗೆ ಆಧಾರ್ ಅಪ್ಡೇಟ್.ಎಪಿಕೆ ಎಂಬ ಫೈಲ್ ಹಾಗೂ ಅನುಮಾನಾಸ್ಪದ ಲಿಂಕ್ ಕೂಡ ಕಳುಹಿಸಲಾಗಿತ್ತು. ಬ್ಯಾಂಕ್‌ನ ಅಧಿಕೃತ ಮಾಹಿತಿ ಎಂದು ಭಾವಿಸಿದ ಅವರು ಯಾವುದೇ ಪರಿಶೀಲನೆ ಮಾಡದೇ ಎಪಿಕೆ ಫೈಲ್ ತೆರೆಯಿದ್ದರು.

ಫೈಲ್ ಓಪನ್ ಮಾಡಿದ ಕೆಲವೇ ಸಮಯದಲ್ಲಿ ಮೊಬೈಲ್‌ನ ಮೇಲಿನ ನಿಯಂತ್ರಣ ಕಳೆದುಹೋಗಿರುವ ಶಂಕೆ ವ್ಯಕ್ತವಾಗಿದೆ. ಬಳಿಕ ಅವರ ವಾಟ್ಸಾಪ್ ಖಾತೆಯಿಂದ ಸ್ವಯಂಚಾಲಿತವಾಗಿ ಸ್ನೇಹಿತರು ಮತ್ತು ಸಂಬಂಧಿಕರ ಸಂಖ್ಯೆಗೆ ಅದೇ ಸಂದೇಶ ರವಾನೆಯಾಗಿದೆ. ಈ ಮೂಲಕ ಸುಮಾರು 30ಕ್ಕೂ ಹೆಚ್ಚು ಮಂದಿಗೆ ಲಿಂಕ್ ತಲುಪಿದ್ದು, ಕೆಲವರು ಹಣ ಕಳೆದುಕೊಂಡಿದ್ದಾರೆ ಎಂದು ತಿಳಿದುಬಂದಿದೆ.



SBI yono
URGENT ANNOUNCEMENT!
Dear SBI customer,
This is to inform you that Your SBI YONO Account will be Blocked Tonight due to AADHAR no. is not updated in your Account. We regret the inconvenience caused and request you to please install our official SBI Aadhar update apk and kindly update your AADHAR and proceed your further KYC immediately.

> **ಯಾವುದೇ ಬ್ಯಾಂಕ್ ಗ್ರಾಹಕರಿಗೆ ವಾಟ್ಸಾಪ್ ಮೂಲಕ ಎಪಿಕೆ ಫೈಲ್ ಅಥವಾ ಅನುಮಾನಾಸ್ಪದ ಲಿಂಕ್ ಕಳುಹಿಸುವುದಿಲ್ಲ. ಕೆವೈಸಿ ನವೀಕರಣಕ್ಕಾಗಿ ಗ್ರಾಹಕರು ಬ್ಯಾಂಕ್ ಶಾಖೆ ಅಥವಾ ಅಧಿಕೃತ ಆ್ಯಪ್ ಮಾತ್ರ ಬಳಸಬೇಕು.**
> ■ ಉದಯಕುಮಾರ, ಎಸ್‌ಬಿಐ ಬ್ಯಾಂಕ್ ವ್ಯವಸ್ಥಾಪಕ

ಜನರು ಹೆಚ್ಚು ಎಚ್ಚರಿಕೆಯಿಂದಿರಬೇಕು: ಘಟನೆ ಕುರಿತು ಮಾತನಾಡಿದ ಕುಟುಂಬದ ಸದಸ್ಯ ವಿದ್ಯಾಭೂಷಣ, 'ನನ್ನ ಸಹೋದರಿ ಬ್ಯಾಂಕ್‌ನ ಅಧಿಕೃತ ಸಂದೇಶವೆಂದು ನಂಬಿ ಎಪಿಕೆ ಫೈಲ್ ಓಪನ್ ಮಾಡಿದ್ದಾರೆ. ನಂತರ ಮೊಬೈಲ್ ಸಂಪೂರ್ಣ ಹ್ಯಾಕ್ ಆಗಿ ಪರಿಚಿತರಿಗೂ ಅದೇ ಲಿಂಕ್ ಹೋಗಿದೆ. ಕೆಲವರು ಹಣ ಕಳೆದುಕೊಂಡಿರುವ ಮಾಹಿತಿ ಬಂದಿದೆ. ಇಂತಹ ಸಂದೇಶಗಳ ಬಗ್ಗೆ ಜನರು ಹೆಚ್ಚಿನ ಜಾಗ್ರತೆ ವಹಿಸಬೇಕು' ಎಂದು ಹೇಳಿದರು.

> **ಸೈಬರ್ ವಂಚಕರು ಬ್ಯಾಂಕ್, ವಿದ್ಯುತ್ ಇಲಾಖೆ, ಗ್ಯಾಸ ಕಂಪನಿ ಹಾಗೂ ಸರ್ಕಾರಿ ಇಲಾಖೆಗಳ ಹೆಸರಿನಲ್ಲಿ ಜನರನ್ನು ಮೋಸಗೊಳಿಸುತ್ತಿದ್ದಾರೆ. ಅನುಮಾನಾಸ್ಪದ ಸಂದೇಶ ಬಂದರೆ ತಕ್ಷಣ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು.**
> ■ ಧನಂಜಯ, ಪಿಎಸ್‌ಐ

ದಿಗಂತ ವಿಶೇಷ

ಜಾಗೃತಿ ಕೊರತೆಯೇ ಸಮಸ್ಯೆ: ಗ್ರಾಮೀಣ ಪ್ರದೇಶಗಳಲ್ಲಿ ಡಿಜಿಟಲ್ ವ್ಯವಹಾರಗಳ ಬಳಕೆ ಹೆಚ್ಚಾದರೂ, ಸೈಬರ್ ಸುರಕ್ಷತೆ ಬಗ್ಗೆ ಅರಿವು ಕಡಿಮೆಯಿರುವುದು ವಂಚಕರಿಗೆ ಅವಕಾಶವಾಗುತ್ತಿದೆ ಎಂದು ಸಾರ್ವಜನಿಕರು ಅಭಿಪ್ರಾಯಪಟ್ಟಿದ್ದಾರೆ.

'ಹಿರಿಯ ನಾಗರಿಕರು ಮತ್ತು ಸಾಮಾನ್ಯ ಜನರು ಬ್ಯಾಂಕ್ ಹೆಸರಿನಲ್ಲಿ ಬರುವ ಸಂದೇಶಗಳನ್ನು ಸುಲಭವಾಗಿ ನಂಬುತ್ತಾರೆ. ಸರ್ಕಾರ ಮತ್ತು ಪೊಲೀಸ್ ಇಲಾಖೆ ಗ್ರಾಮೀಣ ಭಾಗಗಳಲ್ಲಿ ಸೈಬರ್ ಜಾಗೃತಿ ಕಾರ್ಯಕ್ರಮಗಳನ್ನು ಹೆಚ್ಚಿಸಬೇಕು' ಎಂದು ಶಿವಕುಮಾರ ಮಡಿಕೇರಿ ಹೇಳಿದರು.

ಡಿಜಿಟಲ್ ಯುಗದಲ್ಲಿ ಬ್ಯಾಂಕಿಂಗ್ ಸೇವೆಗಳು ಸುಲಭವಾಗುತ್ತಿದ್ದರೂ, ಅದೇ ಸಮಯದಲ್ಲಿ ಸೈಬರ್ ಅಪಾಯಗಳೂ ಹೆಚ್ಚುತ್ತಿವೆ. ಅಪರಿಚಿತ ಲಿಂಕ್‌ಗಳನ್ನು ತೆರೆಯದೇ, ಯಾವುದೇ ಎಪಿಕೆ ಫೈಲ್‌ಗಳನ್ನು ಡೌನ್‌ಲೋಡ್ ಮಾಡದೇ ಇರುವುದು ಇಂತಹ ವಂಚನೆಗಳಿಂದ ಪಾರಾಗಲು ಪ್ರಮುಖ ಮುನ್ನೆಚ್ಚರಿಕೆಯಾಗಿದೆ.

ಲಿಂಗನಬಂಡಿ ಗ್ರಾಮದಲ್ಲಿ ಸ್ವಚ್ಛತೆ ಮಾಯ

ಶಿವಮೂರ್ತಿ ಇಟಗಿ

ಯಲಬುರ್ಗಾ: ತಾಲೂಕಿನ ಲಿಂಗನಬಂಡಿ ಗ್ರಾಮದಲ್ಲಿ ತ್ಯಾಜ್ಯದಿಂದ ತುಂಬಿ ದುರ್ವಾಸನೆ ಬೀರುತ್ತಿದ್ದು,ಸ್ವಚ್ಛತೆಗೆ ಆದ್ಯತೆ ನೀಡಬೇಕಾದ ಗ್ರಾಪಂ ಆಡಳಿತ ಮೌನವಹಿಸಿದ್ದು, ಗ್ರಾಮಸ್ಥರು ಹಿಡಿಶಾಪ ಹಾಕುತ್ತಿದ್ದಾರೆ.

ಹಿರೇಅರಳಹಳ್ಳಿ ಗ್ರಾಮದಲ್ಲಿ ಗ್ರಾಪಂನ ಕೇಂದ್ರ ಸ್ಥಾನ ಹೊಂದಿದೆ. ಗ್ರಾಮದಲ್ಲಿ 2500ಕ್ಕೂ ಹೆಚ್ಚು ಜನರು ವಾಸಿಸುತ್ತಿದ್ದಾರೆ. ಗ್ರಾಮದಲ್ಲಿ ಸ್ವಚ್ಛತೆ ಮರೀಚಿಕೆಯಾಗಿದ್ದು, ಎಲ್ಲಿ ನೋಡಿದರಲ್ಲಿ ತ್ಯಾಜ್ಯ ಕಾಣುತ್ತಿದೆ.ಚರಂಡಿಗಳು ತ್ಯಾಜ್ಯದಿಂದ ತುಂಬಿವೆ. ಗ್ರಾಮದ ಬೀದಿಗಳ ಸಿಸಿ ರಸ್ತೆಯಲ್ಲಿ ನೀರು ಹರಿದು ಹೋಗುವ ಹರಿಯಲ್ಲಿ ಕಸ ಕಡ್ಡಿ, ಪ್ಲಾಸ್ಟಿಕ್ ತ್ಯಾಜ್ಯ ತುಂಬಿತುಳುಕುತ್ತಿದೆ. ಚರಂಡಿಯಲ್ಲಿ ನೀರು ಸರಾಗವಾಗಿ ಹರಿಯದೆ ರಸ್ತೆಯ ಕೆಲವೆಡೆ ನೀರು ವಾಚಿಕಟ್ಟಿದ್ದು,ರಸ್ತೆ ಮೇಲೆ ನೀರು ಹರಿಯುವುದರಿಂದ ಜನರು ಸಂಚರಿಸಲು ತೊಂದರೆ ಅನುಭವಿಸುತ್ತಿದ್ದಾರೆ. ರೋಗದ ಭೀತಿಯಲ್ಲಿ ಗ್ರಾಮಸ್ಥರು: ಗ್ರಾಮದ ಚರಂಡಿಗಳು ತ್ಯಾಜ್ಯದಿಂದ ತುಂಬಿ ದುರ್ವಾಸನೆ ಬೀರುತ್ತಿರುವುದರಿಂದ ಸೊಳ್ಳೆಗಳು ಹೆಚ್ಚಾಗಿವೆ. ಇವುಗಳ ಕಡಿತದಿಂದ ಜನರು ನೆಮ್ಮದಿಯಿಂದ ಜೀವಿಸಲು ಆಗುತ್ತಿಲ್ಲ, ಗ್ರಾಮದಲ್ಲಿ ಡೆಂಘೀ, ಚಿಕೂನ್ ಗುನ್ಯಾ, ಮಲೇರಿಯಾ ಹರಡುವ ಭಯ ಕಾಡುತ್ತಿದೆ. ಗ್ರಾಮದ ಸ್ವಚ್ಛತೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂಬುದು ಗ್ರಾಮಸ್ಥರ ಒತ್ತಾಯವಾಗಿದೆ. ಗ್ರಾಮದ ಸ್ವಚ್ಛತೆಗಾಗಿ ಸರ್ಕಾರ ಗ್ರಾಪಂಗೊಂದು ಕಸದ ವಿಲೇವಾರಿಗೆ ವಾಹನ ನೀಡಲಾಗಿತ್ತು. ಅದರಂತೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಗ್ರಾಮಸ್ಥರಿಂದ ಕಸ ಸಂಗ್ರಹಮಾಡಿಕೊಳ್ಳುತ್ತಿತ್ತು. ಆದರೆ, ಕಳೆದ ಮೂರ್ನಾಲ್ಕು ತಿಂಗಳಿನಿಂದ ಕಸ ಸಂಗ್ರಹಕ್ಕೆ ವಾಹನ ಆಗಮಿಸುತ್ತಿಲ್ಲ, ಗ್ರಾಪಂ ಆವರಣದಲ್ಲೇ ಕೆಟ್ಟು ಮೂಲೆ ಹಿಡಿದು ನಿಂತಿದೆ. ಹೀಗಾಗಿ ಗ್ರಾಮಸ್ಥರು ಕಸವನ್ನು ಎಲ್ಲೆಂದರಲ್ಲಿ ಬಿಸಾಡುತ್ತಿದ್ದು, ಗ್ರಾಮದ ಚರಂಡಿಗಳು ಕಸದಿಂದ ಕೂಡಿವೆ. ಇವುಗಳನ್ನು ತೆರವುಗೊಳಿಸಿ ಸ್ವಚ್ಛತೆಗೆ ಗ್ರಾಪಂ ಮುಂದಾಗಬೇಕು ಎಂದು ಲಿಂಗನಬಂಡಿ ಗ್ರಾಮಸ್ಥರು ಆಗ್ರಹವಾಗಿದೆ.

> **ಲಿಂಗನಬಂಡಿ ಗ್ರಾಮದ ಮುಖ್ಯರಸ್ತೆಯ ಬದಿ ತಿಪ್ಪೆಯಿಂದ ತುಂಬಿರುವುದು. ಗ್ರಾಮದ ಸ್ವಚ್ಛತೆಗಾಗಿ ಎರಡೂರು ದಿನಗಳಲ್ಲಿ ಚರಂಡಿ ಸ್ವಚ್ಛಗೊಳಿಸಲಾಗುತ್ತದೆ. ಸಾರ್ವಜನಿಕರಿಗೆ ಯಾವ ತೊಂದರೆಯಾಗದಂತೆ ತ್ವರಿತಗತಿಯಲ್ಲಿ ಸ್ವಚ್ಛತೆಗೆ ಕ್ರಮಕೈಗೊಳ್ಳುತ್ತೇನೆ.**
> ■ ಬಸವರಾಜ ಯರಗೇರಾ, ಹಿರೇಅರಳಹಳ್ಳಿ ಗ್ರಾಪಂ ಪಿಡಿಒ



ಸಖಿ ಒನ್ ಸ್ಟಾಪ್ ಸೆಂಟರ್ ಚುರುಕಾಗಿ ಕಾರ್ಯನಿರ್ವಹಿಸಲಿ: ಜಿಲ್ಲಾಧಿಕಾರಿ

ಕೊಪ್ಪಳ: ಮಿಷನ್ ಶಕ್ತಿ ಯೋಜನೆಯಡಿ ಕಾರ್ಯನಿರ್ವಹಿಸುವ ಸಖಿ ಒನ್ ಸ್ಟಾಪ್ ಸೆಂಟರ್ ಘಟಕ ಮತ್ತು ಎಲ್ಲ ಮಹಿಳಾ ಘಟಕಗಳು ಮಹಿಳೆಯರಿಗೆ ಸಂಬಂಧಿಸಿದ ಯೋಜನೆಗಳ ಹಾಗೂ ಕಾನೂನುಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಇತರೆ ಇಲಾಖೆಗಳೊಂದಿಗೆ ಸಮನ್ವಯತೆ ಸಾಧಿಸಿ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ಸುರೇಶ ಇಟ್ನಾಳ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮೇ 25ರಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಿಷನ್ ಶಕ್ತಿ ಯೋಜನೆಯಡಿ ಪ್ರಗತಿ ಪರಿಶೀಲನಾ ಸಭೆ ನಡೆಸಿ ಅವರು ಮಾತನಾಡಿದರು.

ಮಿಷನ್ ಶಕ್ತಿಯು ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು, ಇದು ಮಹಿಳೆಯರ ಸುರಕ್ಷತೆ, ಭದ್ರತೆ ಮತ್ತು ಆರ್ಥಿಕ ಸಬಲೀಕರಣಕ್ಕಾಗಿ ಜಾರಿ ತರಲಾದ ಸಮಗ್ರ ಕಾರ್ಯಕ್ರಮವಾಗಿದೆ. ಮಹಿಳೆಯರನ್ನು ರಾಷ್ಟ್ರ ನಿರ್ಮಾಣದಲ್ಲಿ ಸಮಾನ ಪಾಲುದಾರರನ್ನಾಗಿ ಮಾಡುವ ಗುರಿ ಹೊಂದಲಾಗಿದೆ. ಈ ಯೋಜನೆ ಪ್ರಮುಖ ಕಾರ್ಯಕ್ರಮಗಳಾದ ಒನ್ ಸ್ಟಾಪ್ ಸೆಂಟರ್, ಮಹಿಳಾ ಸಹಾಯವಾಣಿ, ಬೇಟಿ ಬಚಾವೋ ಬೇಟಿ ಪಢಾವೋ ಹಾಗೂ ನಾರಿ ಅದಾಲತ್ ಕಾರ್ಯಕ್ರಮ ಹಾಗೂ ಶಕ್ತಿ ಸದನ, ಪಾಲನಾ ಕೇಂದ್ರಗಳು, ಮಹಿಳಾ ಸಬಲೀಕರಣ ಘಟಕ, ಸಖಿ ನಿವಾಸ್ ಮತ್ತು ಪ್ರಧಾನ ಮಂತ್ರಿ ಮಾತೃ ವಂದನಾ ಈ ಎಲ್ಲಾ ಕಾರ್ಯಕ್ರಮಗಳನ್ನು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಜಿಪಂ ಸಿಇಒ ವರ್ಣಿತ್ ನೇಗಿ ಮಾತನಾಡಿದರು.

> **ವರ್ಷದಲ್ಲಿ 39 ಪೋಕ್ಸೋ ಪ್ರಕರಣ ದಾಖಲು**
> ಸಖಿ ಒನ್ ಸ್ಟಾಪ್ ಸೆಂಟರ್‌ನಲ್ಲಿ ದೊರೆಯುವ ಸೇವೆಗಳ ಬಗ್ಗೆ ಮತ್ತು ಸಖಿ ಒನ್ ಸ್ಟಾಪ್ ಸೆಂಟರ್‌ನಲ್ಲಿ ದಾಖಲಾದ ಪ್ರಕರಣಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಏಪ್ರೀಲ್ 2025ರಿಂದ ಮಾರ್ಚ 2026 ರವರೆಗೆ 11 ಕೌಟುಂಬಿಕ ದೌರ್ಜನ್ಯ ಪ್ರಕರಣಗಳು, 10 ಲೈಂಗಿಕ ಅಪರಾಧ ಪ್ರಕರಣಗಳು, 39 ಪೋಕ್ಸೊ, 2 ಬಾಲ್ಯ ವಿವಾಹ ಪ್ರಕರಣಗಳು, 19 ಕಾಣೆಯಾದ ಪ್ರಕರಣಗಳು, 3 ಇತರೆ ಪ್ರಕರಣಗಳು ದಾಖಲಾಗಿವೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ಎಸ್. ದರಗದ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಅಜ್ಜಪ್ಪ ಸೋಗಲದ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿಗಳಾದ ಅನ್ನಪೂರ್ಣ, ಜಿಲ್ಲಾ ವಾರ್ತಾಧಿಕಾರಿಗಳಾದ ಗವಿಸಿದ್ದಪ್ಪ ಹೊಸಮನಿ ಇದ್ದರು.

ರಸ್ತೆ ಸಂಪರ್ಕ ಸೇತುವೆ ಕಾಮಗಾರಿ ನಿಧಾನ: ಸಂಚಾರಕ್ಕೆ ತೊಂದರೆ

ಸಿಂಧನೂರು: ರಾಯಚೂರು ಜಿಲ್ಲೆಯ ಸಿಂಧನೂರು-ಮಸ್ಕಿ ತಾಲೂಕಿನ ನಡುವೆ ಹಾದು ಹೋಗಿರುವ ಬೀದರ್ ಟು ಚಾಮರಾಜನಗರ ರಾಷ್ಟ್ರೀಯ ಹೆದ್ದಾರಿ 150ಎ ಮಾರ್ಗದಲ್ಲಿನ 7 ಸಂಪರ್ಕ ರಸ್ತೆಗಳಲ್ಲಿ ಸಿಂಧನೂರು ತಾಲ್ಲೂಕಿನ ಕಲ್ಲೂರು ಕ್ರಾಸ್‌ನ ಪೆಟ್ರೋಲ್ ಬಂಕ್ ಬಳಿ ನಿರ್ಮಿಸುತ್ತಿರುವ ಸಂಪರ್ಕ ಸೇತುವೆ ಕಾಮಗಾರಿ, ಮಸ್ಕಿ ತಾಲೂಕಿನ ಮುದ್ದಾಪುರ ಕ್ರಾಸ್‌ನಲ್ಲಿ ನಿರ್ಮಾಣ ಹಂತದಲ್ಲಿರುವ ಬ್ರಿಡ್ಜ್ ಹಾಗೂ ರಂಗಾಪುರ ಬಳಿಯ ಮಲ್ಲಿಕಾರ್ಜುನ ಕ್ಯಾಂಪ್ ಪಕ್ಕದ 54ನೇ ಉಪ ಕಾಲುವೆಗೆ ಸೇತುವೆ ನಿರ್ಮಾಣದ ತಾತ್ಕಾಲಿಕ ಸೇತುವೆ ನಿರ್ಮಿಸಿರುವ ಈ 3 ಸಂಪರ್ಕ ಸೇತುವೆಗಳ ನಿರ್ಮಾಣ ಕಾರ್ಯ ನಿಧಾನವಾಗಿ ಸಾಗಿದ್ದು, ಈ ಮಾರ್ಗದಲ್ಲಿ ವಾಹನ ಚಲಾಯಿಸಲು ಚಾಲಕರಿಗೆ ಸವಾಲಾಗಿ ಪರಿಣಮಿಸಿದೆ.



ಇನ್ನೂ ಮಸ್ಕಿ ತಾಲೂಕಿನ ಗುಡದೂರು ಗ್ರಾಮದ ಬಳಿಯ ಸೇತುವೆ ಕಾಮಗಾರಿ ಮುಗಿದಿದೆ. ಆದರೆ ಮಲ್ಲಿಕಾರ್ಜುನ ಕ್ಯಾಂಪ್ ಬಳಿ ಇರುವ 54ನೇ ಉಪ ಕಾಲುವೆಗೆ ಇತ್ತೀಚಿಗೆ ಸಿಮೆಂಟ್ ಪೈಪ್‌ಲೈನ್ ಅಳವಡಿಸಿ ತಾತ್ಕಾಲಿಕ ರಸ್ತೆ ನಿರ್ಮಾಣಕ್ಕೆ ಮುಂದಾಗಿದ್ದು, ಇನ್ನೂ ಸೇತುವೆ ನಿರ್ಮಾಣ ಯಾವಾಗ ಎಂಬ ಪ್ರಶ್ನೆಯಾಗಿದೆ. ಇನ್ನೂ ಮುದ್ದಾಪುರ ಕ್ರಾಸ್ ಹಾಗೂ ಕಲ್ಲೂರು ಕ್ರಾಸ್ ಪೆಟ್ರೋಲ್ ಬಂಕ್ ಬಳಿಯಿರುವ ಸೇತುವೆ ನಿರ್ಮಾಣ ಕಾರ್ಯ ಆಮೆಗತಿಯಲ್ಲಿ ನಡೆದಿದೆ.

ಈ ಸೇತುವೆಗಳ ಬಳಿ ವಾಹನಗಳ ಸಂಚಾರಕ್ಕೆ ತಾತ್ಕಾಲಿಕ ರಸ್ತೆಗಳನ್ನು ನಿರ್ಮಿಸಿದ್ದು,ಜೋರು ಮಳೆ ಬಂದರೆ ಈ ತಾತ್ಕಾಲಿಕ ರಸ್ತೆಗಳು ಕೊಚ್ಚಿಹೋಗುವ ಆತಂಕ ಎದುರಾಗಿದೆ.ತಾತ್ಕಾಲಿಕ ರಸ್ತೆಗಳಲ್ಲಿ ಮಳೆ ನೀರು ನಿಂತು ಕಂದಕ ನಿರ್ಮಾಣವಾಗಿದ್ದು ಭಾನುವಾರ ಬೆಳಗ್ಗೆ ಕಂಡುಬಂತು.ಈ ಸರಕು-ಸಾಗಣೆ ವಾಹನಗಳು ಮತ್ತು ಬೃಹತ್ ಲಾರಿಗಳು ಈ ಮಾರ್ಗದಲ್ಲಿ ಚಲಾಯಿಸಲು ಚಾಲಕರು ಏದುಸಿರುಬಿಡುತ್ತಿದ್ದಾರೆ.ಹಲವು ವಾಹನಗಳು ತಾತ್ಕಾಲಿಕ ರಸ್ತೆಗಳು ಅಧ್ವಾನ ಸ್ಥಿತಿಯಿಂದ ಉರುಳಿಬಿದ್ದ ಘಟನೆಗಳನ್ನು ಸಾರ್ವಜನಿಕರು ಉದಾಹರಿಸುತ್ತಾರೆ.ಈ ಮಳೆಗಾಲ ಶುರುವಾಗುವುದರೊಳಗೆ ಸೇತುವೆಗಳ ನಿರ್ಮಾಣ ಪೂರ್ಣಗೊಳ್ಳಲು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಒಳಮೀಸಲಾತಿ: ಕಾಂಗ್ರೆಸ್‌ನಿಂದ ಮಾದಿಗ ಸಮಾಜಕ್ಕೆ ಅನ್ಯಾಯ

ಕಲಬುರಗಿ: ಕಾಂಗ್ರೆಸ್ ಸರ್ಕಾರವು ಪರಿಶಿಷ್ಟ ಜಾತಿ (ಎಸ್‌ಸಿ) ಒಳಮೀಸಲಾತಿಯನ್ನು ಸಮರ್ಪಕವಾಗಿ ಜಾರಿಗೊಳಿಸದೆ, ಕೇವಲ ಸುಳ್ಳು ಮತ್ತು ಗೊಂದಲದ ಆದೇಶಗಳ ಮೂಲಕ ಮಾದಿಗ ಸಮಾಜಕ್ಕೆ ಭಾರಿ ವಂಚನೆ ಎಸಗಿದೆ ಎಂದು ಬಿಜೆಪಿ ಎಸ್‌ಸಿ ಮೋರ್ಚಾ ನಗರಾಧ್ಯಕ್ಷ ಮಲ್ಲಿಕಾರ್ಜುನ ಜನಕೇರಿ ತೀವ್ರವಾಗಿ ಖಂಡಿಸಿದರು.

ನಗರದಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷವು ದಕ್ಷಿಣ ಮತಕ್ಷೇತ್ರದ ಬ್ಲಾಕ್ ಅಧ್ಯಕ್ಷ ಲಿಂಗರಾಜ ತಾರಫೈಲ್ ಅವರ ಮೂಲಕ ಒಳಮೀಸಲಾತಿ ಒಪ್ಪಿಕೊಂಡಿರುವುದಾಗಿ ನಕಲಿ ದಾಖಲೆ ಸೃಷ್ಟಿಸಿ,ಸಮಾಜಕ್ಕೆದ್ರೋಹ ಬಗೆದಿದೆ. ಸರ್ಕಾರದ 13/05/2026ರನೇಮಕಾತಿ ಆದೇಶ ಹಾಗೂ ರೋಸ್ಟರ್ ನಿಯಮಾವಳಿಗಳಲ್ಲಿ ಒಳಮೀಸಲಾತಿಯನ್ನು ಕಡೆಗಣಿಸಲಾಗಿದೆ. ಗೆಜೆಟೆಡ್ ಕ್ಲಾಸ್-1 ಮತ್ತು ಕ್ಲಾಸ್-2 ರ ಹುದ್ದೆಗಳಲ್ಲಿ ಕೇವಲ ಹಳೇ ಮೀಸಲಾತಿ ಪದ್ಧತಿಯನ್ನೇ ಮುಂದುವರಿಸಲಾಗುತ್ತಿದ್ದು, ಅರ್ಹ ಉಪಜಾತಿಗಳಿಗೆ ಅನ್ಯಾಯ ಮಾಡಲಾಗುತ್ತಿದೆ ಎಂದು ದೂರಿದರು.



ಸುಪ್ರೀಂ ಕೋರ್ಟ್ ಆದೇಶವಿದ್ದರೂ 35 ವರ್ಷಗಳ ಸುದೀರ್ಘ ಹೋರಾಟಕ್ಕೆ ನ್ಯಾಯ ಸಿಗದಂತೆ ಮಾಡಿರುವ ಸರ್ಕಾರದ ಈ ಜನವಿರೋಧಿ ನೀತಿಯನ್ನು ಒಪ್ಪಲು ಸಾಧ್ಯವಿಲ್ಲ. ತಕ್ಷಣವೇ ಈ ಲೋಪದೋಷಗಳನ್ನು ಸರಿಪಡಿಸಿ ಎಲ್ಲಾ ಒಳಪಂಗಡಗಳಿಗೆ ಜನಸಂಖ್ಯೆಯ ಆಧಾರದ ಮೇಲೆ ನ್ಯಾಯ ಒದಗಿಸಬೇಕು, ಇಲ್ಲದಿದ್ದರೆ ತೀವ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ಮೋರ್ಚಾದ ಹಿರಿಯ ಮುಖಂಡರಾದ ಅಂಬಾರಾಯ ಬೇಳಕೋಟಿ, ಬಂಡೇಶ್ ರತ್ನಡಿಗ, ಕೃಷ್ಣಾ ತಂಗಡಗಿ ಪ್ರದೀಪ್ ಬಾಚನಾಳ್ ಸೇರಿ ಅನೇಕರು ಉಪಸ್ಥಿತರಿದ್ದರು.

ಷೆಡ್ಯೂಲ್ 9ಗೆ ಸೇರಿಸಲು ಆಗ್ರಹಿಸಿ ಮನವಿ

ಕೊಪ್ಪಳ: ಕರ್ನಾಟಕದಲ್ಲಿನ ಎಸ್ಸಿ-ಎಸ್ಟಿವರ್ಗದ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ಎಸ್ಸಿಗೆ ಶೇ. 17 ಮತ್ತು ಎಸ್ಟಿಗೆ ಶೇ.7 ರಷ್ಟು ಹೆಚ್ಚಿಸುವ ಹೊಸ ಅಧಿನಿಯಮವನ್ನು ಸಂವಿಧಾನದ ಷೆಡ್ಯೂಲ್ 9ಕ್ಕೆ ಸೇರಿಸಲು ಆಗ್ರಹಿಸಿ ವಾಲ್ಮೀಕಿ ನಾಯಕ ಸಮುದಾಯದ ಮುಖಂಡರು ಭಾನುವಾರ ಸಿಎಂಗೆ ಮನವಿ ಸಲ್ಲಿಸಿದರು.



ಅಶೋಕ ವೃತ್ತದಲ್ಲಿ ಆಗಮಿಸಿದ ಸಮುದಾಗಳ ಮುಖಂಡರು ಮೀಸಲಾತಿ ಹೆಚ್ಚಳದ ಪರ ಘೋಷಣೆ ಕೂಗಿದರು. ಕೂಡಲೇ ಕೇಂದ್ರ ಸರಕಾರ ಹೊಸ ಅಧಿನಿಯಮ ಜಾರಿ ಮಾಡಲು ಆಗ್ರಹಿಸಿದರು. ಸಹಾಯಕ ಆಯುಕ್ತ ಕ್ಯಾ. ಮಹೇಶ ಮಾಲಗಿತ್ತಿ ಅವರು ಸ್ಥಳಕ್ಕೆ ಆಗಮಿಸಿ ಮನವಿ ಸ್ವೀಕರಿಸಿದರು.

ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಮಾತನಾಡಿ, ಜನಸಂಖ್ಯೆಗೆ ಅನುಗುಣವಾಗಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿಯನ್ನು ಎಸ್ಸಿಗೆ ಶೇ. 17 ಹಾಗೂ ಎಸ್ಟಿಗೆ ಶೇ. 7ಕ್ಕೆ ಹೆಚ್ಚಿಸಬೇಕು. ಹೊಸದಾಗಿ ಜಾರಿಗೆ ತರಲಾದ 2022ರ ಅಧಿನಿಯಮವನ್ನು ಸಂವಿಧಾನದ 9ನೇ ಷೆಡ್ಯೂಲ್‌ಗೆ ಸೇರಿಸಲು ಮತ್ತು ಹೈಕೋರ್ಟ್ ನೀಡಿರುವ ತಡೆಯಾಜ್ಞೆ ತೆರವುಗೊಳಿಸಲು ರಾಜ್ಯ ಸರಕಾರ ಕ್ರಮ ಕೈಗೊಳ್ಳಬೇಕು ಎಂದು ವಿ.ಎಸ್. ಉಗ್ರಪ್ಪ ಹಾಗೂ ಕೊಪ್ಪಳ ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಡಾ.ಕೆ.ಎನ್.ಪಾಟೀಲ ಆಗ್ರಹಿಸಿದರು.

ದಶಕಗಳ ಹೋರಾಟ ಹಾಗೂ ನ್ಯಾಯವಾದಿ 'ಮೂರ್ತಿ ನಾಗಮೋಹನದಾಸ್' ಮತ್ತು ಸುಭಾಷ್ ಆಡಿ ಆಯೋಗಗಳವರದಿಯ ಆಧಾರದ ಮೇಲೆ ರಾಜ್ಯ ಸರ್ಕಾರ ಜಾರಿಗೆ ತಂದಿದ್ದ 56% ಮೀಸಲಾತಿಯಡಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ಮತ್ತು ಉದ್ಯೋಗ ಆಕಾಂಕ್ಷಿಗಳು ಸೌಲಭ್ಯ ಪಡೆದಿದ್ದರು. ಆದರೆ, ಇತ್ತೀಚೆಗೆ ಹೈಕೋರ್ಟ್ ಈ ಕಾನೂನಿಗೆ ತಡೆಯಾಜ್ಞೆ ನೀಡಿರುವುದರಿಂದ ಈ ಸಮುದಾಯಗಳ ಸಾಮಾಜಿಕ ನ್ಯಾಯಕ್ಕೆ ಭಾರಿ ಹಿನ್ನಡೆಯಾಗಿದೆ ಎಂದು ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.

ಲಿಂಗಸೂರ ಗೋಲಪಲ್ಲಿ ವಾಲ್ಮೀಕಿ ಆಶ್ರಮದ ಸ್ವಾಮೀಜಿ, ಮುಖಂಡರಾದ ರಾಮಣ್ಣ ಕಲ್ಲನವರ, ಟಿ.ರತ್ನಾಕರ, ತುಳಸಿರಾಮ ಬೆಂಗಳೂರು, ಮಂಜುನಾಥ ಜಿ.ಗೊಂಡಬಾಳ, ಹನುಮೇಶ ನಾಯಕ, ಶಿವರಡ್ಡಿ ಕಾರಟಗಿ, ಮಾಲತಿ ನಾಯಕ, ಜ್ಯೋತಿ ಎಂ.ಗೊಂಡಬಾಳ, ಮಂಗಳೇಶ ಕುಕನೂರ, ಮಾನಪ್ಪ ಪೂಜಾರ, ಗದ್ದೆಪ್ಪ ನಾಯಕ, ವೆಂಕಟೇಶ ನಾಯಕ, ರಾಜಣ್ಣ ಚಿತ್ರದುರ್ಗ, ಮುತ್ತು ನಾಯ್ಕರ, ಬಸವರಾಜ ಶಹಪೂರ, ಮಾರ್ಕಂಡಪ್ಪ ಕಲ್ಲನವರ, ಅಂಬಣ್ಣ ನಾಯಕ, ಯಮನೂರಪ್ಪ ಸಿಂಗನಾಳ, ಮಾನಪ್ಪ ಶಾಖಾಪೂರ, ಯಲ್ಲಪ್ಪ ಹಡಗಲಿ, ಹಂಚ್ಯಾಳಪ್ಪ, ಸಂಗಪ್ಪ ಕುಷ್ಟಗಿ, ಬಸವರಾಜ ಕುಷ್ಟಗಿ, ಕೋಟೇಶ ತಳವಾರ, ಪ್ರಶಾಂತ ನಾಯಕ, ಸಂಜೀವ ಇಟಗಿ, ಸಿದ್ದು ಕೋಳಿಪೇಟೆ, ರಾಜೇಶ ಗಂಗಾವತಿ ಇದ್ದರು.

2026-27ನೇ ಶೈಕ್ಷಣಿಕ ಸಾಲಿನ ಪಿಯುಸಿ ತರಗತಿಗಳ ಪ್ರಾರಂಭೋತ್ಸವ

ವಿದ್ಯಾರ್ಥಿಗಳನ್ನು ಸ್ವಾಗತಿಸಿದ ಶಶೀಲ್ ನಮೋಶಿ

ಕಲಬುರಗಿ: ಅನೇಕ ಶೈಕ್ಷಣಿಕ ಸಮಸ್ಯೆಗಳು, ಗೊಂದಲದ ಇಲಾಖೆಯ ಆದೇಶಗಳ ಒತ್ತಡಗಳ ಮಧ್ಯೇಯು ಈ ಬಾರಿಯ ಪಿಯುಸಿ ಫಲಿತಾಂಶ ಸುಧಾರಣೆಗೆ ಶ್ರಮಿಸಿದ ಉಪನ್ಯಾಸಕರು ನಿಜವಾಗಿಯು ಅಭಿನಂದನೆಗೆ ಅರ್ಹರು ಎಂದು ವಿಧಾನ ಪರಿಷತ್ ಸದಸ್ಯ ಶಶೀಲ್ ಜಿ ನಮೋಶಿ ಹೇಳಿದರು.



ನಗರದ ಸರ್ಕಾರಿ ಬಾಲಿಕೆಯರ ಪದವಿಪೂರ್ವ ಕಾಲೇಜು ಹಾಗೂ ಆದರ್ಶನಗರ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಜರುಗಿದ 2026-27 ನೇ ಸಾಲಿನ ಕಾಲೇಜು ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ತಮ್ಮ ನಿರಂತರ ಪರಿಶ್ರಮ, ಬೋಧನಾ ಕೌಶಲ್ಯ ಹಾಗೂ ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕಾಗಿ ನೀಡಿದ ಮಾರ್ಗದರ್ಶನವು ಅತ್ಯುತ್ತಮ ಫಲಿತಾಂಶಕ್ಕೆ ಕಾರಣವಾಗಿದೆ. ರಾಜ್ಯದಲ್ಲಿ ಸರ್ಕಾರಿ ಕಾಲೇಜುಗಳ ಸಾಧನೆ ಮತ್ತು ವಿದ್ಯಾರ್ಥಿಗಳ ಉತ್ತೀರ್ಣತೆಯ ಪ್ರಮಾಣದಲ್ಲಿ ದಾಖಲಾಗಿರುವ ಏರಿಕೆಯು ಶ್ಲಾಘನೀಯ ಎಂದು ಹೇಳಿದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಉಪನ್ಯಾಸಕರ ಕೊರತೆಯಿದೆ ಹೀಗಾಗಿ ಫಲಿತಾಂಶದಲ್ಲಿ ಹೆಚ್ಚಿನ ಸ್ಥಾನಗಳನ್ನು ಗಳಿಸದೆ ಇರಬಹುದು ಆದರೆ ಶೇಕಡಾವಾರು ಫಲಿತಾಂಶದಲ್ಲಿ ಸುಧಾರಣೆಯಾಗಿದ್ದು ಇಡಿ ರಾಜ್ಯಕ್ಕೆ ಕಲಾ ವಿಭಾಗದಲ್ಲಿ ಪ್ರಥಮ, ರ್‍ಯಾಂಕ್ ವಿಜ್ಞಾನ , ವಾಣಿಜ್ಯ ವಿಭಾಗದಲ್ಲಿಯು ರಾಜ್ಯದ 10 ರ್‍ಯಾಂಕ್ ಗಳ ಪಟ್ಟಿಯಲ್ಲಿ ಗುರುತಿಸಿ ಕೊಂಡಿರುವುದು ನಮ್ಮ ಜಿಲ್ಲೆಗೆ ಸಂತಸದ ವಿಷಯ, ಕಲ್ಯಾಣ ಕರ್ನಾಟಕದ ವಿದ್ಯಾರ್ಥಿಗಳು ತಮ್ಮ ಜಾಣ್ಮೆಯನ್ನು ಈ ಭಾರಿಯ ಫಲಿತಾಂಶದ ಸ್ಪಷ್ಟವಾಗಿ ನಿರೂಪಿಸಿದ್ದಾರೆ ಎಂದು ಹೇಳಿದರು.

ನಂತರ ವಿದ್ಯಾರ್ಥಿಗಳಿ ಪುಷ್ಪ ವಿತರಿಸುವ ಮೂಲಕ ಸ್ವಾಗತಿಸಿ ಪಿಯುಸಿ ವಿದ್ಯಾರ್ಥಿ ಜೀವನವು ಮಾನವನ ಜೀವನದ ಸುವರ್ಣ ಕಾಲ ಮತ್ತು ಭವಿಷ್ಯದ ಯಶಸ್ಸಿಗೆ ಭದ್ರ ಬುನಾದಿಯಾಗಿದೆ. ಈ ಹಂತದಲ್ಲಿ ಕಲಿಯುವ ಗುಣಗಳು, ಶಿಸ್ತು ಮತ್ತು ಮೌಲ್ಯಗಳು ವ್ಯಕ್ತಿಯ ಇಡೀ ಜೀವನದ ದಿಕ್ಕನ್ನು ನಿರ್ಧರಿಸುತ್ತವೆ. ಭವಿಷ್ಯದಲ್ಲಿ ಏನಾಗಬೇಕು ಎಂಬ ಸ್ಪಷ್ಟ ಗುರಿಯನ್ನು ರೂಪಿಸಿಕೊಳ್ಳಲು ಇದು ಸೂಕ್ತ ಸಮಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸರ್ಕಾರಿ ಬಾಲಿಕೆಯರ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾದ ದೇವನಗೌಡ ಪಾಟೀಲ್, ಆದರ್ಶನಗರ ಕಾಲೇಜಿನ ಪ್ರಾಚಾರ್ಯರಾದ ರಾಜು ಗಂಗಾಧರ್ ಉಪನ್ಯಾಸಕರ ಸಂಘದ ಅಧ್ಯಕ್ಷರಾದ ಜೆ.ಮಲ್ಲಪ್ಪ, ಪ್ರಧಾನ ಕಾರ್ಯದರ್ಶಿ ನರಸಪ್ಪ ರಂಗೋಲಿ ಹಾಗೂ ಎರಡು ಕಾಲೇಜಿನ ಎಲ್ಲ ಉಪನ್ಯಾಸಕರು ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.



ಬಳ್ಳಾರಿ: ತಾಲೂಕಿನ ಬಿ.ಬೆಳಗಲ್ ತಾಂಡಾದಲ್ಲಿ ಐಸಿಎಆರ್ -ಭಾರತೀಯ ಮಣ್ಣು ಮತ್ತು ನೀರು ಸಂರಕ್ಷಣಾ ಸಂಸ್ಥೆ ವತಿಯಿಂದ 'ಮೇರಾ ಗಾಂವ್ ಮೇರಾ ಗೌರವ್' ಕಾರ್ಯಕ್ರಮದಡಿ, ಇಫ್ಕೋ ಸಹಯೋಗದೊಂದಿಗೆ 'ಸ್ಮಾರ್ಟ್ ರಸಗೊಬ್ಬರ ಬಳಕೆ, ಪೋಷಕಾಂಶ ಬಳಕೆ ದಕ್ಷತೆ ಮತ್ತು ಮಣ್ಣಿನ ಆರೋಗ್ಯ ನಿರ್ವಹಣೆ' ಕುರಿತು ಬಳ್ಳಾರಿ ಆಯೋಜಿಸಿದ್ದ ಜಾಗೃತಿ ಕಾರ್ಯಕ್ರಮ ನಡೆಯಿತು.

ಸುಸ್ಥಿರ ಕೃಷಿಗೆ ಮಣ್ಣಿನ ಆರೋಗ್ಯ ಅವಶ್ಯಕ

ಬಳ್ಳಾರಿ: ಮಣ್ಣಿನ ಆರೋಗ್ಯವನ್ನು ಸುಧಾರಿಸಲು ಹಸಿರು ಗೊಬ್ಬರ, ಕೊಟ್ಟಿಗೆ ಗೊಬ್ಬರ ಹಾಗೂ ಕೆರೆಯ ಹೂಳಿನ ಬಳಕೆ ಅತ್ಯಂತ ಅವಶ್ಯಕ ಎಂದು ಐಸಿಎಆರ್-ಭಾರತೀಯ ಮಣ್ಣು ಮತ್ತು ನೀರು ಸಂರಕ್ಷಣಾ ಸಂಸ್ಥೆಯ ಮುಖ್ಯಸ್ಥ ಡಾ.ಬಿ.ಕೃಷ್ಣರಾವ್ ಹೇಳಿದರು.

ತಾಲೂಕಿನ ಬಿ.ಬೆಳಗಲ್ ತಾಂಡಾದಲ್ಲಿ ಐಸಿಎಆರ್-ಭಾರತೀಯ ಮಣ್ಣು ಮತ್ತು ನೀರು ಸಂರಕ್ಷಣಾ ಸಂಸ್ಥೆ ವತಿಯಿಂದ 'ಮೇರಾ ಗಾಂವ್ ಮೇರಾ ಗೌರವ್' ಕಾರ್ಯಕ್ರಮದಡಿ, ಇಫ್ಕೋ ಸಹಯೋಗದೊಂದಿಗೆ 'ಸ್ಮಾರ್ಟ್ ರಸಗೊಬ್ಬರ ಬಳಕೆ, ಪೋಷಕಾಂಶ ಬಳಕೆ ದಕ್ಷತೆ ಮತ್ತು ಮಣ್ಣಿನ ಆರೋಗ್ಯ ನಿರ್ವಹಣೆ' ಕುರಿತು ಬಳ್ಳಾರಿ ಆಯೋಜಿಸಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಸಮತೋಲಿತ ರಸಗೊಬ್ಬರ ಬಳಕೆ, ನೈಸರ್ಗಿಕ ಹಾಗೂ ಸಾವಯವ ಕೃಷಿ ಪದ್ಧತಿಗಳು, ದನ ಹಾಗೂ ಆಡು ಸಾಕಣೆ ಮತ್ತು ತರಕಾರಿ ಬೆಳೆಗಳ ಮಹತ್ವದ ಅರಿವು ಹೊಂದಬೇಕು ಎಂದರು.

ಮಣ್ಣು ವಿಭಾಗದ ಹಿರಿಯ ವಿಜ್ಞಾನಿ ಡಾ.ಮಹಿಪಾಲ್ ಚೌಧರಿ ಅವರು ಮಾತನಾಡಿ, ಸುಸ್ಥಿರ ಕೃಷಿಗಾಗಿ ಸರಿಯಾದ ಸಮಯ ಮತ್ತು ನಿಖರ ಪ್ರಮಾಣದಲ್ಲಿ ರಸಗೊಬ್ಬರಗಳನ್ನು ಬಳಸಬೇಕು. ಬೇವು ಲೇಪಿತ ಯೂರಿಯಾ ಹಾಗೂ ಗಂಧಕ ಲೇಪಿತ ಯೂರಿಯಾದಂತಹ ನಿಧಾನವಾಗಿ ಬಿಡುಗಡೆಯಾಗುವ ರಸಗೊಬ್ಬರಗಳ ಬಳಕೆಗೆ ಉತ್ತೇಜನ ನೀಡಬೇಕು ಎಂದು ತಿಳಿಸಿದರು. ಹಣ್ಣು ವಿಭಾಗದ ವಿಜ್ಞಾನಿ ಅನುಷಾ ಎನ್.ಎಂ., ಬಳ್ಳಾರಿ ಇಫ್ಕೋ ಮಾರ್ಕೆಟಿಂಗ್ ಮ್ಯಾನೇಜರ್ ಹನುಮಂತ್ ಮಾತನಾಡಿದರು.



ಹೂವಿನಹಡಗಲಿ: ತಾಲೂಕಿನ ದೇವಗೊಂಡನಹಳ್ಳಿ ಗ್ರಾಮ ಪಂಚಾಯಿತಿ ವತಿಯಿಂದ ಉಪನಾಯಕನಹಳ್ಳಿ ಗ್ರಾಮದಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಫಲಾನುಭವಿಗಳಿಗಾಗಿ ಗ್ರಾಮ ಆರೋಗ್ಯ ಅಭಿಯಾನ ಅಡಿಯಲ್ಲಿ ಆರೋಗ್ಯ ತಪಾಸಣೆ ಹಾಗೂ ಜಾಗೃತಿ ಕಾರ್ಯಾಗಾರವನ್ನು ತಾಪಂ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಸಹಾಯಕ ನಿರ್ದೇಶಕ ಡಿ.ವೀರಣ್ಣ ನಾಯ್ಕ್ ಉದ್ಘಾಟಿಸಿದರು.

ಕಿರುಸುದ್ದಿ

ವಾಹನ ಸಂಚಾರ ಮಾರ್ಗ ಬದಲಾವಣೆ: ಡಿಸಿ

ಬಳ್ಳಾರಿ: ನಗರದಲ್ಲಿ ಹಾದುಹೋಗಿರುವ ರಾಷ್ಟ್ರೀಯ ಹೆದ್ದಾರಿ 150-ಎ ರಸ್ತೆಯ ತುಂಗಭದ್ರ ಬಲದಂಡೆ ಮೇಲ್ಮಟ್ಟದ ವಿತರಣಾ ಕಾಲುವೆ (ಸಂ-14, ಕಿ.ಮೀ 4.40) ಮೇಲಿನ ಸೇತುವೆಯ ಮರು ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳುತ್ತಿರುವ ಹಿನ್ನೆಲೆ ಸಾರ್ವಜನಿಕ ಸುರಕ್ಷತೆ ಹಾಗೂ ಸುಗಮ ಸಂಚಾರದ ಹಿತದೃಷ್ಟಿಯಿಂದ ಮುಂದಿನ 60 ದಿನಗಳ ಕಾಲ ಈ ಮಾರ್ಗದಲ್ಲಿ ತಾತ್ಕಾಲಿಕವಾಗಿ ವಾಹನ ಸಂಚಾರವನ್ನು ನಿರ್ಬಂಧಿಸಿ, ಪರ್ಯಾಯ ಮಾರ್ಗವನ್ನು ಕಲ್ಪಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ನಾಗೇಂದ್ರ ಪ್ರಸಾದ್ ಕೆ. ಆದೇಶ ಹೊರಡಿಸಿದ್ದಾರೆ.



ಕಾಲುವೆಗೆ ನೀರು ಹರಿಸುವ ಮುನ್ನವೇ ಈ ಸೇತುವೆ ಕಾಮಗಾರಿಯನ್ನು ಅತೀ ಜರೂರಾಗಿ ಮುಗಿಸಬೇಕಾಗಿರುವುದರಿಂದ ಲೋಕೋಪಯೋಗಿ ಇಲಾಖೆ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರ ವರದಿ ಮತ್ತು ಅಭಿಪ್ರಾಯವನ್ನು ಪರಿಗಣಿಸಿ ಈ ಕೆಳಗಿನಂತೆ ಸಂಚಾರ ಮಾರ್ಗ ಬದಲಾವಣೆ ಮಾಡಲಾಗಿದೆ. ಪರ್ಯಾಯ ಸಂಚಾರ ಮಾರ್ಗ: ಸಿರುಗುಪ್ಪ ಕಡೆಯಿಂದ ಬಳ್ಳಾರಿ ಹಾಗೂ ಬೆಂಗಳೂರು ರಸ್ತೆ ಕಡೆಗೆ ಸಂಚರಿಸುವ ಭಾರಿ ಮತ್ತು ಲಘು ವಾಹನಗಳು ಹವಂಬಾವಿ ಹತ್ತಿರ ಇರುವ ಕೆನಾಲ್ ಪಕ್ಕದ ಎಡಭಾಗದ ಸರ್ವಿಸ್ ರಸ್ತೆ ಮುಖಾಂತರ ತಾಳೂರು ರಸ್ತೆ, ತಾಳೂರು ರಸ್ತೆ ಕ್ರಾಸ್ ಮತ್ತು ಎಸ್.ಪಿ ಸರ್ಕಲ್ ಮೂಲಕ ಚಲಿಸಬೇಕಾಗುತ್ತದೆ. ಬಳ್ಳಾರಿ ನಗರದ ಕಡೆಯಿಂದ ಸಿರುಗುಪ್ಪಕ್ಕೆ ಹೋಗುವ ಭಾರಿ ಮತ್ತು ಲಘು ವಾಹನಗಳು ಹವಂಭಾವಿ ಹತ್ತಿರ ಇರುವ ಕೆನಾಲ್ ಪಕ್ಕದ ಎಡಭಾಗದ ರಸ್ತೆಯಿಂದ 100 ಮೀಟರ್ ಅಂತರದಲ್ಲಿರುವ ಸೇತುವೆ ಮೂಲಕ ತಿರುವು ಪಡೆದುಕೊಂಡು ಸಿರುಗುಪ್ಪ ರಸ್ತೆ ಕಡೆಗೆ ಸಂಚರಿಸಬೇಕು ಎಂದು ಹೇಳಿದರು.

ಜಿಲ್ಲಾ ಅಧ್ಯಕ್ಷರಾಗಿ ಮರಿರಾಜ ಗೌಡ ಅವಿರೋಧ ಆಯ್ಕೆ

ಸಿರುಗುಪ್ಪ: ಬಳ್ಳಾರಿ ಜಿಲ್ಲಾ ಬಣಜಿಗರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷರಾಗಿ ಎಂ.ಡಿ.ಮರಿರಾಜ ಗೌಡ ಅವರನ್ನು ಅವಿರೋಧವಾಗಿ ಆಯ್ಕೆಯಾದರು. ರಾಜ್ಯ ಉಪಾಧ್ಯಕ್ಷರಾಗಿ ದಂಡಿನ ಶಿವನಂದ, ಜಿಲ್ಲಾ ಗೌರವ ಅಧ್ಯಕ್ಷರಾಗಿ ರೂಪನಗುಡಿ ಬಸವರಾಜ ಆಯ್ಕೆಗೊಳಿಸಲಾಯಿತು ಎಂದು ಬಣಜಿಗರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ರೂಡಗಿ ಅವರು ತಿಳಿಸಿದರು. ರಾಜ್ಯ ಉಪಾಧ್ಯಕ್ಷ ಆಂದನಪ್ಪ, ರಾಜ್ಯ ಪ್ರಧಾನ ಕಾರ್ಯದರ್ಶಿ ಶಿವಾನಂದ ಬಿದರಿ ಭಾಗವಹಿಸಿದ್ದರು.



ಬುದ್ಧಿಮಾಂದ್ಯ ಮಕ್ಕಳ ಶಾಲೆಗೆ ನೆರವು



ಗಂಗಾವತಿ: ತಾಲೂಕಿನ ವಡ್ಡರಹಟ್ಟಿ ಕ್ಯಾಂಪ್‌ನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 1997-98ನೇ ಸಾಲಿನಲ್ಲಿ ಏಳನೇ ತರಗತಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳು ನಗರದ ಲಯನ್ಸ್ ಚಾರಿಟಬಲ್ ಟ್ರಸ್ಟ್‌ನ ಲಯನ್ಸ್ ಮನೋವಿಕಲಚೇತನ ಮಕ್ಕಳ ವಸತಿ ನಿಲಯದ ಶಾಲೆಗೆ ಭಾನುವಾರ ಅಡುಗೆ ಪದಾರ್ಥಗಳ ನೆರವು ನೀಡಿದರು. ಸರ್ಕಾರಿ ಶಾಲೆಯ ಹಳೆಯ ವಿದ್ಯಾರ್ಥಿಗಳೆಲ್ಲರೂ ಸೇರಿ ಸ್ವಂತ ಹಣ ಹಾಕಿ ಇದೇ ವರ್ಷದ ಜನವರಿಯಲ್ಲಿ ಶಾಲೆಯ ಆವರಣದಲ್ಲಿ ಗುರುವಂದನೆ ಹಾಗೂ ಸ್ನೇಹಿತರ ಸಮ್ಮಿಲನ ಕಾರ್ಯಕ್ರಮ ಮಾಡಿದ್ದರು. ಕಾರ್ಯಕ್ರಮದ ಬಳಿಕ ಉಳಿದ ಹಣವನ್ನು ವ್ಯರ್ಥ ಮಾಡದೆ ವಸತಿ ನಿಲಯದ ಮಕ್ಕಳಿಗೆ ದಿನಸಿ ಕೊಡಿಸಿದರು.

ಶಿಕ್ಷಕ ಹಾಗೂ ಸರ್ಕಾರಿ ಶಾಲೆಯ ಹಳೆ ವಿದ್ಯಾರ್ಥಿ ದೇವಣ್ಣ ಮಾತನಾಡಿದರು. ಇನ್ನೊಬ್ಬ ಹಳೆ ವಿದ್ಯಾರ್ಥಿನಿ ಜ್ಯೋತಿ ಹಿರೇಮಠ, ಲಯನ್ಸ್ ಕ್ಲಬ್ ವಸತಿ ಶಾಲೆಯ ಪ್ರಾಚಾರ್ಯ ಪ್ರಭು ಹಿರೇಮಠ ಮಾತನಾಡಿದರು. ಕ್ಲಬ್‌ನ ಸಿಬ್ಬಂದಿ ಮಹಮ್ಮದ್ ಹಾಗೂ ವಡ್ಡರಹಟ್ಟಿ ಕ್ಯಾಂಪ್ ಶಾಲೆಯ ವಿದ್ಯಾರ್ಥಿಗಳು ಇದ್ದರು.

ಪ್ರಗತಿ ಪರಿಶೀಲನಾ ಸಭೆ | ಜಿಲ್ಲಾ ಪಂಚಾಯಿತಿ ಸಿಇಒ ಸೂಚನೆ

ಅಪ್ರಾಪ್ತೆಯರ ಗರ್ಭಧಾರಣೆ ತಡೆಗೆ ಕ್ರಮಕೈಗೊಳ್ಳಿ

ಬಳ್ಳಾರಿ: ಜಿಲ್ಲೆಯಲ್ಲಿ ಬಾಲ್ಯವಿವಾಹ ಮತ್ತು ಅಪ್ರಾಪ್ತ ಬಾಲಕಿಯರ ಗರ್ಭಧಾರಣೆ ಪ್ರಕರಣಗಳು ಹೆಚ್ಚುತ್ತಿದ್ದು, ಇದನ್ನು ತಡೆಗಟ್ಟಲು ಪೊಲೀಸ್ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಂಟಿಯಾಗಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಜಿಪಂ ಸಿಇಒ ಮಹಮ್ಮದ್ ಹಾರೀಸ್ ಸುಮೇರ್ ಅವರು ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.



ಸೋಮವಾರ, ನಗರದ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿ ಸಭೆ ಹಾಗೂ ಸಮಗ್ರ ಮಕ್ಕಳ ರಕ್ಷಣಾ ಯೋಜನೆ ಕುರಿತು ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದರು.

ಜಿಲ್ಲೆಯಲ್ಲಿ ಬಾಲ್ಯವಿವಾಹ ಮತ್ತು ಅಪ್ರಾಪ್ತರ ಗರ್ಭಧಾರಣೆಯನ್ನು ನಿಯಂತ್ರಿಸಲು ಸಾಧ್ಯವಾಗದಿರುವುದು ಬಳ್ಳಾರಿ ಜಿಲ್ಲೆಯ ಅತಿ ದೊಡ್ಡ ವೈಫಲ್ಯವಾಗಿದೆ. ಇದನ್ನು ಸಂಪೂರ್ಣವಾಗಿ ನಿಯಂತ್ರಿಸಿದರೆ ಮಾತ್ರ ನಮ್ಮ ಶಿಕ್ಷಣ, ಪೌಷ್ಟಿಕಾಂಶ ಸೇರಿದಂತೆ ಎಲ್ಲ ಸಾಮಾಜಿಕ ನಿಯತಾಂಕಗಳು ಸುಧಾರಿಸಲು ಸಾಧ್ಯ ಎಂದು ಅಭಿಪ್ರಾಯಪಟ್ಟರು. ಕಳೆದ ಡಿಸೆಂಬರ್ 2025 ರಿಂದ ಮಾರ್ಚ್ 2026 ರವರೆಗೆ ಜಿಲ್ಲೆಯಲ್ಲಿ ಒಟ್ಟು 96 ಪೋಕ್ಸೋ ಪ್ರಕರಣಗಳು ದಾಖಲಾಗಿವೆ. ಅದರಲ್ಲಿ 2 ನೇರ ಪೋಕ್ಸೋ ಪ್ರಕರಣಗಳು, 92 ಬಾಲ್ಯವಿವಾಹ ಮತ್ತು ಪೋಕ್ಸೋ ಸಂಯೋಜಿತ ಪ್ರಕರಣಗಳು ಮತ್ತು 2 ಪೋಕ್ಸೋ ಜೊತೆಗೆ ಎಸ್ಸಿ, ಎಸ್ಟಿ ಕಾಯ್ದೆಯಡಿ ದಾಖಲಾದ ಪ್ರಕರಣಗಳಾಗಿವೆ. ಅದೇರೀತಿ 95 ಪ್ರಕರಣಗಳು ಮಕ್ಕಳ ಕಲ್ಯಾಣ ಸಮಿತಿ ಮುಂದೆ ಬಂದಿದ್ದು, ಈ ಪೈಕಿ 80 ಪ್ರಕರಣಗಳನ್ನು ಇತ್ಯರ್ಥಪಡಿಸಿ ಮಕ್ಕಳನ್ನು ಪೋಷಕರ ವಶಕ್ಕೆ ಒಪ್ಪಿಸಲಾಗಿದೆ. ಇನ್ನುಳಿದ 15 ಪ್ರಕರಣಗಳು ಬಾಕಿ ಇವೆ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸಿಂಧೆ ನಂದಿನಿ ಅವರು ಸಭೆಗೆ ತಿಳಿಸಿದರು.

ಎಫ್‌ಐಆರ್ ದಾಖಲಿಸಿ

ಬಾಲಕಿಯರ ವಯಸ್ಸನ್ನು ದೃಢೀಕರಿಸಿಕೊಂಡು ತಪ್ಪಿತಸ್ಥರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು. ಜಿಲ್ಲೆಗೆ ಕೆಟ್ಟ ಹೆಸರು ಬರುತ್ತದೆ ಎಂಬ ಕಾರಣಕ್ಕೆ ಪ್ರಕರಣಗಳನ್ನು ಮುಚ್ಚಿ ಹಾಕುವ ಪ್ರಯತ್ನ ಮಾಡಬಾರದು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಬಾಲ್ಯವಿವಾಹ ಕಾಯ್ದೆಯನ್ನೂ ಕಟ್ಟುನಿಟ್ಟಾಗಿ ಜಾರಿಗೊಳಿಸಿ, ಎಫ್‌ಐಆರ್ ದಾಖಲಿಸಿ ಆರೋಪಿಗಳಿಗೆ ಕಾನೂನಿನ ಭಯ ಹುಟ್ಟಿಸಿದರೆ ಮಾತ್ರ ಈ ಸಾಮಾಜಿಕ ಪಿಡುಗನ್ನು ತಡೆಯಲು ಸಾಧ್ಯ ಎಂದು ಜಿಪಂ ಸಿಇಒ ಮಹಮ್ಮದ್ ಹಾರೀಸ್ ಸುಮೇರ್ ಹೇಳಿದರು.

ಅಪ್ರಾಪ್ತರ ಗರ್ಭಧಾರಣೆಯ ಪ್ರತಿಯೊಂದು ಪ್ರಕರಣವೂ ಕಾನೂನಿನ ಪ್ರಕಾರ ಪೋಕ್ಸೋ ಕಾಯ್ದೆಯಡಿಯೇ ಬರಲಿದೆ, ಇದರಲ್ಲಿ ಪರಸ್ಪರ ಒಪ್ಪಿಗೆಯ ಪ್ರಶ್ನೆಯೇ ಬರುವುದಿಲ್ಲ. ಅಪ್ರಾಪ್ತ ಬಾಲಕಿಯರ ವಿರುದ್ಧ ಲೈಂಗಿಕ ದೌರ್ಜನ್ಯ ನಡೆದಿರುವುದು ಸಾಬೀತಾದರೆ ಅದು ಪೋಕ್ಸೋ ಪ್ರಕರಣವೇ ಆಗುತ್ತದೆ ಎಂದು ಸ್ಪಷ್ಟಪಡಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ರಾಜೇಶ್ ಎನ್.ಹೊಸಮನೆ, ಎಎಸ್ಪಿ ನವೀನ್ ಕುಮಾರ್, ನಗರ ಡಿವೈಎಸ್ಪಿ ಗೋವಿಂದರಾಜು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಮಕೃಷ್ಣ ನಾಯಕ, ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷೆ ವಿಜಯಲಕ್ಷ್ಮೀ ಮೈದೂರು ಸೇರಿದಂತೆ ಇತರರಿದ್ದರು.

ತೈಲ ಬೆಲೆ ಏರಿಕೆ ಖಂಡಿಸಿ ಮನವಿ

ಹೂವಿನಹಡಗಲಿ: ರಸಗೊಬ್ಬರ ಮತ್ತು ತೈಲ ಬೆಲೆ ಏರಿಕೆ ಖಂಡಿಸಿ ತಹಶೀಲ್ದಾರ್ ಕೆ.ಎಂ.ಗುರುಬಸವರಾಜ ಅವರಿಗೆ ಕರ್ನಾಟಕ ರಾಜ್ಯ ರೈತ ಸಂಘಟನೆ ವತಿಯಿಂದ ಮನವಿ ಸಲ್ಲಿಸಲಾಯಿತು.

ಕ.ರಾ.ರೈತ ಸಂಘದ ಅಧ್ಯಕ್ಷ ಹೊಸಮನಿ ಸಿದ್ದಪ್ಪ ಮಾತನಾಡಿ, ಕಳೆದ ಕೆಲವು ತಿಂಗಳುಗಳಿಂದ ಡೀಸೆಲ್ ಬೆಲೆ ನಿರಂತರವಾಗಿ ಏರಿಕೆಯಾಗುತ್ತಿರುವುದರಿಂದ ಟ್ರ್ಯಾಕ್ಟರ್ ಉಳುಮೆ, ನೀರಾವರಿ ಪಂಪ್‌ಸೆಟ್ ಬಳಕೆ ಮತ್ತು ಬೆಳೆ ಸಾಗಾಣಿಕಾ ವೆಚ್ಚವು ದುಪ್ಪಟ್ಟಾಗಿದೆ. ಇದರ ಜೊತೆಗೆ ರಸಗೊಬ್ಬರಗಳ ಬೆಲೆಯೂ ಗಗನಕ್ಕೇರಿದ್ದು, ಸಣ್ಣ ಮತ್ತು ಮಧ್ಯಮ ವರ್ಗದ ರೈತರಿಗೆ ಬಿತ್ತನೆ ಮಾಡುವುದೇ ದುಸ್ತರವಾಗಿದೆ ಎಂದು ಹೇಳಿದರು.

ರೈತರು ಬೆಳೆದ ಬೆಳೆಗಳಿಗೆ ಸೂಕ್ತ ಮಾರುಕಟ್ಟೆ ಸಿಗದೆ ನಷ್ಟ ಅನುಭವಿಸುತ್ತಿರುವ ಈ ಸಂದರ್ಭದಲ್ಲಿ, ಕೃಷಿ ವೆಚ್ಚದ ಈ ಹೊರೆ ರೈತರ ಬೆನ್ನುಮೂಳೆ ಮುರಿದಂತಾಗಿದೆ. ಆದ್ದರಿಂದ, ರೈತರ ಹಿತದೃಷ್ಟಿಯಿಂದ ಈ ಕೆಳಗಿನ ಬೇಡಿಕೆಗಳನ್ನು ಈಡೇರಿಸಬೇಕೆಂದು ಮನವಿ ಮಾಡಿದರು.

ರೈತರು ಬೆಳೆದ ಬೆಳೆಗಳಿಗೆ ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ವೈಜ್ಞಾನಿಕ ಬೆಂಬಲ ಬೆಲೆಯನ್ನು ನಿಗದಿಪಡಿಸಬೇಕು. ಸಮಸ್ಯೆಯ ವಿವರ ರಸಗೊಬ್ಬರಗಳ (ಯೂರಿಯಾ, ಡಿಎಪಿ, ಇತ್ಯಾದಿ) ಬೆಲೆ ಏರಿಕೆ ಮತ್ತು ಡೀಸೆಲ್ ದರ ಹೆಚ್ಚಳದಿಂದಾಗಿ ಕೃಷಿ ಉತ್ಪಾದನಾ ವೆಚ್ಚವು ಗಣನೀಯವಾಗಿ ಹೆಚ್ಚಾಗಿದೆ. ಉಳುಮೆ, ಬಿತ್ತನೆ, ಕೊಯ್ಲು ಮತ್ತು ಸಾಗಾಣಿಕೆಗೆ ಡೀಸೆಲ್ ಅತ್ಯಗತ್ಯವಾಗಿದ್ದು, ಬೆಲೆ ಏರಿಕೆಯಿಂದ ರೈತರು ಸಾಲದ ಸುಳಿಗೆ ಸಿಲುಕುತ್ತಿದ್ದಾರೆ ಎಂದರು.

ಈ ವೇಳೆ ಜಿಲ್ಲಾ ಮಹಿಳಾ ಅಧ್ಯಕ್ಷರು ವಿಜಯಲಕ್ಷ್ಮಿ, ಉಪಾಧ್ಯಕ್ಷ ವಿ.ಬಿ.ಚನ್ನಬಸಪ್ಪ, ಜಿಲ್ಲಾ ಉಪಾಧ್ಯಕ್ಷ ಕೆ.ಗಣಿಸಾಬ್, ತಾಲೂಕು ಕಾರ್ಯಅಧ್ಯಕ್ಷ ಡಕ್ಯ ನಾಯಕ್, ಕಾರ್ಯದರ್ಶಿ ವೆಂಕಟೇಶ್ ನಾಯಕ್, ಜಿಲ್ಲಾ ಕಾರ್ಯದರ್ಶಿ ದುರುಗಪ್ಪ, ಪ್ರಧಾನಕಾರ್ಯದರ್ಶಿ ಶಿವರಾಜ ಎಂ ಹೊಳಗುಂದಿ, ಭೋಜ್ಯನಾಯಕ.ದವಲ್ ಸಾಬ್, ಗ್ರಾಮ ಘಟಕದ ಅಧ್ಯಕ್ಷ ಶೇಖರ್ ನಾಯಕ, ಬಸವರಾಜ, ರೈತ ಮುಖಂಡರಿದ್ದರು.



ಬಯಲಾಟ ಉಳಿಸಿ, ಬೆಳೆಸಿ: ಶಾಸಕ ಗಣೇಶ

ಕುರುಗೋಡು: ಗಂಡುಮೆಟ್ಟಿನ ಕಲೆ ಬಯಲಾಟ ಉಳಿಸಿ ಬೆಳೆಸಲು ಕಲಾವಿದರು ಮುಂದಾಗಬೇಕು. ಅದಕ್ಕೆ ಕನ್ನಡ ಮತ್ತು ಸಂಸ್ಕೃತಿ ಸಂಪೂರ್ಣ ಸಹಕಾರ ಮತ್ತು ಪ್ರೋತ್ಸಾಹ ನೀಡುತ್ತಿದೆ ಎಂದು ಕಂಪ್ಲಿ ಶಾಸಕ ಜೆ.ಎನ್.ಗಣೇಶ್ ಹೇಳಿದರು.

ಯಲ್ಲಾಪುರ ಗ್ರಾಮದಲ್ಲಿ ಶ್ರೀಗುರುಲಿಂಗೇಶ್ವರ ಕಲಾತಂಡ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರದಲ್ಲಿ ಹಮ್ಮಿಕೊಂಡಿದ್ದ ವೀರ ಅಭಿಮನ್ಯು ಕಾಳಗ ಅರ್ಥಾತ್ ಜಯದ್ರಥನು ವಧೆ ಬಯಲಾಟ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶಗಳಲ್ಲಿ ಬಾಲ್ಯ ವಿವಾಹಗಳನ್ನು ನಡೆಗಟ್ಟಬೇಕು. ಬಾಲ್ಯವಿವಾಹ ಬಗ್ಗೆ ಜನರಿಗೆ ಅರಿವು ಮೂಡಿಸಬೇಕು. ಹಾಗೆ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು. ಶಿಕ್ಷಣದಿಂದ ಮಾತ್ರ ಜೀವನದಲ್ಲಿ ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದರು.

ಕರ್ನಾಟಕ ಬಯಲಾಟ ಅಕಾಡೆಮಿ ಮಾಜಿ ಸದಸ್ಯ ಹೆಚ್. ತಿಪ್ಪೇಸ್ವಾಮಿ, ಹಿರಿಯ ಪತ್ರಕರ್ತ ಸಿದ್ದರಾಮಪ್ಪ ಸಿರಿಗೇರಿ ಮಾತನಾಡಿದರು.

ಪುರಸಭೆ ಅಧ್ಯಕ್ಷ ಜಿ.ಮಂಜುನಾಥ, ಕಾಂಗ್ರೆಸ್ ಮುಖಂಡ ಎ. ಅಂಜಿನಪ್ಪ,

ಪುರಸಭೆ ಮಾಜಿ ಅಧ್ಯಕ್ಷ ಟಿ. ಶೇಕಣ್ಣ, ಹಾಲಿ ಸದಸ್ಯ ಜಡೇಸ್ವಾಮಿ, ಓಂಕಾರಪ್ಪ, ಎನ್. ನಾಗರಾಜ, ಮಾಜಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿಳಿಬಾಯಪ್ಪ, ರಂಗಭೂಮಿ ಕಲಾವಿದರಾದ ಬಂಡ್ರಿ ಲಿಂಗಪ್ಪ, ಕಪ್ಪಗಲ್ಲು ಓಂಕಾರಮ್ಮ, ಯಲ್ಲಾಪುರ ಗ್ರಾಮದ ಮುಖಂಡರಾದ ಬಸಪ್ಪ ಯಜಮಾನ, ದೇವೇಂದ್ರಪ್ಪ, ತಿಪ್ಪಯ್ಯ, ರಾಮಾಂಜಿನಿ, ಕುರುಗೋಡು ದೊಡ್ಡ ಬಸವೇಶ್ವರ ದೇವಸ್ಥಾನ ಧರ್ಮಕರ್ತ ಚಾನಾಳ್ ಆನಂದ, ಪುರಸಭೆ ಮಾಜಿ ಉಪಾಧ್ಯಕ್ಷ ಮಲ್ಲಿ ಕಾರ್ಜುನ, ಹೆಚ್. ವೀರೇಶಪ್ಪ ಹೊಳಗುಂದ, ವಿ.ಎಸ್. ರವಿಶಂಕರ ಗೌಡ, ರಂಗಭೂಮಿ ಕಲಾವಿದ ಚಿಲ್ಲಾ ಸಾಬ್, ಸಣ್ಣ ಬಿಳಿಬಾಯಪ್ಪ, ವೈ. ಬಿಳಿಬಾಯಪ್ಪ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಇದೇ ವೇಳೆ ಹಿರಿಯ ರಂಗಭೂಮಿ ಕಲಾವಿದರನ್ನು ಸನ್ಮಾನಿಸಿ ಗೌರವಿಸಲಾಯಿತು.



ಅಕ್ರಮ ಗೋ ಸಾಗಣೆ, ಹತ್ಯೆ ತಡೆಯಲು ಆಗ್ರಹ

ಕೊಟ್ಟೂರು: ರಾಜ್ಯದಲ್ಲಿ ನಡೆಯುತ್ತಿರುವ ಅಕ್ರಮ ಗೋ ಸಾಗಾಣಿಕೆ ಹಾಗೂ ಗೋ ಹತ್ಯೆಯನ್ನು ತಡೆಯಬೇಕೆಂದು ಕೊಟ್ಟೂರು ವಿಶ್ವ ಹಿಂದೂ ಪರಿಷತ್, ಬಜರಂಗದಳ ಹಾಗೂ ಭಾರತೀಯ ಜನತಾ ಪಾರ್ಟಿಯಿಂದ ಒತ್ತಾಯಿಸಲಾಯಿತು.

ಈ ಕುರಿತು ಕೊಟ್ಟೂರು ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗದ ಕಾರ್ಯಕರ್ತರು ತಹಶೀಲ್ದಾರ್‌ಗೆ ಮನವಿ ಸಲ್ಲಿಸಿ ಪ್ರಸ್ತುತ ಕರ್ನಾಟಕದಲ್ಲಿ ಗೋ ಹತ್ಯೆ ನಿಷೇಧ ಕಾಯ್ದೆ ಜಾರಿಯಲ್ಲಿದ್ದರೂ ಸಕಾರಾತ್ಮಕವಾಗಿ ಆದೇಶ ಪಾಲನೆ ಯಾಗದೆ ಅಕ್ರಮವಾಗಿ ಗೋ ಹತ್ಯೆ ಹಾಗೂ ಗೋ ಕಳ್ಳ ಸಾಕಾಣಿಕೆ ನಿರಂತರವಾಗಿ ನಡೆಯುತ್ತಿದ್ದು ರಾಜ್ಯ ಸರ್ಕಾರವು ಇದನ್ನು ತಡೆಯಲು ಯಾವುದೇ ಪ್ರಯತ್ನವನ್ನು ಮಾಡುತ್ತಿಲ್ಲ. ಪ್ರಸ್ತುತ ರಾಜ್ಯ ಸರ್ಕಾರ ಗೋ ಹಂತಕರಿಗೆ ರಕ್ಷಣೆಯಾಗಿ ನಿಂತಿರುವುದು ಆತಂಕಕಾರಿ ಬೆಳವಣಿಗೆ ಎಂದು ತಹಶೀಲ್ದಾರರಿಗೆ ಸಲ್ಲಿಸಿದ ಮನವಿಯಲ್ಲಿ ತಿಳಿಸಿದರು.

ಅಕ್ರಮ ಗೋ ಸಾಗಾಣಿಕೆ ಗೋ ಹತ್ಯೆ ಮಾಡುವವರ ಬಗ್ಗೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಿಸಲಾಯಿತು.



ಬಿಜೆಪಿ ಯುವ ಮುಖಂಡ ಎಂ.ಮಲ್ಲಿಕಾರ್ಜುನ್ ಮಾತನಾಡಿದರು. ತಹಶೀಲ್ದಾರ್ ಹಾಗೂ ಕೊಟ್ಟೂರು ಪೊಲೀಸ್ ವೃತ ನಿರೀಕ್ಷಕರಿಗೆ ಮನವಿ ಸಲ್ಲಿಸಲಾಯಿತು. ಬಿಜೆಪಿ ಹಿರಿಯ ಮುಖಂಡರು ವೀರೇಶ್ ಗೌಡ್ರು, ಎಂ.ಎಂ. ಜೆ.ವಾಗೀಶ್, ಬಿ.ಆರ್.ವಿಕ್ರಂ, ಬಸವರಾಜ್ ಕೊನಾಪುರ್, ಬಸವರಾಜ್ ಬಟನ್ ನೂತನ್ ಪ್ರಸಾದ್, ಪಾಟೀಲ ಕಲ್ಲೇಶ್, ಗಂಗಮ್ಮನಹಳ್ಳಿ ರಾಘವೇಂದ್ರ ಹಾಗೂ ವಿಶ್ವ ಹಿಂದೂ ಪರಿಷತ್ ಕೊಟ್ಟೂರು ಅಧ್ಯಕ್ಷ ಕಾಸಲ್ ಮಂಜುನಾಥ್, ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗದಳದ ಕಾರ್ಯಕರ್ತರು, ಬಿಜೆಪಿ ಪಕ್ಷದ ಕಾರ್ಯಕರ್ತರಿದ್ದರು.

ಗ್ರಾಮೀಣ ಜನರು ಆರೋಗ್ಯದ ಕಾಳಜಿ ವಹಿಸಲಿ

ಹೂವಿನಹಡಗಲಿ: ಗ್ರಾಮೀಣ ಭಾಗದ ಜನರು ಆರೋಗ್ಯದ ಬಗ್ಗೆ ಹೆಚ್ಚಿನ ಜಾಗೃತಿ ಹೊಂದುವುದು ಅತ್ಯಂತ ಅಗತ್ಯವಾಗಿದೆ ಎಂದು ತಾಪಂ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಸಹಾಯಕ ನಿರ್ದೇಶಕರಾದ ಡಿ.ವೀರಣ್ಣ ನಾಯ್ಕ್. ಹೇಳಿದರು.

ಅವರು ತಾಲೂಕಿನ ದೇವಗೊಂಡನಹಳ್ಳಿ ಗ್ರಾಮ ಪಂಚಾಯಿತಿ ವತಿಯಿಂದ ಉಪನಾಯಕನಹಳ್ಳಿ ಗ್ರಾಮದಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಫಲಾನುಭವಿಗಳಿಗಾಗಿ ಗ್ರಾಮ ಆರೋಗ್ಯ ಅಭಿಯಾನ ಅಡಿಯಲ್ಲಿ ಆರೋಗ್ಯ ತಪಾಸಣೆ ಹಾಗೂ ಜಾಗೃತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.ಉದ್ಯೋಗ ಖಾತ್ರಿ ಯೋಜನೆಯ ಫಲಾನುಭವಿಗಳು ತಮ್ಮ ಆರೋಗ್ಯವನ್ನು ಕಾಪಾಡಿಕೊಂಡಾಗ ಮಾತ್ರ ಉತ್ತಮ ರೀತಿಯಲ್ಲಿ ಕೆಲಸ ನಿರ್ವಹಿಸಲು ಸಾಧ್ಯವಾಗುತ್ತದೆ. ಸ್ವಚ್ಛತೆ, ಪೌಷ್ಟಿಕ ಆಹಾರ ಮತ್ತು ನಿಯಮಿತ ಆರೋಗ್ಯ ತಪಾಸಣೆ ಆರೋಗ್ಯಕರ ಜೀವನಕ್ಕೆ ಮುಖ್ಯ ಆಧಾರಗಳಾಗಿವೆ ಎಂದು ತಿಳಿಸಿದರು.

ತಾಲೂಕು ಆರೋಗ್ಯ ಇಲಾಖೆಯ ವೈದ್ಯಾಕಾರಿಗಳಾದ ಡಾ.ರಮ್ಯಾ ಎಸ್., ಮಹಿಳೆಯರ ಸಾಮಾನ್ಯ ಆರೋಗ್ಯ ಸಮಸ್ಯೆಗಳು, ಪೌಷ್ಟಿಕಾಂಶದ ಅಗತ್ಯತೆ, ರಕ್ತಹೀನತೆ, ಗರ್ಭಿಣಿಯರ ಆರೈಕೆ ಹಾಗೂ ಸುಲಭ ಚಿಕಿತ್ಸೆಗಳ ಕುರಿತು ಮಾಹಿತಿ ನೀಡಿ ಜಾಗೃತಿ ಮೂಡಿಸಿದರು.

ಮಹಿಳೆಯರು ಸಮಯಕ್ಕೆ ಸರಿಯಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದು ಅಗತ್ಯ ಎಂದು ತಿಳಿಸಿದರು. ವೈದ್ಯರಾದ ಡಾ.ಉಮೇಶ್ ಜೆ.ಡಿ ಅವರು ಗ್ರಾಮಸ್ಥರಲ್ಲಿ ಆರೋಗ್ಯ ಕಾಳಜಿ, ವೈಯಕ್ತಿಕ ಸ್ವಚ್ಛತೆ, ಪರಿಸರ ಸಂರಕ್ಷಣೆ ಹಾಗೂ ಸಾಂಕ್ರಾಮಿಕ ರೋಗಗಳ ತಡೆ ಕುರಿತು ಅರಿವು ಮೂಡಿಸಿದರು. ಮನೆ ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದರಿಂದ ಅನೇಕ ರೋಗಗಳನ್ನು ತಡೆಗಟ್ಟಬಹುದು ಎಂದು ಹೇಳಿದರು.

ದೇವಗೊಂಡನಹಳ್ಳಿ ಗ್ರಾಪಂ ಪಿಡಿಒ ಕೆ.ಶಂಭುಲಿಂಗನಗೌಡ ಸೇರಿದಂತೆ ಪಂಚಾಯಿತಿ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಮುಸಲವಾಡದ ಸಿಬ್ಬಂದಿ ವರ್ಗದವರು, ಗ್ರಾಮಸ್ಥರು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಸಿಬ್ಬಂದಿ ಭಾಗವಹಿಸಿದ್ದರು.

ವೆಂಕಟೇಶ ದೇಸಾಯಿ ನೇಮಕ



ಬಳ್ಳಾರಿ: ಸಮಾನ ಮನಸ್ಕ ಮಾಧ್ಯಮ ಮಿತ್ರರ ವಿಕಾಸ ಸಂಘಟನೆ ಬಳ್ಳಾರಿ ಜಿಲ್ಲಾ ಸಂಚಾಲಕರಾಗಿ ಹಿರಿಯ ವರದಿಗಾರ ವೆಂಕಟೇಶ ದೇಸಾಯಿ ನೇಮಕಗೊಂಡಿದ್ದಾರೆ. ತುಮಕೂರು ಜಿಲ್ಲೆಯ ಗುಬ್ಬಿಯ ಶ್ರೀಚಿದಂಬರ ಆಶ್ರಮದಲ್ಲಿ ಭಾನುವಾರ ಆಯೋಜಿಸಿದ್ದ ಸಮಾನ ಮನಸ್ಕ ಮಾಧ್ಯಮ ಮಿತ್ರರ ವಿಕಾಸ ವೇದಿಕೆಯ ದಶಮಾನೋತ್ಸವ ಸಮಾರಂಭದಲ್ಲಿ ರಾಜ್ಯಾಧ್ಯಕ್ಷ ಶ್ರೀನಾಥ್ ಜೋಶಿ, ರಾಜ್ಯ ಮಹಾಪ್ರಧಾನ ಕಾರ್ಯದರ್ಶಿ ಹನುಮೇಶ ಯಾವಗಲ್ ಅವರು, ಹಿರಿಯ ವರದಿಗಾರ ವೆಂಕಟೇಶ ದೇಸಾಯಿ ಅವರಿಗೆ ನೇಮಕಾತಿ ಆದೇಶ ಪತ್ರವನ್ನು ವಿತರಿಸಿ ಶುಭ ಹಾರೈಸಿದರು.

ಪತ್ರಿಕೆಯೊಂದರ ಉಪ ಪ್ರಧಾನ ಸಂಪಾದಕ ರಾಘವೇಂದ್ರ, ವಿಕಾಸ ಸಂಘಟನೆಯ ಹಿರಿಯ ಉಪಾಧ್ಯಕ್ಷ ಬಿ.ಎನ್.ರಾಘವೇಂದ್ರ, ಖಜಾಂಚಿ ಮುರುಳಿ ಪ್ರಸಾದ್, ಕಾರ್ಯದರ್ಶಿ ಡಿ.ಎನ್.ಗೋದಾವರಿ, ಗುಬ್ಬಿ ಚಿದಂಬರ ಆಶ್ರಮದ ಆಡಳಿತಾಧಿಕಾರಿಗಳು, ವಿವಿಧ ಗಣ್ಯರು, ಮಾಧ್ಯಮ ಮಿತ್ರರು ಉಪಸ್ಥಿತರಿದ್ದರು.

ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಬಳ್ಳಾರಿ: ಮಹಾನಗರ ಪಾಲಿಕೆಯ 34ನೇ ವಾರ್ಡ್ ವ್ಯಾಪ್ತಿಯ ರಾಜೀವ್ ಗಾಂಧಿ ನಗರದಲ್ಲಿ, ಕುಡಿಯುವ ನೀರು, ಒಳಚರಂಡಿ ಹಾಗೂ ಪೇವರ್ಸ್ ಅಳವಡಿಸುವ ಕಾಮಗಾರಿಗೆ ಮಾಜಿ ಮೇಯರ್, ಹಾಗೂ ಹಾಲಿ ಸದಸ್ಯೆ ರಾಜೇಶ್ವರಿ ಸುಬ್ಬರಾಯುಡು ಅವರು ಸೋಮವಾರ ಚಾಲನೆ ನೀಡಿದರು.

ಕಳೆದ ಸುಮಾರು ವರ್ಷಗಳಿಂದ ವ್ಯಾಪ್ತಿಯಲ್ಲಿ ನಾಗರಿಕೆಗೆ ಸಮರ್ಪಕ ಕುಡಿಯುವ ನೀರು, ಒಳಚರಂಡಿ ಇಲ್ಲದೇ ತೊಂದರೆ ಎದುರಾಗಿತ್ತು. ಇದನ್ನು ಗಮನಿಸಿದ ಪಾಲಿಕೆ ಮಾಜಿ ಮೇಯರ್, ಹಾಲಿ ಸದಸ್ಯೆ ಎಂ. ರಾಜೇಶ್ವರಿ ಸುಬ್ಬರಾಯಡು ಅವರು, 15ನೇ ಹಣಕಾಸಿನ ಅನುದಾನದಡಿ, ಕುಡಿಯುವ ನೀರು, ಒಳಚರಂಡಿ ಹಾಗೂ ಪೇವರ್ಸ್ ಅಳವಡಿಸುವ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡರಾದ ಕಟ್ಟಾ ರಘು, ತುಕಾರಾಂ, ಷನ್ಮೂಖ, ಬಾಬು, ಕಟ್ಟಿ ಜಂಬಣ್ಣ, ಲೋಕೇಶ್ ಮತ್ತು ಯುವ ಮುಖಂಡರಾದ ಯೋಗಾನಂದ ರೆಡ್ಡಿ ಸೇರಿದಂತೆ ಸ್ಥಳೀಯ ನಾಗರಿಕರು ಉಪಸ್ಥಿತರಿದ್ದರು.



ಪ್ರತಿ ಮನೆಗೂ ಶುದ್ಧ ನೀರು ಪೂರೈಕೆ: ಜಿಲ್ಲಾಧಿಕಾರಿ

ವಿಜಯನಗರ: ಗ್ರಾಮೀಣ ಪ್ರದೇಶದ ಸಾರ್ವಜನಿಕರ ಆರೋಗ್ಯ ರಕ್ಷಣೆ ಮತ್ತು ಪ್ರತಿಯೊಬ್ಬರಿಗೂ ಸುರಕ್ಷಿತ ಕುಡಿಯುವ ನೀರನ್ನು ಖಾತರಿಪಡಿಸುವ ಮಹತ್ತರ ಉದ್ದೇಶದಿಂದ ವಿಶೇಷ ನೀರಿನ ಪರೀಕ್ಷೆಯ ಅಭಿಯಾನ ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ಚಾಲನೆ ನೀಡಿದರು.

ನಗರದ ತಾಲೂಕು ಪಂಚಾಯತಿಯ ವಿದ್ಯಾರಣ್ಯ ಸಭಾಂಗಣದಲ್ಲಿ ಸೋಮವಾರ ವಿಶೇಷ ನೀರಿನ ಪರೀಕ್ಷೆಯ ಅಭಿಯಾನಕ್ಕೆ ಜಿಲ್ಲಾಧಿಕಾರಿ ಕವಿತಾ ಮನ್ನಿಕೇರಿ ಅಧಿಕೃತವಾಗಿ ಚಾಲನೆ ನೀಡಿ ಅವರು ಮಾತನಾಡಿದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ವತಿಯಿಂದ ಮೇ 25ರಿಂದ ಜೂನ್ 10ರವರೆಗೆ ಜಿಲ್ಲಾದ್ಯಂತ ಈ ವಿಶೇಷ ಆಂದೋಲನ ನಡೆಯಲಿದ್ದು, ಮೊದಲ ಕುಡಿಯುವ ನೀರಿನ ಗುಣಮಟ್ಟದ ಕುರಿತು ಗ್ರಾಮೀಣ ಮಟ್ಟದಲ್ಲೇ ನಿರಂತರ ನಿಗಾ ವಹಿಸುವುದು ಅತ್ಯಗತ್ಯ. ಮಳೆಗಾಲದ ಆರಂಭದ ಈ ದಿನಗಳಲ್ಲಿ ನೀರಿನ ಮೂಲಗಳು ಕಲುಷಿತಗೊಳ್ಳುವ ಸಾಧ್ಯತೆ ಹೆಚ್ಚಿರುವುದರಿಂದ, ಜಲಮೂಲ ಕಲುಷಿಗೊಳ್ಳದಂತೆ ಎಚ್ಚರವಹಿಸಬೇಕು. ಪ್ರತಿಯೊಂದು ಗ್ರಾಮ ಪಂಚಾಯತಿಯೂ ತಮಗೆ ನೀಡಿರುವ ಕಿಟ್‌ಗಳನ್ನು ಸಮರ್ಪಕವಾಗಿ ಬಳಸಿ, ನಿಯಮಿತವಾಗಿ ನೀರಿನ ಗುಣಮಟ್ಟವನ್ನು ತಪಾಸಣೆ ಮಾಡಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸಾಂಕ್ರಾಮಿಕ ರೋಗ ಮುಕ್ತ ಗ್ರಾಮವೇ ನಮ್ಮ ಗುರಿ: ಅಶುದ್ಧ ಹಾಗೂ ಕಲುಷಿತ ನೀರಿನ ಸೇವನೆಯಿಂದ ಗ್ರಾಮೀಣ ಭಾಗದಲ್ಲಿ ಹರಡುವ ಕಾಲರಾ, ಕಾಮಾಲೆ, ಅತಿಸಾರ ಭೇದಿಯಂತಹ ಸಾಂಕ್ರಾಮಿಕ ರೋಗಗಳ ತಡೆಗಟ್ಟುವಿಕೆಗೆ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮ ಕೈಗೊಳ್ಳುವುದು ಅತ್ಯಗತ್ಯ ಎಂದರು.

ಜಿಲ್ಲೆಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಹಿರಿಯ ರಸಾಯನ ತಜ್ಞರು ಇಡೀ ತರಬೇತಿಯನ್ನು ಅತ್ಯಂತ ಪ್ರಾಯೋಗಿಕವಾಗಿ ನಡೆಸಿಕೊಟ್ಟರು. ಕಿಟ್ ಬಳಸಿ ನೀರಿನಲ್ಲಿರುವ ಫ್ಲೋರೈಡ್, ನೈಟ್ರೇಟ್, ಕ್ಲೋರೈಡ್ ಹಾಗೂ ಗಡಸುತನದ ಪ್ರಮಾಣವನ್ನು ಸ್ಥಳದಲ್ಲೇ ಪತ್ತೆ ಹಚ್ಚುವುದು ಹೇಗೆ ಎಂದು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು.

ಸಭೆಯಲ್ಲಿ ತಾಪಂ ಇಒ ಆಲಂ ಭಾಷಾ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ವಿಜಯ್‌ಕುಮಾರ್, ಕಿರಿಯ ಅಭಿಯಂತರ ಸುರೇಶ್, ನರೇಶ್, ಸಹಾಯಕ ಅಭಿಯಂತರರು ಮಹರುದ್ರಗೌಡ, ಹಿರಿಯ ರಸಾಯನ ತಜ್ಞರು ಅರುಣ್ ಕುಮಾರ್ ಜೆ.ವಿ. ಇದ್ದರು.



ಕಿಟ್ ವಿತರಣೆ

ತಾಲೂಕಿನ ಪಿಡಿಒಗಳು, ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿ ಸದಸ್ಯರು ಹಾಗೂ ಪ್ರಮುಖವಾಗಿ ಪ್ರತಿದಿನ ನೀರು ಸರಬರಾಜು ಮಾಡುವ ನೀರು ಗಂಟಿಗಳಿಗೆ ಕಾರ್ಯಕ್ರಮದಲ್ಲಿ ವಿಶೇಷ ನೀರಿನ ಪರೀಕ್ಷೆಯ ಕಿಟ್ ವಿತರಿಸಲಾಯಿತು.